ಬೆಂಗಳೂರು

ಶುಕ್ರವಾರ, 15 ಮೇ 2026

ಸಂಪುಟ 33, ಸಂಚಿಕೆ 194, ಪುಟಗಳು 14+4

▪ ಬೆಂಗಳೂರು ▪ ಮಂಗಳೂರು ▪ ಶಿವಮೊಗ್ಗ ▪ ಹುಬ್ಬಳ್ಳಿ

₹5

RNI: 58231/94
REG No.KA/BG GPO/2532/2021-23

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ದೇಶವ್ಯಾಪಿ ಮಿತವ್ಯಯ

• ಪುಟ 9

ಬೆಂಗಳೂರು
ಶುಕ್ರವಾರ, 15 ಮೇ 2026
ಸಂಪುಟ 33, ಸಂಚಿಕೆ 194, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಹೊಸಬಾಳೆ ನಿಲುವಿಗೆ ನರಾವಣೆ ಸಹಮತ | ೧೦
ಕೆಣಕಿದರೆ ನಿರ್ಣಾಯಕ ತಿರುಗೇಟು | ೧೦
ಇಂದಿನಿಂದ ಪ್ರಧಾನಿ 5 ರಾಷ್ಟ್ರಗಳ ಪ್ರವಾಸ | ೧೦

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ ಉಪರಿ ಚತುರ್ದಶಿ, ನಕ್ಷತ್ರ: ಅಶ್ವಿನಿ

ದಿನದ ಮಾತು

ಸಜ್ಜನರ ದರ್ಶನ ಒಳ್ಳೆಯದು. ಅವರ ಹಿತೋಪದೇಶ ಕೇಳುವುದು ಇನ್ನೂ ಒಳ್ಳೆಯದು.
▲ನೀತಿ ಮಂಜರಿ

ಮೋದಿ ವಿಶ್ವದ ಅತ್ಯಂತ ಜನಪ್ರಿಯ ರಾಜಕಾರಣಿ
ಲೇಖನ
• ಎರಿಕ್ ಸೋಲ್ಹೈಮ್
• ಪುಟ ೬

ಕಿರುಸುದ್ದಿ

ವಿ.ಡಿ. ಸತೀಶನ್ ಕೇರಳದ ನೂತನ ಮುಖ್ಯಮಂತ್ರಿ



• **ತಿರುವನಂತಪುರಂ:** ಕೇರಳದ ನೂತನ ಮುಖ್ಯಮಂತ್ರಿ ಆಯ್ಕೆಗಾಗಿ ಕಳೆದ 10 ದಿನಗಳಿಂದ ನಡೆಯುತ್ತಿದ್ದ ರಾಜಕೀಯ ಪ್ರಹಸನಕ್ಕೆ ಕೊನೆಗೂ ತೆರೆ ಬಿದ್ದಿದ್ದು, ಕಾಂಗ್ರೆಸ್ ಹೈಕಮಾಂಡ್ ವಿ.ಡಿ. ಸತೀಶನ್ ಅವರನ್ನು ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಎಂದು ಘೋಷಿಸಿದೆ.
• ಪುಟ ೧೦

ಉ.ಪ್ರದೇಶದಲ್ಲಿ ಬಿರುಗಾಳಿ ಮಳೆಗೆ 111 ಜನರು ಬಲಿ

• **ಲಖನೌ:** ಉತ್ತರ ಪ್ರದೇಶದ ಹಲವಾರು ಜಿಲ್ಲೆಗಳಲ್ಲಿ ಬುಧವಾರ ಸಂಜೆ ಸಂಭವಿಸಿದ ಭೀಕರ ಬಿರುಗಾಳಿ, ಗುಡುಗು ಸಹಿತ ಮಳೆ ಮತ್ತು ಸಿಡಿಲಿನ ಅಬ್ಬರಕ್ಕೆ ಕನಿಷ್ಠ 111 ಜನರು ಬಲಿಯಾಗಿದ್ದು, 72 ಮಂದಿ ಗಾಯಗೊಂಡಿದ್ದಾರೆ. ಬುಧವಾರ ಕಂಡುಬಂದ ಹವಾಮಾನ ವೈಪರೀತ್ಯದಿಂದ ರಾಜ್ಯಾದ್ಯಂತ 227 ಮನೆಗಳು ಜಖಂಗೊಂಡಿದ್ದು, 170 ಜಾನುವಾರುಗಳು ಮೃತಪಟ್ಟಿವೆ ಎಂದು ಪರಿಹಾರ ಆಯುಕ್ತರ ಕಚೇರಿ ಗುರುವಾರ ತಿಳಿಸಿದೆ.
• ಪುಟ ೧೦

ಪರವಾನಗಿ ಇದೆಯೇ?: ಮಮತಾಗೆ ಬಾರ್ ಕೌನ್ಸಿಲ್
• ಪುಟ ೧೦

ಪಳನಿಸ್ವಾಮಿ ಸೇರಿ 22 ಶಾಸಕರ ಅನರ್ಹತೆಗೆ ಆಗ್ರಹ
• ಪುಟ ೧೦

ಹಿಜಾಬ್ ನಿಷೇಧ ವಾಪಸ್ ಸರಿಯಲ್ಲ: ಬಿಜೆಪಿ
• ಪುಟ ೫



ಕ್ಸಿ-ಟ್ರಂಪ್ ಬೀಜಿಂಗ್ ಶೃಂಗ: ತೈವಾನ್ ವಿಚಾರ ರಣರಂಗ
• ಪುಟ ೧೦
ಸುದ್ದಿ ಸಮಗ್ರ

ಮೋದಿ ಆರಂಭಿಸಿದ ಇಂಧನ ಉಳಿತಾಯ ಅಭಿಯಾನಕ್ಕೆ ವೇಗ

ದೇಶವ್ಯಾಪಿ ಮಿತವ್ಯಯ

- ಸಚಿವರ ಸೈಕಲ್ ಸವಾರಿ, ನಡೆದು ಕಚೇರಿಗೆ; ಮೆಟ್ರೋ ಬಳಕೆ
- ಬೆಂಗಾವಲು ವಾಹನ ಕಡಿತ, ವರ್ಕ್ ಫ್ರಂ ಹೋಮ್ ಕ್ರಮ ಜಾರಿ
- ಜನಪ್ರತಿನಿಧಿಗಳಿಗೆ ಸಾಥ್ ನೀಡಿದ ಅಧಿಕಾರಿಗಳು, ಸಾರ್ವಜನಿಕರು

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಯುದ್ಧ ಪರಿಸ್ಥಿತಿಯಿಂದ ಜಾಗತಿಕ ಇಂಧನ ಪೂರೈಕೆಯಲ್ಲಿ ಉಂಟಾದ ಅಸ್ಥಿರತೆಯ ನಡುವೆ ಪೆಟ್ರೋಲ್-ಡೀಸೆಲ್ ಉಳಿತಾಯ ಮತ್ತು ವಿದೇಶಿ ವಿನಿಮಯ ಸಂರಕ್ಷಣೆಗೆ ಪ್ರಧಾನಿ ನರೇಂದ್ರ ಮೋದಿ ನೀಡಿದ ಕರೆಗೆ ದೇಶದ ವಿವಿಧ ರಾಜ್ಯಗಳಲ್ಲಿ ಗುರುವಾರ ಭಾರೀ ಸ್ಪಂದನೆ ವ್ಯಕ್ತವಾಯಿತು. ಮಂತ್ರಿಗಳು, ರಾಜ್ಯಪಾಲರು, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸೈಕಲ್ ಸವಾರಿ, ನಡೆದು ಕಚೇರಿಗೆ ತೆರಳುವುದು, ಸಾರ್ವಜನಿಕ ಸಾರಿಗೆ ಬಳಸುವುದು, ಅಧಿಕೃತ ಬೆಂಗಾವಲು ವಾಹನಗಳ ಕಡಿತಗೊಳಿಸುವುದು ಹಾಗೂ ವರ್ಕ್ ಫ್ರಂ ಹೋಮ್ ವ್ಯವಸ್ಥೆ ಜಾರಿಗೊಳಿಸುವಂತಹ ಕ್ರಮಗಳನ್ನು ಕೈಗೊಂಡರು.



ಉತ್ತರ ಪ್ರದೇಶದಲ್ಲಿ ಹಲವು ಸಚಿವರು ಮತ್ತು ಹಿರಿಯ ಅಧಿಕಾರಿಗಳು ಪರಿಸರ ಸ್ನೇಹಿ ಸಂಚಾರಕ್ಕೆ ಉತ್ತೇಜನ ನೀಡಿದರು.
➡ಪುಟ ೭

ದಿಲ್ಲಿ ಸರ್ಕಾರದಿಂದ ವಾರಕ್ಕೆ 2 ದಿನ ವರ್ಕ್ ಫ್ರಂ ಹೋಮ್

• **ಹೊಸದಿಲ್ಲಿ:** ಪ್ರಧಾನಿ ಮೋದಿ ಅವರ ಇಂಧನ ಉಳಿತಾಯ ಕರೆಗೆ ಸ್ಪಂದಿಸಿದ ದಿಲ್ಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಸರ್ಕಾರಿ ಕಚೇರಿಗಳಿಗೆ ವಾರದಲ್ಲಿ ಎರಡು ದಿನ ವರ್ಕ್ ಫ್ರಂ ಹೋಮ್ ಘೋಷಿಸಿದರು. ಪ್ರತಿ ಸೋಮವಾರ ಸಚಿವರು ಮತ್ತು ಅಧಿಕಾರಿಗಳು ಮೆಟ್ರೋ ಬಳಕೆ ಮಾಡಲಿದ್ದು, ವಾರದಲ್ಲಿ ಒಂದು ದಿನ ನೋ ವೆಹಿಕಲ್ ಡೇ ಆಚರಿಸಲು ಕರೆ ನೀಡಲಾಗಿದೆ. ಮುಖ್ಯಮಂತ್ರಿ ಬೆಂಗಾವಲು ವಾಹನಗಳ ಸಂಖ್ಯೆಯಲ್ಲಿ ಶೇ.60ರಷ್ಟು ಕಡಿತಗೊಂಡಿದೆ.

ವಿಧಾನ ಭವನಕ್ಕೆ ಬೈಕ್‌ನಲ್ಲಿ ಫಡ್ನವೀಸ್

• **ಮುಂಬೈ:** ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ವಿಧಾನ ಭವನಕ್ಕೆ ಬೈಕ್‌ನಲ್ಲಿ ತೆರಳಿ ಇಂಧನ ಉಳಿತಾಯದ ಸಂದೇಶ ನೀಡಿದರು. ಪ್ರಧಾನಿ ಮೋದಿ ಜನರಿಂದ ಸಣ್ಣ ತ್ಯಾಗ ಮಾತ್ರ ಕೇಳಿದ್ದಾರೆ ಎಂದು ಹೇಳಿದ ಅವರು, ರಾಜ್ಯದಲ್ಲಿ ಸಚಿವ ಬೆಂಗಾವಲು ವಾಹನಗಳ ಕಡಿತ, ಅನಗತ್ಯ ವಿದೇಶ ಪ್ರವಾಸ ರದ್ದು ಹಾಗೂ ಆರು ತಿಂಗಳು ಬೃಹತ್ ಸರ್ಕಾರಿ ಕಾರ್ಯಕ್ರಮಗಳನ್ನು ನಿಲ್ಲಿಸುವ ನಿರ್ಧಾರ ಕೈಗೊಂಡಿರುವುದಾಗಿ ತಿಳಿಸಿದರು.



ಎತ್ತಿನಬಂಡಿಯಲ್ಲಿ ಮದುವೆ ಮೆರವಣಿಗೆ

• **ರಾಯ್ಪುರ:** ಛತ್ತೀಸ್‌ಗಢದ ನಾರಾಯಣಪುರ ಜಿಲ್ಲೆಯ ಪೊಲೀಸ್ ಸಿಬ್ಬಂದಿ ಕುಬೇರ್ ದೇಹರಿ ತಮ್ಮ ಮದುವೆ ಮೆರವಣಿಗೆಯಲ್ಲಿ ವಾಹನಗಳ ಬದಲು ಎತ್ತಿನಬಂಡಿಗಳನ್ನು ಬಳಸುವ ಮೂಲಕ ಗಮನ ಸೆಳೆದಿದ್ದಾರೆ. ಪ್ರಧಾನಿ ಮೋದಿ ಅವರ ಇಂಧನ ಉಳಿತಾಯ ಕರೆಗೆ ಸ್ಪಂದನೆಯಾಗಿ ಈ ಕ್ರಮ ಕೈಗೊಂಡಿದ್ದಾಗಿ ಅವರು ಹೇಳಿದ್ದಾರೆ. ಈ ವಿಶಿಷ್ಟ ಮೆರವಣಿಗೆ ಪರಿಸರ ಸಂರಕ್ಷಣೆ ಹಾಗೂ ಪರಂಪರೆ ಉಳಿವಿನ ಸಂದೇಶ ನೀಡಿದೆ.

ರಾಜ್ಯಪಾಲರ ಬೆಂಗಾವಲು ಪಡೆ ಗಾತ್ರ ಅರ್ಧಕ್ಕೆ ಇಳಿಕೆ



• **ಬೆಂಗಳೂರು:** ತೈಲ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇಂಧನ ಉಳಿತಾಯಕ್ಕಾಗಿ ಕರೆ ನೀಡಿರುವುದನ್ನು ಬೆಂಬಲಿಸಿರುವ ಕರ್ನಾಟಕ ರಾಜ್ಯಪಾಲ ಥಾವರಚಂದ್ ಗೆಹಲೋತ್ ಗುರುವಾರ ತಮ್ಮ ಅಧಿಕೃತ ಬೆಂಗಾವಲು ಪಡೆಯ ಗಾತ್ರವನ್ನು ಅರ್ಧದಷ್ಟು ಕಡಿಮೆ ಮಾಡಿದ್ದಾರೆ. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಇಂಧನ ಸಂರಕ್ಷಣೆ ಮತ್ತು ವಿದೇಶಿ ವಿನಿಮಯ ವೆಚ್ಚವನ್ನು ಕಡಿಮೆ ಮಾಡುವ ಪ್ರಧಾನಿಯವರ ಮನವಿಗೆ ರಾಜ್ಯಪಾಲರು ಈ ಕ್ರಮ ಕೈಗೊಂಡಿದ್ದಾರೆ.

---

16 ರಾಜ್ಯ, 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ

ಎಸ್‌ಐಆರ್ 3ನೇ ಹಂತ ಮೇ 30ರಿಂದ ಆರಂಭ

• **ಹೊಸದಿಲ್ಲಿ:** ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ ಭಾರೀ ಸದ್ದು ಮಾಡಿದ್ದ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಮೂರನೇ ಹಂತವನ್ನು ಮೇ 30ರಿಂದ ಆರಂಭಿಸುವುದಾಗಿ ಭಾರತೀಯ ಚುನಾವಣಾ ಆಯೋಗ (ಇಸಿಐ) ಶುಕ್ರವಾರ ಘೋಷಿಸಿದೆ. ಇದರಲ್ಲಿ ಕರ್ನಾಟಕ ಸೇರಿದಂತೆ ಒಟ್ಟು 16 ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳ 36.73 ಕೋಟಿ ಮತದಾರರು ಒಳಗೊಂಡಿದ್ದಾರೆ.

ದಿಲ್ಲಿ, ಒಡಿಶಾ, ಮಿಜೋರಾಂ, ಸಿಕ್ಕಿಂ, ಮಣಿಪುರ, ಉತ್ತರಾಖಂಡ, ಆಂಧ್ರ, ಅರುಣಾಚಲ ಪ್ರದೇಶ, ಹರ್ಯಾಣ, ಚಂಡೀಗಢ, ತೆಲಂಗಾಣ, ಪಂಜಾಬ್, ಕರ್ನಾಟಕ, ಮೇಘಾಲಯ, ಮಹಾರಾಷ್ಟ್ರ, ಜಾರ್ಖಂಡ್, ನಾಗಾಲ್ಯಾಂಡ್, ತ್ರಿಪುರಾ, ದಾದರ್ ಮತ್ತು ನಗರ್ ಹವೇಲಿ ಹಾಗೂ ದಾಮನ್, ದಿಯುನಲ್ಲಿ ಮೇ 30ರಂದು ಎಸ್‌ಐಆರ್ ಪ್ರಕ್ರಿಯೆ ಆರಂಭವಾಗಲಿದೆ. ವಿಪಕ್ಷಗಳು ಆಡಳಿತ ನಡೆಸುತ್ತಿರುವ ಪಂಜಾಬ್, ಜಾರ್ಖಂಡ್, ಕರ್ನಾಟಕ, ತೆಲಂಗಾಣ ರಾಜ್ಯಗಳಲ್ಲೂ ಏಕಕಾಲದಲ್ಲಿ ಎಸ್‌ಐಆರ್ ನಡೆಸಲಾಗುವುದು. 3.94 ಲಕ್ಷಕ್ಕೂ ಹೆಚ್ಚು ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) 36.73 ಕೋಟಿ ಮತದಾರರ ಮನೆ-ಮನೆಗೆ ತೆರಳಿ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಮಾಹಿತಿ ಸಂಗ್ರಹಿಸಲಿದ್ದಾರೆ.
➡ಪುಟ ೭

ಪಟ್ಟಿಯಲ್ಲಿ ಅರ್ಹರಿಗಷ್ಟೇ ಸ್ಥಾನ

ಮತದಾರರ ಪಟ್ಟಿಯಲ್ಲಿ ಅರ್ಹ ಮತದಾರರ ಹೆಸರು ಮಾತ್ರ ಸೇರಬೇಕು, ಅನರ್ಹರ ಹೆಸರುಗಳು ಸೇರಬಾರದು ಎಂಬ ಉದ್ದೇಶದಿಂದ ಎಸ್‌ಐಆರ್ ನಡೆಸಲಾಗುತ್ತಿದೆ. ಹಂತ-3ರ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಎಲ್ಲ ಮತದಾರರೂ ಉತ್ಸಾಹದಿಂದ ಭಾಗವಹಿಸಿ ತಮ್ಮ ವಿವರ ನಮೂನೆಗಳನ್ನು ಭರ್ತಿ ಮಾಡಬೇಕು ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮನವಿ ಮಾಡಿದ್ದಾರೆ. ಎಸ್‌ಐಆರ್ 2ನೇ ಹಂತದಲ್ಲಿ 9 ರಾಜ್ಯ ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳ 60 ಲಕ್ಷಕ್ಕೂ ಅಧಿಕ ಮತದಾರರ ಹೆಸರುಗಳನ್ನು ತೆಗೆದುಹಾಕಲಾಗಿದೆ.



ಕರ್ನಾಟಕದಲ್ಲಿ
- ಜೂ.20-29: ಸಿದ್ಧತೆ, ತರಬೇತಿ ಮತ್ತು ಮುದ್ರಣ
- ಜೂ.30-ಜು.29: ಬಿಎಲ್‌ಒಗಳಿಂದ ಮನೆ ಮನೆ ಭೇಟಿ
- ಜು.29ರಿಂದ ಮತಗಟ್ಟೆಗಳ ಪ್ರಕ್ರಿಯೆ
- ಆ.5: ಮತದಾರರ ಕರಡು ಪಟ್ಟಿ ಪ್ರಕಟ
- ಆ.5-ಸೆ.4: ಆಕ್ಷೇಪಣೆಗಳ ಸಲ್ಲಿಕೆಗೆ ಅವಕಾಶ
- ಆ.5-ಅ.3: ಆಕ್ಷೇಪಣೆ ಅರ್ಜಿಗಳ ಇತ್ಯರ್ಥ /ನೋಟಿಸ್ ಅವಧಿ
- ಅ.7: ಅಂತಿಮ ಮತದಾರರ ಪಟ್ಟಿ ಪ್ರಕಟ

ಆರೆಸ್ಸೆಸ್ ಸರಕಾರ್ಯವಾಹ ಹೊಸಬಾಳೆ ಬಣ್ಣನೆ

ಏನನ್ನೂ ಬಯಸದ ತ್ಯಾಗದ ಪರಮಮೂರ್ತಿ ಜಯದೇವ



ಬೆಂಗಳೂರಿನಲ್ಲಿ ರಾಷ್ಟ್ರೋತ್ಥಾನ ಪರಿಷತ್ ಆಯೋಜಿಸಿದ್ದ ಮೈ.ಚ. ಜಯದೇವ ಬದುಕು-ನೆನಪು ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಆರೆಸ್ಸೆಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೃತಿಯ ಲೇಖಕರಾದ ಡಾ. ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ, ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ. ಕುಮಾರ್ ಇದ್ದರು.

• **ಬೆಂಗಳೂರು:** ಜೀವನದಲ್ಲಿ ತಮಗಾಗಿ ಏನನ್ನೂ ಬಯಸದ ತ್ಯಾಗದ ಪರಮ ಮೂರ್ತಿ ಮೈ.ಚ. ಜಯದೇವ. ಅವರು ಧ್ಯೇಯಜೀವಿ ಮಾತ್ರವಲ್ಲದೇ ಅವಿಶ್ರಾಂತರು ಮತ್ತು ಕರ್ಮಯೋಗಿಯೂ ಆಗಿದ್ದರು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಬಣ್ಣಿಸಿದ್ದಾರೆ.

ರಾಷ್ಟ್ರೋತ್ಥಾನ ಪರಿಷತ್ ನಗರದ ಪುರಭವನದಲ್ಲಿ ಆಯೋಜಿಸಿದ ಅವಿಶ್ರಾಂತ ಧ್ಯೇಯಜೀವಿ ಮೈ.ಚ. ಜಯದೇವ ಬದುಕು-ನೆನಪು ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪುಸ್ತಕದ ಕುರಿತು ಅವರು ಮಾತನಾಡಿದರು. ಒಬ್ಬ ಸಂಘಟಕ, ಜನರನ್ನು ಸೇರಿಸುವ ಸಾಮರ್ಥ್ಯ ಇರುವವರು ಜೀವನದ ವಿವಿಧ ಮುಖಗಳಲ್ಲಿ ಅದನ್ನು ಸಾಕಾರಗೊಳಿಸುವ ಪ್ರಯತ್ನ ಮಾಡಿದರು.
➡ಪುಟ ೭

> ಅವಿಶ್ರಾಂತ ಧ್ಯೇಯಜೀವಿ ಜಯದೇವ ಅವರ ಜೀವನದ ಚರಿತ್ರೆ ಅಲ್ಲ; ಅವರು ಸ್ಥಾಪಿಸಿದ ಸಂಸ್ಥೆಗಳ ಪುನರುಜ್ಜೀವನದ ಇತಿಹಾಸ ಅಡಗಿರುವ ಮೌಲಿಕ ಪುಸ್ತಕ. ಅವರ ಧ್ಯೇಯಾದರ್ಶಗಳು ನಮ್ಮೊಂದಿಗೆ ಇರುತ್ತವೆ.
> ■ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುತ್ತೂರು ಮಠಾಧೀಶರು

ಯಾರನ್ನೂ ಓಲೈಸುವ, ನೋಯಿಸುವ ಉದ್ದೇಶವಿಲ್ಲ: ಸಿಎಂ ಸಿದ್ದರಾಮಯ್ಯ

ಧರ್ಮ, ಜಾತಿ ಆಚರಣೆ ಗೌರವಿಸುವ ಉದ್ದೇಶ



• **ಬೆಂಗಳೂರು:** ಸಂವಿಧಾನದ ಆಶಯವಾಗಿರುವ ಸರ್ವ ಧರ್ಮ ಸಮಭಾವದ ಆಶಯಕ್ಕೆ ಅನುಗುಣವಾಗಿಯೇ ರಾಜ್ಯದ ಶಾಲಾ ಕಾಲೇಜುಗಳಲ್ಲಿ ಪರಿಷ್ಕೃತ ವಸ್ತ್ರಸಂಹಿತೆ ಯನ್ನು ಜಾರಿಗೊಳಿಸಲಾಗಿದೆ. ಇದು ಯಾರನ್ನಾದರೂ ಓಲೈಸುವ ಇಲ್ಲವೇ ನೋಯಿಸುವ ಉದ್ದೇಶದ ವಸ್ತ್ರಸಂಹಿತೆ ಅಲ್ಲ, ಎಲ್ಲ ಜಾತಿ-ಧರ್ಮಗಳ ಆಚರಣೆ, ಸಂಪ್ರದಾಯಗಳನ್ನು ಗೌರವಿಸುವ ವಸ್ತ್ರಸಂಹಿತೆಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ವಸ್ತ್ರಸಂಹಿತೆ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಅವರು, ಹಿಜಾಬ್ ಧರಿಸಲು ಅವಕಾಶ ನೀಡಿರುವುದು ಮುಸ್ಲಿಮರ ಓಲೈಕೆಯಾದರೆ, ಜನಿವಾರ, ಪೇಟ, ಟರ್ಬನ್ ಧರಿಸಲು ಅವಕಾಶ ನೀಡಿರುವುದು ಆಯಾಧರ್ಮಗಳ ಓಲೈಕೆ ಯಾಗುವುದೇ ಎಂದು ಪ್ರಶ್ನಿಸಿದ್ದಾರೆ.

ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಜಾರಿಗೊಳಿಸಿರುವ ವಸ್ತ್ರಸಂಹಿತೆ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಕೇಂದ್ರಿಯ ವಿದ್ಯಾಲಯಗಳ ವಸ್ತ್ರಸಂಹಿತೆಗೆ ಅನುಗುಣವಾಗಿಯೇ ಇದೆ. ರಾಜ್ಯ ಸರ್ಕಾರ ಹೊರಡಿಸಿರುವ ವಸ್ತ್ರಸಂಹಿತೆಯನ್ನು ವಿರೋಧಿಸುವವರು ಕೇಂದ್ರೀಯ ವಿದ್ಯಾಲಯಗಳ ವಸ್ತ್ರಸಂಹಿತೆಯನ್ನೂ ವಿರೋಧಿಸಬೇಕಲ್ಲವೇ? ಯಾಕೆ ಈ ಹಿಪಾಕ್ರಸಿ ಎಂದಿದ್ದಾರೆ.
➡ಪುಟ ೭

ನಂಬಿಕೆ ಆಧಾರಿತ ಗುರುತು ಧರಿಸಲು ಅವಕಾಶ

ಸರ್ಕಾರವು ಸಾಂವಿಧಾನಿಕ ತತ್ವಗಳಿಗೆ ಅನುಗುಣವಾಗಿ ಎಲ್ಲಾ ಧರ್ಮ ಮತ್ತು ಸಂಪ್ರದಾಯಗಳ ಬಗ್ಗೆ ತಟಸ್ಥ ಮತ್ತು ಸಮಾನ ನಿಲುವು ಹೊಂದಿರಬೇಕಿದೆ. ಅದೇ ರೀತಿ ಯಾರಿಗೂ ತೊಂದರೆಯಾಗದಂತಹ ಸೀಮಿತ ಸಾಂಪ್ರದಾಯಿಕ ಅಥವಾ ನಂಬಿಕೆ ಆಧಾರಿತ ಆಚರಣೆಗಳಿಂದಾಗಿ ಯಾವುದೇ ವಿದ್ಯಾರ್ಥಿಗೆ ಶಿಕ್ಷಣ ಹಕ್ಕು ನಿರಾಕರಣೆ ಆಗದಂತೆ ನೋಡಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ನಿಗದಿತ ಸಮವಸ್ತ್ರಕ್ಕೆ ಪೂರಕವಾಗಿ ಮತ್ತು ಅದಕ್ಕೆ ಹೊಂದಿಕೊಳ್ಳುವಂತೆ ಸೀಮಿತ ಸಾಂಪ್ರದಾಯಿಕ ಅಥವಾ ನಂಬಿಕೆ ಆಧಾರಿತ ಗುರುತುಗಳನ್ನು ಧರಿಸಲು ಅವಕಾಶ ಕಲ್ಪಿಸಲು ನಮ್ಮ ಸರ್ಕಾರ ನಿರ್ಧರಿಸಿದೆ ಎಂದು ತಿಳಿಸಿದ್ದಾರೆ.

ರಾಜ್ಯದ ಜನರೇ ಉತ್ತರಿಸುತ್ತಾರೆ: ವಿಜಯೇಂದ್ರ

ಹಿಜಾಬ್ ಕುರಿತ ಸರ್ಕಾರದ ಕ್ರಮಕ್ಕೆ ಬಿವೈವಿ ಆಕ್ರೋಶ



• **ಬೆಂಗಳೂರು:** ಶಾಲಾ- ಕಾಲೇಜುಗಳಲ್ಲೂ ಹಿಂದುಗಳು, ಮುಸಲ್ಮಾನರೆಂದು ಬೆಂಕಿ ಹಚ್ಚುವ ಕೆಲಸಕ್ಕೆ ಕಾಂಗ್ರೆಸ್ ಸರ್ಕಾರ ಕೈ ಹಾಕಿದ್ದು, ಬರುವ ದಿನಗಳಲ್ಲಿ ರಾಜ್ಯದ ಜನರು ಇದಕ್ಕೆ ಉತ್ತರ ಕೊಡುತ್ತಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಭಿವೃದ್ಧಿಯನ್ನು ಮರೆತು ಹಿಂದುಗಳಿಗೆ ಅಪಮಾನ ಮಾಡಿಕೊಂಡು ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರದ ಆಡಳಿತಕ್ಕೆ ಇತಿಶ್ರೀ ಹಾಡುವ ದಿನಗಳು ಬಂದೇ ಬರಲಿವೆ. ಆಗ ರಾಜ್ಯದ ಜನರೂ ಇದಕ್ಕೆ ಉತ್ತರ ಕೊಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.
➡ಪುಟ ೭

ಮತೀಯ ವಿಷ ಬೀಜ ಬಿತ್ತುವ ಕೆಲಸ

ಶಾಸಕ ಮಹೇಶ್ ಟೆಂಗಿನಕಾಯಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ಹಿಜಾಬ್ ವಿಷಯವನ್ನು ಮತ್ತೆ ಮುನ್ನೆಲೆಗೆ ತಂದು ಮಕ್ಕಳಲ್ಲಿ ಮತೀಯ ವಿಷ ಬೀಜ ಬಿತ್ತಲು ಶುರು ಮಾಡಿದೆ ಎಂದು ಆರೋಪಿಸಿದರು. ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2022ರಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ವಸ್ತ್ರ ಸಂಹಿತೆ ಬೇಕು ಎಂಬುದನ್ನು ನ್ಯಾಯಾಲಯ ಸಹ ಎತ್ತಿ ಹಿಡಿದಿತ್ತು. ಆದರೆ, ಇಂದು ಕಾಂಗ್ರೆಸ್ ಸರ್ಕಾರ ಹಿಜಾಬ್ ಧರಿಸಲು ತೀರ್ಮಾನ ಕೈಗೊಂಡಿದೆ ಎಂದು ದೂರಿದರು.

ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾದರಿಯಾದ ಪ್ರೇಮ್‌ಕುಮಾರ್

ಚಾಲಕನ ಪುತ್ರನಿಗೆ 15 ಚಿನ್ನದ ಪದಕ

▸ ದೇವಿತಾ ಸಿ. ಸುಬ್ಬಯ್ಯ

ದಿಗಂತ ವಿಶೇಷ

• **ಬೆಂಗಳೂರು:** ಸಾಮಾನ್ಯ ರೈತ ಕುಟುಂಬದ ಹಿನ್ನಲೆ ಹೊಂದಿರುವ ಹಾಗೂ ಟೆಂಪೋ ಚಾಲಕನ ಮಗ ಇಂದು ಕೃಷಿ ವಿಜ್ಞಾನ ಕ್ಷೇತ್ರದಲ್ಲಿ ಹೊಸ ಇತಿಹಾಸ ನಿರ್ಮಿಸಿದ್ದಾನೆ. ಈ ಮೂಲಕ ಅನೇಕ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದಾನೆ.

ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಕುಡಿಯನೂರು ಗ್ರಾಮದ ಟೆಂಪೋ ಚಾಲಕ ಈಶ್ವರರಾವ್ ಹಾಗೂ ಲಕ್ಷ್ಮಿಬಾಯಿ ದಂಪತಿ ಮಗನಾಗಿರುವ ಕೆ.ಈ. ಪ್ರೇಮ್‌ಕುಮಾರ್ ಕೃಷಿ ವಿಜ್ಞಾನ ಪದವಿಯಲ್ಲಿ ಸಾಧನೆ ಮಾಡಿರುವ ವಿದ್ಯಾರ್ಥಿ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಜಿಕೆವಿಕೆಯಲ್ಲಿ ಬಿ.ಎಸ್ಸಿ (ಆನರ್ಸ್) ಕೃಷಿಯಲ್ಲಿ ಶೇ.91.02 ರಷ್ಟು ಅಂಕಗಳನ್ನು ಪಡೆಯುವ ಮೂಲಕ ಪ್ರಥಮ ಸ್ಥಾನ ಜತೆಗೆ ಒಟ್ಟು 15 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಮೂಲಕ ಹಲವಾರು ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾನೆ.

ಗ್ರಾಮೀಣ ಬದುಕಿನಿಂದ ಸಾಧನೆವರೆಗೆ: ರೈತ ಕುಟುಂಬದ ಹಿನ್ನೆಲೆಯಲ್ಲೇ ಬೆಳೆದ ಪ್ರೇಮ್‌ಕುಮಾರ್, ಬಾಲ್ಯದಿಂದಲೇ ಕೃಷಿ ಜೀವನವನ್ನು ಹತ್ತಿರದಿಂದ ಕಂಡವರು.
➡ಪುಟ ೭



> ಕೃಷಿ ಕೇವಲ ಒಂದು ಕೋರ್ಸ್ ಅಲ್ಲ, ಅದು ದೇಶದ ಭವಿಷ್ಯ. ಶ್ರಮ, ಆಸಕ್ತಿ ಮತ್ತು ತಂತ್ರಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ಕೃಷಿ ಕ್ಷೇತ್ರದಲ್ಲಿ ಅಪಾರ ಅವಕಾಶಗಳಿವೆ.
> ■ ಪ್ರೇಮ್ ಕುಮಾರ್, ಕೃಷಿ ವಿವಿ ವಿದ್ಯಾರ್ಥಿ

ಕೃಷಿಯಿಂದ ಕೃಷಿ ವಿಜ್ಞಾನಕ್ಕೆ

ಜಿಕೆವಿಕೆ ಶಿಕ್ಷಣದ ವೇಳೆ ಅವರು ಕೃಷಿಯ ವೈಜ್ಞಾನಿಕ ಅಂಶಗಳನ್ನು ಆಳವಾಗಿ ಅರ್ಥಮಾಡಿಕೊಂಡರು. ಮಣ್ಣು ವಿಜ್ಞಾನ, ಬೆಳೆ ಉತ್ಪಾದನೆ, ಬೀಜ ತಂತ್ರಜ್ಞಾನ, ಮತ್ತು ಕೃಷಿ ಸಂಶೋಧನೆಗಳಂತಹ ವಿಷಯಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ಇದರೊಂದಿಗೆ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರಿಂದ ಸಿಗುತ್ತಿದ್ದಂತಹ ಮಾರ್ಗದರ್ಶನದಿಂದ ಅತ್ಯುತ್ತಮ ಅಂಕಗಳೊಂದಿಗೆ 15 ಚಿನ್ನದ ಪದಕಗಳನ್ನು ಗಳಿಸಿದ್ದಾರೆ.

ತ.ನಾಡಿನಲ್ಲಿ ಮದ್ಯ ಖರೀದಿಗೆ 21 ವರ್ಷ ಕಡ್ಡಾಯ: ಆದೇಶ

• **ಚೆನ್ನೈ:** ಜೋಸೆಫ್ ವಿಜಯ್ ನೇತೃತ್ವದ ತಮಿಳುನಾಡು ಸರ್ಕಾರ ರಾಜ್ಯದಲ್ಲಿ ಮದ್ಯಪಾನದ ನಿಯಮಗಳನ್ನು ಕಠಿಣಗೊಳಿಸುವ ಮಹತ್ವದ ನಿರ್ಧಾರ ಕೈಗೊಂಡಿದೆ. ಇನ್ನು ಮುಂದೆ ಮದ್ಯ ಖರೀದಿ ಅಥವಾ ಮಾರಾಟ ಮಾಡಲು ಕನಿಷ್ಠ 21 ವರ್ಷ ನಿಗದಿಪಡಿಸಿ ಮಹತ್ವದ ಆದೇಶ ಹೊರಡಿಸಿದೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ವಿಜಯ್ ಸರ್ಕಾರ ಈ ಕ್ರಮ ಜಾರಿಗೆ ತಂದಿದೆ. ರಾಜ್ಯದಲ್ಲಿ ಮದ್ಯಪಾನ ನಿಯಂತ್ರಣ ಮತ್ತು ಸಾರ್ವಜನಿಕ ಕಲ್ಯಾಣಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಈಗಾಗಲೇ ದೇವಾಲಯಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಬಸ್ ನಿಲ್ದಾಣಗಳ ಸಮೀಪದಲ್ಲಿದ್ದ 717 ಟಾಸ್ಮಾಕ್ ಮದ್ಯದಂಗಡಿಗಳನ್ನು ಮುಚ್ಚಲು ಸರ್ಕಾರ ಆದೇಶಿಸಿದ ಬೆನ್ನಲ್ಲೇ ಮತ್ತೊಂದು ಕ್ರಮ ಕೈಗೊಂಡಿದೆ.



➡ಪುಟ ೭

ಸುವೇಂದು ನೇತೃತ್ವದ ಬಿಜೆಪಿ ಸರ್ಕಾರದಿಂದ ಅಧಿಸೂಚನೆ

ಬಂಗಾಳ: ಗೋವಧೆಗೆ ನಿರ್ಬಂಧ

• **ಕೋಲ್ಕತ್ತಾ:** ಗೋಪ್ರೇಮಿಗಳ ಪಾಲಿಗೊಂದು ಖುಷಿ ಸುದ್ದಿ. ಪಶ್ಚಿಮ ಬಂಗಾಳದಲ್ಲಿ 1950ರ ಗೋವಧೆ ನಿಯಂತ್ರಣ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರ್ಕಾರ ಬುಧವಾರ ಅಧಿಸೂಚನೆ ಹೊರಡಿಸಿದೆ.

ಮುಖ್ಯವಾಗಿ ಗೋವು, ಗೂಳಿ, ಎಮ್ಮೆ, ಎತ್ತು, ಕೋಣ ಇತ್ಯಾದಿಗಳನ್ನು ಸಾರ್ವಜನಿಕವಾಗಿ ವಧಿಸುವಂತಿಲ್ಲ, ಕಸಾಯಿಖಾನೆಗಳು ಕಡ್ಡಾಯವಾಗಿ ಕ್ಷಮತಾ ಪ್ರಮಾಣಪತ್ರ ಹೊಂದಿರಬೇಕು. ಕ್ಷಮತಾ ಪ್ರಮಾಣಪತ್ರವಿಲ್ಲದೆ ಗೂಳಿ, ಎಮ್ಮೆ, ಗೋವು, ಕರು, ಎತ್ತು ಇತ್ಯಾದಿ ಜಾನುವಾರುಗಳನ್ನು ವಧಿಸುವಂತಿಲ್ಲ.

2018ರ ಆ.6ರಂದು ಕೋಲ್ಕತ್ತಾ ಹೈಕೋರ್ಟ್ ನೀಡಿರುವ ತೀರ್ಪು ಮತ್ತು ಇದಕ್ಕೆ ಪೂರಕವಾಗಿ 2022ರ ಜೂ.8ರಂದು ಸರ್ಕಾರ ಜಾರಿಗೊಳಿಸಿದ ನಿಯಮಾವಳಿಗಳಿಗೆ ಬದ್ಧವಾಗಿ ಪ್ರಸ್ತುತ ನಿರ್ದೇಶ ಹೊರಡಿಸಲಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಗೋವು ಅಥವಾ ಹೋರಿಗಳಿಗೆ ತೀರಾ ವಯಸ್ಸಾಗಿದ್ದಲ್ಲಿ, ಗಾಯವಾಗಿದ್ದಲ್ಲಿ ಅಥವಾ ವಾಸಿಯಾಗಲು ಅಸಾಧ್ಯ ಕಾಯಿಲೆಗಳಿಂದ ಬಳಲುತ್ತಿರುವ ಸಂದರ್ಭದಲ್ಲಿ ಮಾತ್ರ ಅಧಿಕೃತ ಕಸಾಯಿಖಾನೆಗಳಲ್ಲಿ ಇವುಗಳ ವಧೆಗೆ ಸಮ್ಮತಿ ಕೊಡಲಾಗುವುದು.



ಕ್ಷಮತಾ ಪ್ರಮಾಣಪತ್ರ ಕಡ್ಡಾಯ

ಜಾನುವಾರು ವಧೆಗೆ ಯೋಗ್ಯವೆಂಬ ಕ್ಷಮತಾ ಅಥವಾ ಯೋಗ್ಯತಾ ಪ್ರಮಾಣಪತ್ರವಿಲ್ಲದೆ ಯಾರೂ ಗೂಳಿಗಳು, ಹೋರಿಗಳು, ಗೋವುಗಳು, ಕರುಗಳು, ಗಂಡು-ಹೆಣ್ಣು ಎಮ್ಮೆಗಳು, ಎಮ್ಮೆ ಮರಿಗಳನ್ನು ವಧಿಸಲು ಅಧಿಸೂಚನೆಯಲ್ಲಿ ಅವಕಾಶವಿಲ್ಲ. ಗೋವು ಅಥವಾ ಗೂಳಿ ವಧೆಗೆ ಅರ್ಹವೆಂಬ ಪ್ರಮಾಣಪತ್ರ ನೀಡುವ ಜವಾಬ್ದಾರಿ ಮುನ್ಸಿಪಾಲಿಟಿ ಅಧ್ಯಕ್ಷರು, ಪಂಚಾಯತ್ ಸಮಿತಿ ಸಭಾಪತಿ, ಸರ್ಕಾರಿ ಪಶುವೈದ್ಯಾಧಿಕಾರಿಗಳಿಗೆ ಇರಲಿದೆ.
➡ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 3,00,000(3,10,000) ಅಪರಂಜಿ ಚಿನ್ನ: 1,62,330(1,62,000) ಆಭರಣ ಚಿನ್ನ: 1,48,800(1,48,500) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ.(ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್ಇ 75,398(789↑) ಎನ್ಎಸ್ಇ 23,629(277↑)

$1 = ₹95.71

ಬೆಂಗಳೂರು
ಶುಕ್ರವಾರ, 15 ಮೇ 2026
ಸಂಪುಟ 33, ಸಂಚಿಕೆ 194, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ನೀಟ್ ಪರೀಕ್ಷೆ ರದ್ದು ದ್ರೋಹ: ಸಿಎಂ | ೦೫
ತೈವಾನ್ ವಿಚಾರದಲ್ಲಿ ಎಚ್ಚರಿಕೆ ಇರಲಿ | ೧೦
ಯುದ್ಧ ನಿಲ್ಲಿಸಲು ಭಾರತ ಕೊಡುಗೆ: ಜೈಶಂಕರ್ | ೧೦

ಕೆಂಪುಕೋಟೆ ಸ್ಫೋಟ ಪ್ರಕರಣದಲ್ಲಿ 10 ಮಂದಿ ವಿರುದ್ಧ ಆರೋಪಪಟ್ಟಿ

ಸರ್ಕಾರ ಬೀಳಿಸುವ ಸಂಚು!

• **ಹೊಸದಿಲ್ಲಿ:** ಭಾರತ ಸರ್ಕಾರವನ್ನು ಉರುಳಿಸಿ ದೇಶದಲ್ಲಿ ಶರಿಯಾ ಆಡಳಿತ ಸ್ಥಾಪಿಸುವ ಉದ್ದೇಶದಿಂದ 'ಆಪರೇಷನ್ ಹೆವನ್‌ಲಿ ಹಿಂದ್' ಹೆಸರಿನಲ್ಲಿ ಜಿಹಾದಿ ಸಂಚು ರೂಪಿಸಿದ್ದ ಅಲ್‌ಖೈದಾ ಅಂಗಸಂಸ್ಥೆ ಅನ್ಸಾರ್ ಘಜ್ವತ್-ಉಲ್-ಹಿಂದ್ ಸಂಘಟನೆಯ ಭಯೋತ್ಪಾದಕ ಜಾಲವನ್ನು ರಾಷ್ಟ್ರೀಯ ತನಿಖಾ ದಳ (ಎನ್ಐಎ) ಬಯಲಿಗೆಳೆದಿದೆ.



ಕಳೆದ ವರ್ಷ ದಿಲ್ಲಿಯ ಕೆಂಪುಕೋಟೆ ಸಮೀಪ ಸಂಭವಿಸಿದ್ದ ಭೀಕರ ಕಾರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ 10 ಮಂದಿಯ ವಿರುದ್ಧ 7,500 ಪುಟಗಳ ಮಹತ್ವದ ಆರೋಪಪಟ್ಟಿಯನ್ನು ಎನ್ಐಎ ಕೋರ್ಟ್‌ಗೆ ಸಲ್ಲಿಸಿದೆ. ಪುಟ ೭

- ಭಾರತ ಸರ್ಕಾರ ಉರುಳಿಸಿ ಶರಿಯಾ ಆಡಳಿತ ಜಾರಿಗೆ ಸಂಚು
- ಅಲ್‌ಖೈದಾ ಅಂಗಸಂಸ್ಥೆ ಅನ್ಸಾರ್ ಘಜ್ವತ್-ಉಲ್-ಹಿಂದ್ ಜಾಲ ಬಯಲು
- ಆಪರೇಷನ್ ಹೆವನ್‌ಲಿ ಹಿಂದ್ ಹೆಸರಿನಲ್ಲಿ ದೇಶವಿರೋಧಿ ಜಾಲ
- ವೈದ್ಯರು ಸೇರಿ ವೈಟ್ ಕಾಲರ್ ಭಯೋತ್ಪಾದಕ ಘಟಕ ಪತ್ತೆ
- 7,500 ಪುಟಗಳ ಆರೋಪಪಟ್ಟಿ ಸಲ್ಲಿಸಿದ ಎನ್ಐಎ
- ಟಿಎಟಿಪಿ ಸ್ಫೋಟಕ, ಡ್ರೋನ್ ಹಾಗೂ ರಾಕೆಟ್ ಐಇಡಿ ಪ್ರಯೋಗ ನಡೆಸಿದ್ದ ಆರೋಪ
- 588 ಸಾಕ್ಷ್ಯ, 395 ದಾಖಲೆ, 200ಕ್ಕೂ ಹೆಚ್ಚು ವಶಪಡಿಸಿಕೊಂಡ ವಸ್ತುಗಳ ಬಗ್ಗೆ ಉಲ್ಲೇಖ

ಡ್ರೋನ್, ರಾಕೆಟ್ ಬಳಕೆಗೆ ಪಿತೂರಿ

ತನಿಖೆಯಲ್ಲಿ ಆರೋಪಿಗಳು ಅಕ್ರಮವಾಗಿ ಎಕೆ-47 ರೈಫಲ್, ಕ್ರಿಂಕೊವ್ ರೈಫಲ್, ಪಿಸ್ತೂಲುಗಳು, ಜೀವಂತ ಗುಂಡುಗಳನ್ನು ಸಂಗ್ರಹಿಸಿದ್ದೂ ಪತ್ತೆಯಾಗಿದೆ. ಜಮ್ಮು-ಕಾಶ್ಮೀರ ಸೇರಿ ದೇಶದ ವಿವಿಧ ಭಾಗಗಳ ಭದ್ರತಾ ಕೇಂದ್ರಗಳ ಮೇಲೆ ದಾಳಿ ನಡೆಸುವ ಉದ್ದೇಶದಿಂದ ಡ್ರೋನ್, ರಾಕೆಟ್ ಆಧಾರಿತ ಐಇಡಿ ತಂತ್ರಜ್ಞಾನಗಳ ಮೇಲೂ ಪ್ರಯೋಗ ನಡೆಸಿದ್ದರು ಎಂದು ಎನ್ಐಎ ತಿಳಿಸಿದೆ.

ಜಮ್ಮು-ಕಾಶ್ಮೀರ, ಹರಿಯಾಣ, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ದಿಲ್ಲಿ-ಎನ್‌ಸಿಆರ್‌ಗಳಲ್ಲಿ ತನಿಖೆ ನಡೆಸಲಾಗಿದೆ. ಪುಟ ೭

ಒಮಾನ್‌ನಲ್ಲಿ ಭಾರತದ ಸರಕು ನೌಕೆ ಮೇಲೆ ದಾಳಿ

• **ಹೊಸದಿಲ್ಲಿ:** ಒಮಾನ್ ಸಮುದ್ರ ಪ್ರದೇಶದಲ್ಲಿ ಸಂಚರಿಸುತ್ತಿದ್ದ ಭಾರತದ ಧ್ವಜ ಹೊಂದಿದ್ದ ಎಂಎಸ್‌ವಿ ಹಾಜಿ ಅಲಿ ಎಂಬ ಸರಕು ನೌಕೆಯ ಮೇಲೆ ಕ್ಷಿಪಣಿ ದಾಳಿ ನಡೆಸಿ ಅದನ್ನು ಮುಳುಗಿಸಿರುವುದನ್ನು ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಗುರುವಾರ ತೀವ್ರವಾಗಿ ಖಂಡಿಸಿದೆ. • ವಿವರ ಪುಟ ೧೦

BEFORE THE NOMINEE OF DEPUTY REGISTRAR OF CHITS, III ZONE, MARGOSA ROAD, MALLESWARAM, AT BANGALORE.

Dispute No. DRB-III/ CHITS/137/2025-26,

BETWEEN: MARGADARSI CHITS (KARNATAKA) PVT. LTD., Registered Office at Plot No. 212, Opp. Gate No. 9. of Palace Ground, Bellary Main Road, Sadashiva Nagar, BANGALORE-560 080.
Branch: BANASHANKARI
Represented by its Foreman & Branch Manager, **Mr. K. BALACHANDRAN.** .... **DISPUTANT**

AND: Mr. J. RANGEGOWDA & ORS.

1. Mr. J. RANGEGOWDA, S/o Mr. Jayaramanna, Major, First Division Asst. No. 558B, 5th Floor, Annex Building, Gate No. 3, VidhanaSoudha, BENGALURU - 560 001.

2.Mr. R. BALAKRISHNA, S/o Mr. M. P. Ramaswamy, Major, Superintendent (Administration), Dy. Director of Land Records, 2nd Floor, D. C. Office Complex, MANGALURU - 570 004.

3.Mr. P. PURUSHOTHAM, S/o Mr. Puttaswamy, Major, Second Division Asst., Dept. of Survey Settlement And Land Records, K. R. Circle, BENGALURU-560 001.

6.Ms. LAKSHMAMMA, W/o Mr. Jayaramanna, Major, Site # 22, D No. 171, 1st Cross, 1st Main, Doddabidarakallu, BENGALURU - 560 073.

7.Mr. H. D. SHIVANNA, S/o Mr. DoddaChowdappa, Major, S No. 22, D No. 171, 1st Cross, 1st Main, Doddabidarakallu, BENGALURU-560 073.

8.Mr. L. E. MADHU, S/o Mr. E. R. Eshwarappa, Major, Land Surveyor, Dept. of Survey, Settlement & Land Records,K. R. Circle, BENGALURU-560 001. ....**OPPONENTS.**

SUIT NOTICE BY PAPER PUBLICATION TO OPPONENT Nos. 1, 2, 3, 6, 7 & 8

WHEREAS, the Disputant has filed the above dispute U/s 64 (1) of The Chit Funds Act, 1982 before The Deputy Registrar of Chits, III Zone, Bangalore for recovery of a sum of **Rs. 2,88,925/-** along with interest at 24% p.a. and the Court Costs from the Opponents and the above dispute has been referred to me for adjudication and disposal.

Notice sent to Opponent Nos. 1, 2, 3, 6, 7 & 8 by S.P.A.D. have been returned unserved. Therefore, the Opponent Nos. 1, 2, 3, 6, 7 & 8 named above are therefore hereby directed to appear before me at the Branch Office of the Disputant Company at Banashankari, at Site # 287, IInd Floor, Banashankari LayOut, 3rd Stage, 4th Phase, 7th Block, Bangalore-560 085 on 3-6-2026 at 3-00pm with all relevant documents failing which the above dispute will be decided as per law, in their absence. Given Under my hand & seal on 13-05-2026.

S. Devaraj
Nominee of Deputy Registrar of Chits, III Zone, Bangalore.

ADVOCATE FOR DISPUTANT:
K. R. DINAKAR, ADVOCATE
66, 4th Cross, Ashok Nagar, Near N. R. Colony, BANGALORE-560 050. Mob: 94485 39699.

:: ಓದುಗರ ಗಮನಕ್ಕೆ ::
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

IN THE COURT OF THE HON'BLE V ADDL. CHIEF JUDICIAL MAGISTRATE AT BENGALURU

C.MIS. NO. 4503/2026

BETWEEN : Sri. K.NARASIMHAMURTHY S/o Late. S. Krishnappa Shetty @ S. Krishnappa Aged about 61 years, R/at No. 57, Bannerghatta Main Road, Near Bus Stop, Gottigere, Bannerghatta, Bengaluru -560 083
2. Smt. RATHNAMMA. K, D/o Late. S.Krishnappa Shetty @ S. Krishnappa W/o Muniraju.T Aged about 72 years, R/at No. 57, B.G. Road, Bus stop, Gottigere, Bengaluru South, Bengaluru -560 083
3. VIJAYALAKSHMI. K D/o Late. S.Krishnappa Shetty @ S. Krishnappa, Aged about 56 years, R/at No. 57, Bannerghatta Road, Near Bus Stop, Gottigere, Bengaluru South, Bengaluru -560 083 ...**PETITIONERS**

AND : The Commissioner, Registrar of Birth and Death B.B.M.P. Bengaluru ...**RESPONDENT**

PAPER PUBLICATION

Whereas, the above petitioners has filed above said C.Mis. petition for the Death certificate of the petitioner's father S.KRISHNAPPA SHETTY @ S. KRISHNAPPA. S/o Late. SUBBAIAH SHETTY was expired on 20.01.2011 at No. 57, Bannerghatta Main Road, Near Bus Stop, Gottigere, Bannerghatta, Bengaluru -560083.

If any person interest or objection to the said claim can appear before the Hon'ble Court, either personally or through pleader duly instructed with objection if any on **08/06/2026 at 11 A.M.** failing which the above case will be heard and decided ex-parte.

Given under my hand and seal of this court on 24th day of April 2026.

By Order of the Court
Sdl- Sheristedar
Vth Addl. C.M.M. Court, Bangalore

Sri. KENCHAPPA, Advocate,
No.181, 1st Main, Bhavani Nagara, Channanayakanapalya, Nagasandra post, Bengaluru -560 073.

BEFORE THE MOTOR ACCIDENT CLAIMS TRIBUNAL AT BENGALURU SCCH-23

MVC No. 1503/2026

Petitioner : SHANTHAMMA and Others **V/s**
Respondents : KRISHNA MURTHY M.S.

NOTICE TO RESPONDENT NO.1

R1. KRISHNAMURTHY. M.S. S/o Shivanna permanent R/at Siddainakerepalya, Huliyurdurga Hobli, Kunigal Taluk, Tumkur District.
And also R/at No 277/278, 5th Main Road, Thimmaiah Road, Modi Junction, Rajajinagar Bangalore - 560010 (RC owner of Bullet Bike Bearing Reg. No. KA-02-JJ-6579)

DRAFT OF PAPER PUBLICATION

Whereas the petitioner's had filed the above claim petition against you for compensation of death of Ramaiah in a road accident occurred on 31/08/2025 at about 8.30 P.M at Sugganahalli Bypass, Huliyurdurga Hobli, Kunigal Taluk, Tumakur, Deceased was riding the TVS XL Scooter Bearing Reg No KA-02-HK-5071 on extreme left, at that time, the rider of Bullet Bike dashed against the Deceased, your Bullet bike bearing reg No. KA-02-JJ-6579, for compensation of Rs 50,00,000/- (Rupees FIFTY lakhs only) and it stands posted to 16/06/2026.

You are hereby summoned to appear before this Hon'ble court (SCCH-23). In person or by an advocate dully instructed able to answer to all material question relating to the claim at **11-00 A.M. on 16/06/2026** to answer the claim. Hence, there in default of your appearance on the said date and time the petition will be heard and determined in your absence.

Given under my hand seal of the court this the day of 08/05/2026 at Bangalore.

By Order of the Court
Sd/- Assistant Registrar
Court of Small Causes, Bangalore

Advocate for Petitioner RADHAMMA M G

ಮಾನ್ಯ ... ನ್ಯಾಯಾಲಯ, ನೆಲಮಂಗಲ

ಸಿ.ಮಿಸ್. ನಂ. 151/2026

[illegible]

By order of the Court, Chief Ministerial Officer, Court of the Civil Judge, Junior Division and JMFC, Nelamangala.
Advocate For Petitioner : R & L Associates, LOKESH .K.S, RAVI .P, Advocates 1st Floor, KRP Building, Paramanna Layout, Nelamangala Town, Nelamangala-562123.

ಜಾಹೀರಾತಿಗಾಗಿ ಸಂಪರ್ಕಿಸಿ:
9845438807/
9611755391

ಮಾನ್ಯ ... ನ್ಯಾಯಾಲಯ, ನೆಲಮಂಗಲ

ಸಿ.ಮಿಸ್. ನಂ. 150/2026

[illegible]

By order of the Court, Chief Ministerial Officer, Court of the Civil Judge, Junior Division and JMFC, Nelamangala.
Advocate For Petitioner : R & L Associates, LOKESH .K.S, RAVI .P, Advocates 1st Floor, KRP Building, Paramanna Layout, Nelamangala Town, Nelamangala-562123.

BEFORE THE III ADDL. PRINCIPAL JUDGE, FAMILY COURT, AT BENGALURU

M.C. NO. 7249/2022

BETWEEN: SMT. LAKSHMI DEVI ... PETITIONER
AND: SRI. SRINIVASA .B ... RESPONDENT

To, **SRI. SRINIVASA. B,** S/o SRI. Ramanaiah, Aged about 50 years, Singapura Layout, Near Novodaya School, Vidyaranyapura - Post, Bangalore-560097. Mob: 966335396.

WHEREAS, in the above named Petitioner has made petition to this Court that Under Section 13(1)(ia) of Hindu Marriage Act 1955.

You are hereby directed to appear in the Court in person or by pleader, duly instructed on the **10-06-2026** at 11.00 o'clock in the forenoon to show cause against the Application, failing where in, the said petition will be heard and determined Exparte as per Law.

Given under my hand and Seal of this court on 16-02-2026.

By order of the court, Senior Sheristedar, family Court, Bangalore.

A. JOHN BOSCO & ASSOCIATES
Advocates,
Office at: No. 6, 2nd Floor, Hindu Complex, Mathikere, Bangalore-560054. Mob:9886774989

IN THE COURT OF THE SENIOR CIVIL JUDGE BAGEPALLLI

O.S.NO.185/2024

PLAINTIFF: Sri Maddamma Temple Development Seva Trust (R) Chakavelu Village, Chelur Hobli, Bagepalli taluk
V/s
DEFENDANTS: Smt. Sharadamma & others

SUMMONS TO DEFENDANTS No.1 to 3

D1. Smt.Sharadamma W/o. Late Y.Krishna Reddy, age 44 years, Buddalavaripalli Village Chelur Hobli, Bagepalli taluk
D2. Smt.Varshi D/o. Late Y.Krishna Reddy age 25 years, Buddalavaripalli Village Chelur Hobli, Bagepalli taluk.
D3. Sri.Harishreddy
S/o. Late Y.Krishna Reddy, age 22 years, Buddalavaripalli Village Chelur Hobli, Bagepalli taluk

WHEREAS, the plaintiff has filed this suit against the defendants for declaration of title and permanent injunction.. You the defendants 1, 2 and 3 above named are hereby summoned to appear in this court in person or by pleader on 05.06.2026 at 11 AM to answer the claim, failing which the suit will be disposed off exparte.

Given under the hand and seal of the Court on 02.05.2026

BY THE ORDER OF THE COURT SHERISTEDAR, SENIOR CIVIL JUDGE COURT, BAGEPALLI

J.N.NANJAPPA, ADVOCATE FOR PLAINTIFF BAGEPALLI

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಆನೇಕಲ್

ಸಿ.ಮಿಸ್. ಸಂಖ್ಯೆ : 701/2026

ಅರ್ಜಿದಾರರು : 1) ಶ್ರೀ ಮುನಿಯಪ್ಪ ... 76 ವರ್ಷ, 2) ಶ್ರೀ ... 63 ವರ್ಷ ... ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ.

- ವಿರುದ್ಧ - ಪ್ರತಿವಾದಿಗಳು : ಎದುರುದಾರರು : ... ಆನೇಕಲ್.

ಸಾರ್ವಜನಿಕ ಪ್ರಕಟಣೆ

[illegible] **12.12.1991** [illegible] **ದಿನಾಂಕ : 20.06.2026 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ** [illegible] 14.05.2026 [illegible]

By Order of the Court, Sheristedar, Civil Judge (Jr.Dv.) and JMFC Court, Anekal.

ಅರ್ಜಿದಾರರ ಪರ ವಕೀಲರು : [illegible]

ಮಾನ್ಯ ... ನ್ಯಾಯಾಲಯ, ...

ಸಿ.ಮಿಸ್. ಸಂಖ್ಯೆ : 174 /2026

[illegible]

ಸಾರ್ವಜನಿಕ ಪ್ರಕಟಣೆ

[illegible]

By order of the Court : Chief Ministerial Officer
Court of the Civil Judge, Junior Division and JMFC, Nelamangala

ಅರ್ಜಿದಾರರ ಪರ ವಕೀಲರು : [illegible]

ಕರ್ನಾಟಕ ಸರ್ಕಾರ
ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್

ಉಪನಿರ್ದೇಶಕರು (ಆಡಳಿತ) ರವರ ಕಾರ್ಯಾಲಯ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,

ಕೊಡಿಯಾಲ್‌ಬೈಲ್, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ 575 003.
Phone: 0824 2492337 email: dknddahvs@gmail.com

ಸಂಖ್ಯೆ: ಉನಿಮಂ/ಪಪಾಇ/ಎ-2/ವಿವ-2/2026-27/156 ದಿನಾಂಕ: 14.05.2026

ಇ-ಟೆಂಡರ್ ಪ್ರಕಟಣೆ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಪಶುವೈದ್ಯಕೀಯ ಸಂಸ್ಥೆಗಳಿಗೆ ಅವಶ್ಯವಿರುವ Veterinary Haemotology Analyser ಪೂರೈಸುವ ಸಂಬಂಧ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ದಿನಾಂಕ: 30/05/2026 ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕವಾಗಿರುತ್ತದೆ. ಟೆಂಡರ್‌ನ ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು http://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/- ಉಪನಿರ್ದೇಶಕರು (ಆಡಳಿತ),
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಮಂಗಳೂರು, ದಕ್ಷಿಣ ಕನ್ನಡ.

DIPR/DK/KSMCA/207/ 26-27 dt. 14.05.2026

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ-571313.

ಅಲ್ಪಾವಧಿ ಇ-ಪ್ರಕ್ಯೂರ್‌ಮೆಂಟ್-ಟೆಂಡರ್

ಪ್ರಕಟಣೆ ಸಂಖ್ಯೆ-04/2026-27, ದಿನಾಂಕ :- 13-05-2026 (ದ್ವಿಲಕೋಟೆ ಪದ್ಧತಿ)

★★★★

ಈ ಕಛೇರಿಯಿಂದ ಉಲ್ಲೇಖ ರೀತ್ಯಾ ಅಧಿಸೂಚನೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ ಚಾಮರಾಜನಗರ ತಾಲ್ಲೂಕಿನ ಶಿಕ್ಷಣ ಇಲಾಖೆಯ ಅನುದಾನ ಯೋಜನೆಯ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾದ ಕಾಮಗಾರಿಗಳಿಗೆ KW-3 ರೀತ್ಯಾ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿನಾಂಕ:- 14-05-2026 ರಿಂದ ದಿನಾಂಕ: 02-06-2026 ರವರೆಗೆ ಸಂಜೆ 16.00 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿವರಣೆ ಮಾಹಿತಿ ಪಡೆಯಲು ಅಂತಿಮ ದಿನಾಂಕ: 25-05-2026 ರ ಸಂಜೆ 16.00 ಘಂಟೆಯಾಗಿದ್ದು, ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:-04-06-2026ರ ಸಂಜೆ 17.00 ಘಂಟೆಯ ನಂತರ ಹಾಗೂ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು. ಟೆಂಡರ್ ಫಾರಂ ಬೆಲೆ ಇ-ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಸದರಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್‌ಗಿಟ್ಟ ಇ-ಪ್ರೊಕ್ಯೂರ್ ಮೆಂಟ್ ಮೊಬಲಗು (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ಅರ್ಹತೆ
01.	ಕೊಳ್ಳೇಗಾಲ ಸರ್ಕಾರಿ ಪ್ರೌಢಶಾಲೆಯ ಪ್ರಾಥಮಿಕ ಶಾಲೆಯಲ್ಲಿ ಗ್ರಂಥಾಲಯ ಕೊಠಡಿ ನಿರ್ಮಾಣ ಮತ್ತು ಸುತ್ತಗೋಡೆ ನಿರ್ಮಾಣ ಕಾಮಗಾರಿ (02ನೇ ಕರೆ)	75.00	-	62297.00	3ನೇ ದರ್ಜೆ ಮತ್ತು ಮೇಲ್ಪಟ್ಟು

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ (ಫೋನ್ ನಂ. 08226-223019) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಮೊಬೈಲ್ ಸಂಖ್ಯೆ :- ಸ.ಇಂ. 8073339806

ಸಹಿ/- ಕಾರ್ಯಪಾಲಕ ಅಭಿಯಂತರರು
ಪಂ.ರಾ.ಇಂ. ವಿಭಾಗ, ಚಾಮರಾಜನಗರ

ಸಂ : ವಾಸಾಸಂಇ : ಚಾನಗರ : 108 : 2026-27

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ - 590018, ಕರ್ನಾಟಕ, ಭಾರತ

ಸಂ.: ವಿ.ತಾ.ವಿ./ಬೆ/ಸ್ಥಾ.ಅ./2026-27/ಐ.ಎಫ್.ಟಿ.ಸಂ.23/675 ದಿನಾಂಕ: 13-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
ದ್ವಿ-ಲಕೋಟೆ ಪದ್ಧತಿ (ಕೆಪಿಪಿ ಪೋರ್ಟಲ್ ಮೂಲಕ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಫರ್ಮ್ / ಏಜೆನ್ಸಿದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಕೆಪಿಪಿ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ಹೆಸರು: 1) ವಿತಾವಿಯ ಯುಬಿಟಿಡಿ ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿ 75 ವರ್ಷದ ಪ್ಲಾಟಿನಂ ಜುಬಿಲಿ ಸಮಾರಂಭದ ಸಂದರ್ಭದಲ್ಲಿ ಗಣ್ಯರು, ಮುಖ್ಯ ಅತಿಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಉಪಹಾರ, ತಿಂಡಿ, ಮಧ್ಯಾಹ್ನ ಭೋಜನ ಒದಗಿಸುವ ಮೊತ್ತ ರೂ. 61,91,000/- (ತೆರಿಗೆ ರಹಿತ) ಮತ್ತು 2) ವಿತಾವಿಯ ಯುಬಿಟಿಡಿ ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿ ಪ್ಲಾಟಿನಂ ಜುಬಿಲಿ ಸಮಾರಂಭದ ಕಾರ್ಯಕ್ರಮಕ್ಕೆ ವೇದಿಕೆಯ ಸೆಟ್‌ಅಪ್ ಜರ್ಮನ್ ಟೆಂಟ್, ವೇದಿಕೆಯ ವಿನ್ಯಾಸ, ಆಸನ ವ್ಯವಸ್ಥೆ, ಗೋಡೆಗಳಿಗೆ ಎಲ್.ಇ.ಡಿ. ಬೆಳಕಿನ ವ್ಯವಸ್ಥೆ ಮತ್ತು ಸೌಂಡ್ ಸಿಸ್ಟಮ್ ವ್ಯವಸ್ಥೆಯನ್ನು ಒದಗಿಸುವ ಮೊತ್ತ ರೂ. 96,66,000/- (ತೆರಿಗೆ ರಹಿತ). ಇತರೆ ಮಾಹಿತಿಗಳನ್ನು https://kppp.kanataka.gov.in ವೆಬ್‌ಸೈಟ್ ಮೂಲಕ ದಿನಾಂಕ: 13-05-2026 ರಿಂದ ಪಡೆದುಕೊಳ್ಳಬಹುದು.

ಸಹಿ/- ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಬೊಮ್ಮನಹಳ್ಳಿ ವಲಯ-2, ಹೆಚ್‌ಎಸ್‌ಆರ್ ವಿಭಾಗ, ಹೆಚ್‌ಎಸ್‌ಆರ್ ಲೇಔಟ್, ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು-560102.

ಸಂಖ್ಯೆ:ಬೆಂದನಪಾ/ಕಾಇ/ಹೆಚ್‌ಎಸ್‌ಆರ್‌ವಿ/ಟೆಂಡರ್-04/2026-27 (2ನೇ ಕರೆ) ದಿನಾಂಕ: 14-05-2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ-ಲಕೋಟೆ ಟೆಂಡರ್) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಲಯ-2, ಹೆಚ್‌ಎಸ್‌ಆರ್ ವಿಭಾಗ, ಬೆಂದನಪಾ, ಬೆಂಗಳೂರು ಇವರು ಈ ಕೆಳಕಂಡ ಕೆಲಸಕ್ಕಾಗಿ ಬೆಂದನ ಪಾಲಿಕೆಯಲ್ಲಿ ನೋಂದಾಯಿತರಾದ ಅಥವಾ ಕೆಪಿಡಬ್ಲ್ಯುಡಿ / ಸಿಪಿಡಬ್ಲ್ಯುಡಿ / ಬಿಡಬ್ಲ್ಯುಎಸ್‌ಎಸ್‌ಬಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಬೊಮ್ಮನಹಳ್ಳಿ ವಲಯ-2 ರಲ್ಲಿನ ವಿವಿಧ ಸ್ಥಳಗಳಲ್ಲಿ ಹೌಸ್ ಕೀಪಿಂಗ್ ಮತ್ತು ಭದ್ರತಾ ಸಿಬ್ಬಂದಿಯನ್ನು ನೇಮಕ ಮಾಡುವುದು. (2ನೇ ಕರೆ) - ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 295.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,95,000.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ದಾಕ್ಯುಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 15-05-2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: 20-05-2026 ರಂದು ಬೆಳಿಗ್ಗೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್‌ಎಸ್‌ಆರ್ ವಿಭಾಗ, ಹೆಚ್‌ಎಸ್‌ಆರ್ ಲೇಔಟ್, ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು - 560102 ಇಲ್ಲಿ ನಡೆಯುವುದು. 3) ಟೆಂಡರ್ ದಾಕ್ಯುಮೆಂಟ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 23-05-2026 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ. 4) ಟೆಂಡರ್‌ಗಳನ್ನು ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 25-05-2026 ರಂದು 16.30 ಗಂಟೆಯ ನಂತರ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್‌ಎಸ್‌ಆರ್ ವಿಭಾಗ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಹೆಚ್‌ಎಸ್‌ಆರ್ ವಿಭಾಗ, ಬೆಂದನಪಾ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN : U31401KA2002SGC030437)
ಅಧೀಕ್ಷಕ ಅಭಿಯಂತರರು (ವಿ), ಟೆಂಡರಿಂಗ್ & ಪ್ರೊಕ್ಯೂರ್‌ಮೆಂಟ್, ನವನಗರ, ಹುಬ್ಬಳ್ಳಿ - 580 025, ದೂ. : 94482 77602.
ಮಿಂಚಂಚೆ : seetp.hescom@gmail.com, seetp@hescom.co.in

ಸಂಖ್ಯೆ : ಹು.ವಿ.ಸ.ಕಂ.ನಿ./ಅ.ಇಂ.(ಟಿ&ಪಿ)/ಇ-(7)/ಎ.ಇ.ಇ.-2/2026-27/ ಸಿ.ವೈ.ಎಸ್.-1460 ದಿನಾಂಕ : 13-05-2026

ಟೆಂಡರ್ ಆಹ್ವಾನಿಸುವ ಅಧಿಸೂಚನೆ

ಅಧೀಕ್ಷಕ ಅಭಿಯಂತರರು (ವಿ), (ಟೆಂಡರಿಂಗ್ & ಪ್ರೊಕ್ಯೂರ್‌ಮೆಂಟ್), ಹು.ವಿ.ಸ.ಕಂ.ನಿ., ಹುಬ್ಬಳ್ಳಿ, ಇವರು ಈ ಕೆಳಕಂಡ ಸಾಮಗ್ರಿಗಳನ್ನು ತಯಾರಿಸಿ ಪೂರೈಸಲು ಇ-ಪ್ರೊಕ್ಯೂರ್‌ಮೆಂಟ್ ಅಪ್ಲಿಯಡಿ, ದ್ವಿ-ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ.

Particulars : 1) ಸಿ-ಟೈಪ್ ವೆಡ್ಜ್ ಕನೆಕ್ಟರ್ ಪೂರೈಕೆ ಮಾಡುವುದು. Enq.No. : HESCOM/2026-27/IND0174, 2) ಟ್ರಾನ್ಸ್ ಫಾರ್ಮರ್ ಪ್ರೊಟೆಕ್ಷನ್ ಬೂಟ್‌ಗಳನ್ನು ಪೂರೈಕೆ ಮಾಡುವುದು. Enq.No. : HESCOM/2026-27/IND0176, 3) ಪೊಟೆನ್ಷಿಯಲ್ ಡಿಟೆಕ್ಟರ್‌ಗಳನ್ನು ಪೂರೈಕೆ ಮಾಡುವುದು. Enq.No. : HESCOM/2026-27/IND0177.

ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ವೆಬ್‌ಸೈಟ್‌ನ್ನು ದಿನಾಂಕ : 14-05-2026 ಅಥವಾ ನಂತರದಲ್ಲಿ ಸಂಪರ್ಕಿಸಬಹುದು.

ಸಹಿ/- ಅಧೀಕ್ಷಕ ಅಭಿಯಂತರರು (ವಿ),
ಟೆಂಡರ್ & ಪ್ರೊಕ್ಯೂರಮೆಂಟ್,
ಹು.ವಿ.ಸ.ಕಂ.ನಿ., ನವನಗರ, ಹುಬ್ಬಳ್ಳಿ.

ಡಿಐಪಿಆರ್/ಧಾರವಾಡ/173/ಮಾಹಿತಿಹಾ/2026-27

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕುಂದಾಪುರ ವಿಭಾಗ, ಕುಂದಾಪುರ

ದೂರವಾಣಿ: (ಕಛೇರಿ) 08254-230349 ಫ್ಯಾಕ್ಸ್: 232720
ಈ-ಮೇಲ್: kpurforest@yahoo.com, dcfknd@aranya.gov.in

ಸಂ.ಸ.ಅ.ಸಂ./ವಿವ-04/ಇ-ಟೆಂಡರು/2026-27 ದಿನಾಂಕ: 05-05-2026

ಸಂಕ್ಷಿಪ್ತ ಇ-ಟೆಂಡರ್ ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕುಂದಾಪುರ ಉಪ ವಿಭಾಗದಲ್ಲಿ 2026-27ನೇ ಸಾಲಿನಲ್ಲಿ K-SHORE ಯೋಜನೆಯಡಿ ನದಿ ತೀರದ ನೆಡುತೋಪು ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ಪೂರಕ ಕೆಲಸಗಳನ್ನು ಕೈಗೊಳ್ಳಲು ನೋಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಇ-ಟೆಂಡರನ್ನು ದಿನಾಂಕ: 18-05-2026 ರಂದು ಸಂಜೆ 4.00 ರವರೆಗೆ ಆಹ್ವಾನಿಸಲಾಗಿದೆ.

ಒಂದು ವೇಳೆ ಸದ್ರಿ ದಿನಾಂಕದಂದು ಯಾವುದೇ ಟೆಂಡರ್ ಬಾರದೇ ಇದ್ದಲ್ಲಿ, ಇದೇ ಕಾಮಗಾರಿಗಳಿಗೆ ಮತ್ತು ಈ ಟೆಂಡರ್ ಅಧಿಸೂಚನೆಯಲ್ಲಿ ಇರುವ ಎಲ್ಲಾ ಷರತ್ತುಗಳನ್ನು ಒಳಗೊಂಡಂತೆ ಮರು ಟೆಂಡರನ್ನು ದಿನಾಂಕ: 05-06-2026 ರಂದು ಸಂಜೆ 4.00 ವರೆಗೆ ನಡೆಸಲಾಗುವುದು.

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕುಂದಾಪುರ ವಿಭಾಗ, ಕುಂದಾಪುರ. ದೂರವಾಣಿ ಸಂ: 08254: 230349 ಫ್ಯಾಕ್ಸ್: 232720

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕುಂದಾಪುರ ವಿಭಾಗ, ಕುಂದಾಪುರ.

ವಾಸಾಇ/ಉಡು/ಕೆಪಿಎಂಎ/91/ 26-27 ದಿ: 14-05.2026

ಸ್ಥಾಪನೆ: 1907

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18
ಕಛೇರಿ ದೂ.: 26678572 : 26600512 : 26609066 : 57765582, ಟೆಲಿಫ್ಯಾಕ್ಸ್: (080) 26617980 : 57765582

ಬಹಿರಂಗ ಹರಾಜಿನ ಮೂಲಕ ಸ್ಥಿರಾಸ್ತಿಗಳ ಮಾರಾಟ

ಬೆಂಗಳೂರು ಸಿಟಿ ಕೋ. ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ಅಡಮಾನ ಇಡಲಾದ ಸ್ಥಿರಾಸ್ತಿಗಳ ಹರಾಜು ಮಾರಾಟವನ್ನು 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಬಡ್ಡಿ ಜಾರಿ ಕಾಯ್ದೆಯಡಿಯಲ್ಲಿ ನಡೆಸಲಾಗುತ್ತಿದೆ.ಮಾರಾಟ"ಸ್ಥಿತಿ ಹೇಗಿದೆಯೋ ಹಾಗೆಯೇ" ಆಧಿಯಲ್ಲಿ.

ಕ್ರ. ಸಂ	ಸಾಲಗಾರರ ಹೆಸರು & ಸ್ಥಿರಾಸ್ತಿಯ ವಿವರ	ಅಳತೆ ಮತ್ತು ಚಕ್ಕುಬಂದಿ	ಬ್ಯಾಂಕಿಗೆ ಬರಬೇಕಾದ ಬಾಕಿ ಮೊಬಲಗು	ಬಹಿರಂಗ ಹರಾಜಿನ ದಿನಾಂಕ
01	ಶ್ರೀ. ತಿಮ್ಮಪ್ಪ ಎಲ್. ಶ್ರೀಮತಿ ಲಕ್ಷ್ಮೀದೇವಮ್ಮ ನಂ.28 ಕವಿತಾ ಲೇಔಟ್, 1ನೇ ಮೇನ್, 1ನೇ ಅಡ್ಡರಸ್ತೆ, ಮೈಸೂರು ರಸ್ತೆ, ಬೆಂಗಳೂರು-560026 ನಂ.28, ಇಪಿಐಡಿ ಸಂಖ್ಯೆ 8954452946, ಹಳೆಯ ಪಿಐಡಿ ಸಂಖ್ಯೆ 42-52-28, ಕವಿತಾ ಕವಿತಾ ಹೌಸ್ ಬಿಲ್ಡಿಂಗ್ ಸೊಸೈಟಿಯಿಂದ ಬಾಪೂಜಿನಗರ ಬಡಾವಣೆ, ಖಾಸಗಿ ಬಡಾವಣೆ, ಬಿಬಿಎಂಪಿ ವಾರ್ಡ್ ಸಂಖ್ಯೆ ಹಂಪಿನಗರದ 133, ಬೆಂಗಳೂರು-45.	ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ & ಉತ್ತರದಿಂದ ದಕ್ಷಿಣಕ್ಕೆ: 20 ಅಡಿ ಪೂರ್ವಕ್ಕೆ : ಆಸ್ತಿ ಸಂಖ್ಯೆ 37, ಪಶ್ಚಿಮಕ್ಕೆ: ರಸ್ತೆ ಉತ್ತರಕ್ಕೆ : ಆಸ್ತಿ ಸಂಖ್ಯೆ 29, ದಕ್ಷಿಣಕ್ಕೆ : ಆಸ್ತಿ ಸಂಖ್ಯೆ 27	ರೂ. 48,90,216/- 06.05.2026 ರಂತೆ ಸೂಚನೆ ದಿನಾಂಕ: 08.05.2026 ಕಾಯ್ದಿಟ್ಟ ಬೆಲೆ : ರೂ. 54,50,000/-	24.06.2026 ಬೆಳಗ್ಗೆ 09.30
02	(1)ಶ್ರೀಮತಿ ಮಂಗಳಾ. ಕೆ.ಎಸ್ (ಮೃತ) ಕಾನೂನುಬದ್ಧ ಉತ್ತರಾಧಿಕಾರಿಗಳು:- ಎ. ಐಶ್ವರ್ಯ ರಿಷಿಂ (ಮಗಳು). (2) ಶ್ರೀಮತಿ ವಿನುತಾ ಕೆ.ಎಸ್. ನಂ.2 MM ಇಂಡಸ್ಟ್ರಿ ರಸ್ತೆ, NR ಎಂಟರ್‌ಪ್ರೈಸಸ್ ಹತ್ತಿರ ಜಯನಗರ, BSK 2ನೇ ಹಂತ ಬೆಂಗಳೂರು-70. ಹೊಸ ಪುರಸಭೆ ಸಂಖ್ಯೆ02, ಸೈಟ್ ಸಂಖ್ಯೆ08, ಎಂಎಂ ಇಂಡಸ್ಟ್ರೀಸ್ ರಸ್ತೆ, ಜಯನಗರ 7ನೇ ಬ್ಲಾಕ್ ಪಶ್ಚಿಮ, ಯಡಿಯೂರು ಗ್ರಾಮ, ಬಿಬಿಎಂಪಿ ವಾರ್ಡ್ ಸಂಖ್ಯೆ59 & ಹೊಸ ವಾರ್ಡ್ ಸಂಖ್ಯೆ 167 ಯಡಿಯೂರಿನ, ಪಿಐಡಿ ನಂ.59-82-2, ಬೆಂಗಳೂರು.	ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 20 ಅಡಿ & ಉತ್ತರದಿಂದ ದಕ್ಷಿಣಕ್ಕೆ: 60 ಅಡಿ ಪೂರ್ವಕ್ಕೆ: ಖಾಸಗಿ ಆಸ್ತಿ ಪಶ್ಚಿಮಕ್ಕೆ: ಖಾಸಗಿ ಆಸ್ತಿ ಉತ್ತರಕ್ಕೆ: ಖಾಸಗಿ ಆಸ್ತಿ ದಕ್ಷಿಣಕ್ಕೆ: ರಸ್ತೆ	ರೂ. 1,63,19,015/- 06.05.2026 ರಂತೆ ಸೂಚನೆ ದಿನಾಂಕ: 08.05.2026 ಕಾಯ್ದಿಟ್ಟ ಬೆಲೆ : ರೂ.1,94,00,000/-	24.06.2026 ಬೆಳಗ್ಗೆ 10.00
03	ಶ್ರೀ. ಸೈಯದ್ ಇಲ್ಯಾಸ್ ಪಾಶಾ ನಂ.27, ಶಾಂತಿನಗರ, ಚಿಂತಾಮಣಿ ಪಟ್ಟಣ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ-563125. ಹೊಸ ಪುರಸಭೆ ಸಂಖ್ಯೆ 2/2, ಹಳೆಯ ಆಸ್ತಿಯ ಪಶ್ಚಿಮ ಭಾಗ ನಂ. 2/4, ಹಿಂದಿನ ಆಸ್ತಿ ನಂ. 8, 5ನೇ ಅಡ್ಡ ರಸ್ತೆಯಲ್ಲಿದೆ, (ಹಿಂದೆ 3ನೇ ಅಡ್ಡ, 6ನೇ ಬ್ಲಾಕ್), ಪಾದರಾಯನಪುರ, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಗೆ ಒಳಪಟ್ಟಿದೆ. ಪಾದರಾಯನಪುರದ ವಾರ್ಡ್ ನಂ. 43, ಹೊಸ ವಾರ್ಡ್ ನಂ. ಜಗಜೀವನರಾಮ್ ನಗರದ 136, ಪಿಐಡಿ ಸಂಖ್ಯೆ 43-123-2/2, ಬೆಂಗಳೂರು.	ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ & ಉತ್ತರದಿಂದ ದಕ್ಷಿಣಕ್ಕೆ: 22 ಅಡಿ ಪೂರ್ವಕ್ಕೆ: ಇತರ ಆಸ್ತಿ, ಪಶ್ಚಿಮಕ್ಕೆ: 3ನೇ ಅಡ್ಡ ರಸ್ತೆ ಉತ್ತರಕ್ಕೆ: ಇತರ ಆಸ್ತಿ ದಕ್ಷಿಣಕ್ಕೆ: ಇತರ ಆಸ್ತಿ.	ರೂ. 45,15,418/- 07.05.2026 ರಂತೆ ಸೂಚನೆ ದಿನಾಂಕ: 07.05.2026 ಕಾಯ್ದಿಟ್ಟ ಬೆಲೆ : ರೂ. 67,90,000/-	24.06.2026 ಬೆಳಗ್ಗೆ 10.30
04	ಶ್ರೀಮತಿ ಸಾವಿತ್ರಮ್ಮ, ಖಾತರಿದಾರರು: (1) ವೀರರಾಘವಯ್ಯ ನಾಯ್ಡು (2) ಮುನೀಂದ್ರ ನಾಯ್ಡು ಜೆ.ವಿ (3) ರವಿ ಜೆ.ವಿ ನಂ. C-18, CSI ಆಸ್ಪತ್ರೆ ರಸ್ತೆ, ಶ್ರೀ ಆನಂದ ವಿದ್ಯಾ ಸಂಸ್ಥೆ, ಚಿಕ್ಕಬಳ್ಳಾಪುರ-562101 ಇ ಖಾತಾ/ಆಸ್ತಿ ಸಂಖ್ಯೆ 2-1-102-10A, ಹಳೆಯ ಆಸ್ತಿ ಸಂಖ್ಯೆ 487/435, ಸಿಎಸ್‌ಐ ಆಸ್ಪತ್ರೆ ರಸ್ತೆ, 2ನೇ ವಾರ್ಡ್ ಸಂಖ್ಯೆ 1 ನೇ ವಿಭಾಗ, ಚಿಕ್ಕಬಳ್ಳಾಪುರ, ಪಟ್ಟಣ, ಚಿಕ್ಕಬಳ್ಳಾಪುರ ಜಿಲ್ಲೆ.	ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 35 ಅಡಿ ಅಥವಾ 10.668021 ಚದರ ಮೀಟರ್ & ಉತ್ತರದಿಂದ ದಕ್ಷಿಣಕ್ಕೆ: 38 ಅಡಿ ಅಥವಾ 11.582423 ಚದರ ಮೀಟರ್ ಒಟ್ಟು ಅಳತೆ 1330 ಚದರ ಅಡಿ ಅಥವಾ 123.560990 ಚದರ ಮೀಟರ್. ಪೂರ್ವಕ್ಕೆ: ಎನ್.ಜಯರಾಮ್ ಮತ್ತು ಅವರ ಸಹೋದರರ ಆಸ್ತಿ, ಪಶ್ಚಿಮಕ್ಕೆ: ಎನ್. ಜಯರಾಮ್ ಮತ್ತು ಅವರ ಸಹೋದರರ ಆಸ್ತಿ ಉತ್ತರಕ್ಕೆ: ಹೂವಿನ ಕಿಷ್ಟಪ್ಪನ ಮನೆ ದಕ್ಷಿಣಕ್ಕೆ: 6 ಅಡಿ ಕಾಮನ್ ಪ್ಯಾಸೇಜ್ ಮತ್ತು ನಂತರ ಮುನಿರಾಜು ಅವರ ಮನೆ.	ರೂ. 41,26,417/- 07.05.2026 ರಂತೆ ಸೂಚನೆ ದಿನಾಂಕ: 07.05.2026 ಕಾಯ್ದಿಟ್ಟ ಬೆಲೆ : ರೂ. 52,90,000/-	24.06.2026 ಬೆಳಗ್ಗೆ 11.00
05	ಶ್ರೀಮತಿ ಪ್ರೇಮಾ ಖಾತರಿದಾರರು: (1) ಸುಷ್ಮಾ (ಮಗಳು) ನಂ.38, 5ನೇ ಮೇನ್, ಎಸ್ಪಾರ್ಕ್ ಇಂಜಿನಿಯರ್ಸ್ ಲೇಔಟ್, ಓಂ ಶಕ್ತಿ ದೇವಸ್ಥಾನದ ಹತ್ತಿರ, ಅಟ್ಟೂರು ಲೇಔಟ್, ಯಲಹಂಕ, ಬೆಂಗಳೂರು-64. ನಿವೇಶನ ಸಂಖ್ಯೆ 21, ಬಿಬಿಎಂಪಿ ಖಾತಾ ಸಂಖ್ಯೆ 298/14/2, ಹೊಸ ಬಿಬಿಎಂಪಿ ಖಾತಾ ಸಂಖ್ಯೆ 14/2/21, ಮುನೇಶ್ವರ ಲೇಔಟ್ ಮೌಲ್ಯಮಾಪನ ಸಂಖ್ಯೆ 14/2, ಅಟ್ಟೂರು ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಪ್ರಸ್ತುತ ಬಿಬಿಎಂಪಿ ವಾರ್ಡ್ ಸಂಖ್ಯೆ 03, ಬೆಂಗಳೂರು.	ಪೂರ್ವದಿಂದ ಪಶ್ಚಿಮಕ್ಕೆ: 60 ಅಡಿ & ಉತ್ತರದಿಂದ ದಕ್ಷಿಣಕ್ಕೆ: 19 ಅಡಿ ಪೂರ್ವಕ್ಕೆ:- 10 ಅಡಿ ರಸ್ತೆ ಪಶ್ಚಿಮಕ್ಕೆ:- ಸೈಟ್ ಸಂಖ್ಯೆ 16 ವಾಸುದೇವ ರಾವ್ ಅವರಿಗೆ ಸೇರಿದೆ, ಉತ್ತರಕ್ಕೆ - ಸೈಟ್ ಸಂಖ್ಯೆ 20 ದಕ್ಷಿಣಕ್ಕೆ:- ಆಸ್ತಿ ಎ.ಎಂ. ಹನುಮಂತಪ್ಪ ಅವರಿಗೆ ಸೇರಿದೆ.	ರೂ. 30,32,121/- 07.05.2026 ರಂತೆ ಸೂಚನೆ ದಿನಾಂಕ: 07.05.2026 ಕಾಯ್ದಿಟ್ಟ ಬೆಲೆ : ರೂ. 48,75,000/-	24.06.2026 ಬೆಳಗ್ಗೆ 11.30
06	ಶ್ರೀಮತಿ ಫಿಲೋಮಿನಾ ಓಡ್ವರ್ (ನಿಧನ) ಕಾನೂನುಬದ್ಧ ಉತ್ತರಾಧಿಕಾರಿಗಳು (1) ಫ್ರೆಡೋಲ್ ಓಡ್ವರ್ (ಮಗ) (2) ಕವಿನ್ ಓಡ್ವರ್ (ಮಗ) (3) ಸ್ಟ್ಯಾನ್ಲಿ ಓಡ್ವರ್ (ಮಗ) (4) ಜೆನ್ನಿಫರ್ ಓಡ್ವರ್ (ಮಗಳು) ನಂ.24, ನಿಸ್ಸಾನ್ ಹೌಸ್ ಆಸ್ಟಿನ್ ಟೌನ್, ಬೆಂಗಳೂರು-47. ನಂ.24, ನಿಸ್ಸಾನ್ ಹಟ್, ಬಿಬಿಎಂಪಿ ವಾರ್ಡ್ ಸಂಖ್ಯೆ ನೀಲಸಂದ್ರ ಪಟ್ಟಣ, ಪಿಐಡಿ ಸಂಖ್ಯೆ 76-130-24, ಆಸ್ಟಿನ್ ಟೌನ್, ಬೆಂಗಳೂರು.	ಪೂರ್ವದಿಂದ ಪಶ್ಚಿಮಕ್ಕೆ: 17 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 18 ಅಡಿ. ಪೂರ್ವಕ್ಕೆ : ಕಾರ್ಪೋರೇಷನ್ ಕ್ವಾರ್ಟರ್ಸ್ ಸಂಖ್ಯೆ 35 ಪಶ್ಚಿಮಕ್ಕೆ: ಕಾರ್ಪೋರೇಷನ್ ಕ್ವಾರ್ಟರ್ಸ್ ನಂ. 17 ನಂತರ ಕನ್ಸರ್ವೆನ್ಸಿ, ಉತ್ತರಕ್ಕೆ : ಕಾರ್ಪೋರೇಷನ್ ಕ್ವಾರ್ಟರ್ಸ್ ನಂ. 23, ದಕ್ಷಿಣಕ್ಕೆ: ರಸ್ತೆ	ರೂ. 2,78,612/- 07.05.2026 ರಂತೆ ಸೂಚನೆ ದಿನಾಂಕ: 08.05.2026 ಕಾಯ್ದಿಟ್ಟ ಬೆಲೆ : ರೂ. 23,20,000/-	24.06.2026 ಮಧ್ಯಾಹ್ನ 12.00
07	ಶ್ರೀಮತಿ ಕೊಂಡಮ್ಮ, ನಂ.05, ಪಿಕೆ ಕಾಲೋನಿ, ಶಾಂತಿ ನಗರ, ಬೆಂಗಳೂರು-27. ಹೊಸ ಪುರಸಭೆ ಸಂಖ್ಯೆ 05, ಪೌರಕಾರ್ಮಿಕ ಕಾಲೋನಿ, ಶಾಂತಿನಗರ, PID ಸಂಖ್ಯೆ 70-129-5, BMP ವಾರ್ಡ್ ಸಂಖ್ಯೆ 70, ಬೆಂಗಳೂರು.	ಪೂರ್ವದಿಂದ ಪಶ್ಚಿಮಕ್ಕೆ: 20 ಅಡಿ & ಉತ್ತರದಿಂದ ದಕ್ಷಿಣಕ್ಕೆ: 15 ಅಡಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ : ಸೈಟ್ ಸಂಖ್ಯೆ 22 ಉತ್ತರಕ್ಕೆ : ಸೈಟ್ ಸಂಖ್ಯೆ 04, ದಕ್ಷಿಣಕ್ಕೆ : ಸೈಟ್ ಸಂಖ್ಯೆ 06	ರೂ. 8,28,516/- 07.05.2026 ರಂತೆ ಸೂಚನೆ ದಿನಾಂಕ: 08.05.2026 ಕಾಯ್ದಿಟ್ಟ ಬೆಲೆ : ರೂ. 23,00,000/-	24.06.2026 ಮಧ್ಯಾಹ್ನ 12.30
08	ಶ್ರೀ.ರಘುರಾಮ್ (ನಿಧನ) ಕಾನೂನು ವಾರಸುದಾರರು: (1) ನಾಗರತ್ನ ಆರ್ (ಪತ್ನಿ) (2) ಮಂಜುನಾಥ್ (ಮಗ), ನಂ.12/2,7ನೇ ಕ್ರಾಸ್, 4ನೇ ಮುಖ್ಯ, ಸಂಜಂಗಿರಾಮನಗರ, ಬೆಂಗಳೂರು. ನಂ.12/2, 7ನೇ ಕ್ರಾಸ್, ಎಸ್‌ಆರ್ ನಗರ, ಶ್ರೀ ಬಿಟಿ ಮುನಿಯಪ್ಪ ರಸ್ತೆ, ಸಂಜಂಗಿರಾಮನಗರದ ಬಿಬಿಎಂಪಿ ವಾರ್ಡ್ ನಂ.77, ಪಿಐಡಿ ನಂ.77-12-12/2, ಬೆಂಗಳೂರು.	ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 16 ಅಡಿ & ಉತ್ತರದಿಂದ ದಕ್ಷಿಣಕ್ಕೆ: 26 ಅಡಿ ಪೂರ್ವಕ್ಕೆ: ಸಂತರ ಮಾರ್ಗ ಖಾಸಗಿ ಆಸ್ತಿ, ಪಶ್ಚಿಮಕ್ಕೆ : ಮನೆ ಆರ್. ಶಂಕ್ರಮ್ಮ ಅವರಿಗೆ ಸೇರಿದ್ದು, ಉತ್ತರಕ್ಕೆ: 7ನೇ ಅಡ್ಡರಸ್ತೆ, ದಕ್ಷಿಣಕ್ಕೆ: ಮನೆ ಜೋಸೆಫ್ಗೆ ಸೇರಿದ್ದು.	ರೂ. 10,81,135/- 07.05.2026 ರಂತೆ ಸೂಚನೆ ದಿನಾಂಕ: 08.05.2026 ಕಾಯ್ದಿಟ್ಟ ಬೆಲೆ : ರೂ. 65,90,000/-	24.06.2026 ಮಧ್ಯಾಹ್ನ 01.00
09	ಶ್ರೀಮತಿ ಲಲಿತಾ. ಎ, ಖಾತರಿದಾರರು:- (1) ಬಾಲಾಜಿ(ಮಗ) (2) ಕುಮಾರ್ ಎ(ಮಗ) (3) ಸರ್ವೇಶ್ ಎ (ಮಗ), ನಂ.7/32, 2ನೇ ಮುಖ್ಯ ರಸ್ತೆ, ದೊಮ್ಮಲೂರು ಲೇಔಟ್, ದೊಮ್ಮಲೂರು, ಬೆಂಗಳೂರು-71. ನಂ.7/32, ಎ.ಕೆ. ಕಾಲೋನಿ, ದೊಮ್ಮಲೂರು, ಬಿಬಿಎಂಪಿ ವಾರ್ಡ್ ಸಂಖ್ಯೆ 72, ದೊಮ್ಮಲೂರು, ಪಿಐಡಿ ಸಂಖ್ಯೆ 72-14-7/32, ಬೆಂಗಳೂರು.	ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 20 ಅಡಿ & ಉತ್ತರದಿಂದ ದಕ್ಷಿಣಕ್ಕೆ: 40 ಅಡಿ. ಪೂರ್ವಕ್ಕೆ : ಸೈಟ್ ಸಂಖ್ಯೆ 7/31 ಪಶ್ಚಿಮಕ್ಕೆ: ಸೈಟ್ ಸಂಖ್ಯೆ 7/33 ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ : ಸೈಟ್ ಸಂಖ್ಯೆ 7/3	ರೂ. 35,06,419/- 07.05.2026 ರಂತೆ ಸೂಚನೆ ದಿನಾಂಕ: 08.05.2026 ಕಾಯ್ದಿಟ್ಟ ಬೆಲೆ : ರೂ. 42,20,000/-	24.06.2026 ಮಧ್ಯಾಹ್ನ 01.30
10	ಶ್ರೀ. ಜನಾರ್ದನ್. ವಿ, ಖಾತರಿದಾರರು (1) ಮಹಾಲಕ್ಷ್ಮಿ ಜೆ (2) ಮಂಜುನಾಥ್ ಜೆ, (3) ಸುಜಾತಾ ಜೆ, (4) ಕೌಶಲ್ಯಾ ಜೆ, ನಂ.26, 15ನೇ ಕ್ರಾಸ್, ಸಿಎಂಹೆಚ್ ರಸ್ತೆಯಿಂದ ಹೊರಗೆ, ಲಕ್ಷ್ಮಿಪುರಂ, ಬೆಂಗಳೂರು-560008. ನಂ. 26, ಹಳೆಯ ನಂ. 02, ಸೈ. ನಂ. 43/1, 15ನೇ ಕ್ರಾಸ್, ಲಕ್ಷ್ಮಿಪುರಂ, ಹಲಸೂರು ಗ್ರಾಮ, ಬಿಬಿಎಂಪಿ ವಾರ್ಡ್ ಸಂಖ್ಯೆ 82 ಮತ್ತು ಹೊಯ್ಸಳ ಹೊಸ ವಾರ್ಡ್ ಸಂಖ್ಯೆ 80 ನಗರ, ಪಿಐಡಿ ಸಂಖ್ಯೆ 82-62-26, ಬೆಂಗಳೂರು.	ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ & ಉತ್ತರದಿಂದ ದಕ್ಷಿಣಕ್ಕೆ: 30 ಅಡಿ ಪೂರ್ವಕ್ಕೆ: ರಸ್ತೆ ಪಶ್ಚಿಮಕ್ಕೆ: ಖಾಸಗಿ ಆಸ್ತಿ ಉತ್ತರಕ್ಕೆ : ಸೈಟ್ ಸಂಖ್ಯೆ 25 ದಕ್ಷಿಣಕ್ಕೆ : ಸೈಟ್ ಸಂಖ್ಯೆ 27	ರೂ. 38,33,954/- 07.05.2026 ರಂತೆ ಸೂಚನೆ ದಿನಾಂಕ: 08.05.2026 ಕಾಯ್ದಿಟ್ಟ ಬೆಲೆ : ರೂ. 77,60,000/-	24.06.2026 ಮಧ್ಯಾಹ್ನ 02.00
11	ಶ್ರೀ. ಮನೋಜ್ ಮಣಿ. ಎಂ ಖಾತರಿದಾರರು :- (1) ಪ್ರೇಮ್ ಕುಮಾರ್ .ಎಂ (ಮಗ) ನಂ.43, ಕಾಳಿಯಮ್ಮ ಬೀದಿ, ಹಲಸೂರು, ಬೆಂಗಳೂರು-560008 ನಂ.43/2-1, ಕಾಳಿಯಮ್ಮ ಕೋಯಿಲ್ ಸ್ಟ್ರೀಟ್, ಹಲಸೂರು, ಬಿಬಿಎಂಪಿ ವಾರ್ಡ್ ನಂ.81 & ಹಲಸೂರಿನ ಹೊಸ ವಾರ್ಡ್ ಸಂಖ್ಯೆ 90, ಪಿಐಡಿ ಸಂಖ್ಯೆ 81-54-43/2-1, ಬೆಂಗಳೂರು.	ಅಳತೆ: ಪೂರ್ವಕ್ಕೆ: 11 ಅಡಿ 3 ಇಂಚು, ಪಶ್ಚಿಮಕ್ಕೆ: 11 ಅಡಿ 3 ಇಂಚು ಮತ್ತು ಉತ್ತರಕ್ಕೆ: 30 ಅಡಿ 6 ಇಂಚುಗಳು, ದಕ್ಷಿಣಕ್ಕೆ: 30 ಅಡಿ 6 ಇಂಚುಗಳು ಪೂರ್ವಕ್ಕೆ: ಖಾಸಗಿ ಆಸ್ತಿ (ಆಸ್ತಿ ಸಂಖ್ಯೆ 43 ರ ಭಾಗ) & ಪ್ಯಾಸೇಜ್, ಪಶ್ಚಿಮಕ್ಕೆ : ಮಿಲ್ಕ್ ಮ್ಯಾನ್ ಸ್ಟ್ರೀಟ್, ಖಾಸಗಿ ಆಸ್ತಿ, ಉತ್ತರಕ್ಕೆ: ಖಾಸಗಿ ಆಸ್ತಿ ಸಂಖ್ಯೆ 44, ಹಳೆಯ ಸಂಖ್ಯೆ 13, ದಕ್ಷಿಣಕ್ಕೆ: ಖಾಸಗಿ ಆಸ್ತಿ ಆಸ್ತಿ ಸಂಖ್ಯೆ 43 ರ ಉಳಿದ ಭಾಗ.	ರೂ. 7,10,503/- 07.05.2026 ರಂತೆ ಸೂಚನೆ ದಿನಾಂಕ: 08.05.2026 ಕಾಯ್ದಿಟ್ಟ ಬೆಲೆ : ರೂ. 23,00,000/-	24.06.2026 ಮಧ್ಯಾಹ್ನ 02.30
12	ಶ್ರೀ. ರಾಜಶೇಖರ್. ಕೆ. ನಂ.25, 9ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ದೊಡ್ಡನೆಕುಂದಿ ಬೆಂಗಳೂರು-37 ನಂ.01, ಹಳೆಯ HASB ಖಾತಾ ನಂ.385/1/373, ಹೊಸ ಖಾತಾ ನಂ.2899, ಆಸ್ತಿ ಸಂಖ್ಯೆ 102/1, ಖಾತಾ ನಂ.385/1, ದೊಡ್ಡನೆಕುಂದಿ ಗ್ರಾಮ, BMP ವಾರ್ಡ್ ದೊಡ್ಡನೆಕುಂದಿಯ ನಂ.85, ಪಿಐಡಿ ಸಂಖ್ಯೆ 85-ಡಬ್ಲ್ಯು0322-1, ಬೆಂಗಳೂರು.	ಪೂರ್ವದಿಂದ ಪಶ್ಚಿಮಕ್ಕೆ: 55+43/2 ಅಡಿ & ಉತ್ತರದಿಂದ ದಕ್ಷಿಣಕ್ಕೆ: 40+45/2 ಅಡಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಸಗಿ ಆಸ್ತಿ ಉತ್ತರಕ್ಕೆ: ಸರ್ಕಾರಿ ರಸ್ತೆ, ದಕ್ಷಿಣಕ್ಕೆ : ಮನೆ ನಿವೇಶನ ಸಂಖ್ಯೆ 02.	ರೂ. 9,51,795/- 07.05.2026 ರಂತೆ ಸೂಚನೆ ದಿನಾಂಕ: 08.05.2026 ಕಾಯ್ದಿಟ್ಟ ಬೆಲೆ : ರೂ. 1,04,52,000/-	24.06.2026 ಮಧ್ಯಾಹ್ನ 03.00
13	1) ಬಿ.ಡಬ್ಲ್ಯೂ.ಶಫಿ ಅಹ್ಮದ್ (ಮೃತ) 1a ರ ಕಾನೂನುಬದ್ಧ ಉತ್ತರಾಧಿಕಾರಿಗಳು). ಪರ್ವೇಜ್ ಅಹ್ಮದ್ (ಮಗ), 1b) ಶ್ರೀಮತಿ ಉಮೈರಾ ಫಾತಿಮಾ (ಮಗಳು) & 1c)ಶ್ರೀಮತಿ ಉಮ್ಮೆ ಸಲೀಕಾ (ಮಗಳು) 2) ಶ್ರೀಮತಿ ಶಹನಾಜ್ ಅಹ್ಮದ್, ಸಂಖ್ಯೆ 101, 4ನೇ ಕ್ರಾಸ್, ಅರ್ಬನ್ ಎಕ್ಸ್‌ಪ್ರೆಸ್, 3ನೇ ಬ್ಲಾಕ್ ಪೂರ್ವ, ಬೆಂಗಳೂರು-11. ನಂ.7/12, 15ನೇ ಮುಖ್ಯ ರಸ್ತೆ, ರಾಷ್ಟ್ರಕವಿ ಕುವೆಂಪುರ್ ನಗರ, BTM ಲೇಔಟ್ BBMP ವಾರ್ಡ್ ನಂ. 65, PID ಸಂಖ್ಯೆ 65-102-7-12, ಬೆಂಗಳೂರು.	ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ & . ಉತ್ತರದಿಂದ ದಕ್ಷಿಣಕ್ಕೆ: 30 ಅಡಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ : ಆಸ್ತಿ ಸಂಖ್ಯೆ 142 ಉತ್ತರಕ್ಕೆ : ಆಸ್ತಿ ಸಂಖ್ಯೆ 156 ದಕ್ಷಿಣಕ್ಕೆ : ಆಸ್ತಿ ಸಂಖ್ಯೆ 142	ರೂ. 71,07,681/- 11.05.2026 ರಂತೆ ಸೂಚನೆ ದಿನಾಂಕ: 11.05.2026 ಕಾಯ್ದಿಟ್ಟ ಬೆಲೆ : ರೂ. 1,37,00,000/-	24.06.2026 ಮಧ್ಯಾಹ್ನ 03.30
14	ಶ್ರೀ. ವಿಜಯಕುಮಾರ್. ಪಿ. ನಂ.336, 2ನೇ ಕ್ರಾಸ್, ಹಾಸ್ಯನಗರ, BSK 2ನೇ ಹಂತ, ಬೆಂಗಳೂರು-28. ಹೊಸ ಪುರಸಭೆ ಸಂಖ್ಯೆ 819, ಹಳೆಯ ಸಂಖ್ಯೆ 336, ಯಡಿಯೂರಿನ ಸೈ. ಸಂಖ್ಯೆ 09 ರಿಂದ 15 ಮತ್ತು 56, 9ನೇ ಅಡ್ಡ ರಸ್ತೆ, ನಾಗಸಂದ್ರ ಲೇಔಟ್, ಹಾಸ್ಯನಗರ, ಬನಶಂಕರಿ 2ನೇ ಹಂತ, ಬಿಬಿಎಂಪಿ ವಾರ್ಡ್ ಸಂಖ್ಯೆ 59, ಯಡಿಯೂರಿನ ಹೊಸ ವಾರ್ಡ್ ಸಂಖ್ಯೆ 167, ಪಿಐಡಿ ಸಂಖ್ಯೆ 59-42-819, ಬೆಂಗಳೂರು.	ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ & ಉತ್ತರದಿಂದ ದಕ್ಷಿಣಕ್ಕೆ: 55 ಅಡಿ ಪೂರ್ವಕ್ಕೆ : ಸೈಟ್ ಸಂಖ್ಯೆ 337 ಪಶ್ಚಿಮಕ್ಕೆ: ಸೈಟ್ ಸಂಖ್ಯೆ 335 ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ : ಸೈಟ್ ಸಂಖ್ಯೆ 378	ರೂ. 40,62,024/- 11.05.2026 ರಂತೆ ಸೂಚನೆ ದಿನಾಂಕ: 11.05.2026 ಕಾಯ್ದಿಟ್ಟ ಬೆಲೆ : ರೂ. 1,40,00,000/-	24.06.2026 ಮಧ್ಯಾಹ್ನ 04.00
15	ಶ್ರೀ. ಫಯಾಜ್ ಪಾಷಾ. ಖಾತರಿದಾರರು- 1.ಅಮೀರುನ್ನಿಸಾ ನಂ.250, 'ಜಿ' ಕ್ರಾಸ್ ರಸ್ತೆ, ತಿಮ್ಮಯ್ಯ ರಸ್ತೆ ಕ್ರಾಸ್, ಭಾರತಿನಗರ, ಶಿವಾಜಿನಗರ, ಬೆಂಗಳೂರು-51. ನಂ. 250, ತಿಮ್ಮಯ್ಯ ರಸ್ತೆ, ಬಿಬಿಎಂಪಿ ವಾರ್ಡ್ ಸಂಖ್ಯೆ 80, ಭಾರತೀನಗರ, ಪಿಐಡಿ ಸಂಖ್ಯೆ 80-11-250, ಬೆಂಗಳೂರು.	ಪೂರ್ವದಿಂದ ಪಶ್ಚಿಮಕ್ಕೆ: 36.6 ಅಡಿ & ಉತ್ತರದಿಂದ ದಕ್ಷಿಣಕ್ಕೆ: 10.3 ಅಡಿ ಪೂರ್ವಕ್ಕೆ: ಖಾಸಗಿ ಆಸ್ತಿ ಪಶ್ಚಿಮಕ್ಕೆ: ಕ್ರಾಸ್ ರಸ್ತೆ ಜಿ. ಉತ್ತರಕ್ಕೆ: ಅದೇ ಆಸ್ತಿಯ ಉಳಿದ ಭಾಗವು ಸೇರಿದೆ ಬಿಡುಗಡೆ ಮಾಡುವವರು, ದಕ್ಷಿಣಕ್ಕೆ: ಕ್ರಾಸ್ ಲೇನ್.	ರೂ. 15,16,968/- 11.05.2026 ರಂತೆ ಸೂಚನೆ ದಿನಾಂಕ: 11.05.2026 ಕಾಯ್ದಿಟ್ಟ ಬೆಲೆ : ರೂ. 34,00,000/-	24.06.2026 ಮಧ್ಯಾಹ್ನ 04.30

ಬಹಿರಂಗ ಹರಾಜಿನ ನಿಯಮ ಹಾಗೂ ಷರತ್ತುಗಳು: (1) ಸಾರ್ವಜನಿಕ ಹರಾಜನ್ನು ಬೆಂಗಳೂರು-18, ಚಾಮರಾಜಪೇಟೆ, ಪಂಪ ಮಹಾಕವಿ ರಸ್ತೆ, ನಂ.3 ರ ಆಡಳಿತ ಕಚೇರಿಯ ಆವರಣದಲ್ಲಿ ನಡೆಸಲಾಗುವುದು. (2) ಹರಾಜಿನಲ್ಲಿ ಭಾಗವಹಿಸಲು ಉದ್ದೇಶಿತ ಬಿಡ್ಡುದಾರರು ಆಸ್ತಿಯ ಮೀಸಲು ಬೆಲೆಯ 10% ಗೆ ಸಮಾನವಾದ ಮೊತ್ತವನ್ನು ಠೇವಣಿ ಇಡಬೇಕು. ಎಲ್ಲಾ ಠೇವಣಿಯನ್ನು ಬ್ಯಾಂಕ್ ಯಾವುದೇ ಪೂರ್ವ ಸೂಚನೆ ಇಲ್ಲದೆ ಮುಟ್ಟುಗೋಲು ಹಾಕಿಕೊಳ್ಳುತ್ತದೆ, ಒಂದು ವೇಳೆ ಯಶಸ್ವಿ ಬಿಡ್ದಾರರು ವಿಫಲವಾದರೆ ಮಾರಾಟದ ನಿಯಮಗಳು, ಸಮಯ ಮತ್ತು ಯಾವುದೇ ರೀತಿಯಲ್ಲಿ ಡೀಫಾಲ್ಟ್ ಅನ್ನು ಪಾಲಿಸಿ. (3) ಯಶಸ್ವಿ ಬಿಡ್ದಾರರು ಮಾರಾಟದ ದಿನದಂದು ಬಿಡ್ ಮೊತ್ತದ 25% ಅನ್ನು ನಗದು/ಡಿಡಿ ರೂಪದಲ್ಲಿ ಬ್ಯಾಂಕಿಗೆ ಮತ್ತು ಉಳಿದ ಹಣವನ್ನು ಠೇವಣಿ ಮಾಡಬೇಕು. ಮಾರಾಟದ ದಿನಾಂಕದಿಂದ 15 ದಿನಗಳ ಒಳಗೆ. (4) ಯಶಸ್ವಿ ಬಿಡ್ದಾರರು ಈ ಕೆಳಗಿನವುಗಳನ್ನು ಪಡೆಯಲು ಮುದ್ರಾಂಕ ಶುಲ್ಕ ಸೇರಿದಂತೆ ಎಲ್ಲಾ ವೆಚ್ಚಗಳನ್ನು ಭರಿಸುತ್ತಾರೆ. ನೋಂದಣಿ ಶುಲ್ಕ ಇತ್ಯಾದಿ. ಅವನ/ಅವಳ ಹೆಸರಿನಲ್ಲಿ ನೋಂದಾಯಿಸಲಾದ ಮಾರಾಟ ಪ್ರಮಾಣಪತ್ರ. (5) ಅಧಿಕೃತ ಅಧಿಕಾರಿಯು ಯಾವುದೇ ಕಾರಣಗಳನ್ನು ನೀಡದೆ ಬಿಡ್ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಹರಾಜನ್ನು ಮುಂದೂಡುವ/ರದ್ದುಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ. (6) ಆಸ್ತಿಯ ಪರಿಶೀಲನೆ ಮತ್ತು ಇತರ ವಿಚಾರಣೆಗಳಿಗಾಗಿ, ಉದ್ದೇಶಿತ ಬಿಡ್ದಾರರು ಬೆಂಗಳೂರು ನಗರದಲ್ಲಿ ಕೆಳಗೆ ಸಹಿ ಮಾಡಿರುವವರನ್ನು ಸಂಪರ್ಕಿಸಬಹುದು. ಕೋ. ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಆಡಳಿತ ಕಚೇರಿ, ಅಥವಾ ಫೋನ್ ಸಂಖ್ಯೆ 26678572 / 26600512 ಮೂಲಕ, ಅವರು ತಮ್ಮದೇ ಆದ ಆಸ್ತಿಯ ಬಗ್ಗೆ ಮೌಲ್ಯಮಾಪನ/ವಿಚಾರಣೆ.

ದಿನಾಂಕ: 14.05.2026
ಸ್ಥಳ: ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ- ಆಪರೇಟಿವ್ ಬ್ಯಾಂಕ್ ಲಿ.

ಪ್ರಶಸ್ತಿ, ಪ್ರೋತ್ಸಾಹಧನ ನೀಡಿ



• **ಬೆಂಗಳೂರು:** ಮಹಾರಾಷ್ಟ್ರ ಸೇರಿದಂತೆ ಗಡಿನಾಡ ಹಾಗೂ ಹೊರನಾಡಿನ ಕನ್ನಡ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕಳೆದ ಎರಡು ವರ್ಷಗಳಿಂದ ಬಾಕಿ ಉಳಿದಿದ್ದ ಕನ್ನಡ ಮಾಧ್ಯಮ ಪ್ರಶಸ್ತಿ, ಶಿಷ್ಯವೇತನ ಹಾಗೂ ಪ್ರಸಕ್ತ ಸಾಲಿನ ಪ್ರೋತ್ಸಾಹ ಧನದ ಕುರಿತು ತುರ್ತು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಗಡಿನಾಡಿನ ಕನ್ನಡಿಗರ ಶೈಕ್ಷಣಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ವಿಷಯದಲ್ಲಿ ಯಾವುದೇ ವಿಳಂಬವಾಗದಂತೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಇಲಾಖೆಯ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಜಾರಿಯಾಗುವ ಕನ್ನಡ ಮಾಧ್ಯಮ ಪ್ರಶಸ್ತಿ ಯೋಜನೆಯು ಗಡಿನಾಡ, ಹೊರನಾಡಿನ ಕನ್ನಡ ಶಾಲಾ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಮಹತ್ವದ ಯೋಜನೆಯಾಗಿದೆ.

ಪ್ರತಿಭಾವಂತರಿಗೆ ಆರ್ಥಿಕ ಪ್ರೋತ್ಸಾಹ

ಈ ಯೋಜನೆಯಡಿ ಹೊರನಾಡಿನ ಕನ್ನಡ ಶಾಲೆಗಳಲ್ಲಿ 10ನೇ ಮತ್ತು 12ನೇ ತರಗತಿಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಪ್ರತಿ ಶಾಲೆಯ ಮೂರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಪ್ರಥಮ ಸ್ಥಾನ 12 ಸಾವಿರ ರೂ, ದ್ವಿತೀಯ ಸ್ಥಾನ 11 ಸಾವಿರ ರೂ, ತೃತೀಯ ಸ್ಥಾನ 10 ಸಾವಿರ ರೂ.ನಗದು ಬಹುಮಾನ ನೀಡಲಾಗುತ್ತದೆ. ಇದರೊಂದಿಗೆ ವಿದ್ಯಾರ್ಥಿಗಳ ಮುಂದಿನ ವ್ಯಾಸಂಗಕ್ಕೆ ನೆರವಾಗುವ ಉಚಿತ ಶೈಕ್ಷಣಿಕ ಕಿಟ್‌ಗಳನ್ನೂ ವಿತರಿಸಲಾಗುತ್ತದೆ. ಈ ಯೋಜನೆಯಿಂದ ಹೊರನಾಡಿನ ಸುಮಾರು 500ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವಾಗುತ್ತಿದೆ. ಈ ಸಂಬಂಧ ಹಲವು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳನ್ನು ಭೇಟಿ ಮಾಡಿ ಸಮಸ್ಯೆಯ ಗಂಭೀರತೆಯನ್ನು ಮನವರಿಕೆ ಮಾಡಿಕೊಡಲಾಗಿತ್ತು. ಇದರ ಪರಿಣಾಮವಾಗಿ ಇದೀಗ ಸರ್ಕಾರ ಸ್ಪಂದಿಸಿದ್ದು, ತುರ್ತು ಕ್ರಮ ವಹಿಸಲು ಮುಂದಾಗಿದೆ.

ಶುಭ ಆರೈಕೆ



ಮುಂಬೈನಲ್ಲಿರುವ ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದಲ್ಲಿ ಗುರುವಾರ ನಡೆದ ಬ್ಯಾಗ್ನೆ ಕೇಂದ್ರ ಕಚೇರಿಯ ಬೆಲ್ ರಿಂಗಿಂಗ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಬ್ಯಾಗ್ನೆ ಸಂಸ್ಥೆಗೆ ಶುಭ ಕೋರಿದರು.

ಉಮೇಶ್ ಮೇಟಿ, ಸಮರ್ಥ್ ಪ್ರಮಾಣವಚನ ಸ್ವೀಕಾರ

» ಭಗವಂತನ ಹೆಸರಿನಲ್ಲಿ ಉಮೇಶ್ ಮೇಟಿ, ತಾತನ ಹೆಸರಿನಲ್ಲಿ ಸಮರ್ಥ್ ಪ್ರಮಾಣ ವಚನ ಸ್ವೀಕಾರ



• **ಬೆಂಗಳೂರು:** ನೂತನ ಶಾಸಕರಾಗಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಚುನಾಯಿತರಾಗಿದ್ದ ಉಮೇಶ್ ಹುಲ್ಲಪ್ಪ ಮೇಟಿ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಚುನಾಯಿತರಾಗಿದ್ದ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ ಗುರುವಾರ ಪ್ರಮಾಣವಚನ ಸ್ವೀಕರಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ಇಬ್ಬರು ನೂತನ ಶಾಸಕರಿಗೆ ಅಧಿಕಾರ ಹಾಗೂ ಗೌಪ್ಯತೆಯ ಪ್ರಮಾಣವಚನ ಸ್ವೀಕರಿಸಿದರು. ಕಲ್ಲೇಶ್ವರ ಅಜ್ಜ ಹಾಗೂ ಶಾಮನೂರು ಶಿವಶಂಕರಪ್ಪ ಅವರ ಹೆಸರಿನಲ್ಲಿ ಸಮರ್ಥ್ ಪ್ರಮಾಣ ವಚನ ಸ್ವೀಕರಿಸಿದರೆ ಭಗವಂತನ ಹೆಸರಿನಲ್ಲಿ ಉಮೇಶ್ ಮೇಟಿ ಪ್ರಮಾಣವಚನ ಸ್ವೀಕರಿಸಿದರು. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಸಂಸದೆ ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವ ಎಸ್.ಆರ್.ಪಾಟೀಲ್ ಮೊದಲಾದ ಗಣ್ಯರು ಉಪಸ್ಥಿತರಿದ್ದು ನೂತನ ಶಾಸಕರನ್ನು ಅಭಿನಂದಿಸಿದರು.

ಕಿರುಸುದ್ದಿ

ಕೆಎಎಂಎಸ್-ಕರ್ತವ್ಯ ಆ್ಯಪ್ ಜಾರಿಗೆ ಚಿಂತನೆ

• **ಬೆಂಗಳೂರು:** ಡಿಜಿಟಲ್ ಆಡಳಿತ, ಪಾರದರ್ಶಕತೆ ಹಾಗೂ ಆಡಳಿತಾತ್ಮಕ ದಕ್ಷತೆಯನ್ನು ಜಾರಿಗೆ ತರುವ ಉದ್ದೇಶದಿಂದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಕರ್ನಾಟಕ ಅಡ್ವಾನ್ಸ್ಡ್ ಅಟೆಂಡೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಂ -ಕರ್ತವ್ಯ (ಕೆಎಎಂಎಸ್-ಕರ್ತವ್ಯ) ಮೊಬೈಲ್ ಅಪ್ಲಿಕೇಷನ್ ಅನ್ನು ಕಡ್ಡಾಯವಾಗಿ ಜಾರಿಗೆ ತರಲು ಮುಂದಾಗಿದೆ. ಈ ಬಗ್ಗೆ ಎಕ್ಸ್‌ನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮಾಹಿತಿ ಹಂಚಿಕೊಂಡಿದ್ದು, ರಾಜ್ಯದ ಸರ್ಕಾರಿ ಶಾಲೆಗಳ ಶಿಕ್ಷಕರ ಹಾಜರಾತಿ ಹಾಗೂ ಕರ್ತವ್ಯ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲು ಈ ಆ್ಯಪ್ ಸಹಕಾರಿಯಾಗಲಿದೆ ಎಂದು ತಿಳಿಸಿದೆ. ಶಿಕ್ಷಕರ ಸಮಯಪಾಲನೆ, ಶಾಲಾ ಹಾಜರಾತಿ ಮತ್ತು ಆಡಳಿತಾತ್ಮಕ ಕಾರ್ಯಚಟುವಟಿಕೆಗಳ ಮಾಹಿತಿಗಳನ್ನು ಡಿಜಿಟಲ್ ರೂಪದಲ್ಲಿ ದಾಖಲಿಸುವ ವ್ಯವಸ್ಥೆಯನ್ನು ಇಲಾಖೆ, ರೂಪಿಸಿದೆ. ಈ ಮೂಲಕ ಶಾಲಾ ಆಡಳಿತದಲ್ಲಿ ಪಾರದರ್ಶಕತೆ ಹೆಚ್ಚುವುದರ ಜತೆಗೆ ಶಿಕ್ಷಕರ ಕಾರ್ಯನಿರ್ವಹಣೆಯನ್ನು ಸಮರ್ಪಕವಾಗಿ ಗಮನಿಸಲು ಸಾಧ್ಯವಾಗಲಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಹೇಳಿದೆ.

ತನಿಖೆಗೆ ಸಂಪೂರ್ಣ ಸಹಕಾರ: ವಚನಾನಂದ ಶ್ರೀ

• **ದಾವಣಗೆರೆ:** ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಹರಿಹರ ಪಂಚಮಸಾಲಿ ಮಠದ ಪೀಠಾಧ್ಯಕ್ಷ ಶ್ರೀ ವಚನಾನಂದ ಸ್ವಾಮೀಜಿ ಹರಿಹರ ಗ್ರಾಮಾಂತರ ಠಾಣೆಗೆ ವಿಚಾರಣೆಗೆಂದು ಗುರುವಾರ ಹಾಜರಾದರು. ಸತತ 4 ಗಂಟೆಗಳ ಕಾಲ ಡಿವೈಎಸ್ಪಿ ಬಸವರಾಜ, ಪಿಎಸ್ಐ ಮಂಜುಳಾ ನೇತೃತ್ವದಲ್ಲಿ ನಡೆದ ವಿಚಾರಣೆಯಲ್ಲಿ ತನಿಖಾಧಿಕಾರಿಗಳು ಸ್ವಾಮೀಜಿಗೆ 50ಕ್ಕೂ ಹೆಚ್ಚು ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆದರು. ಮಧ್ಯಾಹ್ನದ ಊಟ ಮುಗಿಸಿದ ನಂತರ ಸ್ವಾಮೀಜಿಯನ್ನು ಸಾರ್ವಜನಿಕ ಆಸ್ಪತ್ರೆಗೆ ಕರೆತಂದು, ವೈದ್ಯಕೀಯ ಪರೀಕ್ಷೆ ಜೊತೆಗೆ ರಕ್ತದ ಮಾದರಿ ಸಂಗ್ರಹಿಸುವ ಪ್ರಕ್ರಿಯೆ ನಡೆಸಲಾಯಿತು. ವಿಚಾರಣೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀ ವಚನಾನಂದ ಸ್ವಾಮೀಜಿ, ನಾವು ದೇಶದ ಕಾನೂನನ್ನು ಗೌರವಿಸುತ್ತೇವೆ ಮತ್ತು ಅದನ್ನು ಪಾಲಿಸುತ್ತೇವೆ. ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತೇವೆ ಎಂದು ತಿಳಿಸಿದರು.

ಹಲ್ಲೆ: ಇಬ್ಬರು ಗಂಭೀರ

• **ಕಲಬುರಗಿ:** ಹಳೆ ವೈಷಮ್ಯದ ಹಿನ್ನೆಲೆ ಎರಡು ಗುಂಪುಗಳ ನಡುವೆ ನಡೆದ ಮಾರಾಮಾರಿಯಲ್ಲಿ ಏರ್ ಗನ್ ಹಾಗೂ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿರುವ ಘಟನೆ ನಗರದ ಖದೀರ್ ಚೌಕ್ ಪ್ರದೇಶದಲ್ಲಿ ನಡೆದಿದೆ. ಅಸ್ಲಾಂ ಪಟೇಲ್ ಅಲಿಯಾಸ್ ಬಾಂಬೆ ಅಸ್ಲಾಂ ನೇತೃತ್ವದ ಗುಂಪು ಹಾಗೂ ನೌಷೇದ್ ಪಟೇಲ್ ಗುಂಪಿನ ನಡುವೆ ಈ ಗಲಾಟೆ ನಡೆದಿದೆ ಎಂದು ತಿಳಿದುಬಂದಿದೆ. ನೌಷೇದ್ ಪಟೇಲ್ ತನ್ನ ಸ್ನೇಹಿತರೊಂದಿಗೆ ಚಹಾ ಸೇವಿಸುತ್ತಿದ್ದ ವೇಳೆ, ಅಸ್ಲಾಂ ಪಟೇಲ್ ಅಲಿಯಾಸ್ ಬಾಂಬೆ ಅಸ್ಲಾಂ, ಚಿಲ್ಲು, ಲಂಗಡೆ ಸದ್ದಾಂ, ಸಿಕ್ಕಂದರ್, ಮಾರಿ ಹಾಗೂ ರೇಹಾನ್ ಸೇರಿ ಆರು ಜನರ ಗುಂಪು ಏಕಾಏಕಿ ದಾಳಿ ನಡೆಸಿದೆ ಎನ್ನಲಾಗಿದೆ. ಘಟನೆಯಲ್ಲಿ ಬಾಂಬೆ ಅಸ್ಲಾಂ ಏರ್‌ಗನ್‌ನಿಂದ ಸೈಯದ್ ಜಿಲಾನಿ ಅವರ ಹೊಟ್ಟೆ ಭಾಗಕ್ಕೆ ಎರಡು ಬಾರಿ ಗುಂಡು ಹಾರಿಸಿದ್ದಾನೆ ಎಂದು ಆರೋಪಿಸಲಾಗಿದೆ.

ಬಿಜೆಪಿ ಮುಖಂಡರ ಖಂಡನೆ | ಶಾಲಾ-ಕಾಲೇಜು ಸಮವಸ್ತ್ರ ಸಂಹಿತೆಗೆ ಧಕ್ಕೆ| ವೋಟ್ ಬ್ಯಾಂಕ್ ರಾಜಕಾರಣ

ಹಿಜಾಬ್ ನಿಷೇಧ ವಾಪಸ್ ಸರಿಯಲ್ಲ

• **ನವದೆಹಲಿ:** ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಹಿಜಾಬ್ ನಿಷೇಧ ಹಿಂಪಡೆದು ತನ್ನ ತುಷ್ಟೀಕರಣ ನೀತಿಯನ್ನು ಶೈಕ್ಷಣಿಕ ಅಂಗಳಕ್ಕೂ ಹೇರಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಹಿಜಾಬ್ ವಿವಾದದ ಅರ್ಜಿಗಳು ಸುಪ್ರೀಂ ಕೋರ್ಟ್ ಸಾಂವಿಧಾನಿಕ ಪೀಠದಲ್ಲಿ ಬಾಕಿ ಇರುವಾಗಲೇ ರಾಜ್ಯ ಸರ್ಕಾರ ಹಿಜಾಬ್ ನಿಷೇಧ ಹಿಂಪಡೆದಿರುವುದು ಅತ್ಯಂತ ದುರದೃಷ್ಟಕರ ಸಂಗತಿ ಎಂದು ಖಂಡಿಸಿದ್ದಾರೆ. ಶಾಲಾ-ಕಾಲೇಜು ಗಳಲ್ಲಿ 'ಸಮವಸ್ತ್ರ ಸಂಹಿತೆ' ವಿದ್ಯಾರ್ಥಿಗಳಲ್ಲಿ ಸಮಾನತೆ ಬೆಳೆಸುವ ಮೂಲ ಉದ್ದೇಶವಾಗಿದೆ. ಆದರೆ, ಕಾಂಗ್ರೆಸ್ ಸರ್ಕಾರ ಧರ್ಮಾಧಾರಿತ ಎನ್ನುವಂತೆ ಸಮವಸ್ತ್ರ ಸಂಹಿತೆಗೆ ಧಕ್ಕೆ ತರುತ್ತಿದೆ. ಸಮಾನತೆ ಬದಲು ತಾರತಮ್ಯ ತೋರುತ್ತಿದೆ ಎಂದು ಆರೋಪಿಸಿದ್ದಾರೆ.



ನ್ಯಾಯಾಂಗದ ಪ್ರಕ್ರಿಯೆಯನ್ನು ಕಡೆಗಣಿಸಿ ಸರ್ಕಾರ ಹಿಜಾಬ್ ನಿಷೇಧ ಹಿಂಪಡೆದಿರುವುದು ನ್ಯಾಯಾಂಗ ವ್ಯವಸ್ಥೆಗೆ ಮಾಡುವ ಅಪಮಾನವಾಗಿದೆ. ಒಂದು ನಿರ್ದಿಷ್ಟ ವರ್ಗವನ್ನು ಓಲೈಸಲು ಹೋಗಿ ಇಡೀ ಶೈಕ್ಷಣಿಕ ವಾತಾವರಣವನ್ನೇ ಹಾಳು ಮಾಡುತ್ತಿದೆ ಎಂದು ಕಿಡಿಕಾರಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ವಿದ್ಯಾರ್ಥಿಗಳಲ್ಲೂ 'ವಿಭಜಕ ನೀತಿ' ಅನುಸರಿಸಿ ಶಾಲಾ ಶಿಸ್ತನ್ನು ಹದಗೆಡಿಸುವ ಹುನ್ನಾರಕ್ಕೆ ಮುಂದಾಗಿರುವುದು ನಿಜಕ್ಕೂ ಶೋಚನೀಯ ಎಂದು ಹರಿಹಾಯ್ದಿದ್ದಾರೆ.

ಕೇಂದ್ರ ಸರ್ಕಾರ ದೇಶದೆಲ್ಲೆಡೆ ಏಕರೂಪ ನಾಗರಿಕ ಸಂಹಿತೆ ಜಾರಿ ತರುತ್ತಿರುವ ಬೆನ್ನಲ್ಲೇ ಕರ್ನಾಟಕದ ಕಾಂಗ್ರೆಸ್ ಸರ್ಕಾರ ಧರ್ಮಗಳನ್ನು ಒಡೆದಾಳುವ ನೀತಿಗೆ ಕೈ ಹಾಕಿದೆ ಎಂದು ವಾಗ್ದಾಳಿ ನಡೆಸಿದ್ದಾರೆ. ಇನ್ನು ಕೇಸರಿ ಶಾಲು ಧಾರ್ಮಿಕವಲ್ಲ, ಆದರೆ, ರಾಜ್ಯ ಕಾಂಗ್ರೆಸ್ ಸರ್ಕಾರ ಯಾವ ಬಣ್ಣ ಹಾಕಬೇಕು, ಹಾಕಬಾರದೆಂಬ ಹಕ್ಕನ್ನೇ ಕಸಿದುಕೊಳ್ಳುವ ಸರ್ವಾಧಿಕಾರಿ ಧೋರಣೆ ಪ್ರದರ್ಶಿಸುತ್ತಿದೆ ಎಂದು ಸಚಿವ ಜೋಶಿ ಆರೋಪಿಸಿದ್ದಾರೆ.

ಒಂದು ವರ್ಗದ ಓಲೈಕೆಗೆ ಹಿಜಾಬ್ ಮತ್ತೆ ಮುನ್ನೆಲೆಗೆ

» ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಆರೋಪ

• **ಬೆಂಗಳೂರು:** ಒಂದು ವರ್ಗವನ್ನು ಸಮಾಧಾನ, ಓಲೈಕೆ ಮಾಡುವುದಕ್ಕೆ ವಿವಾದಿತ ಹಿಜಾಬ್ ವಿಷಯವನ್ನು ಮತ್ತೆ ಮುನ್ನೆಲೆಗೆ ತರಲಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ. ಜೆಡಿಎಸ್ ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, ದಾವಣಗೆರೆ ಉಪ ಚುನಾವಣೆಯ ಫಲಿತಾಂಶ ಹೊರ ಬಂದ ನಂತರ ಕಾಂಗ್ರೆಸ್ ಪಕ್ಷಕ್ಕೆ ದಿಢೀರ್ ಜ್ಞಾನೋದಯವಾಗಿ ಈ ನಿರ್ಧಾರ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.



ಅಷ್ಟು ಧೈರ್ಯ ಇದ್ದಿದ್ದರೆ ಅಧಿಕಾರಕ್ಕೆ ಬಂದ ಕೂಡಲೇ ಈ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗಿತ್ತು. ಮೂರು ವರ್ಷದಿಂದ ಯಾಕೆ ಸುಮ್ಮನೆ ಇದ್ದರು, ದಾವಣಗೆರೆ ಉಪ ಚುನಾವಣೆಯಲ್ಲಿ ಒಂದು ಸಮುದಾಯದ ಜನರು ಮತ ಚಲಾವಣೆ ಮಾಡಿರುವ ರೀತಿಯನ್ನು ನೋಡಿ ಇವರು ಗಾಬರಿಗೆ ತುತ್ತಾಗಿ ಈ ರೀತಿ ಮಾಡುತ್ತಿದ್ದಾರೆ ಎಂದು ಅವರು ದೂರಿದರು. ಇತ್ತೀಚೆಗೆ ನಡೆದ ಪರೀಕ್ಷೆಯಲ್ಲಿ ಒಬ್ಬ ಹುಡುಗನ ಮೈ ಮೇಲಿದ್ದ ಜನಿವಾರ ತೆಗೆಸಿದರು. ಸಮರ್ಥನೆ ಮಾಡಲು ಆಗುಗುತ್ತದೆಯೇ? ಎಲ್ಲವನ್ನು ರಾಜಕೀಯಕ್ಕಾಗಿ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ರಾಜಕೀಯ ಲಾಭದ ದೃಷ್ಟಿ ಬಿಟ್ಟರೆ ಸಮಾಜದ ಶಾಂತಿ ಮುಖ್ಯವಲ್ಲ ಎಂದು ಹೇಳಿದರು.

ಈ ಪ್ರಕರಣ ನ್ಯಾಯಾಲಯದಲ್ಲಿ ಇನ್ನೂ ವಿಚಾರಣೆಯಲ್ಲಿದೆ. ಹಿಜಾಬ್ ಬಗ್ಗೆ ತಡೆಯಾಜ್ಞೆ ಜಾರಿಯಲ್ಲಿದೆ. ಅದು ತೆರವಾಗದೇ ಇವರು ಇಂಥ ಆದೇಶ ಮಾಡುತ್ತಾರೆ. ನ್ಯಾಯಾಂಗಕ್ಕೂ ಈ ಸರಕಾರ ಅಪಚಾರ ಮಾಡುತ್ತಿದೆ ಎಂದು ಟೀಕಿಸಿದರು.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೇ ಸರ್ಕಾರದ ಆದೇಶ: ಸಚಿವ ದಿನೇಶ್

» ಉತ್ತಮ, ಸುಸಜ್ಜಿತ ವಾತಾವರಣ ಇರಬೇಕು ಎಂಬ ಉದ್ದೇಶದಿಂದ ಆದೇಶ ಕೈಗೊಳ್ಳಲಾಗಿದೆ

» ಮಕ್ಕಳು ಶಾಲೆಗೆ ಹೋದಾಗ ಕೆಟ್ಟ ವಾತಾವರಣ ನಿರ್ಮಾಣವಾಗಬಾರದು ಎಂಬ ಉದ್ದೇಶ

• **ಬೆಂಗಳೂರು:** ರಾಜ್ಯದಲ್ಲಿ ಹಿಜಾಬ್‌ಗೆ ಅವಕಾಶ ನೀಡಿರುವ ಸರ್ಕಾರದ ಕ್ರಮವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸಮರ್ಥಿಸಿಕೊಂಡಿದ್ದು, ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಬಿಜೆಪಿ ಅಲ್ಪಸಂಖ್ಯಾತರನ್ನು ಕಡೆಗಣನೆ ಮಾಡುತ್ತಿದೆ. ನಾವು ಯಾವುದೇ ಒಂದು ಸಮುದಾಯದ ಪರವಾಗಿಲ್ಲ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೇ ಸರ್ಕಾರ ಈ ಆದೇಶ ಹೊರಡಿಸಿದೆ ಎಂದು ಹೇಳಿದರು. ಸಿಇಟಿ ಪರೀಕ್ಷೆ ವೇಳೆ ವಿದ್ಯಾರ್ಥಿನಿಯರಿಂದ ಹಿಜಾಬ್ ತೆಗೆಸಿದ ವಿಚಾರವನ್ನು ಉಲ್ಲೇಖಿಸಿದ ಅವರು, ಹಿಜಾಬ್ ತೆಗೆಸುವುದು ಎಷ್ಟು ಸರಿ? ಹಿಜಾಬ್ ತೆಗೆಯಿರಿ ಎಂದರೆ ವಿದ್ಯಾರ್ಥಿನಿಯರಿಗೆ ಖಿನ್ನತೆ ಆಗೋದಿಲ್ಲವೇ? ಮಕ್ಕಳು ಶಾಲೆಗೆ ಹೋದಾಗ ಕೆಟ್ಟ ವಾತಾವರಣ ನಿರ್ಮಾಣವಾಗಬಾರದು. ಉತ್ತಮ ಹಾಗೂ ಸುಸಜ್ಜಿತ ವಾತಾವರಣ ಇರಬೇಕು ಎಂಬ ಉದ್ದೇಶದಿಂದ ಈ ಆದೇಶ ಕೈಗೊಳ್ಳಲಾಗಿದೆ ಎಂದು ಹೇಳಿದರು.



ಬಿಜೆಪಿ ವಿರುದ್ಧ ಟೀಕಿಸಿದ ಸಚಿವರು, ಬಿಜೆಪಿ ವಿನಾಕಾರಣ ಹೋರಾಟ ಮಾಡುತ್ತಿದೆ. ವಿದ್ಯಾರ್ಥಿಗಳ ಬಗ್ಗೆ ನಿಜವಾದ ಕಾಳಜಿ ಇದ್ದರೆ ನೀಟ್ ಪರೀಕ್ಷೆ ವಿರುದ್ಧ ಹೋರಾಟ ಮಾಡಲಿ. ಎನ್‌ಟಿಎ ವಿರುದ್ಧ ಪ್ರತಿಭಟನೆ ನಡೆಸಲಿ ಎಂದು ಸವಾಲು ಹಾಕಿದರು.

ರಾಜ್ಯದಲ್ಲಿ ನೀಟ್ ಪರೀಕ್ಷೆಯನ್ನು ರದ್ದುಪಡಿಸಿ, ಈ ಹಿಂದೆ ಸಿಇಟಿ ಮಾದರಿಯಲ್ಲಿ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಪ್ರವೇಶ ಪರೀಕ್ಷೆ ನಡೆಸುವ ವ್ಯವಸ್ಥೆ ಜಾರಿಗೆ ತರಬೇಕೆಂದು ಅವರು ಆಗ್ರಹಿಸಿದರು. 2022ರ ಹಿಜಾಬ್ ಆದೇಶವನ್ನು ಹಿಂಪಡೆದು ಸರ್ಕಾರ ಅವಕಾಶ ನೀಡಿರುವುದನ್ನು ಸಮರ್ಥಿಸಿಕೊಂಡ ಅವರು, ಕೇಸರಿ, ಹಸಿರು, ನೀಲಿ ಶಾಲ್ ಹಾಕಿಕೊಂಡು ಬರುವುದು ಯಾವ ಮಾನದಂಡದಲ್ಲಿದೆ? ಯಾವುದೇ ಶಾಲೆಯಲ್ಲೂ ಇಂತಹ ಶಾಲ್‌ಗಳಿಗೆ ಅವಕಾಶವಿಲ್ಲ, ಸಮವಸ್ತ್ರಕ್ಕೆ ಅನುಗುಣವಾಗಿ ಶಾಲ್ ಹಾಕಿಕೊಂಡು ಬರಬಹುದು. ಹಿಜಾಬ್ ಅಂದರೆ ಒಂದು ಸ್ಕಾರ್ಫ್ ಅಷ್ಟೇ, ಅದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದು ಹೇಳಿದರು.

ವಿಭೂತಿ, ಕುಂಕುಮ ಇಟ್ಟುಕೊಂಡು ಬರುವುದು ತಪ್ಪು ಎಂದು ಹೇಳಲು ಆಗುತ್ತದೆಯೇ? 2022ರ ಮೊದಲು ಯಾವುದೇ ರೀತಿಯ ಸಮಸ್ಯೆಗಳಿರಲಿಲ್ಲ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಈ ವಿಚಾರ ದೊಡ್ಡ ಸಮಸ್ಯೆಯಾಯಿತು ಎಂದು ಅವರು ತಿಳಿಸಿದರು.

ನಾವು ಯಾವುದೇ ಸಮುದಾಯವನ್ನು ಓಲೈಕೆ ಮಾಡುವ ಕೆಲಸ ಮಾಡುತ್ತಿಲ್ಲ, ಸರ್ಕಾರದ ಆದೇಶ ಸಹಜವಾಗಿರುವ ಒಂದು ಪದ್ಧತಿಯನ್ನು ಮುಂದುವರಿಸುವ ಕ್ರಮ ಮಾತ್ರ. ಹಿಜಾಬ್ ಧರಿಸುವುದು ಹಲವು ವರ್ಷಗಳಿಂದ ನಡೆದುಕೊಂಡು ಬಂದಿರುವ ಪದ್ಧತಿ. ಹಿಂದುಗಳ ಮೇಲೆ ಭಯ ಸೃಷ್ಟಿಸುವುದು ಹಾಗೂ ಅಲ್ಪಸಂಖ್ಯಾತರ ಓಲೈಕೆ ಎಂದು ಭಾವನೆ ಮೂಡಿಸುವುದೇ ಬಿಜೆಪಿಯ ರಾಜಕೀಯ ಕಾಯಕ ಎಂದು ಸಚಿವ ದಿನೇಶ್ ಗುಂಡೂರಾವ್ ಟೀಕಿಸಿದರು.

ಹಿಜಾಬ್‌ಗೆ ಅವಕಾಶ ನೀಡಿ ಹೈಕೋರ್ಟ್ ಆದೇಶದ ಉಲ್ಲಂಘನೆ: ಕೆ.ಎಸ್.ಈಶ್ವರಪ್ಪ

• **ಶಿವಮೊಗ್ಗ:** ಮುಸ್ಲಿಂ ತುಷ್ಟೀಕರಣ ಮುಂದುವರಿಸಿರುವ ರಾಜ್ಯ ಸರ್ಕಾರ ಹಿಜಾಬ್‌ಗೆ ಅವಕಾಶ ನೀಡಿ ಹೈಕೋರ್ಟ್ ಆದೇಶವನ್ನು ಸ್ಪಷ್ಟ ಉಲ್ಲಂಘನೆ ಮಾಡಿದೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಹೇಳಿದರು. ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಅವರು, ಹಿಜಾಬ್ ಧರಿಸಿ ಕಾಲೇಜಿಗೆ ಬರುವುದನ್ನು ಈ ಹಿಂದಿನ ಬಿಜೆಪಿ ಸರ್ಕಾರ ನಿಷೇಧಿಸಿತ್ತು. ಇದನ್ನು ಹೈಕೋರ್ಟ್‌ನಲ್ಲಿಯೂ ಪ್ರಶ್ನಿಸಲಾಗಿತ್ತು. ಹೈಕೋರ್ಟ್ ಸಮವಸ್ತ್ರ ಸಂಹಿತೆಯಂತೆ ಕಾಲೇಜಿಗೆ ಬರಬೇಕು. ಹಿಜಾಬ್‌ಗೆ ಅವಕಾಶ ವಿಲ್ಲ ಎಂದು ಹೇಳಿತ್ತು. ಆದರೂ ರಾಜ್ಯ ಕಾಂಗ್ರೆಸ್ ಸರ್ಕಾರ ಈಗ ಮತ್ತೊಂದು ಆದೇಶ ಹೊರಡಿಸಿ ವಿವಾದಕ್ಕೆ ಕಾರಣವಾಗಿದೆ ಎಂದರು. ಹಿಜಾಬ್‌ಗೆ ಅವಕಾಶ ಕೊಟ್ಟು, ಕೇಸರಿ ಶಾಲು ಧರಿಸುವುದಕ್ಕೆ ನಿರ್ಬಂಧ ಹೇರಿದರೆ, ಶಾಲಾ ಕಾಲೇಜುಗಳಲ್ಲಿ ಮಾತ್ರವಲ್ಲ ಇಡೀ ರಾಜ್ಯ ಹಾಗೂ ವಿಧಾನ ಮಂಡಲವೂ ಕೇಸರಿಮಯವಾಗಿ ಕಾಂಗ್ರೆಸ್ ನಿರ್ನಾಮವಾಗುವುದು ಖಚಿತ ಎಂದು ಭವಿಷ್ಯ ನುಡಿದರು.



ಮುಸ್ಲಿಂ ತುಷ್ಟೀಕರಣದ ಪರಾಕಾಷ್ಠೆ ಮುಟ್ಟಿದ ಸರ್ಕಾರ: ಆರಗ ಜ್ಞಾನೇಂದ್ರ

• **ತೀರ್ಥಹಳ್ಳಿ:** ಹಿಜಾಬ್ ನಿಷೇಧ ಮಾಡಿ ಶಾಲೆಗಳಲ್ಲಿ ಹಿಜಾಬ್ ಹಾಕಬಾರದು. ಶಾಲೆಯ ಸಮವಸ್ತ್ರಕ್ಕೆ ಆದ್ಯತೆ ನೀಡಬೇಕು ಎಂದು ನಮ್ಮ ಸರ್ಕಾರ ಆದೇಶ ಮಾಡಿತ್ತು. ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಇದನ್ನು ತೆಗೆದುಹಾಕುವ ಮೂಲಕ ಮುಸ್ಲಿಂ ತುಷ್ಟೀಕರಣದ ಪರಾಕಾಷ್ಠೆಯನ್ನು ಮುಟ್ಟಿದೆ ಎಂದು ಮಾಜಿ ಗೃಹ ಸಚಿವ ಆರಗ ಜ್ಞಾನೇಂದ್ರ ವಾಗ್ದಾಳಿ ನಡೆಸಿದರು. ಗುರುವಾರ ಮಾಧ್ಯಮಗಳಿಗೆ ವಿಡಿಯೋ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಹಿಜಾಬ್‌ನ್ನು ಮತ್ತೆ ಧರಿಸಲು ಆದೇಶವನ್ನು ನೀಡಿದೆ. ಜನಿವಾರ, ಶಿವದಾರ, ಹಿಜಾಬ್‌ನ್ನು ಹಾಕಲು ಅವಕಾಶ ಕೊಡುತ್ತೇವೆ ಎಂದು ಹೇಳಿದೆ. ನಾಚಿಕೆ ಇಲ್ಲದ ಕಾಂಗ್ರೆಸ್ ಸರ್ಕಾರ. ಇತ್ತೀಚೆಗೆ 600 ಕೋಟಿ ರೂ.ಗಳನ್ನು ಮುಸ್ಲಿಂ ಕಾನೂನಿನ ಅಭಿವೃದ್ಧಿಗೋಸ್ಕರ ಇಟ್ಟಿದ್ದಾರೆ. ಕಳೆದ 3 ಬಜೆಟ್‌ನ ಪ್ರತಿಯೊಂದು ಬಜೆಟ್‌ನಲ್ಲೂ 1600 ಕೋಟಿ ರೂ. ಮುಸ್ಲಿಂ ಮಕ್ಕಳಿಗೆ ಓದಲು, ಶಾಲೆ-ಕಾಲೇಜು ತೆರೆಯಲು ಇಟ್ಟಿದ್ದಾರೆ ಎಂದಿದ್ದಾರೆ.



ಸರ್ಕಾರದಿಂದ ಜನರ ದಾರಿ ತಪ್ಪಿಸುವ ಕೆಲಸ: ಶಾಸಕ ಯಶ್‌ಪಾಲ್ ಸುವರ್ಣ

• **ಬೆಂಗಳೂರು:** ಹಿಜಾಬ್ ಆದೇಶ ಹಿಂಪಡೆ ಯುವ ಮೂಲಕ ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ದಾವಣಗೆರೆ ಉಪ ಚುನಾವಣೆ ಸಂದರ್ಭದಲ್ಲೂ ಮತ್ತೊಮ್ಮೆ ಅಲ್ಪಸಂಖ್ಯಾತರನ್ನು ಓಲೈಕೆ ಮಾಡಲು ಮುಂದಾಗಿದ್ದರು ಎಂದು ಶಾಸಕ ಯಶ್‌ಪಾಲ್ ಸುವರ್ಣ ಆಕ್ಷೇಪಿಸಿದರು.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿಸ್ತು, ಭೇದಭಾವವಿಲ್ಲದೇ, ಶ್ರೀಮಂತ-ಬಡವ ಎಂಬ ಭಾವನೆಗೆ ಅವಕಾಶ ಇರದಂತೆ ಶಾಲೆ ನಡೆಯಬೇಕೆಂಬ ಉದ್ದೇಶದಿಂದ ಸಮವಸ್ತ್ರ ವ್ಯವಸ್ಥೆಯನ್ನು ಶಾಲಾ-ಕಾಲೇಜುಗಳಲ್ಲಿ ಜಾರಿ ಮಾಡಲಾಗಿದೆ ಎಂದರು. ಮುಂದಿನ ಚುನಾವಣೆಗಳಲ್ಲಿ ಅಲ್ಪಸಂಖ್ಯಾತರು ಕಾಂಗ್ರೆಸ್ಸನ್ನು ಕೈಬಿಡುವರೇ? ಎಂಬ ಆತಂಕ ಕಾಂಗ್ರೆಸ್ಸಿಗರದು. ಎಂಐಎಂ ಅಥವಾ ಮುಸ್ಲಿಂ ಲೀಗಿನ ಮೂಲಕ ಸಂಘಟನೆ ಮಾಡಿ ಕಾಂಗ್ರೆಸ್ಸಿಗೆ ಸೆಡ್ಡು ಹೊಡೆಯುವ ಭಯದ ವಾತಾವರಣ ನಿರ್ಮಾಣವಾಗಿದೆ. ಕಾಂಗ್ರೆಸ್, ತನ್ನ ಸ್ವಾರ್ಥ ಮತ್ತು ರಾಜಕೀಯ ಲಾಭಕ್ಕಾಗಿ ವಿದ್ಯಾರ್ಥಿಗಳ ಜೀವನದಲ್ಲಿ ಚೆಲ್ಲಾಟವಾಡುತ್ತಿದೆ. ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ನಡುವೆ ವಿಷಬೀಜ ಬಿತ್ತುವ ಕೆಲಸ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಅವಿಶ್ರಾಂತ ಧ್ಯೇಯಜೀವಿ ಮೈ.ಚ. ಜಯದೇವ ಬದುಕು-ನೆನಪು ಪುಸ್ತಕ ಲೋಕಾರ್ಪಣೆ

ಸೌಹಾರ್ದಯುತ ವಾತಾವರಣಕ್ಕೆ ಶ್ರಮಿಸಿದ ಜಯದೇವ

• **ಬೆಂಗಳೂರು:** ಎಲ್ಲರಿಗೂ ಉದ್ಯೋಗ ಪೂರ್ಣಕಾಲಿಕ ಹಾಗೂ ಬೇರೆಯದ್ದು ಅರೆಕಾಲಿಕ ಆಗಿರುತ್ತದೆ. ಆದರೆ, ಜಯದೇವ ಅವರಿಗೆ ಇಂಡಿಯಾ ಗ್ಯಾರೇಜಿನ ಉದ್ಯೋಗವೇ ಅರೆಕಾಲಿಕವಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯವೇ ಪೂರ್ಣಕಾಲಿಕವಾಗಿತ್ತು ಎಂದು ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ರಾಷ್ಟ್ರೋತ್ಥಾನ ಪರಿಷತ್ ನಗರದ ಪುರಭವನದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಅವರು ಅವಿಶ್ರಾಂತ ಧ್ಯೇಯಜೀವಿ ಮೈ. ಚ. ಜಯದೇವ ಬದುಕು-ನೆನಪು ಪುಸ್ತಕ ಲೋಕಾರ್ಪಣೆ ಮಾಡಿದರು. ಜಯದೇವ ಅವರು ಮಠದ ಭಾರತೀಯ ಸಾಂಸ್ಕೃತಿಕ ಪರಿಷತ್ತಿನ ಮಾರ್ಗದರ್ಶಕರಾಗಿದ್ದರು. ಭಾರತೀಯ ಸಂಸ್ಕೃತಿಯ ಪುನರುತ್ಥಾನದಲ್ಲಿ ಮಠಮಾನ್ಯಗಳೂ ತೊಡಗಿಸಿಕೊಳ್ಳಬೇಕೆಂದು ಸಿದ್ದೇಶ್ವರ ಸ್ವಾಮೀಜಿ, ಪೇಜಾವರ ಶ್ರೀ ಮುಂತಾದವರು ಊಟಿಯಲ್ಲಿ ಆರಂಭಿಸಿದರು. ಅದರ ಸಭೆಗಳಿಗೆ ಅತ್ಯಂತ ಸಿದ್ಧವಾಗಿ ಆಗಮಿಸುತ್ತಿದ್ದವರು ಜಯದೇವ ಅವರು ಎಂದು ತಿಳಿಸಿದರು.

ವಂದೇ ಮಾತರಂನಲ್ಲಿ ಬರುವಂತೆ ಎಲ್ಲವೂ ತಾಯಿಗಾಗಿಯೇ ಎಂದು ಬದುಕು ನಡೆಸಿದವರು. ಸದಾ ಸೌಹಾರ್ದಯುತ ವಾತಾವರಣಕ್ಕೆ ಶ್ರಮಿಸಿದವರು. ತುರ್ತು ಪರಿಸ್ಥಿತಿಯ ವೇಳೆ ಸೆರೆಮನೆಗೆ ಉದ್ದೇಶಪೂರ್ವಕವಾಗಿ ಆಗಮಿಸಿ ಅಲ್ಲಿದ್ದವರಿಗೆ ಆತ್ಮಸ್ಥೈರ್ಯ, ದೇಶಭಕ್ತಿಯನ್ನು ನೀಡಿದವರು. ನಿರ್ಲಿಪ್ತವಾದ ಬದುಕನ್ನು ನಡೆಸಿದರು ಎಂದರು.

ಜಯದೇವ ಅವರು ಎಂದೂ ರಾಜ ಆಗಬೇಕೆಂದುಕೊಂಡಿದ್ದವರಲ್ಲ, ಕಿಂಗ್ ಮೇಕರ್ ಆಗಿದ್ದವರು ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಸಾವಿರಾರು ಪುಣ್ಯಕರ್ಮಗಳ ಸಂಚಯದಿಂದ ಪ್ರಾಪ್ತವಾದ ಮನುಷ್ಯ ಜೀವನವನ್ನು ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂಬ ಮಾತಿಗರ ಅನ್ವರ್ಥರಾಗಿದ್ದವರು ಜಯದೇವರು. ಯಾವುದೇ ಅಧಿಕಾರಕ್ಕೆ ಆಸೆ ಪಟ್ಟವರಲ್ಲ, ಅವರು ಇದ್ದಷ್ಟೂ ಕಾಲ ಸಂಸ್ಥೆಗಳಿಗೆ ಮೀಸಲಿಟ್ಟು ಕಟ್ಟಿ ಬೆಳೆಸಿದರು. ಅವರ ಧ್ಯೇಯಾದರ್ಶಗಳು ನಮ್ಮೊಂದಿಗೆ ಇರುತ್ತವೆ ಎಂದು ಹೇಳಿದರು.



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಪುಸ್ತಕದ ಕುರಿತು ಮಾತನಾಡಿದರು. ಕೃತಿಯ ಲೇಖಕರಾದ ಡಾ. ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ, ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ. ಕುಮಾರ್ ವೇದಿಕೆಯಲ್ಲಿದ್ದರು. ಪರಿಷತ್ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಪ್ರಾಸ್ತಾವಿಕ ಮಾತುಗಳನ್ನಾಡಿದರು.

> ಪರಿಷತ್ತು ಯಾವ ದಿಕ್ಕಿನಲ್ಲಿ ಸಾಗಬೇಕೆಂದು ಅವರಿಗೆ ಸ್ಪಷ್ಟತೆ ಇದ್ದಿದ್ದರಿಂದ ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗಿದೆ. ಸರ್ವಾಂತರ್ಗತ ವೈದ್ಯಕೀಯ ಸೇವೆ ಸಿಗಬೇಕು ಎಂದು ಅವರ ಅಪೇಕ್ಷೆಯಾಗಿತ್ತು. ಅದು ಇಂದು ರಾಜರಾಜೇಶ್ವರಿ ನಗರದಲ್ಲಿ ಅವರದ್ದೇ ಹೆಸರಿನ ಆಸ್ಪತ್ರೆಯಾಗಿ ಸಾಕಾರಗೊಂಡಿದೆ.
>
> ■ ನಾ. ದಿನೇಶ್ ಹೆಗ್ಡೆ, ರಾಷ್ಟ್ರೋತ್ಥಾನ ಪರಿಷತ್ ಪ್ರಧಾನ ಕಾರ್ಯದರ್ಶಿ

> ಅನೇಕ ಸಂಸ್ಥೆಗಳನ್ನು ಕಟ್ಟಿ ನೂರಾರು ಚಟುವಟಿಕೆಗಳನ್ನು ಹಾಗೂ ಎಂದಿಗೂ ವಿಶ್ರಮಿಸದೆ ಪಾಲಿಗೆ ಬಂದ ಎಲ್ಲ ಕೆಲಸಗಳನ್ನೂ ಸಮಚಿತ್ತ, ಆತ್ಮವಿಶ್ವಾಸ, ಬದ್ಧತೆಯಿಂದ ಪೂರ್ಣಗೊಳಿಸಿದವರು ಜಯದೇವ ಅವರು. ನಿರ್ಮೋಹಿಯಾಗಿ ಸಂಘಕ್ಕೆ ತನ್ನನ್ನು ಸಮರ್ಪಣೆ ಮಾಡಿಕೊಂಡವರು. ಅವರ ಜೀವನ ನೆನೆದರೆ ಅನೇಕ ಕ್ರಾಂತಿಕಾರಿಗಳ ಜೀವನ ನೆನಪಾಗುತ್ತದೆ.
>
> ■ ಬಾಬು ಕೃಷ್ಣಮೂರ್ತಿ, ಕೃತಿಯ ಲೇಖಕ

ಆರ್‌ಎಸ್‌ಎಸ್ ಸಹಸರಕಾರ್ಯವಾಹ ಸಿ.ಆರ್. ಮುಕುಂದ, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕೇಂದ್ರದ ಆಡಳಿತಾತ್ಮಕ ವೈಫಲ್ಯ: ಸಿದ್ದರಾಮಯ್ಯ

ನೀಟ್ ಪರೀಕ್ಷೆ ರದ್ದು: ದ್ರೋಹ

• **ಬೆಂಗಳೂರು:** ದೇಶಾದ್ಯಂತ 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಬರೆದಿದ್ದ ನೀಟ್-ಯುಜಿ 2026 ಪರೀಕ್ಷೆಯನ್ನು ರದ್ದುಗೊಳಿಸಿರುವ ಕೇಂದ್ರ ಸರ್ಕಾರದ ನಿರ್ಧಾರವು ಆಡಳಿತಾತ್ಮಕ ವೈಫಲ್ಯ ಮಾತ್ರವಲ್ಲ, ದೇಶದ ಯುವಜನತೆಗೆ ಬಗೆದ ಕ್ರೂರ ದ್ರೋಹವಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನೀಟ್ ರದ್ದತಿ ಬಗ್ಗೆ ಮಾಧ್ಯಮ ಹೇಳಿಕೆ ನೀಡಿರುವ ಅವರು, ಕರ್ನಾಟಕದ 1 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಸೇರಿದಂತೆ ದೇಶದ 22 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ತಿಂಗಳುಗಟ್ಟಲೆ ಶ್ರಮಪಟ್ಟು ಈ ಪರೀಕ್ಷೆ ಬರೆದಿದ್ದರು. ಪೋಷಕರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ತರಬೇತಿ, ಪ್ರಯಾಣ ಸೇರಿದಂತೆ ಸಾಕಷ್ಟು ಖರ್ಚುಗಳನ್ನು ಮಾಡಿದ್ದರು. ಆದರೆ ಕೇಂದ್ರದ ಒಂದು ನಿರ್ಧಾರ ಇಡೀ ವಿದ್ಯಾರ್ಥಿ ಸಮುದಾಯವನ್ನು ಅನಿಶ್ಚಿತತೆ ಮತ್ತು ಸಂಕಷ್ಟಕ್ಕೆ ತಳ್ಳಿದೆ ಎಂದು ಕಿಡಿಕಾರಿದ್ದಾರೆ.

2024ರಲ್ಲೇ ನಮ್ಮ ಸರ್ಕಾರವು ನೀಟ್ ಪರೀಕ್ಷೆಯು ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತದೆ. ಶಾಲಾ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ ಮತ್ತು ದಾಖಲಾತಿ ವಿಚಾರದಲ್ಲಿ ರಾಜ್ಯಗಳ ಅಧಿಕಾರವನ್ನು ಕಸಿದುಕೊಳ್ಳುತ್ತದೆ ಎಂದು ಆಕ್ಷೇಪ ವ್ಯಕ್ತಪಡಿಸಿ, ಸದನ ನಿರ್ಣಯ ಕೈಗೊಂಡಿದ್ದೆವು. ಅಂದಿನ ನಮ್ಮ ಕಾಳಜಿ ಎಷ್ಟು ಸತ್ಯ ಮತ್ತು ಅನಿವಾರ್ಯವಾಗಿತ್ತು ಎನ್ನುವುದನ್ನು ಇಂದಿನ ಪರೀಕ್ಷಾ ರದ್ದತಿಯು ಸಾಬೀತುಪಡಿಸಿದೆ ಎಂದು ದೂರಿದ್ದಾರೆ. ಈ ಬಗ್ಗೆ ಪಾರದರ್ಶಕ, ಕಾಲಮಿತಿಯ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು. ಹೊಸ ಪರೀಕ್ಷಾ ವೇಳಾಪಟ್ಟಿಯ ಬಗ್ಗೆ ಕೂಡಲೇ ಸ್ಪಷ್ಟನೆ ನೀಡಬೇಕು ಮತ್ತು ಅಂತಹ ಪ್ರವೇಶ ಪರೀಕ್ಷೆಗಳನ್ನು ನಡೆಸುವ ರಾಜ್ಯಗಳ ಅಧಿಕಾರವನ್ನು ಪುನಃ ಸ್ಥಾಪಿಸಬೇಕು ಎಂಬುದು ನಮ್ಮ ಒತ್ತಾಯವಾಗಿದೆ. ಪೇಪರ್ ಲೀಕ್‌ನಿಂದ ತೊಂದರೆಗೀಡಾಗಿರುವ ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ಪೋಷಕರ ಜೊತೆ ನಾವಿದ್ದೇವೆ. ಅವರ ಪರಿಶ್ರಮಕ್ಕೆ ತಕ್ಕ ಫಲ ಸಿಗುವಂತೆ ಮಾಡುವುದು ಮತ್ತು ವಿದ್ಯಾರ್ಥಿಗಳ ಭವಿಷ್ಯವನ್ನು ರಕ್ಷಿಸುವುದು ನಮ್ಮ ಕರ್ತವ್ಯ ಎಂದಿದ್ದಾರೆ.

ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಲಿ

ನೇಮಕಾತಿ ಪರೀಕ್ಷೆಗಳಿಂದ ಹಿಡಿದು ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳವರೆಗೆ ಪೇಪರ್ ಲೀಕ್ ಪ್ರಕರಣಗಳು ಪ್ರತಿಭಾವಂತ ವಿದ್ಯಾರ್ಥಿಗಳ ಹಿತರಕ್ಷಣೆಯಲ್ಲಿ ಕೇಂದ್ರ ಸರ್ಕಾರದ ವೈಫಲ್ಯಕ್ಕೆ ಸಾಕ್ಷಿಯಾಗಿವೆ. ಹೊಣೆ ಹೊರಬೇಕಾದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಮಾಧ್ಯಮಗಳಿಂದ ದೂರ ಉಳಿದಿದ್ದಾರೆ. ಯುವಜನತೆಯ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲದ ಅವರು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದ್ದಾರೆ.

ಸಂಪಾದಕೀಯ

ವಿಶ್ವಶಾಂತಿ ಬಯಸಿದರೆ ತಪ್ಪೇನು?

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೆಯ ಹೊಸಬಾಳೆಯವರ ಎರಡು ಹೇಳಿಕೆಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಸಂಘದ ಪ್ರಮುಖರ ಹೇಳಿಕೆಗಳ ಬಗ್ಗೆ ಚರ್ಚೆ ನಡೆಯುವುದು ಉತ್ತಮ ಸಂಗತಿಯೇ ಆದರೂ ಎರಡು ಸಂಗತಿಗಳನ್ನು ಆದಷ್ಟೂ ವಿವಾದವನ್ನಾಗಿ ಪರಿವರ್ತಿಸುವ ಹುನ್ನಾರ ನಡೆಯುತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಸುದ್ದಿಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೊಸಬಾಳೆಯವರು ಅನೇಕ ಸಂಗತಿಗಳ ಬಗ್ಗೆ ಮುಕ್ತ ಮಾತುಕತೆ ನಡೆಸಿದ್ದರು. ಲವ್ ಜಿಹಾದಿನ ಬಗ್ಗೆ ಮಾತನಾಡುತ್ತಾ



ಅವರು ಶುದ್ಧ ಪ್ರೀತಿಗೆ ಯಾರ ವಿರೋಧವಿಲ್ಲ, ಆದರೆ ಉದ್ದೇಶಪೂರ್ವಕ ಮತಾಂತರ ಅಪಾಯಕಾರಿ ಎಂದಿದ್ದರು. ಇದನ್ನು ಚರ್ಚೆ ನಡೆಸುವ ದಾರಿ ಬೇರೆ ಇರಬೇಕಿತ್ತು. ಏಕೆಂದರೆ ಶುದ್ಧ ಪ್ರೀತಿಯನ್ನು ವಿಚಾರವಂತರೆಲ್ಲರೂ ಒಪ್ಪುತ್ತಾರೆ. ಪಾಕಿಸ್ತಾನದ ಜತೆ ಮಾತುಕತೆಗೆ ಭಾರತ ಮುಕ್ತವಾಗಿರಬೇಕು ಎನ್ನುವ ಇನ್ನೊಂದು ಹೇಳಿಕೆಯನ್ನು ಕಾಂಗ್ರೆಸ್ ವಕ್ತಾರರ ಸಹಿತ ಅನೇಕರು ವ್ಯಂಗ್ಯವಾಡಿದ್ದಾರೆ. ಇದರಲ್ಲೇನೂ ಆಭಾಸ ಇರಲಿಲ್ಲ, ಅದು ಹೊಸಬಾಳೆಯವರ ಅಮೆರಿಕ ಪ್ರವಾಸದ ಕಾರಣ ಇರಬಹುದು ಎಂದು ಹಿರಿಯ ಕಾಂಗ್ರೆಸಿಗ ಜೈರಾಂ ರಮೇಶ್ ಅವರಂಥವರೇ ಪ್ರತಿಕ್ರಿಯಿಸಿದ್ದಾರೆ. ಹಾಗಾದರೆ ಏನು ಮಾಡಬೇಕಿತ್ತು. ಪಾಕಿಸ್ತಾನದೊಂದಿಗೆ ಚರ್ಚೆಯ ಎಲ್ಲಾ ಬಾಗಿಲುಗಳನ್ನು ಮುಚ್ಚಬೇಕೆನ್ನಬೇಕಿತ್ತೇ? ಪಾಕಿಸ್ತಾನ ಭಯೋತ್ಪಾದನೆಯನ್ನು ಪೋಷಿಸುತ್ತಿದೆ ಮತ್ತು ಭಾರತದ ವಿರುದ್ಧ ಅದನ್ನು ಬಳಸುತ್ತಿದೆ ಎನ್ನುವುದರಲ್ಲಿ ಯಾವ ದೇಶಗಳಿಗೂ ಇಂದು ಸಂಶಯವಿಲ್ಲ, ಭಾರತ ಸದಾ ಶಾಂತಿಯನ್ನು ಪೋಷಿಸುವ ದೇಶ ಎನ್ನುವುದನ್ನು ಒಪ್ಪುವವರೆಲ್ಲರೂ ಹೊಸಬಾಳೆಯವರ ಹೇಳಿಕೆಯನ್ನು ಸ್ವಾಗತಿಸಲೇಬೇಕು. ಭಾರತವು ಭಯೋತ್ಪಾದನಾ ದಾಳಿಯನ್ನೆದುರಿಸಿದಾಗಲೆಲ್ಲಾ ತಕ್ಕ ಉತ್ತರವನ್ನು ನೀಡಿದೆ. ಆದರೆ ಶಾಂತಿಯ ಹಾದಿ ದೀರ್ಘಾವಧಿಯದ್ದು, ಯುದ್ಧ ಮತ್ತು ಶಾಂತಿ ಎರಡು ಧ್ರುವಗಳದ್ದು, ಶಾಂತಿಯ ಹಾದಿಯಲ್ಲಿ ಅನೇಕ ಪ್ರಕ್ರಿಯೆಗಳು ನಡೆಯಬೇಕಿವೆ.

ಹಿಂದಿನಂತೆ ಕ್ರಿಕೆಟ್ ಪಂದ್ಯಾವಳಿಯೇ ಪರಿಹಾರ ಎಂದು ನಂಬುವ ಸ್ಥಿತಿಯಲ್ಲಿ ಇಂದು ದೇಶ ಇಲ್ಲ, ಭಾರತ ಇಂದು ತನ್ನ ಶಕ್ತಿ ಸಾಮರ್ಥ್ಯಗಳನ್ನು ವೃದ್ಧಿಸಿಕೊಂಡಿದೆ. ತಾಕತ್ತಿನಲ್ಲಿ ಶಾಂತಿಯನ್ನು ಬಯಸುವುದಕ್ಕೂ ದೌರ್ಬಲ್ಯವಿಟ್ಟುಕೊಂಡು ಶಾಂತಿಯ ಮಾತಾಡುವುದಕ್ಕೂ ವ್ಯತ್ಯಾಸವಿಲ್ಲವೇ? ಒಂದು ವೇಳೆ ಹೊಸಬಾಳೆಯವರು ಮಾತುಕತೆಯ ಎಲ್ಲಾ ಬಾಗಿಲುಗಳನ್ನು ಮುಚ್ಚಬೇಕು ಎಂದಿದ್ದರೂ ಕಾಂಗ್ರೆಸ್ ನಾಯಕರು ಅದನ್ನು ಆರೆಸ್ಸೆಸ್ ಹಿಂಸೆಯನ್ನು ಪ್ರಚೋದಿಸುತ್ತದೆ ಎಂದು ಆರೋಪಿಸುತ್ತಿತ್ತು. ಆರೆಸ್ಸೆಸ್ ಪ್ರತಿಪಾದಿಸುವ ಹಿಂದುತ್ವದ ಸಿದ್ಧಾಂತದ ಅಂತಿಮ ಗುರಿ ವಿಶ್ವಶಾಂತಿ ಎನ್ನುವುದನ್ನು ಅರಿಯದಿದ್ದರೆ ಮೊಸರಲ್ಲೂ ಕಲ್ಲು ಹುಡುಕುವ ಇಂಥ ಹೇಳಿಕೆಗಳು ಹುಟ್ಟುತ್ತವೆ. ಲವ್ ಜಿಹಾದ್ ಪದ ಕೂಡ ಆರೆಸ್ಸೆಸ್ ಕೊಡುಗೆಯಲ್ಲ ಎನ್ನುವುದನ್ನು ಚರ್ಚಿಸಿದ್ದರೆ ಸಮಾಜಿಕ ಶಾಂತಿಯ ಹೊಸ ವ್ಯಾಖ್ಯಾನವನ್ನು ಬರೆಯುವ ಅವಕಾಶಗಳಿದ್ದವು. ಸರಕಾರ್ಯವಾಹರ ಅಮೆರಿಕಾ ಪ್ರವಾಸಕ್ಕೂ ಶಾಂತಿಯನ್ನು ಬಯಸುವ ಹೇಳಿಕೆಗೂ ನಂಟಸ್ತನ ಕಟ್ಟುವ ಹೇಳಿಕೆ ಬಾಲಿಶತನದ್ದು ಮಾತ್ರವಲ್ಲ, ಮೂರ್ಖತನದ್ದು. ಅದರಲ್ಲೂ ಭಯೋತ್ಪಾದನೆಗೆ ತಿರುಗೇಟು ಕೊಟ್ಟಾಗ ವಿರೋಧಿಸುವ ಮತ್ತು ಸೈನಿಕ ಕಾರ್ಯಾಚರಣೆಗಳಿಗೆ ಸಾಕ್ಷಿ ಕೇಳುವ ಮಾನಸಿಕತೆಗೆ ಪ್ರಾಮಾಣಿಕವಾಗಿ ಶಾಂತಿಯ ಅಪೇಕ್ಷೆ ಇಲ್ಲವೆಂದೇ ಹೇಳಬೇಕು.

ಮೋದಿ ವಿಶ್ವದ ಅತ್ಯಂತ ಜನಪ್ರಿಯ ರಾಜಕಾರಣಿ

▸ ಎರಿಕ್ ಸೋಲ್ಹೈಮ್

ಪರಿಸರದ ಮೇಲೆ ನರೇಂದ್ರ ಮೋದಿಯವರಿಗಿರುವ ಅಚಲ ವಿಶ್ವಾಸದಿಂದ ಪಾಶ್ಚಿಮಾತ್ಯ ದೇಶಗಳು ಕಲಿಯಬೇಕಾದದ್ದು ಸಾಕಷ್ಟಿದೆ. ಮುಂಬರುವ ಸೋಮವಾರ, ಮೇ 18ರಂದು ವಿಶ್ವದ ಅತ್ಯಂತ ಜನಪ್ರಿಯ ರಾಜಕಾರಣಿ ನಾರ್ವೆಗೆ ಭೇಟಿ ನೀಡಲಿದ್ದಾರೆ. ಭಾರತದ ಪ್ರಧಾನಿ ನರೇಂದ್ರ ಮೋದಿಯವರನ್ನು ಅಲ್ಲಿನ ದೊರೆ ಹರಾಲ್ಡ್ ಗೌರವಪೂರ್ವಕವಾಗಿ ಬರಮಾಡಿಕೊಳ್ಳಲಿದ್ದಾರೆ. ಈ ಭೇಟಿಯ ಅವಧಿಯಲ್ಲಿ ಮೋದಿ ಅವರು ಭಾರತೀಯ ಉದ್ಯಮಗಳಿಗೆ ಉತ್ತೇಜನ ನೀಡಲಿದ್ದಾರೆ, ಅಲ್ಲಿನ ಅನಿವಾಸಿ ಭಾರತೀಯರನ್ನು ಭೇಟಿಯಾಗಲಿದ್ದಾರೆ ಹಾಗೂ 'ಭಾರತ-ನಾರ್ಡಿಕ್' ಪ್ರಧಾನ ಮಂತ್ರಿಗಳ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ನಿಜ ಹೇಳಬೇಕೆಂದರೆ, ನಾರ್ಡಿಕ್ ದೇಶಗಳ ಪ್ರಧಾನಮಂತ್ರಿಗಳು ಮೋದಿಯವರ ಮಾತುಗಳನ್ನು ಬಹಳ ಎಚ್ಚರಿಕೆಯಿಂದ ಆಲಿಸಬೇಕಿದೆ; ಏಕೆಂದರೆ ತಮ್ಮ ಭಾರತೀಯ ಸಹೋದ್ಯೋಗಿಯಿಂದ ಅವರು ಕಲಿಯಬೇಕಾದ ಅಂಶಗಳು ಸಾಕಷ್ಟಿವೆ.

ನಾರ್ಡಿಕ್ ದೇಶಗಳ ಪ್ರಧಾನಮಂತ್ರಿಗಳಿಗೆ ಸ್ವದೇಶದಲ್ಲೇ ಇರುವ ಜನಪ್ರಿಯತೆ ಕೇವಲ ಶೇ. 30ರಷ್ಟಿದ್ದರೆ, ಮೋದಿಯವರು ಸಮೀಕ್ಷೆಗಳಲ್ಲಿ ಶೇ. 70ರಷ್ಟು ಬೆಂಬಲದೊಂದಿಗೆ ಮುನ್ನಡೆಯುತ್ತಿದ್ದಾರೆ. ಇಂದು ವಿಶ್ವದ ಯಾವುದೇ ಪ್ರಮುಖ ದೇಶದ ನಾಯಕನಿಗೂ ತನ್ನ ಸ್ವಂತ ನೆಲದಲ್ಲಿ ಮೋದಿಯವರಿಗಿರುವಷ್ಟು ಜನಪ್ರಿಯತೆ ಇಲ್ಲ ಎನ್ನುವುದು ಗಮನಾರ್ಹ.



ಕಳೆದ ಹನ್ನೆರಡು ವರ್ಷಗಳಿಂದ ಅಧಿಕಾರದಲ್ಲಿರುವ ಮೋದಿ, ಮತ್ತೊಮ್ಮೆ ಚುನಾವಣೆಗೆ ನಿಂತರೆ ಗೆಲ್ಲುವುದು ಖಚಿತ ಎಂಬ ಮಾತುಗಳು ಎಲ್ಲೆಡೆ ಕೇಳಿಬರುತ್ತಿವೆ. ಯುರೋಪಿಯನ್ ನಾಯಕರಿಗೆ ಇದು ಕೇವಲ ಕನಸಿನ ಮಾತಷ್ಟೇ. ಭಾರತದ ವೇಗವಾದ ಆರ್ಥಿಕ ಬೆಳವಣಿಗೆ, ಜನರನ್ನು ಸೆಳೆಯುವ ಸಿದ್ಧಾಂತ, ವಿಶ್ವದ ಅತ್ಯಂತ ಬಲಿಷ್ಠ ರಾಜಕೀಯ ಪಕ್ಷ ಮತ್ತು ಅವರ ಸ್ಫೂರ್ತಿದಾಯಕ ಜೀವನಗಾಥೆ – ಇವೆಲ್ಲವೂ ಮೋದಿಯವರ ಈ ಅಭೂತಪೂರ್ವ ಯಶಸ್ಸಿಗೆ ಕಾರಣವಾಗಿವೆ.

ವಿಶ್ವದ ಬಹುತೇಕ ರಾಷ್ಟ್ರಗಳ ಮುಖ್ಯಸ್ಥರು ಶ್ರೀಮಂತ ಅಥವಾ ಮೇಲ್ಮಧ್ಯಮ ವರ್ಗದ ಹಿನ್ನೆಲೆಯಿಂದ ಬಂದವರಾಗಿದ್ದಾರೆ. ಆದರೆ, ಮೋದಿಯವರ ಹಿನ್ನೆಲೆಯೇ ವಿಭಿನ್ನ. ಭಾರತದ ಅದೆಷ್ಟೋ ಜನರಿಗೇ ತಿಳಿಯದ 'ವಡ್ನಾಗರ' ಎಂಬ ಪುಟ್ಟ ಪಟ್ಟಣದ ರೈಲು ನಿಲ್ದಾಣದಲ್ಲಿ ಅವರ ಪೋಷಕರು ಮೂರು ಸಣ್ಣ ಚಹಾ ಅಂಗಡಿಗಳನ್ನು ನಡೆಸುತ್ತಿದ್ದರು. ಅಂತಹ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಮೋದಿ, ಇಂದು ಈ ಮಟ್ಟಕ್ಕೆ ಬೆಳೆದಿದ್ದಾರೆ ಎಂದರೆ ಅದಕ್ಕೆ ಅವರು ಪಟ್ಟ ಶ್ರಮ ಮತ್ತು ಅವರ ಹಿಂದಿರುವ ಹಿಂದೂ ರಾಷ್ಟ್ರೀಯತಾವಾದಿ ಚಳವಳಿಯೇ ಕಾರಣ. ಅವರೊಬ್ಬ ಸ್ವಪ್ರಯತ್ನದಿಂದ ಬೆಳೆದ ನಾಯಕ. ಅವರನ್ನು ನಾರ್ವೆಯ ಮಾಜಿ ಪ್ರಧಾನಿ, ಸಂಘಟನಾ ಚತುರರಾಗಿದ್ದ 'ಐನಾರ್ ಗೆರ್ಹಾರ್ಡ್ಸೆನ್' ಅವರಿಗೆ ಹೋಲಿಸಬಹುದು; ಇಬ್ಬರೂ ಸ್ವಯಂ ಕಲಿಕೆಯಿಂದ ಬೆಳೆದು ದೇಶವನ್ನು ಮುನ್ನಡೆಸಿದವರು.

ವೇಗವಾಗಿ ಬೆಳೆಯುತ್ತಿರುವ ಭಾರತವನ್ನು ಮುನ್ನಡೆಸುವ ಅದೃಷ್ಟ ಮೋದಿಯವರಿಗೆ ದೊರಕಿದೆ, ಹಾಗೆಯೇ ಆ ಬೆಳವಣಿಗೆಯ ಹಿಂದೆ ಅವರದ್ದೇ ಆದ ಬಲವಾದ ಶ್ರಮವೂ ಇದೆ. ಪ್ರಸ್ತುತ ಭಾರತದ ಆರ್ಥಿಕತೆಯು ಶೇಕಡಾ ಏಳರ ದರದಲ್ಲಿ ವೃದ್ಧಿಸುತ್ತಿದ್ದು, ಇದು ಚೀನಾ ಸೇರಿದಂತೆ ವಿಶ್ವದ ಇತರ ಪ್ರಮುಖ ದೇಶಗಳ ಬೆಳವಣಿಗೆಗಿಂತ ಬಹುದೂರ ಮುಂದಿದೆ.

ಸಹಜವಾಗಿ, ಈ ಬೆಳವಣಿಗೆಯಲ್ಲಿ ಕೆಲವು ಸವಾಲುಗಳಿವೆ; ಭಾರತದ ಶ್ರೀಮಂತ ಮತ್ತು ಬಡ ರಾಜ್ಯಗಳ ನಡುವೆ ಇಂದಿಗೂ ದೊಡ್ಡ ಅಂತರವಿದೆ. ಚೀನಾದಲ್ಲಿರುವಂತೆ ಉನ್ನತ ಶಿಕ್ಷಣ ಪಡೆದ ಬೃಹತ್ ಕಾರ್ಯಪಡೆಯ ಕೊರತೆ ಭಾರತದಲ್ಲಿದೆ ಮತ್ತು ಆಡಳಿತಾತ್ಮಕ ವಿಳಂಬಗಳು ಇನ್ನೂ ಪೂರ್ಣವಾಗಿ ನಿಂತಿಲ್ಲ, ಅಲ್ಲದೆ, ಜಾಗತಿಕ ಮಟ್ಟದಲ್ಲಿ ದೊಡ್ಡ ಮಟ್ಟದ ರಫ್ತು ಉದ್ಯಮವನ್ನು ರೂಪಿಸುವಲ್ಲಿ ಭಾರತ ಇಂದಿಗೂ ಹೆಣಗಾಡುತ್ತಿದೆ. ಆದರೂ, ಸದ್ಯದ ಪ್ರಗತಿಯ ವೇಗವನ್ನು ಗಮನಿಸಿದರೆ 2050ರ ವೇಳೆಗೆ ಭಾರತದ ಆರ್ಥಿಕತೆ ನಾಲ್ಕು ಪಟ್ಟು ಹೆಚ್ಚಾಗಲಿದೆ. ಅಂದು ಭಾರತವು ಅಮೆರಿಕದಂತಹ ರಾಷ್ಟ್ರಗಳಿಗೇ ಪೈಪೋಟಿ ನೀಡಿ ವಿಶ್ವದ ಎರಡನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲಿದೆ.

ನಾನು ಭಾರತದ ಬಹುತೇಕ ಎಲ್ಲಾ ರಾಜ್ಯಗಳಿಗೂ ಭೇಟಿ ನೀಡಿದ್ದೇನೆ ಮತ್ತು ಹೋದಲ್ಲೆಲ್ಲಾ ಅಭಿವೃದ್ಧಿಯ ಹೊಸ ಅಲೆ ಎದ್ದಿರುವುದನ್ನು ಕಣ್ಣಾರೆ ಕಂಡಿದ್ದೇನೆ. ಇಂದು ದೇಶದ ಮೂಲೆ ಮೂಲೆಗಳಲ್ಲಿ ಸುಸಜ್ಜಿತ ಮತ್ತು ಆಧುನಿಕ ವಿಮಾನ ನಿಲ್ದಾಣಗಳು ತಲೆ ಎತ್ತಿವೆ; ಹಿಂದೆ ತಲುಪಲು ಅಸಾಧ್ಯವೆನಿಸುತ್ತಿದ್ದ ಹಳ್ಳಿಗಳಿಗೂ ಈಗ ಅತ್ಯುತ್ತಮ ರಸ್ತೆ ಸಂಪರ್ಕ ಕಲ್ಪಿಸಲಾಗಿದೆ. ಇಷ್ಟೇ ಅಲ್ಲದೆ, ಗುಜರಾತಿನಲ್ಲಿ ವಿಶ್ವದ ಅತಿದೊಡ್ಡ ಸೋಲಾರ್ ಪಾರ್ಕ್ ನಿರ್ಮಾಣವಾಗುತ್ತಿದ್ದರೆ, ಆಂಧ್ರಪ್ರದೇಶದಲ್ಲಿ ಸೌರ, ಪವನ ಮತ್ತು ಜಲಶಕ್ತಿಗಳನ್ನು ಒಟ್ಟುಗೂಡಿಸಿ ವಿದ್ಯುತ್ ಉತ್ಪಾದಿಸುವ ಜಗತ್ತಿನಲ್ಲೇ ಅತಿ ದೊಡ್ಡದಾದ ಘಟಕ ಸಿದ್ಧವಾಗುತ್ತಿದೆ.

ಭಾರತದ ಪರಿಸರಸ್ನೇಹಿ ಅಥವಾ 'ಹಸಿರು ಬೆಳವಣಿಗೆ'ಗೆ ಮೋದಿಯವರೇ ದೊಡ್ಡ ಭರವಸೆ. ಸೌರ ಮತ್ತು ಪವನ ಶಕ್ತಿ ಉತ್ಪಾದನೆಯಲ್ಲಿ ಭಾರತ ಇಂದು ವಿಶ್ವದಲ್ಲೇ ಮೂರನೇ ಸ್ಥಾನದಲ್ಲಿದೆ; ಶೀಘ್ರದಲ್ಲೇ ಭಾರತವು ಅಮೆರಿಕವನ್ನೂ ಹಿಂದಿಕ್ಕಿ ಎರಡನೇ ಸ್ಥಾನಕ್ಕೇರಿದರೆ ಅಚ್ಚರಿಯೇನಿಲ್ಲ, ಇದಕ್ಕೆ ಸಾಕ್ಷಿ ಎಂಬಂತೆ, ಕಳೆದ ವರ್ಷ ಭಾರತದಲ್ಲಿ ಕಲ್ಲಿದ್ದಲಿನಿಂದ ಉಂಟಾಗುವ ಮಾಲಿನ್ಯವು ಮೊದಲ ಬಾರಿಗೆ ಇಳಿಮುಖವಾಗಿದೆ.

ಪರಿಸರದ ಬಗ್ಗೆ ಮೋದಿಯವರು ನೀಡುವ ಸ್ಥಿರವಾದ ಸಂದೇಶದಿಂದ ಪಾಶ್ಚಿಮಾತ್ಯ ನಾಯಕರು ಕಲಿಯಬೇಕಾದದ್ದು ಸಾಕಷ್ಟಿದೆ. ಮೋದಿಯವರು ಪ್ರಮುಖ ಭಾಷಣಕಾರರಾಗಿರುವ ಹಲವಾರು ಸಮ್ಮೇಳನಗಳಲ್ಲಿ ನಾನು ಭಾಗವಹಿಸಿದ್ದೇನೆ. ಅಲ್ಲಿ ಅವರು ಜಾಗತಿಕ ಹವಾಮಾನ ಒಪ್ಪಂದಗಳ ಬಗ್ಗೆ ಅಥವಾ ಮಾಲಿನ್ಯದ ತಾಂತ್ರಿಕತೆಗಳ ಬಗ್ಗೆ ಮಾತನಾಡುವುದೇ ಅಪರೂಪ. ಅವರು ಪರಿಸರಕ್ಕಾಗಿ ಯಾರನ್ನೂ ತ್ಯಾಗ ಮಾಡುವಂತೆ ಕೇಳುವುದಿಲ್ಲ, ಬದಲಾಗಿ, 'ಹಸಿರು ಬೆಳವಣಿಗೆ'ಯ ಮೂಲಕವೇ ಭಾರತದ 150 ಕೋಟಿ ಜನರನ್ನು ಬಡತನದಿಂದ ಮುಕ್ತಗೊಳಿಸಬಹುದು ಎಂಬುದು ಅವರ ದೃಢವಾದ ನಂಬಿಕೆ. ಅಂದರೆ, ದೇಶದ ಆರ್ಥಿಕತೆ ಬೆಳೆಯಬೇಕೋ ಅಥವಾ ಪರಿಸರ ಉಳಿಯಬೇಕೋ ಎನ್ನುವ ಗೊಂದಲ ಈಗ ಉಳಿದಿಲ್ಲ; ಎರಡನ್ನೂ ಜೊತೆಯಾಗಿಯೇ ಸಾಧಿಸಬಹುದು ಎಂಬುದನ್ನು ಅವರು ತೋರಿಸಿಕೊಡುತ್ತಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಒಂದು ವೇಳೆ ಜಾತ್ಯತೀತ ಪಕ್ಷಗಳೇ ಅಧಿಕಾರಕ್ಕೆ ಬಂದರೂ ಸಹ, ಭಾರತದ ಸಿದ್ಧಾಂತವು 'ಹಿಂದೂ ರಾಷ್ಟ್ರೀಯತಾವಾದ'ದ ಸುತ್ತಲೇ ಇರಲಿದೆ. ಕೈಗಾರಿಕಾ ಕ್ರಾಂತಿಯ ನಂತರ ಪ್ರತಿಯೊಂದು ಪಾಶ್ಚಿಮಾತ್ಯೇತರ ದೇಶವನ್ನೂ ಒಂದು ಪ್ರಶ್ನೆ ಕಾಡುತ್ತಲೇ ಇತ್ತು: "ನಮ್ಮತನವನ್ನು ಬಿಟ್ಟುಕೊಡದೆ ಆಧುನಿಕ ಜಗತ್ತಿಗೆ ಹೊಂದಿಕೊಳ್ಳುವುದು ಹೇಗೆ?" ಈ ಕಠಿಣ ಪ್ರಶ್ನೆಗೆ ಭಾರತ ಕಂಡುಕೊಂಡ ಉತ್ತರವೇ ಈ ಸಿದ್ಧಾಂತ.

ಇದಕ್ಕೆ ಜಪಾನ್ ಅತ್ಯುತ್ತಮ ಉದಾಹರಣೆ; ಅದು ತಾಂತ್ರಿಕವಾಗಿ ಅತ್ಯಂತ ಆಧುನಿಕವಾಗಿದ್ದರೂ, ತನ್ನ ಸಂಸ್ಕೃತಿಯ ವಿಷಯದಲ್ಲಿ ಇಂದಿಗೂ ಅಪ್ಪಟ ಜಪಾನಿ ಶೈಲಿಯನ್ನೇ ಉಳಿಸಿಕೊಂಡಿದೆ. ದಕ್ಷಿಣ ಕೊರಿಯಾ ಕೂಡ ಇಂದು ಜಪಾನಿಗಿಂತ ಶ್ರೀಮಂತವಾಗಿದ್ದು, ತನ್ನ ಸಂಸ್ಕೃತಿ ಮತ್ತು ಸಂಗೀತವನ್ನು ಜಗತ್ತಿನಾದ್ಯಂತ ಪಸರಿಸುತ್ತಿದೆ. ಅತ್ತ ಚೀನಾ ಕೂಡ ತನ್ನ ಆಧುನಿಕತೆಯನ್ನು ತನ್ನದೇ ಆದ ಪುರಾತನ ತತ್ವಗಳಾದ ಕನ್ಫ್ಯೂಷಿಯನಿಸಂ, ಟಾವೋಯಿಸಂ ಮತ್ತು ಬೌದ್ಧಧರ್ಮದ ಬೇರುಗಳಲ್ಲಿ ಕಂಡುಕೊಂಡಿದೆ. ಅದರಂತೆ ಭಾರತವೂ ಕೂಡ ತನ್ನದೇ ಆದ ಸಂಸ್ಕೃತಿಯ ಅಡಿಯಲ್ಲಿ ಆಧುನಿಕವಾಗಿ ಬೆಳೆಯಲು ಹವಣಿಸುತ್ತಿದೆ.

ಬಿಜೆಪಿ ಇಂದು 10 ಕೋಟಿಗೂ ಅಧಿಕ ಸದಸ್ಯರನ್ನು ಹೊಂದಿರುವ ವಿಶ್ವದ ಅತಿದೊಡ್ಡ ರಾಜಕೀಯ ಪಕ್ಷವಾಗಿದೆ. ಉತ್ತರ ಮತ್ತು ಮಧ್ಯ ಭಾರತದ ಪ್ರತಿಯೊಂದು ಕ್ಷೇತ್ರದಲ್ಲೂ ಪಕ್ಷಕ್ಕಾಗಿ ಹಗಲಿರುಳು ಶ್ರಮಿಸುವ ಕಾರ್ಯಕರ್ತರ ದೊಡ್ಡ ಪಡೆಯೇ ಅಲ್ಲಿದೆ. ಭಾರತದ ರಾಜಕಾರಣದಲ್ಲಿ ಬಿಜೆಪಿ ಒಂದು ಅಪರೂಪದ ಸಾಧನೆ ಮಾಡಿದೆ: ಮೇಲ್ಜಾತಿ, ಕೆಳಜಾತಿ ಹಾಗೂ ದಲಿತ ಸಮುದಾಯಗಳು ಸೇರಿದಂತೆ ಸಮಾಜದ ಎಲ್ಲಾ ಸ್ತರದವರಿಂದಲೂ ಈ ಪಕ್ಷಕ್ಕೆ ಸಮಾನ ಬೆಂಬಲ ಸಿಗುತ್ತಿದೆ. ಅತ್ತ ಬೃಹತ್ ಉದ್ಯಮಿಗಳಿಂದ ಹಿಡಿದು ಇತ್ತ ದೇಶದ ಕುಗ್ರಾಮಗಳಲ್ಲಿರುವ ಬುಡಕಟ್ಟು ಜನಾಂಗದವರೆಗೂ ಎಲ್ಲರೂ ಪಕ್ಷದ ಪರವಾಗಿ ನಿಂತಿದ್ದಾರೆ.

ಪಾಶ್ಚಿಮಾತ್ಯ ವಿಶ್ಲೇಷಕರಿಗೆ ಬಿಜೆಪಿಯಲ್ಲಿ ತಪ್ಪುಗಳನ್ನು ಹುಡುಕುವುದೇ ಒಂದು ಹವ್ಯಾಸವಾಗಿಬಿಟ್ಟಿದೆ. ಬಿಜೆಪಿ ಹಿಂದೂಗಳನ್ನು ಒಂದುಗೂಡಿಸಲು ಪ್ರಯತ್ನಿಸುತ್ತಿದೆ ಎಂಬ ಟೀಕಾಕಾರರ ಮಾತು ನಿಜವಿರಬಹುದು; ಆದರೆ, ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಹಿಂದೂ-ಮುಸ್ಲಿಂ ಸಂಘರ್ಷಗಳು ಹೆಚ್ಚಾಗಿವೆ ಎನ್ನುವುದಕ್ಕೆ ಯಾವುದೇ ಬಲವಾದ ಪುರಾವೆಗಳಿಲ್ಲ, ವಾಸ್ತವವಾಗಿ, ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಹೆಚ್ಚಿನ ಹಿಂಸಾಚಾರ ಮತ್ತು ಗಲಭೆಗಳು ನಡೆದಿದ್ದವು. ಇಂದಿಗೂ ನೆರೆಯ ದೇಶಗಳಿಂದ ಲಕ್ಷಾಂತರ ಮುಸ್ಲಿಮರು ಆಶ್ರಯ ಅರಸಿ ಭಾರತಕ್ಕೆ ಬರುತ್ತಿದ್ದಾರೆಯೇ ಹೊರತು, ಇಲ್ಲಿಂದ ಯಾರೂ ಹೊರಗೆ ಓಡಿಹೋಗುತ್ತಿಲ್ಲ.

ಆದರೆ, ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳು ಹೊರಗಿನಿಂದ ಬಂದವು ಎಂಬ ಬಿಜೆಪಿಯ ನಿಲುವು ಹಾಗೂ ಮಧ್ಯಕಾಲೀನ ಮುಸ್ಲಿಂ ಆಕ್ರಮಣಗಳನ್ನು ಬ್ರಿಟಿಷ್ ವಸಾಹತುಶಾಹಿಗೆ ಹೋಲಿಸುವುದು ಅನೇಕ ಮುಸ್ಲಿಮರಲ್ಲಿ ಅಭದ್ರತೆಯ ಭಾವನೆಯನ್ನು ಮೂಡಿಸುತ್ತಿದೆ. ಅದೇ ಸಮಯದಲ್ಲಿ, ಬಿಜೆಪಿಯ ಕೆಲವು ಪ್ರಸ್ತಾವನೆಗಳು ಸಾಮಾನ್ಯ ಜ್ಞಾನಕ್ಕೆ ಹತ್ತಿರವಾಗಿವೆ. ಉದಾಹರಣೆಗೆ, ಮುಸ್ಲಿಂ ಪುರುಷರಿಗೆ ಇತರರಿಗಿಂತ ಸುಲಭವಾಗಿ ವಿಚ್ಛೇದನ ನೀಡಲು ಅವಕಾಶವಿರುವ ಪ್ರತ್ಯೇಕ ವಿವಾಹ ಕಾನೂನು ಇರಬಾರದು ಎಂಬುದು ಸಮಂಜಸವಾಗಿ ಕಾಣುತ್ತದೆ. ಆದರೆ, ಹಿಂದೂ ಧರ್ಮದ ತಳಹದಿಯ ಮೇಲೆ ಹೊಸದಾದ ಮತ್ತು ಬಲಿಷ್ಠ ಭಾರತವನ್ನು ನಿರ್ಮಿಸುವ ಈ ಪ್ರಯತ್ನದಲ್ಲಿ ಬಿಜೆಪಿಗೆ ಎದುರಾಗುವ ನಿಜವಾದ ಸವಾಲು ಒಂದೇ: ಭಾರತದಲ್ಲಿರುವ ವಿಶ್ವದ ಅತಿದೊಡ್ಡ ಅಲ್ಪಸಂಖ್ಯಾತ ಸಮುದಾಯವಾದ 20 ಕೋಟಿ ಮುಸ್ಲಿಮರನ್ನು ಈ ಬೆಳವಣಿಗೆಯಲ್ಲಿ ಹೇಗೆ ಜೊತೆಗೂಡಿಸಿಕೊಳ್ಳುತ್ತಾರೆ ಎಂಬುದು.

ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿದ್ದ ವಿಶ್ವದ ದೊಡ್ಡ ಮತ್ತು ಅಂದಿನ ಬಡ ರಾಷ್ಟ್ರಗಳ ಪೈಕಿ, ಸ್ವಾತಂತ್ರ್ಯದ ನಂತರ ಪ್ರಜಾಪ್ರಭುತ್ವದ ಹಾದಿಯನ್ನು ಆರಿಸಿಕೊಂಡ ಏಕೈಕ ದೇಶ ಭಾರತ. ಇದಕ್ಕೆ ಬ್ರಿಟಿಷರು ಹಾಕಿಕೊಟ್ಟ ತಳಹದಿ ಕಾರಣ ಎಂದು ಅವರು ಆಗಾಗ ಹೇಳಿಕೊಳ್ಳುತ್ತಿರುತ್ತಾರೆ, ಆದರೆ ಅದು ನಿಜವಲ್ಲ, ಒಂದು ವೇಳೆ ಅದೇ ನಿಜವಾಗಿದ್ದರೆ, ಬ್ರಿಟಿಷರ ಅಧೀನದಲ್ಲಿದ್ದ ಪಾಕಿಸ್ತಾನ, ಮ್ಯಾನ್ಮಾರ್ ಅಥವಾ ಗಲ್ಫ್ ದೇಶಗಳು ಇಂದು ಪ್ರಜಾಪ್ರಭುತ್ವ ರಾಷ್ಟ್ರಗಳಾಗಿರಬೇಕಿತ್ತಲ್ಲವೇ? ಭಾರತ ಇಂದು ಪ್ರಜಾಪ್ರಭುತ್ವವಾಗಿ ಉಳಿದಿದೆ ಎಂದರೆ, ಅದಕ್ಕೆ ಇಲ್ಲಿನ ಆಳವಾದ ಸಂಸ್ಕೃತಿ ಮತ್ತು ಜನರಲ್ಲಿ ಬೇರೂರಿರುವ ಪರಂಪರೆಯೇ ಮುಖ್ಯ ಕಾರಣ.

ಜಾಗತಿಕ ನಿಯಮಗಳನ್ನು ಗೌರವಿಸುವ ಹೊಸ ಮಿತ್ರರ ಅಗತ್ಯ ಇಂದು ನಾರ್ವೆಗೆ ಇದೆ; ಹಾಗೆಯೇ ಅಲ್ಲಿನ ಉದ್ಯಮಗಳಿಗೂ ಹೊಸ ಮಾರುಕಟ್ಟೆಯ ಅವಶ್ಯಕತೆಯಿದೆ. ಇಂತಹ ಸಂದರ್ಭದಲ್ಲಿ ಭಾರತದೊಂದಿಗೆ ನಿಕಟ ಸಂಬಂಧ ಬೆಳೆಸುವುದರಿಂದ ನಾರ್ವೆಗೆ ಅಪಾರ ಲಾಭವಿದೆ. ಆದರೆ ಇದು ಸಾಧ್ಯವಾಗಬೇಕೆಂದರೆ, ನಾವು ಭಾರತಕ್ಕೆ ಕೇವಲ ಉಪದೇಶ ಮಾಡುವುದನ್ನು ಬಿಟ್ಟು, ಅವರ ಮಾತುಗಳನ್ನು ಆಲಿಸುವ ಮನಸ್ಥಿತಿ ಬೆಳೆಸಿಕೊಳ್ಳಬೇಕು. ನಾವು ಪರಸ್ಪರ ಗೌರವದಿಂದ ವ್ಯವಹರಿಸಲು ಮುಂದಾದರೆ, ಇಬ್ಬರಿಗೂ ಸಮಾನ ಲಾಭ ತಂದುಕೊಡುವ ಅಸಂಖ್ಯಾತ ಅವಕಾಶಗಳು ತೆರೆದುಕೊಳ್ಳುತ್ತವೆ.

ವಿನಾ ಬೀಜಂ ಕಥಂ ವೃಕ್ಷಃ

ಜ್ಞಾನಂ ವಿನಾ ಕುತೋ ಮುಕ್ತಿಃ ವಿನಾ ಸ್ನಾನ ಶಯೋ ಕುತಃ।
ವಿನಾ ಬೀಜಂ ಕಥಾ ವೃಕ್ಷೋ ವಿನಾ ವಿತ್ತಂ ಕಥಂ ಸುಖಮ್ ॥ -ಸುಭಾಷಿತಶತಕಮ್

ಜ್ಞಾನವಿಲ್ಲದೆ ಮುಕ್ತಿ ಉಂಟಾಗುವುದು ಹೇಗೆ? ಸ್ನಾನವಿಲ್ಲದೆ ಶುಚಿಯಾಗುವುದು ಹೇಗೆ? ಬೀಜವಿಲ್ಲದೆ ಮರ ಹುಟ್ಟುವುದು ಸಾಧ್ಯವೇ? ಹಣವಿಲ್ಲದೆ ಸುಖ ಎಲ್ಲಿದೆ - ಎಂಬುದು ಶ್ಲೋಕಾರ್ಥ.

'ಅರ್ಥ ಸರ್ವ ಜಗನ್ಮೂಲಮ್' ಎಂಬ ಲೋಕೋಕ್ತಿಯಿದೆ. ಲೋಕದ ಸಕಲ ವ್ಯಾಪಾರಕ್ಕೂ ವ್ಯವಹಾರಕ್ಕೂ ಹಣವೇ ಮೂಲ ಎಂಬುದು ಇದರ ಅರ್ಥ. ಆದ್ದರಿಂದ ಎಲ್ಲರೂ ಅರ್ಥವಂತರಾಗಬೇಕು. ಶ್ರಮವರಿಯದೇ ದುಡಿದು ಸಂಪತ್ತನ್ನು ಗಳಿಸಬೇಕು. ತನ್ಮೂಲಕ ಜೀವನವನ್ನು ನಿರ್ವಹಣೆ ಮಾಡಬೇಕು ಎಂಬುದು ತಾತ್ಪರ್ಯ.



ಧರ್ಮ, ಕಾಮಗಳಿಗೂ ಅರ್ಥವೇ ಬೇಕು. ಅರ್ಥವಿಲ್ಲದವನು ಇವೆರಡನ್ನೂ ಪೂರೈಸಿಕೊಳ್ಳಲಾರ.

ಲೋಕದಲ್ಲಿ ಹಣವಿರುವವರಿಗೆ ವಿಶಿಷ್ಟವಾದ ಸ್ಥಾನಮಾನಾದಿಗಳು ಲಭ್ಯವಾಗುತ್ತವೆ. ಲೋಕವೂ ಇಂಥವರನ್ನೇ ಆಧರಿಸುತ್ತದೆ. ಸಂಪತ್ತು ನಮ್ಮಲ್ಲಿಲ್ಲದ ಗುಣಗಳನ್ನು ತಂದುಕೊಡುತ್ತದೆ. 'ಅರ್ಥವಾನ್ ದುಷ್ಕುಲೀನೋಽಪಿ ಲೋಕೇ ಪೂಜ್ಯತಮೋ ನರಃ' ಅಂದರೆ ಹಣವಿರುವಾತನು ಕುಲಹೀನನಾದರೂ ಲೋಕದಲ್ಲಿ ಪರಮಪೂಜ್ಯ ಎಂಬುದು ಇದರ ಅರ್ಥ. ಇದರಿಂದಲೇ ಸಂಪತ್ತಿನ ಮಹಿಮೆ ಮನದಟ್ಟಾಗುತ್ತದೆ. ಆದ್ದರಿಂದಲೇ ಚಾಣಕ್ಯ 'ಅರ್ಥಾರ್ಥಂ ಪ್ರವರ್ತತೇ ಲೋಕಃ' ಎಂದಿದ್ದಾನೆ. 'ಅರ್ಥಾಃ ಬಹಿಷ್ಚರಪ್ರಾಣಾಃ ಅರ್ಥವಾನೇವ ಭೂಪತಿಃ' ಎಂಬ ಸೂಕ್ತಿ ಪ್ರಸಿದ್ಧವೆನಿಸಿದೆ. ಪ್ರಚಲಿತದಲ್ಲಿದೆ ಕೂಡ. ಐಶ್ವರ್ಯಗಳು ಮನುಷ್ಯನ ಹೊರಗಿನ ಪ್ರಾಣಗಳು. ಹಣವುಳ್ಳವನೇ ಭೂಪತಿ. ಇದನ್ನು ಹೊರ ಪ್ರಪಂಚದಲ್ಲಿ ನಿತ್ಯವೂ ಕಾಣುತ್ತೇವೆ.

ಜೀವನದಲ್ಲಿ ಸುಖ ಪಡಬೇಕೆಂದಾದರೆ ಸಂಪತ್ತಿರಬೇಕು. ಸಂಪತ್ತನ್ನು ಗಳಿಸಬೇಕು. ಲೋಕದಲ್ಲಿ ಸಂಪತ್ತಿರುವವರಿಗೆ ಮಿತಿಮೀರಿ ಗೌರವವನ್ನು ಕೊಡುತ್ತಾರೆ. ಆದ್ದರಿಂದ ಏನಕೇನ ಪ್ರಕಾರೇಣ ಸಂಪತ್ತನ್ನು ಗಳಿಸಬೇಕು. ಸುಖದ ಮೂಲ ಸಂಪತ್ತು. ಸಂಪತ್ತಿಲ್ಲದೆ ಸುಖವಿಲ್ಲ ಎನ್ನುತ್ತಾ ಪ್ರಕೃತ ಶ್ಲೋಕ ಸೋದಾಹರಣವಾಗಿ ಹಣದ ಹಿರಿಮೆಯನ್ನು ಮುಕ್ತವಾಗಿ ಸಾರಿದೆ.

ಮುಕ್ತಿ ಬದುಕಿನ ಪರಮಗುರಿ. ಮುಕ್ತಿ ಎಂಬುದು ಸುಲಭವಾಗಿ ಪ್ರಾಪ್ತವಾಗುವುದಿಲ್ಲ, ಮುಕ್ತಿ ಪಡೆಯಲು ಜ್ಞಾನ ಬೇಕು. ಮುಕ್ತಿ ಪ್ರಾಪ್ತಿಗೆ ಇರುವ ಏಕೈಕ ಮಾರ್ಗವೆಂದರೆ ಜ್ಞಾನ ಮಾತ್ರ. ಶರೀರ ಶುದ್ಧವಾಗುವುದಕ್ಕೆ ಸ್ನಾನ ಮಾಡಬೇಕು. "ಸ್ನಾನೇನ ಶುದ್ಧಿಃ ನ ತು ಚಂದನೇನ' ಸ್ನಾನದಿಂದಲೇ ಶರೀರ ಶುದ್ಧಿಯೇ ವಿನಾ ಚಂದನ ಮೊದಲಾದ ಲೇಪನ ದ್ರವ್ಯದಿಂದ ಶರೀರವೆಂದೂ ಶುದ್ಧವಾಗಲಾರದು. ಇನ್ನು ಅನಿವಾರ್ಯ ಪ್ರಸಂಗಗಳಲ್ಲಿ ಮೃತ್‌ಶುದ್ಧಿ, ಸಂಪ್ರೋಕ್ಷಣಶುದ್ಧಿ, ಮಂತ್ರಶುದ್ಧಿ ಇವುಗಳು ಶರೀರವನ್ನು ಶುದ್ಧಿಗೊಳಿಸುತ್ತದೆ ಎನ್ನುತ್ತಾರೆ. ಏನಿದ್ದರೂ ಸ್ನಾನ ಬೇಕು.

'ಬೀಜವಿಲ್ಲದೆ ವೃಕ್ಷವಿಲ್ಲ' ಎನ್ನುತ್ತಾರೆ. ವೃಕ್ಷದ ಮೂಲ ಬೀಜವೇ. ಉತ್ತಮ ಜಾತಿಯ ಗಿಡಗಳಿಗೆ ಕಸಿ ಮಾಡುವ ಪರಂಪರೆ ಇದೆ. ಆದರೆ ಅದು ಬೀಜದ ಪ್ರತಿರೂಪವೇ. ಒಟ್ಟಿನಲ್ಲಿ ಉತ್ತಮ ಬೀಜ ಉತ್ತಮ ವೃಕ್ಷಕ್ಕೆ ಕಾರಣ ಎಂಬುದು ತ್ರಿಕಾಲಾಬಾಧಿತ ಸತ್ಯ.

'ಮುಸ್ಲಿಂ ಓಟ್‌ಬ್ಯಾಂಕ್' ಎಂಬ ಬಲೂನು ಒಡೆದ ಕತೆ!

▸ ದಿವಾಕರ ಹನಕೋಡು

ಮೇ 4ರ ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶ ರಾಜಕೀಯ ರಂಗದಲ್ಲಿ ಮನೆ ಮಾಡಿದ್ದ ಹಲವು ಭ್ರಮೆಗಳನ್ನು ಕಳಚಿದೆ. ಇದುವರೆಗೆ ಮುಸ್ಲಿಂ ವೋಟ್ ಬ್ಯಾಂಕಿನ ಬಗ್ಗೆ ಪ್ರತಿ ಚುನಾವಣೆಯಲ್ಲೂ ವಿಶೇಷ ಚರ್ಚೆಯಾಗುತ್ತಿದ್ದವು. ಮುಸ್ಲಿಮರ ಬೆಂಬಲ ಇದ್ದರೆ ಸಾಕು ಚುನಾವಣೆಯಲ್ಲಿ ಗೆಲುವು ನಿಶ್ಚಿತ ಎಂದು ನಮ್ಮ ಮಾಧ್ಯಮಗಳು ಸಾರುತ್ತಿದ್ದವು.

ಹಿಂದೊಮ್ಮೆ ಭಾರತದ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿಯವರು "ಮುಸ್ಲಿಮರು ಬೆಂಬಲ ಕೊಡದಿದ್ದರೂ ಬಿ.ಜೆ.ಪಿ. ಗೆಲ್ಲುತ್ತದೆ" ಎಂದು ಹೇಳಿದ್ದನ್ನು ನೆನಪಿಸಿಕೊಳ್ಳಿ, ಆಗ ಮಾಧ್ಯಮಗಳು ಈ ವಿಷಯದ ಬಗ್ಗೆ ದೊಡ್ಡ ಗುಲ್ಲೆಬ್ಬಿಸಿದ್ದವು. ಇಂದು ಅನೇಕ ಪತ್ರಕರ್ತರು, ರಾಜಕೀಯ ವಿಶ್ಲೇಷಕರೆನಿಸಿಕೊಂಡವರು ಮುಸ್ಲಿಂ ವೋಟ್ ಬ್ಯಾಂಕ್ ಬಗ್ಗೆ ಮಾತಾಡುವುದನ್ನೂ, ಅದರ ಬಗ್ಗೆ ಅತಿ ವರ್ಣರಂಜಿತವಾಗಿ ಹೇಳುವುದನ್ನೂ ಒಂದು ಚಾಳಿಯಾಗಿಸಿಕೊಂಡಿದ್ದಾರೆ.

ಕೆಲವರಂತೂ ಇಲ್ಲಿಯೇ ಕುಳಿತು ಉತ್ತರಪ್ರದೇಶದ ರಾಜಕೀಯದ ವಿಮರ್ಶೆ ಮಾಡಿಬಿಡುತ್ತಾರೆ! ದೊಡ್ಡ ಲೇಖನಗಳನ್ನು ಬರೆದುಬಿಡುತ್ತಾರೆ. ಉತ್ತರಪ್ರದೇಶದಲ್ಲಿ ಮುಸ್ಲಿಮರ ಪಾತ್ರವೇ ನಿರ್ಣಾಯಕ. ಅವರು 19% ಇದ್ದಾರೆ. ನೂರು ಕ್ಷೇತ್ರಗಳಲ್ಲಿ ಅವರೇ ನಿರ್ಣಾಯಕ. ಇನ್ನು ನೂರು ಕ್ಷೇತ್ರಗಳಲ್ಲಿ ಅವರು ಯಾವ ಪಕ್ಷದತ್ತ ವಾಲುವರೋ ಅವರೇ ಗೆಲ್ಲುವುದು ಎಂದೆಲ್ಲಾ ಬರೆದುಬಿಡುತ್ತಾರೆ!.



ಇದನ್ನು ಓದಿದಾಗ ನಮಗನ್ನಿಸುವುದು... 19% ಇದ್ದವರದ್ದೇ ಮುಖ್ಯಪಾತ್ರ ಎಂದಾದರೆ ಇನ್ನುಳಿದಿರುವ 81% ಇದ್ದವರ ಕಥೆ ಏನು?! ಚುನಾವಣೆಗಳಲ್ಲಿ ಅವರ ನಿಲುವುಗಳು ಅದು ಹೇಗೆ ಫಲಿತಾಂಶದ ಮೇಲೆ ಪರಿಣಾಮ ಬೀರುವುದಿಲ್ಲ?! ಎಂದು ತಲೆ ಕೆಡಿಸಿಕೊಳ್ಳುವಂತಾಗುತ್ತೆ.

ಮೊನ್ನೆ ಪಶ್ಚಿಮಬಂಗಾಳದ ಫಲಿತಾಂಶ ಬರುವುದಕ್ಕೆ ಮುನ್ನ ನಮ್ಮ ರಾಜಕೀಯ ಪಂಡಿತರುಗಳು ಏನೇನು ಹೇಳಿದರು ನೋಡಿ: ಒಬ್ಬ ಪತ್ರಕರ್ತರು ಪಶ್ಚಿಮಬಂಗಾಳದ 65 ಕ್ಷೇತ್ರಗಳಲ್ಲಿ ಮುಸ್ಲಿಮರು 40% ಗಿಂತಾ ಹೆಚ್ಚಿದ್ದಾರೆ. ಹಾಗಾಗಿ ಈ 65 ಕ್ಷೇತ್ರಗಳಲ್ಲಿ ತೃಣಮೂಲ ಕಾಂಗ್ರೆಸ್ ಸಲೀಸಾಗಿ ಗೆಲ್ಲುತ್ತದೆ. ಅದರಿಂದ ಮತ್ತೊಮ್ಮೆ ವಿಧಾನಸಭೆಯ ಚುನಾವಣೆಯಲ್ಲಿ ಟಿಎಂಸಿ ಗೆಲುವು ಸುಲಭವಾಗುತ್ತದೆ ಎಂದು ವಿಶ್ಲೇಷಿಸಿದ್ದರು.

ಅವರೆನ್ನುವಂತೆ 65 ಕ್ಷೇತ್ರಗಳಲ್ಲಿ ಮುಸ್ಲಿಮರ ಬೆಂಬಲದಿಂದ ಟಿಎಂಸಿ ಗೆಲ್ಲುತ್ತದೆ ಎಂಬುದನ್ನು ಒಪ್ಪಿಕೊಂಡರೂ ರಾಜ್ಯದಲ್ಲಿ ಉಳಿದ 229 ವಿಧಾನಸಭಾ ಕ್ಷೇತ್ರಗಳ ಫಲಿತಾಂಶದ ಕಥೆಯೇನು?! ಆ 229 ಕ್ಷೇತ್ರಗಳ ಮತದಾರರ ಒಲವು, ನಿಲುವುಗಳು, ಭಾವನೆಗಳು ಇವುಗಳ್ಯಾವುದೂ ಲೆಕ್ಕಕ್ಕಿಲ್ಲವೇನು?!

ಈ ಬಾರಿ ಕೇರಳದಲ್ಲಿ ಕಾಂಗ್ರೆಸ್ ಗೆದ್ದ ತಕ್ಷಣ ಟಿ.ವಿ. ವಾಹಿನಿಯ ನಿರೂಪಕ ಇಬ್ಬರು ಏರುಧ್ವನಿಯಲ್ಲಿ ಕೂಗಿ ಹೇಳುತ್ತಿದ್ದರು, "ಕೇರಳದಲ್ಲಿ ಮುಸ್ಲಿಮರ ಬೆಂಬಲ ಸಿಕ್ಕಿದ್ದರಿಂದ ಕಾಂಗ್ರೆಸ್‌ಗೆ ಗೆಲುವು" ಎಂದು. ಮರುದಿನ ಪತ್ರಿಕೆಯೊಂದರ ಖ್ಯಾತ ಅಂಕಣಕಾರರ ಲೇಖನದ ಶೀರ್ಷಿಕೆಯೂ ಸಹ ಮುಸ್ಲಿಮರು ಬೆಂಬಲಿಸಿದ್ದರಿಂದ ಕೇರಳದಲ್ಲಿ ಕಾಂಗ್ರೆಸ್‌ಗೆ ಜಯ ಎಂದು ಬಂದಿತ್ತು!! ಇಲ್ಲಿ ತುಂಬಾ ಆಸಕ್ತಿಯ ವಿಷಯವೆಂದರೆ ಮುಸ್ಲಿಂ ಲೀಗ್ ಕೇರಳದಲ್ಲಿ ಕಾಂಗ್ರೆಸ್‌ನ ಮಿತ್ರಪಕ್ಷ. ಕಳೆದ ಚುನಾವಣೆಗಳಲ್ಲಿಯೂ ಈ ಮುಸ್ಲಿಂ ಲೀಗ್ ಕಾಂಗ್ರೆಸ್‌ನ ಮಿತ್ರ ಪಕ್ಷವಾಗಿತ್ತು! ಆದರೂ ಕಳೆದೆರಡು ಚುನಾವಣೆಗಳಲ್ಲಿಯೂ ಕಾಂಗ್ರೆಸ್‌ಗೆ ಸೋಲಾಗಿದೆ!! ಮುಸ್ಲಿಂ ಬೆಂಬಲ ಪಡೆದ ಮೇಲೂ ಕಾಂಗ್ರೆಸ್‌ಗೆ ಏಕೆ ಸೋಲಾಯಿತು ಎಂಬ ಬಗ್ಗೆ ಯಾರೂ ಚರ್ಚೆ ಮಾಡಲಿಲ್ಲ!! ಈಗ ಗೆದ್ದ ತಕ್ಷಣ ಮುಸ್ಲಿಮರ ಕಾರಣದಿಂದ ಗೆಲುವು ಎಂಬ ಪಾಂಡಿತ್ಯದ ಪ್ರದರ್ಶನ!! 24% ಇರುವ ಮುಸ್ಲಿಮರ ಜೊತೆಗೆ ಉಳಿದ 76% ಇರುವವರ ಕತೆಯೇನು?! ಅವರ ರಾಜಕೀಯ ಒಲವು, ನಿಲುವುಗಳ ವಿವರವೇನು? ಅವರುಗಳು ಯಾಕೆ ಮುಖ್ಯವಾಗುವುದಿಲ್ಲ?!.

2017ರ ಉತ್ತರ ಪ್ರದೇಶದ ಚುನಾವಣೆಗಳ ಫಲಿತಾಂಶ ಬರುವುದಕ್ಕೆ ಮುಂಚೆ ಟಿ.ವಿ.ಗಳಲ್ಲಿ ರಾಜಕೀಯ ಪಂಡಿತರ ಚರ್ಚೆ ನಡೆಯುತ್ತಿದ್ದ ವೇಳೆ ಒಬ್ಬ ರಾಜಕೀಯ ವಿಶ್ಲೇಷಕರು ಮಾಯಾವತಿಯವರನ್ನು 'ಸ್ಮಾರ್ಟ್ ಪೊಲಿಟಿಷಿಯನ್' ಎಂದು ಹೊಗಳಿದರು. ಅವರ ಪ್ರಕಾರ ನಾನೂರಕ್ಕೂ ಹೆಚ್ಚು ಕ್ಷೇತ್ರಗಳಿರುವ ಉತ್ತರಪ್ರದೇಶದಲ್ಲಿ 95 ಮುಸ್ಲಿಂ ಅಭ್ಯರ್ಥಿಗಳಿಗೆ ಟಿಕೆಟ್ ಕೊಟ್ಟಿದ್ದರಿಂದ ಮಾಯಾವತಿ 'ಸ್ಮಾರ್ಟ್ ಪೊಲಿಟಿಷಿಯನ್' ಅಂತೆ. ಆ ಚುನಾವಣೆಯಲ್ಲಿ ಬಿಎಸ್‌ಪಿ ಉತ್ತಮ ಸಾಧನೆ ಮಾಡಿದ್ದರೆ ಮಾಯಾವತಿಯನ್ನು ಚಾಣಕ್ಯನ ಪ್ರತಿರೂಪವೆಂಬಂತೆ ಇವರು ವರ್ಣಿಸಿಬಿಡುತ್ತಿದ್ದರು!!

ಒಂದು ರೀತಿಯ ಸ್ಥಾಪಿತ ಸಿದ್ಧಾಂತ ಇಂತಹ ಪತ್ರಕರ್ತರಲ್ಲಿರುತ್ತದೆ. ಫಲಿತಾಂಶಕ್ಕೂ ಮೊದಲು ಮುಸ್ಲಿಮರ ಬೆಂಬಲ ಇಲ್ಲದ್ದರಿಂದ ಬಿಜೆಪಿ ಗೆಲ್ಲುವುದಿಲ್ಲ ಎನ್ನುವುದು. ಬಿ.ಜೆ.ಪಿ.ಗೆ ಗೆಲುವು ಸಿಕ್ಕಿದರೆ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಗೆಲುವು ಸಿಗಬೇಕಾದರೆ ಮುಸ್ಲಿಮರಲ್ಲೂ ಒಂದು ಭಾಗ ಬಿಜೆಪಿಗೆ ಮತ ಹಾಕಿದ್ದಾರೆ. ಆದ್ದರಿಂದಲೇ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬಿಜೆಪಿಗೆ ಜಯ ಸಿಕ್ಕಿದೆ ಎಂದು ಪ್ರತಿಪಾದಿಸುವುದು!!

ಚುನಾವಣೆಗೆ ಮುಂಚೆ ಯಾವುದಾದರೂ ರಾಜಕೀಯ ಪಕ್ಷಗಳು ಮುಸ್ಲಿಮರ ಪರವಾದ ನಿರ್ಣಯಗಳನ್ನು ಮಾಡಿದರೆ ಸಾಕು. ಈ ಪತ್ರಕರ್ತರು "ತುಂಬಾ ಚಾಣಾಕ್ಷ ನಡೆ", "ವಿರೋಧಿಗಳಿಗೆ ಚೆಕ್‌ಮೇಟ್" ಎಂಬ ಪದಪುಂಜಗಳಿಂದ ಈ ಮುಸ್ಲಿಂ ಓಲೈಕೆ ರಾಜಕಾರಣವನ್ನು ಹೊಗಳತೊಡಗುತ್ತಾರೆ.

ಇಂತಹ ಕ್ರಮಗಳಿಂದ ಹಿಂದೂ ಮತದಾರರ ಮೇಲೆ ಬೀರುವ ಪರಿಣಾಮಗಳೇನು ಎಂಬ ಬಗ್ಗೆ ಇವರು ವಿಮರ್ಶೆ ಮಾಡಲು ಹೋಗುವುದಿಲ್ಲ! ಅತಿಯಾಗಿ ಮುಸ್ಲಿಂ ವೋಟ್ ಬ್ಯಾಂಕ್ ಹಿಂದೆ ಬಿದ್ದಿರುವುದರಿಂದಲೇ ಇಂದು ಕಾಂಗ್ರೆಸ್‌ಗೆ ಕೆಟ್ಟ ಸ್ಥಿತಿ ಬಂದಿರುವುದು.

"ಮಮತಾ ಬ್ಯಾನರ್ಜಿಯವರ ಮತಗಳ ಎಣಿಕೆ ಆರಂಭವಾಗುವುದೇ 30%ನ ಮೇಲಿನಿಂದ" ಎಂಬ ಮಾತುಗಳನ್ನು ನಂಬಿ ಅತಿಯಾದ ಮುಸ್ಲಿಂ ಓಲೈಕೆಯಲ್ಲಿ ಮುಳುಗಿ ಹಿಂದುಗಳನ್ನು ದಮನ ಮಾಡಿದ ಕಾರಣ ಇಂದು ಮಮತಾ ಬ್ಯಾನರ್ಜಿಯವರಿಗೆ ಸೋಲಾಗಿದೆ. ಅಕ್ರಮವಾಗಿ ನುಸುಳಿ ಬರುವ ಬಾಂಗ್ಲಾದೇಶೀಯರಿಗೆ, ರೋಹಿಂಗ್ಯಾಗಳಿಗೆ ಸಹಾಯ ಮಾಡದೆ, ಎಲ್ಲಾ ಪ್ರಜೆಗಳನ್ನು ಸಮಾನವಾಗಿ ನೋಡುತ್ತಾ ಅಭಿವೃದ್ಧಿ ಪರವಾದ ಆಡಳಿತ ನೀಡಿದ್ದರೆ ಮಮತಾ ಬ್ಯಾನರ್ಜಿಯವರನ್ನು ಇನ್ನು ಹಲವು ವರ್ಷಗಳ ಕಾಲ ಸೋಲಿಸಲು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ.

ರಾಜಕೀಯ ಎಂದ ಮೇಲೆ ಸ್ವಾರ್ಥ ಸಾಧನೆ ಇದ್ದೇ ಇರುತ್ತದೆ ಎಂಬುದು ಹಲವರ ಅಭಿಪ್ರಾಯ. ಈ ಪ್ರಾದೇಶಿಕ ಪಕ್ಷಗಳ ನಾಯಕರ ಸ್ವಾರ್ಥ ದೃಷ್ಟಿಯಲ್ಲೂ ಭವಿಷ್ಯದ ಬಗ್ಗೆ ಆಳವಾದ ಯೋಚನೆ, ಯೋಜನೆ ಇರಬಾರದೇ?! ಯಾದವರ ಪಕ್ಷದ ನಾಯಕನಾದ ಅಖಿಲೇಶ್ ಸಿಂಗ್ ಯಾದವ್‌ಗೆ ಮುಸ್ಲಿಂ ಜನಸಂಖ್ಯೆ ಹೆಚ್ಚಾದರೆ ಖುಷಿ! ಅದೇ ಕಾಲಕ್ಕೆ ಯಾದವರ ಜನಸಂಖ್ಯೆ ಕಡಿಮೆ ಆಗುತ್ತಿರುವುದರ ಬಗ್ಗೆ ಈತನಿಗೆ ಎಳ್ಳಷ್ಟೂ ಗಮನವಿಲ್ಲ! ದೇಶದ ವಿಷಯ ಬೇಡ... ತಮ್ಮ ಮಕ್ಕಳು, ಮೊಮ್ಮಕ್ಕಳ ಬಗ್ಗೆಯಾದರೂ... ಅವರ ರಾಜಕೀಯ ಭವಿಷ್ಯದ ಬಗ್ಗೆಯಾದರೂ ಈ ನಾಯಕರುಗಳು ಯೋಚಿಸಬೇಕಲ್ಲವೇ?! ಮುಸ್ಲಿಮರ ಸಂಖ್ಯೆ 35% ಮೇಲೆ ಹೋದರೆ ನಂತರ ಅವರದ್ದೇ ಅಧಿಪತ್ಯವಾಗುತ್ತದೆ. ಆಗ ನಮ್ಮ ಮುಂದಿನ ಪೀಳಿಗೆಯ ಕಥೆಯೇನು? ತಾವು ಗಳಿಸಿದ ಸಂಪತ್ತಿಗೆ ಭದ್ರತೆಯೇನು?! ಎಂಬ ಬಗ್ಗೆ ಒಮ್ಮೆಯಾದರೂ ಇವರುಗಳು ಯೋಚಿಸಬೇಕಲ್ಲವೇ?!

ಕಣ್ಣಿಗೆ ಬಟ್ಟೆ ಕಟ್ಟಿಕೊಂಡವರಂತೆ ಮುಸ್ಲಿಂ ಓಲೈಕೆ ರಾಜಕಾರಣದ ದಾರಿಯಲ್ಲಿ ಮುನ್ನುಗ್ಗುತ್ತಿರುವ ಇಂತಹ ರಾಜಕೀಯ ಪಕ್ಷಗಳನ್ನು ಕಂಡು ಇಂದು ದೇಶಭಕ್ತರು ದಿಗಿಲಿಗೊಳಗಾಗಿದ್ದಾರೆ.

ಇಂದು ಅಸ್ಸಾಂನಲ್ಲಿ 34%ನಷ್ಟು ಮುಸ್ಲಿಮರು ಇದ್ದಾಗಲೂ, ಪಶ್ಚಿಮಬಂಗಾಳದಲ್ಲಿ 30% ನ ಆಸುಪಾಸು ಮುಸ್ಲಿಂ ಜನಸಂಖ್ಯೆ ಇದ್ದಾಗಲೂ ಆ ರಾಜ್ಯಗಳ ಹಿಂದುಗಳು ಒಗ್ಗಟ್ಟಾಗಿ, ಸಂಘಟಿತರಾಗಿ ರಾಷ್ಟ್ರಹಿತದ ಪಕ್ಷವನ್ನು ಗೆಲ್ಲಿಸಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ಹಿಂದುಗಳು ಸಂಘಟಿತರಾಗಿ ಮತ ಚಲಾಯಿಸುವುದಿಲ್ಲ ಎಂಬ ನಂಬಿಕೆಯಲ್ಲಿದ್ದ ರಾಜಕೀಯ ಪಕ್ಷಗಳು ಇನ್ನು ಮುಂದಾದರೂ ತಮ್ಮ ಓಲೈಕೆ ರಾಜಕಾರಣವನ್ನು ಕಡಿಮೆ ಮಾಡಿಕೊಂಡು ಹಿಂದುಗಳ ಒಲವನ್ನೂ ಗಳಿಸಿಕೊಳ್ಳಲು ಪ್ರಯತ್ನ ಮಾಡಲಿವೆಯೇ?! ಕಾದು ನೋಡಬೇಕು.

ವಿದ್ಯಾರ್ಥಿಗಳ ಭವಿಷ್ಯವೂ... ಪ್ರಶ್ನೆಪತ್ರಿಕೆ ಸೋರಿಕೆಯ ಕರಿನೆರಳೂ...

▸ ಡಾ. ಮೈತ್ರಿ ಭಟ್, ವಿಟ್ಲ

ನಮ್ಮ ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಪರೀಕ್ಷೆ ಎನ್ನುವುದು ವಿದ್ಯಾರ್ಥಿಯ ಜ್ಞಾನ, ಪರಿಶ್ರಮ ಮತ್ತು ಸಾಮರ್ಥ್ಯವನ್ನು ಅಳೆಯುವ ಅತ್ಯಂತ ಮುಖ್ಯವಾದ ಸಾಧನ. ವಿದ್ಯಾರ್ಥಿಯ ಭವಿಷ್ಯ, ಶ್ರಮ ಮತ್ತು ಕನಸುಗಳೆಲ್ಲವೂ ಪರೀಕ್ಷೆಯ ಫಲಿತಾಂಶದ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ನಿರಂತರವಾಗಿ ನಡೆಯುವ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳು ಶಿಕ್ಷಣ ವ್ಯವಸ್ಥೆಯ ಮೇಲಿನ ಜನರ ನಂಬಿಕೆಯನ್ನು ಕುಗ್ಗಿಸುತ್ತಿವೆ. ಒಂದು ಪ್ರಶ್ನೆಪತ್ರಿಕೆ ಸೋರಿಕೆಯಾಗುವುದು ಎಂದರೆ ಕೇವಲ ಕೆಲವು ಪ್ರಶ್ನೆಗಳು ಹೊರಬೀಳುವುದಲ್ಲ; ಅದು ಲಕ್ಷಾಂತರ ವಿದ್ಯಾರ್ಥಿಗಳ ಕನಸುಗಳ ಮೇಲೆ ಬೀಳುವ ಕರಿನೆರಳ ಛಾಯೆ. ಇದು ವಿದ್ಯಾರ್ಥಿಗಳ ಮಾನಸಿಕ ಸ್ಥೈರ್ಯ, ಶಿಕ್ಷಣದ ಮೌಲ್ಯ ಮತ್ತು ಸಮಾಜದ ನೈತಿಕತೆಯ ಮೇಲೆ ಬೀಳುವ ದೊಡ್ಡ ಹೊಡೆತವಾಗಿದ್ದು, ಅದೆಷ್ಟೋ ವಿದ್ಯಾರ್ಥಿಗಳ ಕನಸುಗಳನ್ನೇ ನುಚ್ಚುನೂರಾಗಿಸುತ್ತದೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗಾಗಿ ದಿನರಾತ್ರಿ ಶ್ರಮಿಸುತ್ತಾರೆ. ಹೆತ್ತವರ ಆಶಾಭಾವನೆ, ಶಿಕ್ಷಕರ ಮಾರ್ಗದರ್ಶನ ಮತ್ತು ತಮ್ಮ ಕನಸುಗಳ ಜೊತೆಗೆ ಅವರು ಪರೀಕ್ಷಾ ಕೇಂದ್ರಕ್ಕೆ ಹೋಗುತ್ತಾರೆ. ಆದರೆ ಕೆಲವೇ ಕೆಲವು ನೈತಿಕತೆ ಮರೆತ ವ್ಯಕ್ತಿಗಳು ಹಣಕ್ಕಾಗಿ ಪ್ರಶ್ನೆಪತ್ರಿಕೆಗಳನ್ನು ಸೋರಿಕೆ ಮಾಡುವ ಮೂಲಕ ವಿದ್ಯಾರ್ಥಿಗಳ ವರುಷದ ಪರಿಶ್ರಮವನ್ನು, ಬದುಕಿನ ಕನಸನ್ನು ವ್ಯರ್ಥಗೊಳಿಸುತ್ತಾರೆ. ಪರಿಣಾಮವಾಗಿ ಪ್ರಾಮಾಣಿಕವಾಗಿ ಓದಿದ ವಿದ್ಯಾರ್ಥಿಗಳು ಅನ್ಯಾಯಕ್ಕೊಳಗಾಗುತ್ತಾರೆ; ಮೋಸದ ಮಾರ್ಗ ಅನುಸರಿಸಿದವರು ಮುನ್ನಡೆಯುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದು ಶಿಕ್ಷಣದ ಮೂಲಭೂತ ಉದ್ದೇಶವನ್ನೇ ಹಾಳುಮಾಡುವ ದುಃಸ್ಥಿತಿಯಾಗಿದೆ.

ಪ್ರಶ್ನೆಪತ್ರಿಕೆ ಸೋರಿಕೆಯಿಂದ ಪರೀಕ್ಷೆಗಳು ರದ್ದಾಗುವುದು, ಮರುಪರೀಕ್ಷೆ ನಡೆಸುವುದು, ವಿದ್ಯಾರ್ಥಿಗಳು ಮತ್ತೆ ಸಿದ್ಧತೆ ಮಾಡಿಕೊಳ್ಳುವುದು ಇವೆಲ್ಲವೂ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಸಹನೆ ಮತ್ತು ನಿರಾಶೆಯನ್ನು ಹುಟ್ಟಿಸುತ್ತವೆ. ಕೆಲವರು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ.

ಈ ಪ್ರಶ್ನೆಪತ್ರಿಕೆ ಸೋರಿಕೆಯ ಹಿಂದೆ ದೊಡ್ಡ ಜಾಲವೊಂದು ಕಾರ್ಯನಿರ್ವಹಿಸುತ್ತಿರುವುದಂತೂ ಸ್ಪಷ್ಟ. ಪರೀಕ್ಷಾ ಮಂಡಳಿಗಳಲ್ಲಿನ ಕೆಲವು ಭ್ರಷ್ಟ ಅಧಿಕಾರಿಗಳು,



ಮುದ್ರಣ ಕೇಂದ್ರದ ಸಿಬ್ಬಂದಿಗಳು, ಮಧ್ಯವರ್ತಿಗಳು ಮತ್ತು ತಂತ್ರಜ್ಞಾನವನ್ನು ದುರುಪಯೋಗಪಡಿಸಿಕೊಳ್ಳುವ ಕೆಲವರು ಸೇರಿಕೊಂಡು ಈ ದಂಧೆಯನ್ನು ನಡೆಸುತ್ತಾರೆ. ಕೆಲವೊಮ್ಮೆ ಮೊಬೈಲ್ ಫೋನ್, ಸಾಮಾಜಿಕ ಜಾಲತಾಣಗಳು ಮತ್ತು ಮೆಸೇಜಿಂಗ್ ಆ್ಯಪ್‌ಗಳ ಮೂಲಕ ಪ್ರಶ್ನೆಪತ್ರಿಕೆ ಕ್ಷಣಾರ್ಧದಲ್ಲಿ ಸಾವಿರಾರು ಜನರಿಗೆ ತಲುಪುತ್ತದೆ. ಶಿಕ್ಷಣಕ್ಕೆ ವರವಾಗಬೇಕಾದ ತಂತ್ರಜ್ಞಾನವೇ ದುರುಪಯೋಗವಾಗುವ ಉದಾಹರಣೆಯಿದು.

ಈ ಸಮಸ್ಯೆಯ ಮತ್ತೊಂದು ಗಂಭೀರ ಅಂಶವೆಂದರೆ – ತನ್ನ ಯಶಸ್ಸಿಗಾಗಿ ಯಾವುದೇ ಮಾರ್ಗ ಹಿಡಿದರೂ ಸರಿ ಎಂಬ ಅಪಾಯಕಾರಿ ಮನೋಭಾವವೂ ಸಮಾಜದಲ್ಲಿ ಬೆಳೆದುಬರುತ್ತಿರುವುದು. ಕೆಲವರು ದುಡಿಮೆಗೆ ಬದಲಾಗಿ ಅಕ್ರಮ ಮಾರ್ಗಗಳನ್ನು ಆರಿಸುತ್ತಿದ್ದಾರೆ. ಪೋಷಕರಲ್ಲಿಯೂ ಕೆಲವೊಮ್ಮೆ ಮಕ್ಕಳನ್ನು ಯಾವ ರೀತಿಯಲ್ಲಾದರೂ ಮುನ್ನಡೆಸಬೇಕು ಎಂಬ ಒತ್ತಡ ಕಾಣಿಸುತ್ತದೆ. ಸಮಾಜದಲ್ಲಿ ನೈತಿಕ ಮೌಲ್ಯಗಳು ಕುಗ್ಗುತ್ತಿರುವುದು ಪ್ರಶ್ನೆಪತ್ರಿಕೆ ಸೋರಿಕೆಗಳಂತಹ ಅಪರಾಧಗಳಿಗೆ ಪೂರಕ ವಾತಾವರಣವನ್ನು ಸೃಷ್ಟಿಸುತ್ತಿದೆ. ಹೀಗಿರುವಾಗ, ಶಿಕ್ಷಣವು ಕೇವಲ ಅಂಕಗಳಿಗಾಗಿ ಮಾತ್ರವೇ ಅಲ್ಲ; ಅದು ವ್ಯಕ್ತಿತ್ವ ನಿರ್ಮಾಣಕ್ಕಾಗಿ ಎಂಬ ಅರಿವನ್ನು ಮತ್ತೆ ಮೂಡಿಸಬೇಕಾಗಿದೆ.

ಈ ಪ್ರಶ್ನೆಪತ್ರಿಕೆ ಸೋರಿಕೆ ಎಂಬುದು ಕೇವಲ ವಿದ್ಯಾರ್ಥಿಗಳ ಸಮಸ್ಯೆಯಲ್ಲ; ಅದು ದೇಶದ ಭವಿಷ್ಯಕ್ಕೂ ಅಪಾಯಕಾರಿಯಾಗಿದೆ. ಅಕ್ರಮ ಮಾರ್ಗದಿಂದ ಪರೀಕ್ಷೆ ಪಾಸಾದವರು ಮುಂದಿನ ದಿನಗಳಲ್ಲಿ ವೈದ್ಯರು, ಇಂಜಿನಿಯರ್‌ಗಳು, ಶಿಕ್ಷಕರು, ಪೊಲೀಸ್ ಅಧಿಕಾರಿಗಳು ಅಥವಾ ಆಡಳಿತಾಧಿಕಾರಿಗಳಾಗುವ ಸಾಧ್ಯತೆ ಇದೆ. ಅರ್ಹತೆ ಇಲ್ಲದವರು ಪ್ರಮುಖ ಹುದ್ದೆಗಳಿಗೆ ಬಂದರೆ ಅದರ ಪರಿಣಾಮ ಸಂಪೂರ್ಣ ಸಮಾಜದ ಮೇಲೆ ಬೀಳುತ್ತದೆ. ಆದ್ದರಿಂದ ಪ್ರಶ್ನೆಪತ್ರಿಕೆ ಸೋರಿಕೆ ಎನ್ನುವುದು ಕೇವಲ ಪರೀಕ್ಷಾ ಅಕ್ರಮವಲ್ಲ; ಅದು ರಾಷ್ಟ್ರದ ಅಭಿವೃದ್ಧಿಯನ್ನೇ ದುರ್ಬಲಗೊಳಿಸುವ ಸಾಮಾಜಿಕ ಅಪರಾಧವೂ ಹೌದು.

ಈ ಸಮಸ್ಯೆಗೆ ಕಠಿಣ ಕಾನೂನು ಕ್ರಮಗಳು ಅತ್ಯಗತ್ಯ. ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಭಾಗಿಯಾದವರಿಗೆ ಕೇವಲ ಸಣ್ಣ ಶಿಕ್ಷೆಗಳು ಸಾಲದು. ವೇಗದ ತನಿಖೆ, ತ್ವರಿತ ನ್ಯಾಯ ಮತ್ತು ಕಠಿಣ ದಂಡನೆಗಳು ಜಾರಿಯಾಗಬೇಕು. ಆಗ ಮಾತ್ರ ಇಂತಹ ಅಕ್ರಮಗಳು ಕಡಿಮೆಯಾಗಬಹುದು. ಜೊತೆಗೆ ಪರೀಕ್ಷಾ ಪ್ರಕ್ರಿಯೆಯನ್ನು ಸಂಪೂರ್ಣ ಡಿಜಿಟಲ್ ಭದ್ರತೆಯೊಳಗೆ ತರಬೇಕು. ಪ್ರಶ್ನೆಪತ್ರಿಕೆ ಸಿದ್ಧಪಡಿಸುವುದರಿಂದ ಹಿಡಿದು ಪರೀಕ್ಷಾ ಕೇಂದ್ರಕ್ಕೆ ತಲುಪುವವರೆಗಿನ ಪ್ರತಿಯೊಂದು ಹಂತವೂ ಕಟ್ಟುನಿಟ್ಟಿನ ನಿಗಾ ವ್ಯವಸ್ಥೆಯಡಿ ಇರಬೇಕು. ಎನ್‌ಕ್ರಿಪ್ಷನ್ ತಂತ್ರಜ್ಞಾನ, ಸುರಕ್ಷಿತ ಸರ್ವರ್‌ಗಳು ಮತ್ತು ಕೃತಕ ಬುದ್ಧಿಮತ್ತೆಯ ನೆರವಿನಿಂದ ಪ್ರಶ್ನೆಪತ್ರಿಕೆ ಸೋರಿಕೆಗಳನ್ನು ತಡೆಯಲು ನಮ್ಮ ಸರ್ಕಾರಗಳು ಮುಂದಾಗಬೇಕು.

ಇವುಗಳೊಂದಿಗೆ ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದು ಅಗತ್ಯ. ಮತ್ತೆ ಮತ್ತೆ ನಡೆಯುವ ಸೋರಿಕೆಗಳು ವಿದ್ಯಾರ್ಥಿಗಳಲ್ಲಿ 'ಪ್ರಾಮಾಣಿಕ ಪರಿಶ್ರಮಕ್ಕೆ ಬೆಲೆಯೇ ಇಲ್ಲ' ಎಂಬ ನಿರಾಶಾ ಮನೋಭಾವವನ್ನು ಹುಟ್ಟಿಸುತ್ತವೆ. ಈ ಮನೋಭಾವ ಅಪಾಯಕಾರಿ.

ನಮ್ಮ ಶಿಕ್ಷಣ ಸಂಸ್ಥೆಗಳೂ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. "ಯಶಸ್ಸಿಗಿಂತ ಪ್ರಾಮಾಣಿಕತೆ ಮುಖ್ಯ" ಎಂಬ ಪಾಠವನ್ನು ಬಾಲ್ಯದಿಂದಲೇ ಕಲಿಸಬೇಕು.

ಒಟ್ಟಿನಲ್ಲಿ, ಪ್ರಶ್ನೆಪತ್ರಿಕೆ ಸೋರಿಕೆ ಎನ್ನುವುದು ಕೇವಲ ನಮ್ಮ ಶಿಕ್ಷಣ ಹಾಗೂ ವ್ಯವಸ್ಥೆಯ ದೌರ್ಬಲ್ಯವಷ್ಟೇ ಅಲ್ಲ, ಇದು ನಮ್ಮ ಸಮಾಜದ ನೈತಿಕ ಕುಸಿತದ ಪ್ರತಿಬಿಂಬವೂ ಆಗಿದೆ. ಇದನ್ನು ತಡೆಯಲು ಕಾನೂನು, ತಂತ್ರಜ್ಞಾನ ಮತ್ತು ನೈತಿಕ ಶಿಕ್ಷಣ ಈ ಮೂರೂ ಒಟ್ಟಾಗಿ ಕಾರ್ಯನಿರ್ವಹಿಸಬೇಕು.

ಇಂಜಿನಿಯರಿಂಗ್ ವಿದ್ಯಾರ್ಥಿಗಳು ನೀರುಪಾಲು

- ಕಿರುಪ್ರವಾಸಕ್ಕೆ ತೆರಳಿದ್ದ 10 ಜನ ಇಂಜಿನಿಯರಿಂಗ್ ವಿದ್ಯಾರ್ಥಿಗಳು
- ಮರಬನಹಳ್ಳಿ ಬಳಿ ಭದ್ರಾ ನಾಲೆಗಿಳಿದು ಹುಡುಗಾಟ
- ನೀರಿನ ಸೆಳೆತಕ್ಕೆ ಸಿಲುಕಿದ ಓರ್ವ, ರಕ್ಷಣೆಗೆ ಮುಂದಾದ ಇತರರು
- ನಾಲೆಯಲ್ಲಿ ಅಪಾರ ನೀರಿದ್ದ ಕಾರಣ ಎಲ್ಲರೂ ಅಪಾಯದಲ್ಲಿದ್ದಾಗ ಸ್ಥಳೀಯರಿಂದ ರಕ್ಷಣೆ
- 8 ಜನರ ಪ್ರಾಣ ರಕ್ಷಣೆ, 2 ವಿದ್ಯಾರ್ಥಿಗಳ ಸಾವು

ದಾವಣಗೆರೆ: ಕಿರುಪ್ರವಾಸಕ್ಕೆ ತೆರಳಿದ್ದ 10 ಜನ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಪೈಕಿ ಇಬ್ಬರು ನೀರು ಪಾಲಾಗಿದ್ದು, ಉಳಿದ 8 ಮಂದಿ ಸ್ಥಳೀಯರ ನೆರವಿನೊಂದಿಗೆ ಪ್ರಾಣಾಪಾಯದಿಂದ ಪಾರಾದ ಘಟನೆ ಜಿಲ್ಲೆಯ ಚನ್ನಗಿರಿ ತಾಲೂಕು ಮರಬನಹಳ್ಳಿ ಗ್ರಾಮ ಸಮೀಪದ ಭದ್ರಾ ನಾಲೆಯಲ್ಲಿ ಗುರುವಾರ ಮಧ್ಯಾಹ್ನ ವರದಿಯಾಗಿದೆ.

ನಗರದ ಖಾಸಗಿ ಇಂಜಿನಿಯರಿಂಗ್ ಕಾಲೇಜಿನ ಐಎಸ್ ವಿಭಾಗದ 8ನೇ ಸೆಮಿಸ್ಟರ್ ವಿದ್ಯಾರ್ಥಿಗಳಾದ ಮಾನಸ ಸಿಂಧೆ (22), ಹೆಚ್.ಎಸ್. ವಿವೇಕ್ (22) ಮೃತ ದುರ್ದೈವಿಗಳು. ನಾಲ್ಕೈದು ದಿನಗಳ ಹಿಂದಷ್ಟೇ ಬೆಂಗಳೂರಿನಲ್ಲಿ 2 ತಿಂಗಳ ಇಂಟರ್ನ್‌ಶಿಪ್ ಮುಗಿಸಿಕೊಂಡು ಬಂದು ಅಂತಿಮ ಪರೀಕ್ಷೆಗೆ ತಯಾರಾಗುತ್ತಿದ್ದ ನಾಲ್ವರು ವಿದ್ಯಾರ್ಥಿಗಳು, ಆರು ವಿದ್ಯಾರ್ಥಿನಿಯರು ವಿಹಾರಕ್ಕೆಂದು ದ್ವಿಚಕ್ರ ವಾಹನಗಳಲ್ಲಿ ಮರಬನಹಳ್ಳಿ ಸಮೀಪದ ಭದ್ರಾ ನಾಲೆಯ ಬಳಿ ತೆರಳಿದ್ದರು. ಬೇಸಿಗೆ ಬೆಳೆಗೆಂದು ಭದ್ರಾ ನಾಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಬಿಡಲಾಗಿದ್ದು, ನೀರಿನಲ್ಲಿ ಆಟವಾಡುತ್ತಿದ್ದ ವಿದ್ಯಾರ್ಥಿಗಳ ಪೈಕಿ ಓರ್ವ ವಿದ್ಯಾರ್ಥಿ ಕಾಲು ಜಾರಿ ನೀರಿನ ಸೆಳೆತಕ್ಕೆ ಸಿಲುಕಿದ್ದಾರೆ. ಆ ವಿದ್ಯಾರ್ಥಿ ರಕ್ಷಣೆಗೆ ಬಂದ ಇನ್ನೊಬ್ಬರು ನೀರಿನ ಸೆಳವಿಗೆ ಸಿಕ್ಕಿದ್ದಾರೆ.

ಹೀಗೆ ಹತ್ತೂ ಜನ ವಿದ್ಯಾರ್ಥಿಗಳು ನಾಲೆಯಲ್ಲಿ ಹರಿಯುತ್ತಿದ್ದ ನೀರಿನ ರಭಸಕ್ಕೆ ಸಿಲುಕಿ ಕೊಚ್ಚಿ ಹೋಗಿದ್ದಾರೆ. ವಿದ್ಯಾರ್ಥಿಗಳ ಕೂಗಾಟ ಕೇಳಿ ಸ್ಥಳೀಯ ರೈತರು, ಗ್ರಾಮಸ್ಥರು, ದಾರಿಹೋಕರು ನಾಲೆಗೆ ಹಾರಿ, ನೀರಿನ ಸೆಳೆತಕ್ಕೆ ಸಿಲುಕಿದ್ದವನ್ನು ರಕ್ಷಣೆ ಮಾಡಿದ್ದು, ಈ ಪೈಕಿ ವಿವೇಕ್ ಸಾಕಷ್ಟು ನೀರು ಕುಡಿದಿದ್ದರಿಂದ ಪ್ರಥಮ ಚಿಕಿತ್ಸೆ ನೀಡಿ ಬದುಕಿಸುವ ಪ್ರಯತ್ನ ಮಾಡುವಷ್ಟರಲ್ಲಾಗಲೇ ಆತ ಪ್ರಾಣ ಬಿಟ್ಟಿದ್ದ. ನೀರಿನಲ್ಲಿ ಕೊಚ್ಚಿ ಹೋಗಿದ್ದ ಮಾನಸ ಸಿಂಧೆ ಪತ್ತೆಗೆ ಅಗ್ನಿಶಾಮಕ ದಳದ ಸಿಬ್ಬಂದಿ ತೊಡಗಿದ್ದು, ಸ್ಥಳೀಯ ಈಜು ಪಟುಗಳು ಕೂಡ ಕಾರ್ಯಾಚರಣೆಗೆ ಸಹಕರಿಸಿದ್ದಾರೆ. ಇನ್ನುಳಿದಂತೆ 8 ಜನ ವಿದ್ಯಾರ್ಥಿಗಳು ಪ್ರಾಣಾಪಾಯದಿಂದ ಪಾರಾಗಿದ್ದರೂ, ತಮ್ಮ ಸ್ನೇಹಿತರಾದ ಮಾನಸ ಸಿಂಧೆ ಹಾಗೂ ವಿವೇಕ್ ಸಾವಿನ ಸುದ್ದಿ ನೋವಿಗೀಡು ಮಾಡಿದೆ. ಈ ಬಗ್ಗೆ ಬಸವಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಲಕನ ಪುತ್ರನಿಗೆ 15 ಚಿನ್ನದ ಪದಕ

ಪುಟ 1 ➡ ತಮ್ಮ ಗ್ರಾಮದಲ್ಲಿ ರೈತರು ಎದುರಿಸುವ ಸಮಸ್ಯೆಗಳು, ನೀರಿನ ಕೊರತೆ, ಬೆಳೆ ನಷ್ಟ, ಮಾರುಕಟ್ಟೆ ಅಸ್ಥಿರತೆ ಇತ್ಯಾದಿಗಳನ್ನು ಗಮನಿಸಿದ ಅವರು, ಕೃಷಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿದರೆ ರೈತರ ಬದುಕು ಬದಲಾಗಬಹುದು ಎಂಬ ನಂಬಿಕೆಯನ್ನು ಹೊಂದಿದ್ದರು. ಅದೇ ದೃಷ್ಟಿಯಿಂದ ಶಿಕ್ಷಕರ ಮಾರ್ಗದರ್ಶನದಲ್ಲಿ ಕೃಷಿ ಶಿಕ್ಷಣವನ್ನು ಆಯ್ಕೆ ಮಾಡಿಕೊಂಡ ಅವರು, ಶಾಲಾ ದಿನಗಳಿಂದಲೇ ಓದಿನಲ್ಲಿ ಮುಂದಿದ್ದರು. ನಂತರ ಅವರು ಜಿಕೆವಿಕೆ (ಬೆಂಗಳೂರು ಕೃಷಿ ವಿವಿ)ಯಲ್ಲಿ ಕೃಷಿ ಪದವಿಗೆ ಸೇರಿ, ಶಿಸ್ತಿನ ಅಧ್ಯಯನ ಹಾಗೂ ಪ್ರಾಯೋಗಿಕ ಜ್ಞಾನದಿಂದ ತಮ್ಮ ಸಾಧನೆಯನ್ನು ಮತ್ತಷ್ಟು ವಿಸ್ತರಿಸಿದರು.

ಶಿಸ್ತಿನ ಅಧ್ಯಯನವೇ ಯಶಸ್ಸಿನ ಗುಟ್ಟು: ಪ್ರೇಮ್‌ಕುಮಾರ್ ಅವರ ಯಶಸ್ಸಿನ ಹಿಂದೆ ಅತ್ಯಂತ ಶಿಸ್ತಿನ ಜೀವನಶೈಲಿ ಪ್ರಮುಖ ಕಾರಣವಾಗಿದೆ. ಬೆಂಗಳೂರಿನಲ್ಲಿ ತಮ್ಮ ಚಿಕ್ಕಮ್ಮನ ಮನೆಯಲ್ಲಿ ವಾಸವಿದ್ದು, ದಿನಕ್ಕೆ ಸುಮಾರು 6ರಿಂದ 7 ಗಂಟೆಗಳ ನಿರಂತರ ಅಧ್ಯಯನ ಮಾಡುತ್ತಿದ್ದರು. ತರಗತಿ ಪಾಠಗಳ ಜತೆಗೆ ಗ್ರಂಥಾಲಯ ಅಧ್ಯಯನ, ಪ್ರಾಯೋಗಿಕ ಕೃಷಿ ತರಬೇತಿ ಹಾಗೂ ಕ್ಲಾಸ್ ನೋಟ್ಸ್‌ಗಳ ನಿರಂತರ ಪರಿಶೀಲನೆ ಅವರ ದಿನಚರಿಯಾಗಿತ್ತು.

ಬೀಜ ವಿಜ್ಞಾನದಲ್ಲಿ ಸಂಶೋಧನೆ ಗುರಿ

ಪ್ರಸ್ತುತ ಪ್ರೇಮ್‌ಕುಮಾರ್ ಅವರು ಹೊಸದಿಲ್ಲಿಯ ಪೂಸಾ ಕ್ಯಾಂಪಸ್‌ನಲ್ಲಿ ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ (Seed Science Technology) ವಿಷಯದಲ್ಲಿ ಎಂಎಸ್ಸಿ ವ್ಯಾಸಂಗ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಪಿಎಚ್‌ಡಿ ಮಾಡಿ, ಉತ್ತಮ ಗುಣಮಟ್ಟದ ಹಾಗೂ ಅಧಿಕ ಇಳುವರಿ ನೀಡುವ ಬೀಜಗಳ ಅಭಿವೃದ್ಧಿಯಲ್ಲಿ ಸಂಶೋಧನೆ ನಡೆಸುವುದು ಅವರ ಕನಸಾಗಿದೆ.

ತ.ನಾಡಿನಲ್ಲಿ ಮದ್ಯ ಖರೀದಿಗೆ 21 ವರ್ಷ ಕಡ್ಡಾಯ: ಆದೇಶ



ಪುಟ 1 ➡ ತಮಿಳುನಾಡು ರಾಜ್ಯ ಮಾರುಕಟ್ಟೆ ನಿಗಮ (ಟಾಸ್ಮಾಕ್) ಅಂಗಡಿಗಳ ಸಿಬ್ಬಂದಿಗೆ ಗ್ರಾಹಕರ ವಯಸ್ಸನ್ನು ಕಟ್ಟುನಿಟ್ಟಾಗಿ ಪರಿಶೀಲಿಸುವಂತೆ ಸೂಚನೆ ನೀಡಲಾಗಿದೆ. ಅನುಮಾನ ಬಂದಲ್ಲಿ ಆಧಾರ್ ಕಾರ್ಡ್ ಸೇರಿದಂತೆ ಗುರುತಿನ ಚೀಟಿಗಳನ್ನು ಪರಿಶೀಲಿಸಿ, 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ಮಾರಾಟ ಮಾಡಬಾರದು ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಇದೇ ವೇಳೆ ಮದ್ಯದಂಗಡಿಗಳ ಕಾರ್ಯಾಚರಣೆ ಸಮಯವನ್ನು ಕಡಿಮೆ ಮಾಡುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ. ಪ್ರಸ್ತುತ ಮಧ್ಯಾಹ್ನ 12ರಿಂದ ರಾತ್ರಿ 10ರವರೆಗೆ ಕಾರ್ಯನಿರ್ವಹಿಸುತ್ತಿರುವ ಅಂಗಡಿಗಳನ್ನು ರಾತ್ರಿ 8 ಗಂಟೆಗೆ ಮುಚ್ಚುವ ಪ್ರಸ್ತಾವವೂ ಚರ್ಚೆಯಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಐಆರ್ 3ನೇ ಹಂತ ಮೇ 30ರಿಂದ ಆರಂಭ

ಪುಟ 1 ➡ ಬಿಎಲ್‌ಒಗಳಿಗೆ ನೆರವು ನೀಡಲು 3.42 ಲಕ್ಷ ಬೂತ್ ಮಟ್ಟದ ಏಜೆಂಟರನ್ನು (ಬಿಎಲ್‌ಎ) ರಾಜಕೀಯ ಪಕ್ಷಗಳೇ ನೇಮಕ ಮಾಡಲಿವೆ. ಹಿಮಾಚಲ ಪ್ರದೇಶ, ಜಮ್ಮು ಕಾಶ್ಮೀರ ಮತ್ತು ಲಡಾಖ್ ವಾತಾವರಣವನ್ನು ಗಮನದಲ್ಲಿಟ್ಟುಕೊಂಡು ಎಸ್‌ಐಆರ್ ಆರಂಭಿಸುವ ದಿನಾಂಕ ಘೋಷಿಸುವುದಾಗಿ ಚುನಾವಣಾ ಆಯೋಗ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಒಮ್ಮೆ ಎಸ್‌ಐಆರ್ 3ನೇ ಹಂತ ಮುಕ್ತಾಯದೊಂದಿಗೆ ದೇಶದೆಲ್ಲೆಡೆ ಎಸ್‌ಐಆರ್ ಪೂರ್ಣವಾಗಲಿದೆ. ಹಿಮಾಚಲ, ಜಮ್ಮು ಕಾಶ್ಮೀರ ಮತ್ತು ಲಡಾಖ್ ಮಾತ್ರ ಉಳಿದುಕೊಳ್ಳಲಿವೆ ಎಂದು ಆಯೋಗ ಹೇಳಿದೆ.

ಅ.7ಕ್ಕೆ ರಾಜ್ಯ ಮತದಾರರ ಅಂತಿಮ ಪಟ್ಟಿ ಘೋಷಣೆ

ಕರ್ನಾಟಕ, ದಿಲ್ಲಿ, ಮೇಘಾಲಯ, ಮಹಾರಾಷ್ಟ್ರ ಮತ್ತು ಜಾರ್ಖಂಡ್ ರಾಜ್ಯಗಳ ಅಂತಿಮ ಮತದಾರರ ಪಟ್ಟಿ ಅ.7ರಂದು ಪ್ರಕಟವಾಗಲಿವೆ. ಸೆ.6ರಂದು ಒಡಿಶಾ, ಸಿಕ್ಕಿಂ, ಮಿಜೋರಾಂ ಮತ್ತು ಮಣಿಪುರ ರಾಜ್ಯಗಳ ಅಂತಿಮ ಮತದಾರರ ಪಟ್ಟಿ ಪ್ರಕಟವಾಗಲಿವೆ. ಡಿ.23ರಂದು ತ್ರಿಪುರಾ ರಾಜ್ಯದ ಪಟ್ಟಿ ಪ್ರಕಟವಾಗಲಿದೆ ಎಂದು ಆಯೋಗ ತಿಳಿಸಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ನಮ್ಮ ದೇಶದ ಆತ್ಮ ಹಿಂದುತ್ವ, ಪರಂಪರಾಗತವಾಗಿ ಬಂದಿರುವ ಸಂಸ್ಕಾರ, ಸಂಸ್ಕೃತಿಗಳು ನಮ್ಮ ದೇಶವನ್ನು ಪರಮ ವೈಭವದೆಡೆಗೆ ಕೊಂಡೊಯ್ದಿವೆ
– ಪ್ರಭಾಕರ ಜೋಷಿ

– ಇಂಥಾ ದೇಶದ ಮೇಲೆ ಧಾಳಿ ಮಾಡಿ ಇಲ್ಲಿನ ಸಂಪತ್ತನ್ನು ದೋಚಿದ, ಸಂಸ್ಕೃತಿಯನ್ನು ನಾಶ ಮಾಡಿದ ದುರಾತ್ಮರನ್ನು ದಿ ಗ್ರೇಟ್ ಎಂದು ಹೇಳುವ ಪರಮ ನೀಚರು ಇಲ್ಲಿರುವುದು ದೇಶದ ದೌರ್ಭಾಗ್ಯ!

ದಿನ ಭವಿಷ್ಯ

ಮೇಷ
ಅತಿಯಾದ ನಿರೀಕ್ಷೆ ಫಲ ನೀಡದು. ಖಾಸಗಿ ಬದುಕಿನ ಕುರಿತು ಅನವಶ್ಯ ಚಿಂತಿಸುವಿರಿ. ನೀವು ಭಾವಿಸಿದ ಸಮಸ್ಯೆ ಇಲ್ಲ, ವಿವಾದ ಪರಿಹರಿಸಿ.

ವೃಷಭ
ವ್ಯಕ್ತಿಯೊಬ್ಬರು ನಿಮ್ಮ ಬದುಕಿನಲ್ಲಿ ಪ್ರವೇಶಿಸುವರು. ಅವರ ಜತೆ ಸಖ್ಯ ವೃದ್ಧಿ, ಸಂಘಟಿತ ಕಾರ್ಯದಿಂದ ವ್ಯವಹಾರ ಬೆಳವಣಿಗೆ ಕಾಣುವುದು.

ಮಿಥುನ
ಎಲ್ಲ ಕಾರ್ಯ ಸುಸೂತ್ರವಾಗಿ ಸಾಗಲಿದೆ. ಅಡ್ಡಿಗಳ ನಿವಾರಣೆ. ವ್ಯಕ್ತಿ ಸಂಬಂಧಿತ ಉದ್ವಿಗ್ನತೆ ಶಮನ. ಆಪ್ತರ ಜತೆಗಿನ ವಿರಸ ಅಂತ್ಯ.

ಕಟಕ
ಸಾಮಾಜಿಕ ಕಾರ್ಯದಲ್ಲಿ ಹೆಚ್ಚು ವ್ಯಸ್ತ. ಉಳಿದವರ ಜತೆ ಹೊಂದಾಣಿಕೆ ಇರಲಿ. ಸಣ್ಣ ಗಾಯದ ಸಾಧ್ಯತೆಯಿದೆ, ಎಚ್ಚರ ವಹಿಸಿ.

ಸಿಂಹ
ಬದುಕನ್ನು ಗಂಭೀರವಾಗಿ ಪರಿಗಣಿಸಿ. ಬೇಕಾಬಿಟ್ಟಿ ಧೋರಣೆ ಪ್ರತಿಕೂಲವಾದೀತು. ಇತರರಿಗೆ ಮಾನಸಿಕ ನೋವು ನೀಡಬೇಡಿ.

ಕನ್ಯಾ
ಖಾಸಗಿ ಸಮಸ್ಯೆ ಮನಸ್ಸಿಗೆ ಕಿರಿಕಿರಿ ತರಲಿದೆ. ಸಣ್ಣ ವಿಷಯದಲ್ಲೂ ತಪ್ಪು ಹುಡುಕುವಿರಿ. ವಿರಸ ಉಂಟಾದೀತು. ಅನಿರೀಕ್ಷಿತ ಬಂಧು ಭೇಟಿ.

ತುಲಾ
ನಿಮ್ಮ ಧೋರಣೆಗೆ ಕೆಲವರಿಂದ ವಿರೋಧ. ಹೊಂದಿಕೊಂಡು ಬಾಳಿ. ಬಾಕಿ ಉಳಿದ ಕಾರ್ಯ ಮುಗಿಸಲು ಆದ್ಯತೆ ಕೊಡಿ. ಸಾಧನೆಯ ಯಶ.

ವೃಶ್ಚಿಕ
ಸರಿಯಾದ ದಿಕ್ಕಿನಲ್ಲಿ ನಿಮ್ಮ ಪ್ರಯತ್ನ ಸಾಗುತ್ತದೆ. ಕುಟುಂಬಸ್ಥರ ಮಧ್ಯೆ ಹೆಚ್ಚು ಸಮಯ ಕಳೆಯಿರಿ. ಅವರ ಮನಸ್ಸಿಗೆ ನೋವು ಉಂಟುಮಾಡಬೇಡಿ.

ಧನು
ಹಣದ ವ್ಯವಹಾರದಲ್ಲಿ ಜಾಗ್ರತೆ ವಹಿಸಿ. ನಷ್ಟ ಆಗದಂತೆ ನೋಡಿಕೊಳ್ಳಿ. ಮನೆಯವರ ಬೆಂಬಲ ವಿಶ್ವಾಸ ಹೆಚ್ಚಿಸಲಿದೆ. ಪ್ರವಾಸ ಸಂಭವ.

ಮಕರ
ವ್ಯಕ್ತಿ ಮತ್ತು ಪ್ರೀತಿ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆ. ಸರಿಯಾದ ಹೆಜ್ಜೆ ಇಟ್ಟರೆ ಸಫಲತೆ. ಆತ್ಮೀಯ ವ್ಯಕ್ತಿಗಳ ಮನ ನೋಯಿಸಬೇಡಿ.

ಕುಂಭ
ಉದ್ಯೋಗದ ಹುಡುಕಾಟ ಅಂತ್ಯ. ಶುಭ ಸುದ್ದಿ ಸಿಗಲಿದೆ. ದಂಪತಿ ಮಧ್ಯೆ ಕಲಹವಾದೀತು. ಆರೋಗ್ಯ ಸಮಸ್ಯೆ ಇದ್ದವರು ಎಚ್ಚರ ವಹಿಸಿ.

ಮೀನ
ಆತ್ಮೀಯರ ವರ್ತನೆಯಲ್ಲಿ ಬದಲಾವಣೆ ಕಂಡೀತು. ವಾಗ್ವಾದದಿಂದ ದೂರವಿರಿ. ಪ್ರವಾಸದ ಅವಕಾಶ. ಬೆನ್ನು ನೋವು ಇದ್ದವರಿಗೆ ನಿರಾಳತೆ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00
ಅದೃಷ್ಟ ಸಂಖ್ಯೆ : 8,3,9,1

ಔಷಧ ಸರಬರಾಜು ವ್ಯವಸ್ಥೆ ಮೇಲೆ ನಿಗಾ: ಸಚಿವ ಗುಂಡೂರಾವ್

ಪ್ರತ್ಯೇಕ ಪೋರ್ಟಲ್ ಜಾರಿ



ಬೆಂಗಳೂರು: ದೇಶದಲ್ಲಿ ಇದೇ ಮೊದಲ ಬಾರಿಗೆ ಔಷಧ ಸರಬರಾಜು ವ್ಯವಸ್ಥೆ ಮೇಲೆ ನಿಗಾ ಇರಿಸಲು ಪ್ರತ್ಯೇಕ ಪೋರ್ಟಲ್ ರೂಪಿಸಲಾಗಿದ್ದು, ಪ್ರಮಾಣಿತ ಗುಣಮಟ್ಟ ಹೊಂದಿರದ ಔಷಧಗಳ ನಿಗದಿತ ಬ್ಯಾಚ್‌ಗಳನ್ನು ಮಾರುಕಟ್ಟೆಯಿಂದ ಕೂಡಲೇ ಹಿಂಪಡೆಯಲು ಇದು ಸಹಕಾರಿಯಾಗಲಿದೆ. ಈ ಹಿಂದೆ ಮಾರುಕಟ್ಟೆಯಿಂದ ವಾಪಸ್ ಪಡೆಯುವುದು ಕಷ್ಟಸಾಧ್ಯವಾಗಿತ್ತು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಗುರುವಾರ ಆರೋಗ್ಯಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಈ ವ್ಯವಸ್ಥೆಗೆ ಚಾಲನೆ ನೀಡಿ ಮಾತನಾಡಿದ ಸಚಿವರು, ಈ ಪೋರ್ಟಲ್ ಮೂಲಕ ಸಗಟು ಮತ್ತು ಚಿಲ್ಲರೆ ಔಷಧಿ ಮಳಿಗೆಗಳಲ್ಲಿ ಲಭ್ಯವಿರುವ ಗುಣಮಟ್ಟದ ಮಾನದಂಡವನ್ನು ಪೂರೈಸದ ಔಷಧಿಗಳ ಬ್ಯಾಚ್‌ಗಳನ್ನು ಪತ್ತೆ ಹಚ್ಚಲಾದ ಔಷಧಿಗಳ ಮಾರಾಟವನ್ನು ತಕ್ಷಣವೇ ಸ್ಥಗಿತಗೊಳಿಸಲಾಗುವುದು. ಔಷಧ ಪ್ರಮಾಣಿತ ಗುಣಮಟ್ಟ ಹೊಂದಿರದಿದ್ದಲ್ಲಿ, ಪೋರ್ಟಲ್‌ನಲ್ಲಿ ಆ ಬಗ್ಗೆ ಸೂಕ್ತ ಕಾರಣ ಸಹಿತ ಮಾಹಿತಿ ನಮೂದಿಸಲಾಗುವುದು.

ಈ ಸಂದೇಶ ಎಲ್ಲ ಸಗಟು ವ್ಯಾಪಾರಿಗಳಿಗೆ ರವಾನೆಯಾಗಲಿದ್ದು, ಅವರು ಮುಂದೆ ಅದನ್ನು ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು.

ನಮ್ಮಲ್ಲಿರುವ ಸುಮಾರು 15 ಸಾವಿರ ಔಷಧ ಸಗಟು ವರ್ತಕರ ಮಾಹಿತಿಯನ್ನು ಈ ಪೋರ್ಟಲ್‌ನಲ್ಲಿ ಅಳವಡಿಸಿಕೊಳ್ಳಲಾಗಿದೆ. ಭವಿಷ್ಯದಲ್ಲಿರುವ 45 ಸಾವಿರ ಚಿಲ್ಲರೆ ಔಷಧ ವರ್ತಕರ ಮಾಹಿತಿಯನ್ನು ಪೋರ್ಟಲ್‌ನಲ್ಲಿ ಅಳವಡಿಸಿ ಅವರಿಂದಲೂ ನೈಜ ಸಮಯದಲ್ಲೇ ಔಷಧ ಹಿಂಪಡೆಯಲು ಸಾಧ್ಯವಾಗುವಂತೆ ಮಾಡಲಾಗುತ್ತದೆ ಎಂದರು. ಕಳೆದ ವರ್ಷ ಔಷಧ ಆಡಳಿತ ಇಲಾಖೆಯಿಂದ ಇ-ಸಹಿ ಸೌಲಭ್ಯ ಜಾರಿಗೆ ತರಲಾಗಿದ್ದು, ಪ್ರಮಾಣಿತ ಗುಣಮಟ್ಟ ಹೊಂದಿರದ ಔಷಧಿಗಳ ನಿಗದಿತ ಬ್ಯಾಚ್‌ನ ಮಾಹಿತಿ ಪಡೆಯಲು ಸಹಾಯವಾಯಿತು. ಇದರಿಂದ 1.85 ಕೋಟಿ ರೂ. ಮೌಲ್ಯದ ಅನುತ್ತಮ ಗುಣಮಟ್ಟದ ಔಷಧಿಗಳನ್ನು ಹಿಂಪಡೆಯಲಾಗಿದೆ ಎಂದು ವಿವರಿಸಿದರು.

ಎನ್‌ಡಿಪಿಎಸ್ ದುರ್ಬಳಕೆಗೆ ಕಡಿವಾಣ: ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ನೂತನ ಪೋರ್ಟಲ್ ಮೂಲಕ ಮಾದಕ ಔಷಧ (ಎನ್‌ಡಿಪಿಎಸ್)ಗಳ ದುರ್ಬಳಕೆಗೂ ಕಡಿವಾಣ ಹಾಕಲು ಸಾಧ್ಯ. ಎನ್‌ಡಿಪಿಎಸ್ ಮಾರಾಟ ಮಾಡಿದರೆ ಈ ಪೋರ್ಟಲ್ ನಲ್ಲಿ ಮಾಹಿತಿಯನ್ನು ಕಡ್ಡಾಯವಾಗಿ ನಮೂದಿಸಬೇಕಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಆಯುಕ್ತ ಕೆ. ಶ್ರೀನಿವಾಸ್ ಸೇರಿದಂತೆ ಇತರರಿದ್ದರು.

ಒಂದೇ ತಿಂಗಳಿನಲ್ಲಿ 26 ಮಾದರಿ ಕಳಪೆ ಗುಣಮಟ್ಟ

ಕಳೆದ ಏಪ್ರಿಲ್ ತಿಂಗಳಿನಲ್ಲಿ ಒಟ್ಟು 924 ಔಷಧ ಮಾದರಿಗಳ ನಿಗದಿತ ಬ್ಯಾಚ್‌ಗಳನ್ನು ಸಂಗ್ರಹಿಸಿ ಪರೀಕ್ಷಿಸಿದ್ದು, ಆ ಪೈಕಿ 26 ಮಾದರಿಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ. ಕಳೆದ ವರ್ಷ 16,337 ಔಷಧ ಮಾದರಿಗಳನ್ನು ವಿಶ್ಲೇಷಿಸಲಾಗಿದ್ದು, 473 ಔಷಧಗಳ ನಿಗದಿತ ಬ್ಯಾಚ್‌ಗಳು ಪ್ರಮಾಣಿತ ಗುಣಮಟ್ಟ ಹೊಂದಿರಲಿಲ್ಲ. ಪರವಾನಗಿ ರದ್ದತಿ ಸೇರಿ ವಿವಿಧ ಕ್ರಮ ಕೈಗೊಳ್ಳಲಾಗಿದೆ. ನಿಯಮ ಬಾಹಿರವಾಗಿ ಮಾದಕ ಔಷಧಗಳ ಮಾರಾಟಕ್ಕೆ ಸಂಬಂಧಿಸಿದಂತೆ ಕಳೆದ ವರ್ಷ 1,309 ಔಷಧ ಮಳಿಗೆಗಳನ್ನು ಪರಿಶೀಲಿಸಿ, 457 ಔಷಧ ಮಳಿಗೆಗಳ ಪರವಾನಗಿ ರದ್ದು ಮಾಡಲಾಗಿದೆ ಎಂದು ಸಚಿವ ದಿನೇಶ್ ಗುಂಡುರಾವ್ ಮಾಹಿತಿ ನೀಡಿದರು.

ಜೀತ ಪದ್ಧತಿಯಲ್ಲಿ ಸಿಲುಕಿದ್ದ 37 ಕಾರ್ಮಿಕರ ರಕ್ಷಣೆ

ವಿಜಯನಗರ: ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಹೋಬಳಿಯ ನಂದಿಬಂಡಿ ಗ್ರಾಮದಲ್ಲಿ ಜೀತ ಪದ್ಧತಿಯಲ್ಲಿ ಸಿಲುಕಿದ್ದ ಒಡಿಶಾ ಮೂಲದ 37 ಕಾರ್ಮಿಕರನ್ನು ಯಶಸ್ವಿಯಾಗಿ ರಕ್ಷಿಸಲಾಗಿದೆ.

ಬೆಳಗಾವಿ ಜಿಲ್ಲೆಯ ಸ್ಪಂದನ ಎಂಬ ಎನ್‌ಜಿಒ ಸಂಸ್ಥೆ ನೀಡಿದ ಖಚಿತ ಮಾಹಿತಿಯ ಮೇರೆಗೆ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಸಹಾಯಕ ಆಯುಕ್ತರು ನಂದಿಬಂಡಿ ಗ್ರಾಮದ ಮೇಲೆ ದಾಳಿ ನಡೆಸಿದರು.

ದಾಳಿಯ ವೇಳೆ ಕಾರ್ಮಿಕರು ನಾಲ್ಕು ಅಡಿ ಅಗಲದ ಪುಟ್ಟ ಮನೆಗಳಲ್ಲಿ, ಕನಿಷ್ಠ ಮೂಲಭೂತ ಸೌಕರ್ಯಗಳಿಲ್ಲದ ದಯನೀಯ ಸ್ಥಿತಿಯಲ್ಲಿ ಬದುಕುತ್ತಿದ್ದ 10 ಮಕ್ಕಳು, 11 ಮಹಿಳೆಯರು, 16 ಪುರುಷರು ಸೇರಿದಂತೆ ಒಟ್ಟು 37 ಮಂದಿ ಕಾರ್ಮಿಕರು ಇದ್ದು, ಎಲ್ಲರೂ ಒಡಿಶಾದ ಬಲಂಗೀರ್ ಮತ್ತು ನವರಂಗಪುರದ ಜಿಲ್ಲೆಯವರಾಗಿದ್ದಾರೆ.

ಈ ಕಾರ್ಮಿಕರನ್ನು ಒಡಿಶಾದಿಂದ ಕರೆತರಲಾಗಿದ್ದು, 6 ತಿಂಗಳ ಹಿಂದೆ ಪ್ರತಿ ವ್ಯಕ್ತಿಗೆ 40,000 ರೂಪಾಯಿ ಮುಂಗಡ ಹಣ ನೀಡಿ ಇಲ್ಲಿಗೆ ಕರೆ ತರಲಾಗಿತ್ತು. ಆರಂಭದಲ್ಲಿ 6 ತಿಂಗಳ ಅವಧಿಗೆ ಅಷ್ಟೇ ಕೆಲಸ ಮಾಡಿಸುವುದಾಗಿ ಹೇಳಿ ಕರೆತರಲಾಗಿತ್ತು. ಹಾಗೆಯೇ ಕೆಲಸದ ಆಧಾರದ ಮೇಲೆ ಹಣ ನೀಡುತ್ತೇವೆ ಎಂಬ ಭರವಸೆಯೂ ನೀಡಲಾಗಿತ್ತು. ಆದರಂತೆ ಹಣದ ಆಸೆಗೆ ವಾರವಿಡೀ ಮೈ ಮುರಿದು ಕೆಲಸ ಮಾಡಿದರೂ ಸಹ, ಇಡೀ ಕುಟುಂಬಕ್ಕೆ ವಾರಕ್ಕೆ ಕೇವಲ 500 ರೂಪಾಯಿ ಮಾತ್ರ ನೀಡುತ್ತಾರೆ. ಆದ್ದರಿಂದ ನಾವು 6 ತಿಂಗಳ ಹಿಂದೆ ಬಂದಿದ್ದೆವು ಎಂದು ತಿಳಿಸಿದರು.



- ಎನ್‌ಜಿಒ ಸಂಸ್ಥೆ ನೀಡಿದ ಖಚಿತ ಮಾಹಿತಿ ಮೇರೆಗೆ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ದಾಳಿ

ನಿಟ್ಟುಸಿರು ಬಿಟ್ಟ ಕಾರ್ಮಿಕರು

ಒತ್ತೆಯಾಳುಗಳಾಗಿದ್ದ ಒಡಿಶಾ ಮೂಲದ 37 ಜೀವಗಳಿಗೆ ಕೊನೆಗೂ ಬಿಡುಗಡೆಯ ಭಾಗ್ಯ ದೊರೆತಿದೆ. ಜಿಲ್ಲಾಡಳಿತದ ಮಿಂಚಿನ ಕಾರ್ಯಾಚರಣೆಯಿಂದಾಗಿ ಜೀತ ಪದ್ಧತಿಯ ಸಂಕೋಲೆಯಲ್ಲಿ ನಲುಗುತ್ತಿದ್ದ 37 ಕಾರ್ಮಿಕರು ಇಂದು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಡಿವೈಎಸ್ಪಿ ಪಿ.ಮುರಳೀಧರ, ಉಪವಿಭಾಗಾಧಿಕಾರಿ ವಿವೇಕಾನಂದ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ರಾಜ್ಯದ ಜನರೇ ಉತ್ತರಿಸುತ್ತಾರೆ: ವಿಜಯೇಂದ್ರ

ಪುಟ 1 ➡ ಹಿಜಾಬ್‌ಗೆ ಅವಕಾಶ ಕೊಡುವುದಾಗಿ ಅಧಿಕೃತ ಮುದ್ರೆ ಒತ್ತಲಾಗಿದೆ. ಶಿಕ್ಷಣ ಸಚಿವರು ಹೇಳಿರುವುದು ಖಂಡಿತ ಸರಿಯಲ್ಲ. ಹಿಂದೆ ಬಿಜೆಪಿ ಸರ್ಕಾರವು ಹಿಜಾಬ್ ನಿಷೇಧಿಸಿತ್ತು. ಇವತ್ತು ಅದು ನ್ಯಾಯಾಲಯದ ಕಟಕಟೆಯಲ್ಲಿದೆ. ಆದರೂ, ಸರ್ಕಾರ ಈ ಹುಚ್ಚು ನಿರ್ಧಾರ ತಗೆದುಕೊಂಡಿದೆ ಎಂದು ವಿಜಯೇಂದ್ರ ಹೇಳಿದರು.

ಅಲ್ಪಸಂಖ್ಯಾತರನ್ನು ಖುಷಿ ಪಡಿಸಲು ಯಾವ ಮಟ್ಟಕ್ಕೆ ತೆರಳಲೂ ಇವರು ಹೇಸುವುದಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಓಲೈಕೆ ರಾಜಕಾರಣ ಒಂದು ಕಡೆಯಾದರೆ, ಹಿಂದುಗಳಿಗೆ ಅಪಮಾನ ಮಾಡುವ ಕೆಲಸವನ್ನು ನಿರಂತರವಾಗಿ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ.

■ ಬಿ.ವೈ.ವಿಜಯೇಂದ್ರ,
ಬಿಜೆಪಿ ರಾಜ್ಯಾಧ್ಯಕ್ಷ

ಸಂಘರ್ಷಕ್ಕೆ ನಾಂದಿ

ಬೆಂಗಳೂರು: ನಾಲ್ಕು ವರ್ಷಗಳ ತರುವಾಯ ಕಾಂಗ್ರೆಸ್ ಮತ್ತೆ ಹಿಜಾಬ್‌ಗೆ ಅವಕಾಶ ನೀಡಿ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತಿದೆ ಎಂದು ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ. ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶಾಲಾ ಕಾಲೇಜುಗಳಲ್ಲಿ ಸಹೋದರತ್ವ ಇಲ್ಲದಿದ್ದರೆ ಸಮಾಜ ಉತ್ತಮವಾಗಿ ಬದುಕಲು ಸಾಧ್ಯವಿಲ್ಲ. ಆದ್ದರಿಂದ ನಾಲ್ಕು ವರ್ಷದ ಹಿಂದೆ ಶಾಲಾ ಕಾಲೇಜುಗಳಲ್ಲಿ ತಲೆದೋರಿದ್ದ ಧಾರ್ಮಿಕ ಭಾವನೆ ಕೆರಳಿಸುವ ಹಿಜಾಬ್ ಅನ್ನು ನಿಷೇಧ ಮಾಡಲಾಗಿತ್ತು. ಸಮವಸ್ತ್ರ ಬಿಟ್ಟು ಬಹಿರಂಗವಾಗಿ ಎದ್ದು ಕಾಣುವ ವಸ್ತ್ರ ಧರಿಸಬಾರದು ಎಂದು ತೀರ್ಮಾನ ಮಾಡಲಾಗಿತ್ತು ಎಂದರು. ಹಿಜಾಬ್ ನಿಷೇಧ ಪ್ರಶ್ನಿಸಿ ಕೇಸ್ ಹಾಕಲಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ಇರುವಾಗಲೇ ಇವರು ತಕ್ಷಣಕ್ಕೆ ಒಂದು ಸಮುದಾಯ ಓಲೈಸಲು ಮತ್ತೆ ಹಿಜಾಬ್ ಹಾಕಲು ಆದೇಶ ಮಾಡಿದ್ದಾರೆ. ಇದು ದೊಡ್ಡ ತಪ್ಪು, ಕೋರ್ಟ್‌ನಲ್ಲಿರುವಾಗಲೇ ಆದೇಶ ಮಾಡಿರುವುದು ಕೋರ್ಟ್‌ಗೆ ಅಪಚಾರ ಮಾಡಿದಂತೆ ಎಂದು ತಿಳಿಸಿದರು.

ಧರ್ಮ, ಜಾತಿ ಆಚರಣೆ ಗೌರವಿಸುವ ಉದ್ದೇಶ

ಪುಟ 1 ➡ ಸಾರ್ವಜನಿಕ ಸುವ್ಯವಸ್ಥೆ, ಸುರಕ್ಷತೆ, ತರಗತಿಯ ವಾತಾವರಣ ಮತ್ತು ಶಿಕ್ಷಣ ಸಂಸ್ಥೆಗಳ ಜಾತ್ಯತೀತ ಸ್ವರೂಪಕ್ಕೆ ಧಕ್ಕೆಯಾಗದಂತೆ ಶಿಕ್ಷಣ ವ್ಯವಸ್ಥೆಯಲ್ಲಿ ಶಿಸ್ತು, ಸಮಾನತೆ ಮತ್ತು ಘನತೆಯನ್ನು ಮರುಸ್ಥಾಪಿಸಲು ನಾವು ಬದ್ಧರಿದ್ದೇವೆ. ಜಾತಿ, ಧರ್ಮಗಳ ಆಧಾರದಲ್ಲಿ ಸಮಾಜವನ್ನು ಒಡೆಯುತ್ತಿರುವವರಿಗೆ ಇದರಿಂದ ನೋವಾಗಿರುವುದು ಸಹಜವೇ ಆಗಿದೆ. ಅವರು ಮೊದಲು ತಮ್ಮೊಳಗೆ ಇಣುಕಿ ಆತ್ಮವಿಮರ್ಶೆ ಮಾಡಲಿ ಎಂದು ಗುಡುಗಿದ್ದಾರೆ.

ಕ್ಷಮತಾ ಪ್ರಮಾಣಪತ್ರ ಕಡ್ಡಾಯ

ಪುಟ 1 ➡ ಇವರು ಗೋವಿನ ವಧಾರ್ಹತೆ ಬಗ್ಗೆ ಜಂಟಿ ಪ್ರಮಾಣಪತ್ರ ನೀಡುತ್ತಾರೆ. ದುಡಿಮೆ ಅಥವಾ ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ಗೋವು ಅಥವಾ ಎಮ್ಮೆ ಅಥವಾ ಗೂಳಿಗೆ 14 ವರ್ಷ ದಾಟಿದೆ ಅಥವಾ ಗೋವು ಅಥವಾ ಹೋರಿಗೆ ವಯಸ್ಸಾಗಿದೆ ಅಥವಾ ಗಾಯ, ನ್ಯೂನತೆ, ವಾಸಿಯಾಗದ ಕಾಯಿಲೆಯಿಂದಾಗಿ ಖಾಯಂ ಆಗಿ ದುರ್ಬಲ ಸ್ಥಿತಿಯಲ್ಲಿದೆ ಎಂಬ ಸಮಾನ ಅಭಿಪ್ರಾಯವನ್ನು ಪಂಚಾಯತ್ ಅಧ್ಯಕ್ಷರು, ಪಶು ವೈದ್ಯಾಧಿಕಾರಿಗಳು ಲಿಖಿತವಾಗಿ ದಾಖಲಿಸಬೇಕು.

ಒಂದು ವೇಳೆ ಜಾನುವಾರಿನ ಫಿಟ್‌ನೆಸ್ ಬಗ್ಗೆ ಕ್ಷಮತಾ ಪ್ರಮಾಣಪತ್ರ, ಮಂಜೂರು ಮಾಡಲು ಸಂಬಂಧಿತ ಅಧಿಕಾರಿಗಳು ನಿರಾಕರಿಸಿದಲ್ಲಿ, ಸದರಿ ವ್ಯಕ್ತಿ ಪ್ರಸ್ತುತ ನಿರಾಕರಣೆಯ 15 ದಿನಗಳೊಳಗೆ ರಾಜ್ಯ ಸರ್ಕಾರಕ್ಕೆ ದೂರು ಸಲ್ಲಿಸಲು ಅಧಿಸೂಚನೆಯಲ್ಲಿ ಅವಕಾಶವಿದೆ.

ಏನನ್ನೂ ಬಯಸದ ತ್ಯಾಗದ ಪರಮಮೂರ್ತಿ ಜಯದೇವ

ಪುಟ 1 ➡ ಸಂಘದ ಸ್ವಯಂಸೇವಕ ಸಮಾಜ ಜೀವನದಲ್ಲಿ ಹೇಗಿರಬೇಕು ಎನ್ನುವುದಕ್ಕೆ ಜಯದೇವರು ಉದಾಹರಣೆ. ಈ ಪುಸ್ತಕದಲ್ಲಿರುವುದು ಜಯದೇವರ ಕುರಿತು ಘಟನೆಗಳಾದರೂ ಅದರಲ್ಲಿ ಅವರು ಆರಂಭಿಸಿದ ಯೋಜನೆಗಳ ಮುನ್ನಡೆಯನ್ನೂ ತಿಳಿಸಿಕೊಡುತ್ತದೆ ಎಂದು ಹೇಳಿದರು.

ಮೈ.ಚ.ಜಯದೇವ ಅವರು ಕೃ.ನರಹರಿ, ಅಜಿತ್ ಕುಮಾರ್, ಅರಕಲಿ ನಾರಾಯಣ್ ಅವರ ತಂಡವು ಸಾಂಘಿಕವಾಗಿ ಸಂಸ್ಥೆಯನ್ನು ಕಟ್ಟಿಬೆಳೆಸುವುದಕ್ಕೆ ಮಾದರಿಯಾದರು. ತಮ್ಮ ಗುರಿಯ ಸಾಧನೆಗಾಗಿ ಜೀವನವನ್ನೇ ತೆತ್ತರು. ಸಂಸ್ಥೆ ಎನ್ನುವುದು ಇಟ್ಟಿಗೆ, ಕಲ್ಲಿನ ಕಟ್ಟಡ ಮಾತ್ರವಲ್ಲ, ಅಲ್ಲಿರುವವರು ತಮ್ಮ ಪ್ರಾಣವನ್ನು ಸಮರ್ಪಿಸಿ ಕೆಲಸ ಮಾಡಿದಾಗ ಅದಕ್ಕೆ ಜೀವಂತಿಕೆ ಬರುತ್ತದೆ ಎಂದಿದ್ದವರು ಜಯದೇವ ಅವರು. ಅದಕ್ಕಿಂತಲೂ ಮೊದಲು ಅದನ್ನು ಜೀವಿಸಿದವರು. ಅವರು ಭಾವನೆಗಳನ್ನುಳ್ಳ ಧ್ಯೇಯಜೀವಿಯಾಗಿದ್ದರು. ಅವರು ಮಾತ್ರ ಅವಿಶ್ರಾಂತರಾಗಿರುತ್ತಿರಲಿಲ್ಲ, ಬೇರೆಯವರೂ ವಿರಮಿಸಲು ಬಿಡುತ್ತಿರಲಿಲ್ಲ ಎಂದು ತಿಳಿಸಿದರು.

ಜಯದೇವ ಹೆಸರಿನ ಆಸ್ಪತ್ರೆ, ನಿಜವಾದ ಸ್ಮಾರಕ: ಆಧುನಿಕ ಚಿಕಿತ್ಸೆಯ ಜೊತೆಗೆ ಭಾರತೀಯ ವೈದ್ಯಕೀಯವೂ ಸೇರಬೇಕು ಎನ್ನುವುದು ಆಸ್ಪತ್ರೆಯ ಮೂಲಕ ಸಾಕಾರಗೊಂಡಿದೆ. ಒಂದು ಸಂಸ್ಥೆಯನ್ನು ಹೇಗೆ ಕಟ್ಟಿಬೆಳೆಸಬೇಕು ಎಂದು ತೋರಿಸಿದವರು ಜಯದೇವರು. ಮಿಥಿಕ್ ಸೊಸೈಟಿ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಅಬಲಾಶ್ರಮದಂತಹ ಅನೇಕ ಸಂಸ್ಥೆಗಳು ಗುರಿಗೆ ತಕ್ಕಂತೆ ನಡೆಯುವಂತೆ ಮಾಡಿದವರು. ಹಾಗಾಗಿ, ಅವರ ಹೆಸರಿನಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿರುವುದು ನಿಜವಾದ ಸ್ಮಾರಕ. ಈ ಪುಸ್ತಕ ಒಬ್ಬ ವ್ಯಕ್ತಿಯ ಜೀವನ ಮಾತ್ರವಲ್ಲ, ಜಯದೇವರ ಜೀವನವರ ನೆನಪಿಸುತ್ತಾ ನಾವು ಹೇಗೆ ಜೀವಿಸಬೇಕು ಎನ್ನುವುದನ್ನು ಪುಸ್ತಕ ನೆನಪಿಸುತ್ತದೆ ಎಂದು ದತ್ತಾತ್ರೇಯ ಹೊಸಬಾಳೆ ವಿವರಿಸಿದರು.

ಸಮಾಜದ ದೃಷ್ಟಿಯಿಂದ ಅಗತ್ಯ ವಿಚಾರಗಳನ್ನು ಸಂಪೂರ್ಣ ಪರಿಶ್ರಮದೊಂದಿಗೆ ಪೂರ್ಣಗೊಳಿಸಬೇಕು ಎನ್ನುವುದನ್ನು ನಮಗೆಲ್ಲ ಕಲಿಸಿದರು. ಜಯದೇವ ಅವರು ಮುನ್ನಡೆಸಿದ ಸಂಸ್ಥೆಗಳಲ್ಲಿ ಆರಂಭಿಸಿದ ಪರಂಪರೆಗಳು ಇನ್ನೂ ಮುನ್ನಡೆದಿವೆ. ಶೇಕ್ಸ್‌ಪಿಯರ್ ವಂಶ ವೃದ್ಧಿ ಮತ್ತು ಕಾವ್ಯದ ಮೂಲಕ ಮನುಷ್ಯ ಶಾಶ್ವತನಾಗುತ್ತಾನೆಂದು ಹೇಳುತ್ತಾನೆ. ಆದರೆ, ಭಾರತೀಯ ಸಂಸ್ಕೃತಿ ಇದಕ್ಕಿಂತ ಮುಂದೆ ಸಾಗುತ್ತದೆ. ತ್ಯಾಗದಿಂದ ಶಾಶ್ವತ ಆಗುತ್ತಾರೆ ಎನ್ನುತ್ತದೆ ಭಾರತೀಯ ಸಂಸ್ಕೃತಿ. ಜಯದೇವರು ಹೀಗೆಯೇ ಎಲ್ಲವನ್ನೂ ತ್ಯಾಗ ಮಾಡುತ್ತಾ ಕಾರ್ಯ ಮಾಡಿದರು ಎಂದು ಸ್ಮರಿಸಿದರು.

ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪುಸ್ತಕ ಲೋಕಾರ್ಪಣೆ ಮಾಡಿದರು. ಕೃತಿಯ ಲೇಖಕರಾದ ಡಾ. ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ, ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ. ಕುಮಾರ್ ವೇದಿಕೆಯಲ್ಲಿದ್ದರು.

ದೇಶವ್ಯಾಪಿ ಮಿತವ್ಯಯ

ಪುಟ 1 ➡ ರಾಜ್ಯ ಹಣಕಾಸು ಸಚಿವ ಸುರೇಶ್ ಕುಮಾರ್ ಖನ್ನಾ ತಮ್ಮ ಅಧಿಕೃತ ನಿವಾಸದಿಂದ ಸೈಕಲ್‌ನಲ್ಲಿ ಕಚೇರಿಗೆ ತೆರಳಿದರೆ, ಸಚಿವ ದಿನೇಶ್ ಪ್ರತಾಪ್ ಸಿಂಗ್ ಸಾರ್ವಜನಿಕ ಸಾರಿಗೆ ಬಳಸಿದರು.

ಲಖನೌನ ಸಂಜಯ್ ಗಾಂಧಿ ಸ್ನಾತಕೋತ್ತರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ರಾಧಾ ಕೃಷ್ಣ ಧೀಮನ್ ಸೈಕಲ್‌ನಲ್ಲಿ ಸಂಸ್ಥೆಗೆ ತೆರಳಿ, ವಿದ್ಯಾರ್ಥಿಗಳು, ಸಿಬ್ಬಂದಿ ಮತ್ತು ಅಧ್ಯಾಪಕರು ಅನಗತ್ಯ ವಾಹನ ಬಳಕೆಯನ್ನು ಕಡಿಮೆ ಮಾಡುವಂತೆ ಕರೆ ನೀಡಿದರು. ಕ್ಯಾಂಪಸ್‌ನಲ್ಲಿ ಸೈಕಲ್ ನಿಲ್ದಾಣಗಳನ್ನು ಸ್ಥಾಪಿಸುವುದಾಗಿ ಅವರು ಹೇಳಿದರು.

ಬರಾಬಂಕಿಯಲ್ಲಿ ಜಿಲ್ಲಾಧಿಕಾರಿ ಈಶಾನ್ ಪ್ರತಾಪ್ ಸಿಂಗ್ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿ ನಿರಂಕಾರ್ ಸಿಂಗ್ ನಡೆದು ಕಲೆಕ್ಟರೇಟ್ ಕಚೇರಿಗೆ ತೆರಳಿದರು. ಸಾಧ್ಯವಾದಷ್ಟು ನಡೆದು ಹೋಗುವ ಮೂಲಕ ಇಂಧನ ಉಳಿತಾಯ ಹಾಗೂ ಪರಿಸರ ಸಂರಕ್ಷಣೆಗೆ ಕೈಜೋಡಿಸುವಂತೆ ಅವರು ಸಾರ್ವಜನಿಕರಿಗೆ ಮನವಿ ಮಾಡಿದರು. ವಾರಾಣಸಿ ಮಹಾಪೌರ ಅಶೋಕ್ ಕುಮಾರ್ ತಿವಾರಿ ಕೂಡ ನಡೆದು ಮಹಾನಗರ ಪಾಲಿಕೆ ಕಚೇರಿಗೆ ತೆರಳಿದರು. ಪ್ರತೀ ಶನಿವಾರವನ್ನು 'ನೋ ಫ್ಯುಯೆಲ್ ಡೇ' ಆಗಿ ಆಚರಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ಘೋಷಿಸಿದರು. ''ಕಾಶಿಯ ಮೊದಲ ನಾಗರಿಕನಾಗಿ ಮಾದರಿಯಾಗುವುದು ನನ್ನ ಕರ್ತವ್ಯ'' ಎಂದು ತಿವಾರಿ ಹೇಳಿದರು. ಇದಕ್ಕೂ ಮೊದಲು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಧಿಕೃತ ಬೆಂಗಾವಲು ವಾಹನಗಳ ಸಂಖ್ಯೆ ಶೇ.50ರಷ್ಟು ಕಡಿತಗೊಳಿಸುವಂತೆ ಸೂಚಿಸಿ, ಸಾರ್ವಜನಿಕ ಸಾರಿಗೆ, ವರ್ಚುವಲ್ ಸಭೆಗಳು ಮತ್ತು ವರ್ಕ್ ಫ್ರಂ ಹೋಮ್ ವ್ಯವಸ್ಥೆಗೆ ಉತ್ತೇಜನ ನೀಡಿದ್ದರು.

ಫಡ್ನವೀಸ್ ಬುಲೆಟ್ ಪ್ರಯಾಣ

ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಮುಂಬೈನ ವಿಧಾನ ಭವನಕ್ಕೆ ಬೈಕ್‌ನಲ್ಲಿ ತೆರಳಿ ಇಂಧನ ಉಳಿತಾಯದ ಸಂದೇಶ ನೀಡಿದರು. ಪ್ರಧಾನಿ ಮೋದಿ ಜನರಿಂದ ''ಸಣ್ಣ ತ್ಯಾಗ'' ಮಾತ್ರ ಕೇಳಿದ್ದಾರೆ ಎಂದು ಅವರು ಹೇಳಿ, ಸರ್ಕಾರ ಈಗಾಗಲೇ ಮಂತ್ರಿಗಳ ವಿದೇಶ ಪ್ರವಾಸ ರದ್ದು, ವಾಹನ ದಂಡು ಕಡಿತ ಹಾಗೂ ಆರು ತಿಂಗಳು ಭಾರೀ ಸರ್ಕಾರಿ ಕಾರ್ಯಕ್ರಮಗಳನ್ನು ನಿಲ್ಲಿಸುವ ನಿರ್ಧಾರ ಕೈಗೊಂಡಿದೆ ಎಂದರು.

ತಿಂಗಳಲ್ಲಿ 4 ದಿನ 'ನೋ ವೆಹಿಕಲ್ ಡೇ': ದಿಲ್ಲಿ ಮುಖ್ಯಮಂತ್ರಿ ರೇಖಾ ಗುಪ್ತಾ ''ಮೇರಾ ಭಾರತ್, ಮೇರಾ ಯೋಗದಾನ್'' ಅಭಿಯಾನದಲ್ಲಿ ವಾರಕ್ಕೆ ಎರಡು ದಿನ ಸರ್ಕಾರಿ ಕಚೇರಿಗಳಲ್ಲಿ ವರ್ಕ್ ಫ್ರಂ ಹೋಮ್, ವಾರದಲ್ಲಿ ಒಂದು ದಿನ 'ನೋ ವೆಹಿಕಲ್ ಡೇ' ಹಾಗೂ ಪ್ರತಿ ಸೋಮವಾರ ಸಚಿವರು ಮತ್ತು ಅಧಿಕಾರಿಗಳು ಮೆಟ್ರೋ ಪ್ರಯಾಣ ಮಾಡುವ ಕ್ರಮಗಳನ್ನು ಘೋಷಿಸಿದರು. ಸರ್ಕಾರಿ ಅಧಿಕಾರಿಗಳ ಪೆಟ್ರೋಲ್-ಡೀಸೆಲ್ ಕೋಟಾವನ್ನು ಶೇ.20ರಷ್ಟು ಕಡಿತಗೊಳಿಸಲಾಗಿದೆ. ಪಶ್ಚಿಮ ಏಷ್ಯಾದ ಯುದ್ಧದಿಂದ ಜಾಗತಿಕ ಇಂಧನ ಪೂರೈಕೆಯಲ್ಲಿ ಉಂಟಾದ ವ್ಯತ್ಯಯದ ಹಿನ್ನೆಲೆಯಲ್ಲಿ, ಕಚ್ಚಾ ತೈಲ ಮತ್ತು ಅನಿಲಕ್ಕಾಗಿ ಆ ರಾಷ್ಟ್ರಗಳ ಮೇಲೆ ಹೆಚ್ಚಿನ ಅವಲಂಬನೆ ಹೊಂದಿರುವ ಭಾರತದಲ್ಲಿ ಈ ಮಿತವ್ಯಯ ಅಭಿಯಾನಕ್ಕೆ ಹೆಚ್ಚಿನ ಮಹತ್ವ ದೊರೆತಿದೆ.

ತೆಲಂಗಾಣ ರಾಜ್ಯಪಾಲರಿಂದ ಬೆಂಗಾವಲು ವಾಹನ ಕಡಿತ

ಹೈದರಾಬಾದ್: ತೆಲಂಗಾಣ ರಾಜ್ಯಪಾಲ ಶಿವ ಪ್ರತಾಪ್ ಶುಕ್ಲಾ ತಮ್ಮ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಶೇ.50ರಷ್ಟು ಕಡಿಮೆ ಮಾಡುವುದಾಗಿ ಘೋಷಿಸಿದರು. ರಾಜಕೀಯ ನಾಯಕರು ಅನಗತ್ಯ ವಾಹನ ಬಳಕೆ ತಗ್ಗಿಸಬೇಕು ಎಂದು ಕರೆ ನೀಡಿದ ಅವರು, ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಉತ್ತೇಜನ ನೀಡಬೇಕೆಂದರು.

ಮೋದಿ ಕ್ರಮ ಅನುಸರಿಸಿದ ತ್ರಿಪುರಾ ಮುಖ್ಯಮಂತ್ರಿ

ಅಗರ್ತಲಾ: ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸಾಹಾ ತಮ್ಮ ಬೆಂಗಾವಲಿಗೆ ನಾಲ್ಕು ವಾಹನಗಳಿಗೆ ಸೀಮಿತಗೊಳಿಸುವಂತೆ ಸೂಚನೆ ನೀಡಿದ್ದಾರೆ. ರಾಜ್ಯದಲ್ಲಿ ಸರ್ಕಾರಿ ನೌಕರರಿಗೆ ರೊಟೇಷನ್ ಆಧಾರಿತ ವರ್ಕ್ ಫ್ರಂ ಹೋಮ್ ವ್ಯವಸ್ಥೆಯೂ ಜಾರಿಯಾಗಿದೆ. ಇದೇ ವೇಳೆ ಸರ್ಕಾರಿ ವಾಹನಗಳ ದುರುಪಯೋಗ ಕುರಿತು ಸಾರ್ವಜನಿಕ ಚರ್ಚೆ ಹೆಚ್ಚಾಗಿದೆ.

ಸರ್ಕಾರ ಬೀಳಿಸುವ ಸಂಚು!

ಪುಟ 1 ➡ ಪಟಿಯಾಲಾ ಹೌಸ್‌ನ ವಿಶೇಷ ಎನ್‌ಐಎ ನ್ಯಾಯಾಲಯಕ್ಕೆ ಸಲ್ಲಿಸಲಾದ ಆರೋಪಪಟ್ಟಿಯಲ್ಲಿ ಆಮಿರ್ ರಶೀದ್ ಮಿರ್, ಜಾಸಿರ್ ಬಿಲಾಲ್ ವಾನಿ, ಡಾ. ಮುಜಮ್ಮಿಲ್ ಶಕೀಲ್, ಡಾ. ಅದೀಲ್ ಅಹ್ಮದ್ ರಾಥರ್, ಡಾ. ಶಾಹೀನ್ ಸಯೀದ್, ಮುಫ್ತಿ ಇರ್ಫಾನ್ ಅಹ್ಮದ್ ವಾಗೇ, ಸೋಯಬ್, ಡಾ. ಬಿಲಾಲ್ ನಸೀರ್ ಮಲ್ಲಾ ಹಾಗೂ ಯಾಸಿರ್ ಅಹ್ಮದ್ ದಾರ್ ಸೇರಿದಂತೆ 10 ಮಂದಿಯನ್ನು ಆರೋಪಿಗಳನ್ನಾಗಿ ಮಾಡಲಾಗಿದೆ. ಇವರ ವಿರುದ್ಧ ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ, ಭಾರತೀಯ ನ್ಯಾಯ ಸಂಹಿತೆ, ಸ್ಫೋಟಕ ವಸ್ತುಗಳ ಕಾಯ್ದೆ, ಶಸ್ತ್ರಾಸ್ತ್ರ ಕಾಯ್ದೆ ಹಾಗೂ ಸಾರ್ವಜನಿಕ ಆಸ್ತಿ ಹಾನಿ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಎನ್‌ಐಎ ತನಿಖೆಯ ಪ್ರಕಾರ, 2022ರಲ್ಲಿ ಶ್ರೀನಗರದಲ್ಲಿ ನಡೆದ ರಹಸ್ಯ ಸಭೆಯಲ್ಲಿ ಈ ಆರೋಪಿಗಳು ಅನ್ಸಾರ್ ಘಜ್ವತ್-ಉಲ್-ಹಿಂದ್ ಇಂಟರಿಂ ಎಂಬ ಹೊಸ ಘಟಕವನ್ನು ಮರುಸಂಘಟಿಸಿದ್ದರು. ಟರ್ಕಿ ಮಾರ್ಗವಾಗಿ ಅಫ್ಘಾನಿಸ್ತಾನಕ್ಕೆ ತೆರಳುವ ಹಿಜ್ರತ್ ಯತ್ನ ವಿಫಲವಾದ ಬಳಿಕ ಭಾರತದಲ್ಲೇ ಭಯೋತ್ಪಾದಕ ಚಟುವಟಿಕೆಗಳನ್ನು ವಿಸ್ತರಿಸಲು ಸಂಚು ರೂಪಿಸಲಾಗಿತ್ತು. ನಂತರ 'ಆಪರೇಷನ್ ಹೆವನ್‌ಲಿ ಹಿಂದ್' ಮೂಲಕ ಭಾರತ ಸರ್ಕಾರ ಉರುಳಿಸಿ ಶರಿಯಾ ಆಡಳಿತ ಜಾರಿಗೆ ತರುವ ಗುರಿ ಹೊಂದಿದ್ದರು ಎಂದು ಎನ್‌ಐಎ ಹೇಳಿದೆ.

ಶಸ್ತ್ರಾಸ್ತ್ರ ಸಂಗ್ರಹ: ಈ ಸಂಘಟನೆಯ ಸದಸ್ಯರು ಹೊಸ ಸದಸ್ಯರನ್ನು ನೇಮಕ ಮಾಡಿಕೊಳ್ಳುವುದು, ಜಿಹಾದಿ ಸಿದ್ಧಾಂತ ಪ್ರಚಾರ, ಶಸ್ತ್ರಾಸ್ತ್ರ ಸಂಗ್ರಹಣೆ ಹಾಗೂ ವ್ಯಾಪಕ ಪ್ರಮಾಣದಲ್ಲಿ ಸ್ಫೋಟಕ ತಯಾರಿಕೆಯಲ್ಲಿ ತೊಡಗಿದ್ದರು. ಮಾರುಕಟ್ಟೆಯಲ್ಲಿ ಸುಲಭವಾಗಿ ಸಿಗುವ ರಾಸಾಯನಿಕಗಳನ್ನು ಬಳಸಿ ವಿವಿಧ ಬಗೆಯ ಐಇಡಿ ಸ್ಫೋಟಕಗಳನ್ನು ತಯಾರಿಸಿ ಪರೀಕ್ಷೆ ನಡೆಸಿದ್ದರು ಎಂಬ ಸಂಗತಿಯೂ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಸ್ಫೋಟದಲ್ಲಿ ಬಳಸಲಾಗಿದ್ದ ಟಿಎಟಿಪಿ (ಟ್ರೈಅಸಿಟೋನ್ ಟ್ರೈಪೆರಾಕ್ಸೈಡ್) ಎಂಬ ಅತಿ ಅಪಾಯಕಾರಿ ಸ್ಫೋಟಕವನ್ನು ಆರೋಪಿಗಳು ರಹಸ್ಯವಾಗಿ ತಯಾರಿಸಿದ್ದರು. ಇದಕ್ಕಾಗಿ ವಿಶೇಷ ಪ್ರಯೋಗ ನಡೆಸಿ ಸ್ಫೋಟಕ ಮಿಶ್ರಣವನ್ನು ಪರಿಪೂರ್ಣಗೊಳಿಸಿದ್ದರು ಎಂದು ಎನ್‌ಐಎ ತಿಳಿಸಿದೆ. ಈ ಭಯೋತ್ಪಾದಕ ಘಟಕದಲ್ಲಿ ವೈದ್ಯಕೀಯ ವಲಯದವರು ಭಾಗಿಯಾಗಿದ್ದರಿಂದ ಶ್ರೀನಗರ ಪೊಲೀಸರು ಇದನ್ನು ವೈಟ್ ಕಾಲರ್ ಅಥವಾ ಡಾಕ್ಟರ್ ಮಾಡ್ಯೂಲ್ ಎಂದು ಗುರುತಿಸಿದ್ದರು.

ಡ್ರೋನ್, ರಾಕೆಟ್ ಬಳಕೆಗೆ ಸಂಚು

ಪುಟ 1 ➡ 588 ಮೌಖಿಕ ಸಾಕ್ಷ್ಯಗಳು, 395ಕ್ಕೂ ಹೆಚ್ಚು ದಾಖಲೆಗಳು ಹಾಗೂ 200ಕ್ಕೂ ಅಧಿಕ ವಶಪಡಿಸಿಕೊಂಡ ವಸ್ತುಗಳನ್ನು ಆರೋಪಪಟ್ಟಿಯಲ್ಲಿ ಸೇರಿಸಲಾಗಿದೆ. ಘಟನಾ ಸ್ಥಳ ಹಾಗೂ ವಿವಿಧ ಪ್ರದೇಶಗಳಿಂದ ಸಂಗ್ರಹಿಸಿದ ಸಾಕ್ಷ್ಯಗಳನ್ನು ಡಿಎನ್‌ಎ ಪರೀಕ್ಷೆ, ಫರೆನ್ಸಿಕ್ ವಿಶ್ಲೇಷಣೆ ಮತ್ತು ಧ್ವನಿ ಪರೀಕ್ಷೆಗಳಿಗೆ ಒಳಪಡಿಸಲಾಗಿತ್ತು ಎಂದು ಎನ್‌ಐಎ ಹೇಳಿದೆ.

ಕಿರುಸುದ್ದಿ

ನಂದಿ ಹಿಲ್ಸ್ ಮಾನ್ಸೂನ್ ರನ್‌ಗೆ ನೋಂದಣಿ ಆರಂಭ



• **ದೊಡ್ಡಬಳ್ಳಾಪುರ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ದಿವ್ಯಶ್ರೀ ನಂದಿ ಹಿಲ್ಸ್ ಮಾನ್ಸೂನ್ ರನ್-2026 ಎರಡನೇ ಆವೃತ್ತಿಯನ್ನು ಆಗಸ್ಟ್ 9ರಂದು ನಂದಿ ಬೆಟ್ಟದಲ್ಲಿ ಆಯೋಜಿಸಲಾಗುತ್ತಿದೆ. ನಂದಿ ಹಿಲ್ಸ್ ಮಾನ್ಸೂನ್ ರನ್ ನ ಎರಡನೇ ಆವೃತ್ತಿಯಲ್ಲಿ 10ಕೆ ಮತ್ತು 20ಕೆ (ಮ್ಯಾರಥಾನ್)ಓಟದ ಸ್ಪರ್ಧೆ ಏರ್ಪಡಿಸಲಾಗಿದ್ದು, 18 ವರ್ಷ ಮೇಲ್ಪಟ್ಟವರು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಈಗಾಗಲೇ ನೋಂದಣಿ ಆರಂಭವಾಗಿದ್ದು ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಹಾಗೂ ನೊಂದಣಿಗೆ ಲಿಂಕ್ ಮೂಲಕ ನೋಂದಣಿ ಮಾಡಿಕೊಂಡು ಭಾಗವಹಿಸಬಹುದಾಗಿದೆ.

ಅಪಘಾತ: ವ್ಯಕ್ತಿ ಸಾವು

• **ದಾಬಸ್ ಪೇಟೆ:** ಕಾರು ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೊಬ್ಬರು ಸಾವನ್ನಪ್ಪಿರುವ ಘಟನೆ ಮಧುಗಿರಿ ಕೊರಟಗೆರೆ ರಸ್ತೆಯ ನರಸೀಪುರ ಶೋಪಿನಲ್ಲಿ ಗುರುವಾರ ಬೆಳಗ್ಗೆ 11.30ರ ಸುಮಾರಿಗೆ ನಡೆದಿದೆ. ತಿಮ್ಮಪ್ಪನ ಪಾಳ್ಯದ ಹನುಮಂತರಾಯಪ್ಪ ಮೃತ ದುರ್ದೈವಿ. ದಾಬಸ್ ಪೇಟೆಗೆ ಹೋಗಿ ಮಂಡಿ ನೋವಿಗೆ ಇಂಜೆಕ್ಷನ್ ತೆಗೆದುಕೊಂಡು ಆಟೋದಲ್ಲಿ ನರಸೀಪುರ ಶೋಪಿನಲ್ಲಿ ಇಳಿದು, ರಸ್ತೆ ದಾಟುವಾಗ ದಾಬಸ್ ಪೇಟೆ ಕಡೆಯಿಂದ ಬಂದ ಕೊರಟಗೆರೆ ಮೂಲದ ವ್ಯಾಗನಾರ್ ಕಾರು ಡಿಕ್ಕಿ ಹೊಡೆದರಿಂದ ತಲೆಗೆ ಪೆಟ್ಟಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಕಾರು ನಿಲ್ಲಿಸದೆ ಹೋಗಿದ್ದು, ಸ್ಥಳೀಯರು ಮಾಕೇನಹಳ್ಳಿ ಬಳಿ ಕಾರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ದಾಬಸ್ ಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಶವ ನೀಡಲಾಯಿತು. ದಾಬಸ್ ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಪಂ ಮಟ್ಟದಲ್ಲಿ ಹವಾಮಾನ ಕ್ರಿಯಾಯೋಜನೆ ತಯಾರಿ



• **ಬೆಂಗಳೂರು:** ರಾಜ್ಯಾದ್ಯಂತದ ಎಲ್ಲಾ 5,994-ಗ್ರಾಮ ಪಂಚಾಯತ್ ಮತ್ತು 314 ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡ ಪ್ರತ್ಯೇಕ ಗ್ರಾಮ ಪಂಚಾಯತ್ ಮಟ್ಟದಲ್ಲಿ ಹವಾಮಾನ ಕ್ರಿಯಾ ಯೋಜನೆಗಳನ್ನು ರೂಪಿಸುವತ್ತ ರಾಜ್ಯ ಸರ್ಕಾರವು ಕೆಲಸ ಮಾಡುತ್ತಿದೆ ಎಂದು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ಆಡಳಿತ ವಿಭಾಗದ ನಿರ್ದೇಶಕ ಟಿ.ಮಹೇಶ್ ಹೇಳಿದರು.

ಬೆಂಗಳೂರು ಕೈಗಾರಿಕಾ ಮತ್ತು ವಾಣಿಜ್ಯ ಮಂಡಳಿಯಿಂದ ಗುರುವಾರ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಳ್ಳಲಾದ ಸುಸ್ಥಿರತೆಯನ್ನು ಹೆಚ್ಚಿಸುವುದು. ಸಹಯೋಗ ಮತ್ತು ನಾವೀನ್ಯತೆ ನೆಟ್-ಝೀರೋವನ್ನು ವೇಗಗೊಳಿಸುವುದು ಎಂಬ ಸಮಾವೇಶದಲ್ಲಿ ಮಾತನಾಡಿದ ಅವರು, ಈ ನಿಟ್ಟಿನಲ್ಲಿ, ರಾಜ್ಯ ಸರ್ಕಾರವು ರಾಜ್ಯಾದ್ಯಂತದ ಎಲ್ಲಾ 5,994-ಗ್ರಾಮ ಪಂಚಾಯತ್ ಮತ್ತು 314 ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡ ಪ್ರತ್ಯೇಕ ಗ್ರಾಮ ಪಂಚಾಯತ್ ಮಟ್ಟದಲ್ಲಿ ಹವಾಮಾನ ಕ್ರಿಯಾ ಯೋಜನೆಗಳನ್ನು ರೂಪಿಸುವತ್ತ ಕೆಲಸ ಮಾಡುತ್ತಿದೆ ಎಂದರು.

ವೇಶ್ಯಾವಾಟಿಕೆ: ಇಬ್ಬರು ಮಹಿಳೆಯರ ಬಂಧನ

• **ಬೆಂಗಳೂರು:** ಮನೆಯನ್ನು ಬಾಡಿಗೆಗೆ ಪಡೆದು ವೇಶ್ಯಾವಾಟಿಕೆ ನಡೆಸುತ್ತಿದ್ದ ಇಬ್ಬರು ಮಹಿಳೆಯರನ್ನು ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಪೊಲೀಸರು ಬಂಧಿಸಿದ್ದಾರೆ. ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಆಚಿತ್ ನಗರದ 3ನೇ ಕ್ರಾಸ್‌ನ ಬಾಡಿಗೆ ಮನೆಯಲ್ಲಿ ಹಾಗೂ ಬ್ಯಾಡರಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಅಂದ್ರಹಳ್ಳಿ ಮುಖ್ಯರಸ್ತೆಯ ವಿದ್ಯಾಮಾನ್ಯನಗರದ ಮನೆಯೊಂದರಲ್ಲಿ ಮಹಿಳೆಯರನ್ನು ಇಟ್ಟುಕೊಂಡು ವೇಶ್ಯಾವಾಟಿಕೆ ನಡೆಸಲಾಗುತ್ತಿದೆ ಎಂಬ ಮಾಹಿತಿ ಸಿಸಿಬಿ ಪೊಲೀಸರಿಗೆ ಲಭಿಸಿತ್ತು. ಈ ಮಾಹಿತಿ ಆಧಾರದ ಮೇಲೆ ಪ್ರತ್ಯೇಕ ದಿನಗಳಂದು ಎರಡು ಸ್ಥಳಗಳ ಮೇಲೆ ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಪೊಲೀಸರು ದಾಳಿ ನಡೆಸಿದ್ದಾರೆ. ದಾಳಿಯ ಸಂದರ್ಭದಲ್ಲಿ ವೇಶ್ಯಾವಾಟಿಕೆಗೆ ದೂಡಿದ್ದ ಮೂವರು ಮಹಿಳೆಯರನ್ನು ರಕ್ಷಿಸಲಾಗಿದ್ದು, ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಇಬ್ಬರು ಮಹಿಳೆಯರನ್ನು ಬಂಧಿಸಲಾಗಿದೆ. ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಮನೆಯಲ್ಲಿ ವೇಶ್ಯಾವಾಟಿಕೆ ನಡೆಸುತ್ತಿರುವುದಾಗಿ ಆರೋಪಿ ಮಹಿಳೆಯರು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ. ಸೋಲದೇವನಹಳ್ಳಿ ಹಾಗೂ ಬ್ಯಾಡರಹಳ್ಳಿ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವೈಟ್‌ಟಾಪಿಂಗ್ ರಸ್ತೆ, ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ಪರಿಶೀಲಿಸಿದ ಸಿಎಂ ಸಿದ್ಧರಾಮಯ್ಯ

ಕಾಮಗಾರಿಯಲ್ಲಿ ಶೇ.26.07 ಪ್ರಗತಿ ಸಾಧನೆ

• **ಮೈಸೂರು:** ಮುಖ್ಯಮಂತ್ರಿ ಸಿದ್ದರಾಮಯ್ಯನವರು ಗುರುವಾರ ನಗರದಲ್ಲಿ ನಡೆಯುತ್ತಿರುವ ವೈಟ್‌ಟಾಪಿಂಗ್ ರಸ್ತೆ, ಭೂಗತ ಕೇಬಲ್ ಅಳವಡಿಸುವ ಕಾಮಗಾರಿ ಪರಿಶೀಲನೆ ನಡೆಸಿದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್)ದಿಂದ ಮೈಸೂರು ನಗರ ವ್ಯಾಪ್ತಿಯಲ್ಲಿ (ರಿಂಗ್ ರೋಡ್ ಒಳ ಭಾಗದಲ್ಲಿ) ಹಾಲಿ ಇರುವ 11 ಕೆ.ವಿ. ಓವರ್ ಹೆಡ್ ವಿದ್ಯುತ್ ಮಾರ್ಗಗಳನ್ನು ಭೂಗತ ಕೇಬಲ್‌ಗೆ ಬದಲಾಯಿಸುವ ಕಾಮಗಾರಿ ಪರಿಶೀಲಿಸಿದರು.

ಮೈಸೂರಿನ ಶ್ರೀರಾಂಪುರದಲ್ಲಿ 11 ಕೆ.ವಿ. ಓವರ್‌ಹೆಡ್ ವಿದ್ಯುತ್ ಮಾರ್ಗಗಳನ್ನು ಭೂಗತ ಕೇಬಲ್‌ಗೆ ಬದಲಿಸುವ ನಿಟ್ಟಿನಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಯ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸೆಸ್ಕ್ ಅಧಿಕಾರಿಗಳಿಂದ ಕಾಮಗಾರಿ ಸಂಪೂರ್ಣ ವಿವರಗಳನ್ನು ಪಡೆದುಕೊಂಡರು. ಈ ಸಂದರ್ಭದಲ್ಲಿ ಸೆಸ್ಕ್‌ನ ಮೈಸೂರು ವೃತ್ತದ ಅಧೀಕ್ಷಕ ಇಂಜಿನಿಯರ್ ಸುನೀಲ್ ಕುಮಾರ್ ಅವರು, ಮೈಸೂರು ನಗರ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಭೂಗತ ಕೇಬಲ್ ಅಳವಡಿಸುವ ಕಾಮಗಾರಿಯ ಪ್ರಗತಿ ಕುರಿತಂತೆ ಮಾಹಿತಿ ನೀಡಿದರು.

ಮೈಸೂರು ನಗರ ವ್ಯಾಪ್ತಿಯಲ್ಲಿ (ರಿಂಗ್ ರೋಡ್ ಒಳಭಾಗದಲ್ಲಿ) ಒಟ್ಟು 588.24 ಕೋಟಿ ರೂ. ವೆಚ್ಚದಲ್ಲಿ ಸದರಿ ಕಾಮಗಾರಿ ಕೈಗೊಳ್ಳಲಾಗಿದ್ದು, 871.09 ಕಿ.ಮೀ ವ್ಯಾಪ್ತಿಯಲ್ಲಿನ 11 ಕೆ.ವಿ. ಓವರ್ ಹೆಡ್ ವಿದ್ಯುತ್ ಮಾರ್ಗಗಳನ್ನು ಭೂಗತ ಕೇಬಲ್‌ಗೆ ಬದಲಾಯಿಸುವ ಕೆಲಸ ನಡೆಸಲಾಗುತ್ತಿದೆ. ಇದಕ್ಕಾಗಿ 474 ಆರ್.ಎಂ.ಯು ಮತ್ತು 11 ಸಿ.ಎಸ್.ಎಸ್. ಅಳವಡಿಸಲು ಉದ್ದೇಶಿಸಲಾಗಿದ್ದು,



ಕಾಮಗಾರಿಯನ್ನು 4 ವಿವಿಧ ಗುತ್ತಿಗೆದಾರರಿಗೆ ವಹಿಸಲಾಗಿದೆ. ಪ್ರಸ್ತುತ 227.12 ಕಿ.ಮೀ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕಾಮಗಾರಿ ಮುಗಿದಿದ್ದು, 160 ಆರ್‌ಎಂಯು ಅಳವಡಿಸುವ ಮೂಲಕ ಶೇ.26.07 ಪ್ರಗತಿ ಸಾಧಿಸಲಾಗಿದೆ. ಕಾಮಗಾರಿ ಮುಗಿಸಲು 2 ವರ್ಷ ಅವಧಿ ನಿಗದಿಪಡಿಸಿದ್ದು, ನಿಗದಿತ ವೇಳೆಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಅಗತ್ಯ ಕ್ರಮಕೈಗೊಳ್ಳಲಾಗಿದೆ, ಎಂದು ವಿವರಿಸಿದರು.

12 ರಸ್ತೆ ವೈಟ್ ಟಾಪಿಂಗ್ ಕಾಮಗಾರಿ ಪರಿಶೀಲನೆ: ಸಿಎಂ ಸಿದ್ದರಾಮಯ್ಯನವರು ನಗರದಲ್ಲಿ 12 ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿ ಮಂಜೂರಾಗಿದ್ದು, ಮಾನಂದವಾಡಿ ರಸ್ತೆ ಎನ್. ಐ ಕಾಲೇಜು ಬಳಿ ಕಾಮಗಾರಿ ಪ್ರಗತಿಯಲ್ಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಪರಿಶೀಲನೆ ನಡೆಸಿದರು.

ಮೈಸೂರು ನಗರ ವ್ಯಾಪ್ತಿಯಲ್ಲಿನ ಪ್ರಮುಖ 12 ರಸ್ತೆಗಳಲ್ಲಿ ಒಟ್ಟು 46.088 ಕಿಮೀ ಉದ್ದಕ್ಕೆ ರೂ.393.85 ಕೋಟಿಗಳ ವೆಚ್ಚದಲ್ಲಿ ವೈಟ್ ಟಾಪಿಂಗ್ ಮಾಡಿ ರಸ್ತೆ ಅಭಿವೃದ್ಧಿ ಪಡಿಸುವ ಕಾಮಗಾರಿಯನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿರುತ್ತದೆ. ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಶಾಸಕ ಟಿ.ಎಸ್. ಶ್ರೀವತ್ಸ , ಕೆ. ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಪ್ರಾದೇಶಿಕ ಆಯುಕ್ತರು ಹಾಗೂ ಸೆಸ್ಕ್ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ನಿತೀಶ್ ಪಾಟೀಲ್, ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಸೆಸ್ಕ್‌ನ ಮುಖ್ಯ ಇಂಜಿನಿಯರ್ ಎಲ್. ಲೋಕೇಶ್ ಸೇರಿದಂತೆ ಇತರರಿದ್ದರು.

ಕನಿಷ್ಠ ನಿರ್ವಹಣೆ

ವೈಟ್‌ಟಾಪಿಂಗ್ ಮಾಡುವುದರಿಂದ ಡಾಂಬಾರು ರಸ್ತೆಗೆ ಹೋಲಿದಾಗ ವೈಟ್ ಟಾಪಿಂಗ್ ರಸ್ತೆಯು ಗುಂಡಿ ಮುಕ್ತವಾಗಿರುತ್ತದೆ. ಸುದೀರ್ಘ ಬಾಳಿಕೆ ಬರುತ್ತದೆ ಹಾಗೂ ರಸ್ತೆಗೆ ಅತ್ಯಂತ ಕನಿಷ್ಠ ನಿರ್ವಹಣೆ ಅಗತ್ಯವಿರುತ್ತದೆ ಎಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದರು.

ಗೊಂದಲಗಳಿಗೆ ತೆರೆ | ತಾಲೂಕು ಯಾದವ ಸಂಘದ ಅಧ್ಯಕ್ಷ ವಿ. ಪ್ರಸಾದ್ ಸ್ಪಷ್ಟನೆ

ಯಾದವ ಸಮುದಾಯದಿಂದ ಭವನ ಉದ್ಘಾಟನೆ

• **ಹೊಸಕೋಟೆ:** ಯಾದವ ಭವನ ಸಂಪೂರ್ಣವಾಗಿ ನಿರ್ಮಾಣಗೊಂಡಿದ್ದು ಉದ್ಘಾಟನೆಗೆ ಮುಖ್ಯಮಂತ್ರಿಗಳು, ಸಚಿವರುಗಳು ಹಾಗೂ ರಾಜ್ಯಾಧ್ಯಕ್ಷರನ್ನು ಆಹ್ವಾನಿಸಿ ಅದ್ದೂರಿಯಾಗಿ ಶೀಘ್ರದಲ್ಲೇ ಕಾರ್ಯಕ್ರಮಮಾಡಲಾಗುವುದುಎಂದುತಾಲೂಕು ಯಾದವ ಸಂಘದ ಅಧ್ಯಕ್ಷ ವಿ.ಪ್ರಸಾದ್‌ತಿಳಿಸಿದ್ದಾರೆ.

ನಗರದ ಯಾದವ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಸಮುದಾಯ ಉದ್ಘಾಟನಾ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಸಮಯ ನಿಗದಿ ಮಾಡಿ ಕಾರ್ಯಕ್ರಮ ಆಯೋಜನೆ ಮಾಡಲಾಗುವುದು, ಅದಕ್ಕೂ ಮುನ್ನ ಅಕ್ಕಪಕ್ಕದ ಸುಮಾರು ಐದಾರು ಜಿಲ್ಲೆಗಳ ಯಾದವ ಸಂಘದ ಪದಾಧಿಕಾರಿಗಳ ಸಭೆ ಕರೆಯುವ ಮೂಲಕ ಹೊಸಕೋಟೆ ತಾಲೂಕಿನಲ್ಲಿ ಅದ್ದೂರಿ ಸಮಾವೇಶ ಹಮ್ಮಿಕೊಳ್ಳಲಾಗುವುದು.

ಈ ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು, ಸಮುದಾಯ ಭವನ ಕೇವಲ ಸಮುದಾಯದವರಿಗಷ್ಟೇ ಅಲ್ಲದೆ ಎಲ್ಲಾ ಸಮುದಾಯದವರಿಗೂ ಕಾರ್ಯಕ್ರಮಗಳಿಗೆ ನೀಡಲಾಗುವುದು ಎಂದ ಅವರು ನೆನ್ನೆ ಯಾದವ ಭವನದಲ್ಲಿ ನಡೆದ ಪೂಜಾ ಕಾರ್ಯಕ್ರಮಕ್ಕೆ ಕೇವಲ ಸಮುದಾಯದ ಸ್ವಾಮಿಜಿ ಹಾಗೂ ತಾಲೂಕು ಯಾದವ ಸಮುದಾಯದವರನ್ನು ಮಾತ್ರ ಆಹ್ವಾನಿಸಲಾಗಿತ್ತು, ನಮ್ಮ ಸಮುದಾಯದ ಕೆಲವರು ಶಾಸಕರಿಗೆ ತಪ್ಪು ಮಾಹಿತಿ ನೀಡಿ ಲೋಕಾರ್ಪಣೆ ಎಂದು ಹೇಳಿ ಆಹ್ವಾನಿಸಿ ತಪ್ಪು ಮಾಹಿತಿ ನೀಡಿ ದಾರಿ



ತಪ್ಪಿಸಿದ್ದಾರೆ ಎಂದರು.

1990 ರಲ್ಲಿ ಕಾನೂನು ಬದ್ಧವಾಗಿ ತಾಲೂಕು ಯಾದವ ಸಂಘ ಸ್ಥಾಪಿಸಲಾಯಿತು, ಸಹಕಾರ ಸಂಘಗಳ ಅಧಿನಿಯಮಾನುಸಾರ ನೋಂದಾಣಿಯಾಗಿದ್ದು ಭವನ ನಿರ್ಮಾಣಕ್ಕೆ ಸಂಪೂರ್ಣ ಜವಾಬ್ದಾರಿ ಸಂಘ ಹೊತ್ತುಕೊಂಡಿದೆ, ಇತ್ತೀಚೆಗೆ ರಾಜಕೀಯ ಲಾಭಕ್ಕಾಗಿ ನಮ್ಮ ಸಮುದಾಯದವರು ಬೇರೆ ಬೇರೆ ಸಂಘಗಳನ್ನು ಸ್ಥಾಪಿಸಿಕೊಂಡು ಭವನ ನಿರ್ಮಾಣಕ್ಕೆ ನಮ್ಮ ಕೊಡುಗೆ ಅಪಾರ ಎನ್ನುತ್ತಿದ್ದಾರೆ, ಆದರೆ ತಾಲೂಕು ಯಾದವ ಸಂಘ ಬಿಟ್ಟ ಬೇರಾವ ಸಂಘದ ಪಾತ್ರ ಭವನ ನಿರ್ಮಾಣದಲ್ಲಿ ಇಲ್ಲ, ಹಾಗೂ ಭವನ ನಿರ್ಮಾಣಕ್ಕೆ 2017ರಲ್ಲಿ ಸರ್ವೆ ನಂ 300ರಲ್ಲಿ ಜಾಗವನ್ನು ಸರ್ಕಾರದಿಂದ ಮಂಜೂರು ಮಾಡಿಸಿ ಸಿದ್ದರಾಮಯ್ಯ ಸರ್ಕಾರದಿಂದ 30 ಲಕ್ಷ ಅನುದಾನ, ಮಾಜಿ ಸಂಸದ ವೀರಪ್ಪ ಮೊಯ್ಲಿ ಸಂಸದರ ಅನುದಾನದಲ್ಲಿ 20 ಲಕ್ಷ ದೇಣಿಗೆ, ಅಂದಿನ ಶಾಸಕ ಎಂಟಿಬಿ ನಾಗರಾಜ್ ರಿಂದ 15 ಲಕ್ಷ ಇಂದಿನ ಶಾಸಕ ಶರತ್ ಬಚ್ಚೇಗೌಡರಿಂದ 25 ಲಕ್ಷ ದೇಣಿಗೆ ಹಾಗೂ ತಾಲೂಕು ಸಮುದಾಯದ ಮುಖಂಡರು ಹಾಗೂ ಸಮುದಾಯದ ಪ್ರತಿ ಕುಟುಂಬದಿಂದ ದೇಣಿಗೆ ಪಡೆದು ನಿರ್ಮಾಣಗೊಳಿಸಲಾಗಿದೆ, ಕೆಲವರು ರಾಜಕೀಯ ಉದ್ದೇಶಕ್ಕಾಗಿ ಭವನ ನಿರ್ಮಾಣದಲ್ಲಿ ಗೊಂದಲ ಮೂಡಿಸುವ ಕೆಲಸ ಮಾಡುತಿದ್ದಾರೆ, ಸಮುದಾಯ ಒಡೆಯುವ ಕೆಲಸ ಮಾಡಬಾರದು, ವಿ.ಪ್ರಸಾದ್, ತಾಲೂಕು ಯಾದವ ಸಂಘದ ಅಧ್ಯಕ್ಷ.

ತಾಲೂಕು ಯಾದವ ಸಂಘದ ಉಪಾಧ್ಯಕ್ಷ ವೆಂಕಟೇಗೌಡ, ಪ್ರಧಾನ ಕಾರ್ಯದರ್ಶಿ ಬಿ ಚನ್ನಪ್ಪ, ಸಂಘಟನಾ ಕಾರ್ಯದರ್ಶಿ ಶಂಕರನಾರಾಯಣ, ಖಜಾಂಚಿ ಮುನಿಆಣ್ಣಯ್ಯ, ನಿರ್ದೇಶಕರುಗಳಾದ ವೆಂಕಟೇಶಪ್ಪ, ರಾಮಸ್ವಾಮಿ, ನಾರಾಯಣಸ್ವಾಮಿ, ಕೆ.ಟಿ. ರಾಜಪ್ಪ, ಚಿಕ್ಕರಾಜಪ್ಪ, ಎ.ವಿ. ಮುನಿರಾಜ್, ಎ.ಸಿ. ಆನಂದ್‌ಕುಮಾರ್, ಡಿ.ನಾರಾಯಣಸ್ವಾಮಿ, ಚರಣ್ ಕುಮಾರ್ ಹಾಜರಿದ್ದರು.

ಒತ್ತುವರಿದಾರರ ವಿರುದ್ಧ ಕ್ರಮ ಕೈಗೊಳ್ಳಿ

» ಹಿಂದೂ ದೇವಾಲಯದ ಒತ್ತುವರಿ ಜಾಗ ಉಳಿಸಲು ಒತ್ತಾಯ

• **ದೇವನಹಳ್ಳಿ:** ತಾಲೂಕಿನ ವಿಜಯಪುರ ಹೋಬಳಿ, ವೆಂಕಟಗಿರಿಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೊಡ್ಡಸಾಗರಹಳ್ಳಿ ಗ್ರಾಮದಲ್ಲಿ, ಸ.ನಂ.6ರಲ್ಲಿ ಸರ್ಕಾರಿ ಖರಾಬ್ ಜಾಗದ ಒತ್ತುವರಿ ತೆರವುಗೊಳಿಸಿ, ಒತ್ತುವರಿದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಭೂ ನ್ಯಾಯ ಮಂಡಳಿ ಮಾಜಿ ಸದಸ್ಯ ಎನ್. ಶ್ರೀನಿವಾಸ್ ಒತ್ತಾಯಿಸಿದ್ದಾರೆ ಎಂದು ಸುದ್ದಿಗಾರರೊಂದಿಗೆ ಮಾತನಾಡಿದರು.



ದೊಡ್ಡಸಾಗರಹಳ್ಳಿ ಗ್ರಾಮದಲ್ಲಿ, ಸರ್ವೆ ನಂ.6ರಲ್ಲಿ, ಸರ್ಕಾರಿ ಖರಾಬ್ ಜಾಗವಿದೆ.ಈ ಜಾಗ ದಲ್ಲಿ ಕಾಟಮರಾಯನ ದೇವಸ್ಥಾನ, ಆಂಜನೇಯ ಸ್ವಾಮಿ ದೇವಸ್ಥಾನ, ಹಾಗೂ ಸಪ್ಪಲಮ್ಮ ದೇವಸ್ಥಾನ ಇದೆ. ಇದರ ಜೊತೆಯಲ್ಲಿ, ಗ್ರಾಮದ ಯುವಕರಿಗೆ ಅನುಕೂಲ ಕಲ್ಪಿಸಲು ಹಾಗೂ ಅವರಲ್ಲಿ ಕ್ರೀಡಾಸಕ್ತಿಯನ್ನು ಮೂಡಿಸಲು ಗ್ರಾಮ ಪಂಚಾಯಿತಿ ವತಿಯಿಂದ ಖೋ-ಖೋ ಆಟದ ಮೈದಾನವನ್ನು ನಿರ್ಮಾಣ ಮಾಡಲಾಗಿತ್ತು. ಈ ಸರಕಾರಿ ಖರಾಬ್ ಜಾಗದಲ್ಲಿಮರಗಿಡಗಳನ್ನು ನೆಟ್ಟು ಪೋಷಣೆ ಮಾಡಲಾಗಿತ್ತು. ಆದರೆ, ಕೆಲವು ಕಿಡಿಗೇಡಿಗಳು ಮರ-ಗಿಡಗಳನ್ನು ಕಡಿದು, ಈ ಜಾಗವನ್ನು ಒತ್ತುವರಿ ಮಾಡಿಕೊಳ್ಳಲು ಮುಂದಾಗಿದ್ದಾರೆ.

ಜಾಗ ಒತ್ತುವರಿ ಮಾಡಿಕೊಂಡು, ಕಲ್ಲಿನ ಕೂಚಗಳನ್ನು ಸ್ಥಾಪನೆ ಮಾಡುತ್ತಿರುವ ಕುರಿತು, ತಹಸೀಲ್ದಾರರ ಗಮನಕ್ಕೂ ತಂದಿದ್ದೇವೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಜಾಗವನ್ನು ಒತ್ತುವರಿ ಮಾಡಿಕೊಳ್ಳುತ್ತಿರುವವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ಸರ್ಕಾರಿ ಖರಾಬ್ ಜಾಗದಲ್ಲಿ ಹಿಂದೂ ದೇವಾಲಯಗಳ ನಿರ್ಮಾಣಕ್ಕೆ ಅಗತ್ಯ ಸಹಕಾರ ನೀಡಬೇಕು. ಈ ಖರಾಬ್ ಜಾಗದ ಸುತ್ತಲೂ ಸ್ಥಾಪನೆ ಮಾಡುತ್ತಿರುವ ಕಲ್ಲಿನ ಕೂಚಗಳನ್ನು ತೆರವುಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಗಾಂಜಾ ಜಪ್ತಿ

• **ಬೆಂಗಳೂರು:** ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಭಾರಿ ಪ್ರಮಾಣದ ಮಾದಕ ವಸ್ತುವನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಬ್ಯಾಂಕಾಕ್‌ನಿಂದ ಆಗಮಿಸಿದ ಪ್ರಯಾಣಿಕನೊಬ್ಬನನ್ನು ತಡೆದು ತಪಾಸಣೆ ನಡೆಸಿದಾಗ ಆತನಿಂದ ಅಂದಾಜು 2.98 ಕೋಟಿ ರೂ.ಮೌಲ್ಯದ 8.5 ಕೆ.ಜಿ. ಹೈಡ್ರೋಪೋನಿಕ್ ಗಾಂಜಾವನ್ನು ಜಪ್ತಿ ಮಾಡಿದ್ದಾರೆ. ಬುಧವಾರ ನಡೆದ ಈ ಕಾರ್ಯಾಚರಣೆಯಲ್ಲಿ ಆರೋಪಿಯು ತಾನು ತಂದಿದ್ದ ಚಾಕ್-ಇನ್ ಬ್ಯಾಗೇಜ್ ಒಳಗೆ ಚಾಣಾಕ್ಷತನದಿಂದ ಈ ಮಾದಕ ವಸ್ತುವನ್ನು ಬಚ್ಚಿಟ್ಟು ಸಾಗಿಸಲು ಯತ್ನಿಸಿದ್ದ. ಸದ್ಯ ಆರೋಪಿಯನ್ನು ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದು, ಎನ್‌ಡಿಪಿಎಸ್ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಿ ಬಂಧಿಸಿದ್ದಾರೆ. ಪ್ರಕರಣದ ಕುರಿತು ತನಿಖೆ ಮುಂದುವರಿದಿದೆ.

ಮ್ಯಾಗ್ನೆಟ್ ಯೋಜನೆ ಕೈಬಿಡುವಂತೆ ಒತ್ತಾಯ



» ಪೋಷಕರು, ಸಾರ್ವಜನಿಕರಿಂದ ಕ್ಷೇತ್ರಶಿಕ್ಷಣಾಧಿಕಾರಿಗೆ ಮನವಿ ಪತ್ರ ಸಲ್ಲಿಕೆ

• **ದೊಡ್ಡಬಳ್ಳಾಪುರ:** ರಾಜ್ಯ ಸರ್ಕಾರವು ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಹೆಸರಲ್ಲಿ ಬಡ ರೈತ-ಕಾರ್ಮಿಕರ, ಕೂಲಿಕಾರರ ಮಕ್ಕಳಿಂದ ಶಿಕ್ಷಣವು ದೂರ ಸರಿಯುವಂತೆ ಮಾಡುತ್ತಿದೆ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ರಾಜ್ಯ ಸಂಘಟಕರಾದ ತುಳಸಿ ತಿಳಿಸಿದರು.

ಅವರು ನಗರದ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಮ್ಯಾಗ್ನೆಟ್ ಯೋಜನೆ ಕೈಬಿಡುವಂತೆ ಒತ್ತಾಯಿಸಿ ಪೋಷಕರು ಹಾಗೂ ಸಾರ್ವಜನಿಕರು ನೀಡಿದ ಮನವಿ ಪತ್ರ ಸಲ್ಲಿಸಿದ ಸಂದರ್ಭದಲ್ಲಿ ಮಾತನಾಡಿದರು. ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಜೊತೆಗೆ ಇದೀಗ ಪಿ.ಎಂ.ಶ್ರೀ ಶಾಲೆಗಳಿಗೆ ಕೂಡ ಸುತ್ತಲಿನ ಶಾಲೆಗಳನ್ನು ವಿಲೀನಗೊಳಿಸುವ ಪ್ರಕ್ರಿಯೆ ಆರಂಭಿಸಲಾಗಿದೆ. ಸರ್ಕಾರ ಪಿ.ಎಮ್. ಶ್ರೀ ಯೋಜನೆಯ ಹೆಸರಿನಲ್ಲಿ ರಾಜ್ಯಾದ್ಯಂತ 317 ಶಾಲೆಗಳನ್ನು ವಿಲೀನ ಮಾಡಿಸಲು ಆದೇಶ ಹೊರಡಿಸಿದೆ. ಪಿಯು ಕಾಲೇಜುಗಳನ್ನು ಕೂಡ ವಿಲೀನಗೊಳಿಸುವ ಮೂಲಕ ಸರ್ಕಾರಿ ಶಾಲಾ ಕಾಲೇಜುಗಳನ್ನು ಮುಚ್ಚುವ ಪ್ರಯತ್ನ ಮಾಡುತ್ತಿದೆ ಎಂದರು. ಸರ್ಕಾರಿ ಶಾಲೆಗಳನ್ನು ಮುಚ್ಚುವ ಅಂಶವನ್ನು ನಯವಾಗಿ ತಳ್ಳಿ ಹಾಕುತ್ತಾ ಗ್ಯಾರಂಟಿಗಳ ಮುಖವಾಡದಲ್ಲಿ ನಾಡಿನ ಜನತೆಗೆ ರಾಜ್ಯ ಕಾಂಗ್ರೆಸ್ ಸರ್ಕಾರವು ಮೋಸ ಮಾಡುತ್ತಿದೆ ಎಂದರು.

ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಸದಸ್ಯರು ಹಾಗೂ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ರಾಜ್ಯ ಸೆಕ್ರೇಟರಿಯೇಟ್ ಸದಸ್ಯೆ ಎಚ್.ಎಲ್ .ನಿರ್ಮಲಾ ಮಾತನಾಡಿ, ಶಿಕ್ಷಣ ಹಕ್ಕು ಕಾಯ್ದೆಯಲ್ಲಿ ಪ್ರತಿ ಮಗುವಿಗೆ ಒಂದು ಕಿ.ಮೀ ದೂರದಲ್ಲಿ ಪ್ರಾಥಮಿಕ ಶಾಲೆ ಹಾಗೂ 3 ಕಿ.ಮೀ ದೂರದಲ್ಲಿ ಪ್ರೌಢಶಾಲೆ ಲಭ್ಯವಿರಬೇಕು. ಆದರೆ ಕೆಪಿಎಸ್ ಯೋಜನೆ ಈ ನಿಯಮವನ್ನು ಗಾಳಿಗೆ ತೂರಿ ಗ್ರಾಮ ಪಂಚಾಯಿತಿಯಲ್ಲಿ ಹಳ್ಳಿಗಳಲ್ಲಿರುವ ಶಾಲೆಗಳನ್ನು ಮುಚ್ಚಿ, ಪಂಚಾಯಿತಿಗೆ ಒಂದೇ ಶಾಲೆ ಎಂಬ ಹೊಸ ನಿಯಮವನ್ನು ಜಾರಿಗೊಳಿಸುವುದಾಗಿ ಆದೇಶ ಹೊರಡಿಸಿದೆ. ಇದು ಕೇವಲ ಬಡ ಮಕ್ಕಳ ವಿರೋಧಿ ಮಾತ್ರವಲ್ಲ, ಹೆಣ್ಣು ಮಕ್ಕಳ ಹಾಗೂ ಮಹಿಳಾ ವಿರೋಧಿ ನೀತಿಯಾಗಿದೆ ಎಂದರು.

ಸಾರ್ವಜನಿಕ ಹೋರಾಟದ ಸಮಿತಿಯ ಸದಸ್ಯೆ ಟಿ.ಸಿ.ರಮಾ ಮಾತನಾಡಿ, ಕೆಪಿಎಸ್ ಯೋಜನೆಯನ್ನು ಈ ಕೂಡಲೆ ರದ್ದುಗೊಳಿಸಬೇಕು. ರಾಜ್ಯ ಸರ್ಕಾರವು ತನ್ನ ಹಠಮಾರಿ ಧೋರಣೆಯನ್ನು ಕೈಬಿಡಬೇಕು, ನಮ್ಮೂರ ಶಾಲೆಗಳನ್ನು ಇರುವಲ್ಲೇ ಉಳಿಸಬೇಕು, ಬೆಳೆಸಬೇಕು ಎಂದರು. ಸರ್ಕಾರಿ ಶಾಲೆಗಳನ್ನು ಉಳಿಸಬೇಕೆಂದು ಒತ್ತಾಯಿಸಿ ಎಸ್‌ಡಿಎಂಸಿ ಸದಸ್ಯರು , ಕನ್ನಡ ಪರ ಸಂಘಟನೆಗಳ ಮುಖಂಡರು ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಎಸ್. ಶಂಕರಯ್ಯ ಅವರಿಗೆ ಮನವಿ ಸಲ್ಲಿಸಿದರು.

ನಾಗಸಂದ್ರದಲ್ಲಿ ಪೊಲೀಸರಿಂದ ಗ್ರಾಮ ಸಭೆ



• **ದೊಡ್ಡಬಳ್ಳಾಪುರ:** ಗ್ರಾಮಾಂತರ ಪೊಲೀಸ್ ಠಾಣೆವತಿಯಿಂದ ನಾಗಸಂದ್ರದಲ್ಲಿ ಗ್ರಾಮ ಸಭೆ ನಡೆಸಲಾಯಿತು. ಈ ವೇಳೆ ಮನೆ ಮನೆಗೆ ಪೊಲೀಸ್ ಆಸರೆ ಮತ್ತು ಸಮಿತ್ರ ಯೋಜನೆಗಳ ಮಹತ್ವ ಬಗ್ಗೆ ತಿಳಿಸಿಕೊಡಲಾಯಿತು.

ಇನ್ಸ್‌ಪೆಕ್ಟರ್ ಡಾ.ಎಂ.ಬಿ.ನವೀನ್ ಕುಮಾರ್ ಮಾತನಾಡಿ, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ, ಸುರಕ್ಷತೆ ಮತ್ತು ವಿಶ್ವಾಸವನ್ನು ಹೆಚ್ಚಿಸುವ ಉದ್ದೇಶದಿಂದ ಮನೆ ಮನೆಗೆ ಪೊಲೀಸ್ ಮತ್ತು ಆಸರೆ ಎಂಬ ಎರಡು ಪ್ರಮುಖ ಯೋಜನೆಗಳನ್ನು ಜಾರಿಗೆ ತಂದಿದೆ.

ಮನೆ ಮನೆಗೆ ಪೊಲೀಸ್ ಯೋಜನೆಯು ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ. ಪೊಲೀಸ್ ಮತ್ತು ಸಾರ್ವಜನಿಕರ ನಡುವಿನ ಅಂತರವನ್ನು ಕಡಿಮೆ ಮಾಡುವುದಾಗಿದೆ. ಅಲ್ಲದೆ ಬೀಟ್ ಪೊಲೀಸರು ತಮ್ಮ ವ್ಯಾಪ್ತಿಯ ಪ್ರತಿಯೊಂದು ಮನೆಗೆ ಭೇಟಿ ನೀಡಿ, ನಿವಾಸಿಗಳೊಂದಿಗೆ ಸಂವಾದ ನಡೆಸುತ್ತಾರೆ. ಇನ್ನು ಆಸರೆ ಯೋಜನೆಯು ಪ್ರಮುಖವಾಗಿ ಮಹಿಳೆಯರು ಮತ್ತು ಹಿರಿಯ ನಾಗರಿಕರ ಸುರಕ್ಷತೆಗಾಗಿ ಜಾರಿಗೆ ತಂದಿರುವ ವಿಶೇಷ ಸಮುದಾಯ ಪೊಲೀಸ್ ಉಪಕ್ರಮವಾಗಿದೆ. ಒಂಟಿ ಮಹಿಳೆಯರು ಮತ್ತು ಹಿರಿಯ ನಾಗರಿಕರಿಗೆ ಸುರಕ್ಷತೆ, ವಿಶ್ವಾಸ ಮತ್ತು ಕಾಳಜಿ ಒದಗಿಸುವುದು. ಪೊಲೀಸರು ನಿಯಮಿತವಾಗಿ ಪ್ರತಿ ವಾರ ಇವರ ಮನೆಗಳಿಗೆ ಭೇಟಿ ನೀಡಿ ಯೋಗಕ್ಷೇಮ ವಿಚಾರಿಸುತ್ತಾರೆ.ಎನ್‌ಜಿಓಗಳ ಸಹಯೋಗದೊಂದಿಗೆ ಈ ಯೋಜನೆ ಅನುಷ್ಠಾನಗೊಳ್ಳುತ್ತದೆ ಎಂದರು.

ಗ್ರಾಮ ಸಭೆ ಯಲ್ಲಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಜಯಶ್ರೀ, ನಂದೀಶ್, ಪ್ರಕಾಶ್, ರೈತ ಸಂಘದ ಪ್ರಸನ್ನ, ಪ್ರೊಬೆಷನರಿ ಪಿಎಸ್‌ಐಗಳಾದ ಪ್ರೀತಿ, ಶ್ರೀದೇವಿ, ಬೀಟ್ ಬಂದಿ ಪೂಜಾ ಸೇರಿದಂತೆ ಗ್ರಾಮಸ್ಥರು ಇದ್ದರು.

ಮೇ 17ರವರೆಗೆ ರಿನ್ಯೂವೆಬಲ್ ಏಷ್ಯಾ ಅಂಡ್ ಎನರ್ಜಿ ಎಕ್ಸ್‌ಪೋ

ಇಂಧನ ವಲಯದ ನಾವೀನ್ಯತೆ ಪ್ರದರ್ಶನ

• **ಬೆಂಗಳೂರು :** ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಮೇ 14 ರಿಂದ 17ರವರೆಗೆ ನಡೆಯುತ್ತಿರುವ ಇಎಲ್‌ಎಎಸ್‌ಐಎ2026 ಭಾಗವಾದ ರಿನ್ಯೂವೆಬಲ್ ಏಷ್ಯಾ ಅಂಡ್ ಎನರ್ಜಿ ಎಕ್ಸ್‌ಪೋದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ರಾಜ್ಯದ ನವೀಕರಿಸ ಬಹುದಾದ ಇಂಧನ ವಲಯದ ನಾವೀನ್ಯತೆಗಳು ಮತ್ತು ಇತರ ಉಪಕ್ರಮಗಳನ್ನು ಪ್ರದರ್ಶಿಸುತ್ತಿದೆ.



ಎಕ್ಸ್‌ಪೋದಲ್ಲಿ ಸ್ಟಾಲ್ ತೆರೆದಿರುವ ಕ್ರೆಡಲ್- ನವೀಕರಿಸಬಹುದಾದ ಇಂಧನ ಪರಿವರ್ತನೆಗಳು, ವಿವಿಧ ಉಪಕ್ರಮಗಳು, ನಾವೀನ್ಯತೆ ಮತ್ತು ತಾಂತ್ರಿಕ ಪ್ರಗತಿಯನ್ನು ಪ್ರದರ್ಶಿಸುತ್ತಿದೆ. ರಾಜ್ಯದಲ್ಲಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಸುಸ್ಥಿರ ಇಂಧನ ಪರಿಹಾರಗಳನ್ನು ಉತ್ತೇಜಿಸುವ ಜತೆಗೆ ಇಂಧನ ಭದ್ರತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ, ಕ್ರೆಡಲ್ನ ಬದ್ಧತೆಯನ್ನು ಈ ಮೂಲಕ ಎತ್ತಿ ಹಿಡಿಯಲಾಗುತ್ತಿದೆ.

ಸೌರ-ಪವನ ಹೈಬ್ರಿಡ್ ಪಾರ್ಕ್‌ಗಳು, ಬ್ಯಾಟರಿ ಇಂಧನ ಸಂಗ್ರಹಣಾ ವ್ಯವಸ್ಥೆಗಳು ಮತ್ತು ಗ್ರೀನ್ ಹೈಡ್ರೋಜನ್ ಪ್ರಾಯೋಗಿಕ ಯೋಜನೆಗಳ ಮೂಲಕ ಹೊಸ ಆವಿಷ್ಕಾರಗಳನ್ನು ಕ್ರೆಡಲ್ ಉತ್ತೇಜಿಸುತ್ತಿದೆ. ಈ ಕ್ರಮಗಳು ಕೇವಲ ಸಾಮರ್ಥ್ಯ ವೃದ್ಧಿಗಷ್ಟೇ ಸೀಮಿತವಾಗಿರದೆ, ಭವಿಷ್ಯದ ಇಂಧನ ವ್ಯವಸ್ಥೆಯನ್ನು ನಿರ್ಮಿಸುವ ಗುರಿ ಹೊಂದಿದೆ.

ಎಕ್ಸ್‌ಪೋದಲ್ಲಿ ಕ್ರೆಡಲ್ ಪಾತ್ರದ ಬಗ್ಗೆ ಮಾತನಾಡಿದ ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ, ಇಂಧನ ಸಚಿವ ಕೆ.ಜೆ.ಜಾರ್ಜ್ ಅವರ ನೇತೃತ್ವ ಹಾಗೂ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರ ಮಾರ್ಗದರ್ಶನದಲ್ಲಿ ಕ್ರೆಡಲ್ ರಾಜ್ಯಾದ್ಯಂತ ನವೀಕರಿಸಬಹುದಾದ ಇಂಧನ ಸಾಮರ್ಥ್ಯವನ್ನು ವಿಸ್ತರಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ರಾಜ್ಯದ ಈ ಪ್ರಗತಿ ಸೌರ ಮತ್ತು ಪವನ ವಿದ್ಯುತ್ ಯೋಜನೆಗಳ ಅನುಷ್ಠಾನಕ್ಕೆ ಮಾತ್ರ ಸೀಮಿತವಾಗಿಲ್ಲ, ಬದಲಿಗೆ ಹೈಬ್ರಿಡ್ ಇಂಧನ ವ್ಯವಸ್ಥೆಗಳು ಹಾಗೂ ಇಂಧನ ಸಂಗ್ರಹಣಾ ಪರಿಹಾರಗಳತ್ತವೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ ಎಂದು ಹೇಳಿದರು.

» ಸುಸ್ಥಿರ ಇಂಧನ ಪರಿಹಾರಕ್ಕೆ ಉತ್ತೇಜನ

» ಇಂಧನ ಭದ್ರತೆಗೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕ್ರೆಡಲ್ನ ಬದ್ಧತೆ ಕಾಪಾಡುವುದು

ಎಕ್ಸ್‌ಪೋದಲ್ಲಿ ಭಾಗವಹಿಸುವ ಮೂಲಕ, ನವೀಕರಿಸಬಹುದಾದ ಇಂಧನ ವಲಯದಲ್ಲಿ ರಾಜ್ಯದ ಸಾಧನೆಗಳನ್ನು ಪ್ರದರ್ಶಿಸುವ ಉದ್ದೇಶ ನಮ್ಮದು. ರಾಜ್ಯದ ಸುಸ್ಥಿರ ಇಂಧನ ಭವಿಷ್ಯವನ್ನು ಮತ್ತಷ್ಟು ಬಲಪಡಿಸುವ ಸಹಯೋಗಗಳು ಮತ್ತು ಸುಧಾರಿತ ತಂತ್ರಜ್ಞಾನಗಳನ್ನು ಅನ್ವೇಷಣೆಗೂ ಇದರಿಂದ ನೆರವಾಗಲಿದೆ.ಸ್ಟಾಲ್ನಲ್ಲಿರುವ ಕ್ರೆಡಲ್ ಅಧಿಕಾರಿಗಳು ನವೀಕರಿಸಬಹುದಾದ ಇಂಧನ ವಲಯದ ಯೋಜನೆಗಳು, ನಿಯಮಿತದ ಸೇವೆಗಳು ಮತ್ತು ತಾಂತ್ರಿಕ ಅನುಷ್ಠಾನಗಳ ಬಗ್ಗೆ ಸಂದರ್ಶಕರಿಗೆ ಮಾಹಿತಿ ಒದಗಿಸುತ್ತಿದ್ದಾರೆ ಎಂದು ಹೇಳಿದರು.

ಕತ್ತೆ ಹಾಲಿಗೆ ಹೆಚ್ಚಿದ ಬೇಡಿಕೆ | ಹೊಳ್ಳೆಗೆ 50ರೂ.ನಿಂದ 80ರೂ ತನಕ ಮಾರಾಟ

ಮಕ್ಕಳ ಆರೋಗ್ಯಕ್ಕೆ ಕತ್ತೆ ಹಾಲು ರಾಮಬಾಣ

ತಾವರೆಕೆರೆ ಟಿ.ನಾಗರಾಜ್

• **ತಾವರೆಕೆರೆ:** ಮಕ್ಕಳ ಆರೋಗ್ಯದ ಪಾಲಿಗೆ ಕತ್ತೆ ಹಾಲು ಅಮೃತವಿದ್ದಂತೆ ಆಂಧ್ರ ಭಾಗದ ಕತ್ತೆ ಹಾಲಿಗೆ ಕರ್ನಾಟಕದಲ್ಲಿ ಭಾರೀ ಡಿಮ್ಯಾಂಡ್. ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ನಾಯಿ ಬಳಿಯಿರುವ ಹಾಲು ಯಾವುದಕ್ಕೂ ಉಪಯೋಗಕ್ಕೆ ಬರದಂತೆ ಕತ್ತೆಯ ಬಳಿಯಿರುವ ಹಾಲು ಸಹ ಉಪಯೋಗಕ್ಕೆ ಬರುವುದಿಲ್ಲ ಎಂದು ಕೆಲವರು ಹೇಳುತ್ತಿರುತ್ತಾರೆ. ಸೋಂಬೇರಿಗಳನ್ನು ಕತ್ತೆಗಳಿಗೆ ಹೋಲಿಸುತ್ತಾರೆ. ಸ್ವಲ್ಪ ಹಿಂದಿನ ದಶಕದಲ್ಲಿ ಕೇವಲ ಅಗಸರು ಬಟ್ಟೆ ಒಗೆಯುವುದಕ್ಕೆ ಮಾತ್ರ ಕತ್ತೆಗಳನ್ನು ಉಪಯೋಗಿಸುತ್ತಿದ್ದರು. ಆದರೆ ಈಗ ಕತ್ತೆಗಳ ಸಾಕಣೆ ಒಂದು ವ್ಯವಹಾರವಾಗಿ ಬದಲಾಗುತ್ತಿದೆ. ಆದರೆ ಈಗಲೂ ಜೀವನ ನಿರ್ವಹಣೆಗೆ ಉಪಯೋಗಿಸುತ್ತಿದ್ದಾರೆ.

ಆದರೆ ಇದರ ಬಗ್ಗೆ ಸಂಶೋಧನೆ ಮಾಡಿದ ವಿಜ್ಞಾನಿಗಳು ಹಾಗೂ ಪೂರ್ವಜರು ಕತ್ತೆಯ ಹಾಲಿನಲ್ಲಿ ಹಲವು ಔಷಧ ಗುಣಗಳಿದ್ದು, ಹಸುವಿನ ಹಾಲಿಗಿಂತ ಕತ್ತೆಯ ಹಾಲು ಉತ್ತಮ ಎಂದು ಹೇಳಲಾಗುತ್ತಿದೆ.

ಕತ್ತೆಯ ಹಾಲಿನಲ್ಲಿ ಹಲವು ರೀತಿಯ ಔಷಧಿ ಗುಣಗಳನ್ನು ಹೊಂದಿರುವ ಕಾರಣ ಈಗ ಮಾರಿಕಟ್ಟೆಯಲ್ಲಿ ಇದರದ್ದೇ ಮಾತಾಗಿದ್ದು ಕತ್ತೆ ಹಾಲು ಖರೀದಿಸಲು ಬೇಡಿಕೆ ಹೆಚ್ಚಾಗಿ ಸಾರ್ವಜನಿಕರು ಕತ್ತೆಯ ಹಾಲಿಗಾಗಿ ಮುಗಿ ಬೀಳುತ್ತಿದ್ದಾರೆ.



» ಹಸುವಿನ ಹಾಲಿಗಿಂತಲೂ ಕತ್ತೆಯ ಹಾಲಿನಲ್ಲಿ ಕೊಬ್ಬಿನಾಂಶ ತುಂಬಾ ಕಡಿಮೆ

» ಇದರಲ್ಲಿ ವಿಟಮಿನ್ ಎ, ಬಿ1, ಬಿ2, ಸಿ ಮತ್ತು ಅಂಶಗಳನ್ನು ಒಳಗೊಂಡಿದೆ

ಇನ್ನೊಂದು ವಿಶೇಷವೆಂದರೆ ಕತ್ತೆಯ ಹಾಲು ತಾಯಿಯ ಹಾಲಿನಷ್ಟೇ ಶ್ರೇಷ್ಠವಾಗಿರುತ್ತದೆ ಎಂಬುವುದು ಹಿರಿಯರ ಮಾತಾಗಿದೆ.

ಕತ್ತೆಯ ಹಾಲು ಸೇವಿಸುವುದರಿಂದ ಅಸ್ತಮ, ಗ್ಯಾಸ್ಟ್ರಿಕ್, ಕೆಮ್ಮು, ನೆಗಡಿ, ಕಿಡ್ನಿಕಲ್ಲುಗಳು, ಜಾಂಡೀಸ್, ಎಳವು, ಮೂರ್ಛೆರೋಗ, ಸೊಂಟನೋವು. ಮಂಡಿನೋವು, ಸಂಧಿವಾತ ಹೀಗೆ ಅನೇಕ ಕಾಯಿಲೆಗಳು ನಿವಾರಣೆಯಾಗುತ್ತವೆ.

ಇದರ ಜತೆಗೆ ಚಿಕ್ಕಮಕ್ಕಳು ಹಾಗೂ ದೊಡ್ಡವರು ಯಾರೇ ಆದರೂ ಹಸಿವು ಆಗದೆ ಇದ್ದರೆ ಮಕ್ಕಳು ಊಟ ಮಾಡದಿದ್ದರೆ ಅಂತಹವರಿಗೆ ಕತ್ತೆಯ ಹಾಲು ರಾಮಬಾಣವಾಗಿ ಪರಿಣಮಿಸುತ್ತದೆ.

ಮೂರು ಬಾರಿ ಕತ್ತೆಯ ಹಾಲು ಸೇವಿಸಿದರೆ ಸಾಕು ಹೊಟ್ಟೆ ಹಸಿವು ಹೆಚ್ಚಾಗಲು ಸಹಕರಿಸಿ ಚೆನ್ನಾಗಿ ಊಟ ಮಾಡಿ ಆರೋಗ್ಯವಂತರಾಗಿರುತ್ತಾರೆ. ಹಸು ಮತ್ತು ಎಮ್ಮೆಯ ಹಾಲಿಗೆ ಹೋಲಿಸಿದರೆ ಕತ್ತೆಯ ಹಾಲಿನ ದರ ತುಂಬಾ ದುಬಾರಿಯಾಗಿದೆ. ಒಂದು ಹೊಳ್ಳೆ (10 ಎಂ ಎಲ್)50ರೂ ನಿಂದ 80ರೂ ತನಕ ಮಾರಾಟವಾಗುತ್ತದೆ.

ಕಿರುಸುದ್ದಿ

ಸಮವಸ್ತ್ರ: ಶಿಕ್ಷಣ ಇಲಾಖೆ ಆದೇಶ ಸಂವಿಧಾನ ಬಾಹಿರ

• **ಬೆಂಗಳೂರು:** ರಾಜ್ಯದ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡಿ ಶಿಕ್ಷಣ ಇಲಾಖೆ ಹೊರಡಿಸಿರುವ ಆದೇಶ ಸಂವಿಧಾನ ಬಾಹಿರ ಎಂದು ಖಾಸಗಿ ಶಾಲೆಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಹೇಳಿದ್ದಾರೆ. ಸರ್ಕಾರ ತನ್ನ ಶಾಲೆಗಳಲ್ಲಿನ ಸಮವಸ್ತ್ರದ ಬಗ್ಗೆ ಯಾವುದೇ ತೀರ್ಮಾನ ಕೈಗೊಳ್ಳಲು ಅವರು ಸ್ವತಂತ್ರರು. ಆದರೆ ಖಾಸಗಿ ಶಾಲೆಗಳಲ್ಲಿ ಇಂತಹದ್ದೇ ಸಮವಸ್ತ್ರ ಇರಬೇಕು ಎಂದು ಆದೇಶ ಹೊರಡಿಸುವ ಅಧಿಕಾರ ರಾಜ್ಯ ಸರ್ಕಾರಕ್ಕಿಲ್ಲ ಎಂದು ತಿಳಿಸಿದ್ದಾರೆ. ಖಾಸಗಿ ಶಾಲೆಗಳು ತಮ್ಮದೆ ವಸ್ತ್ರ ಸಂಹಿತೆಯನ್ನು ಹೊಂದಿರಬಹುದು. ಆ ವಸ್ತ್ರ ಸಂಹಿತೆಗೆ ಒಳಪಟ್ಟು ವಿದ್ಯಾರ್ಥಿಗಳು ಆ ಶಾಲೆಗೆ ಪ್ರವೇಶ ಪಡೆದಿರುತ್ತಾರೆ. ಆದ್ದರಿಂದ ಖಾಸಗಿ ಶಾಲೆಗಳ ಸಮವಸ್ತ್ರದ ವಿಚಾರದಲ್ಲಿ ಮೂಗು ತೂರಿಸುವ ಯಾವುದೇ ಅಧಿಕಾರ ರಾಜ್ಯ ಸರ್ಕಾರಕ್ಕಿಲ್ಲ ಎಂದು ಹೇಳಿದ್ದಾರೆ.

ಪ್ಲಾಸ್ಟಿಕ್ ಗೋದಾಮಿನಲ್ಲಿ ಬೆಂಕಿ ಅವಘಡ



ಬೆಂಗಳೂರು: ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯ ನಾಯಂಡಹಳ್ಳಿಯ ಪ್ಲಾಸ್ಟಿಕ್ ಗೋದಾಮಿನಲ್ಲಿ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಲಕ್ಷಾಂತರ ಮೌಲ್ಯದ ಸ್ಕ್ರಾಪ್ ವಸ್ತುಗಳು ಸುಟ್ಟು ಕರಕಲಾಗಿರುವ ಘಟನೆ ನಡೆದಿದೆ. ತಮಿಳುನಾಡು ಮೂಲದ ಕುಂದನ್ ಎಂಬುವರಿಗೆ ಸೇರಿದ ಗೋದಾಮು ಇದಾಗಿದ್ದು, ಗುರುವಾರ ಬೆಳಗ್ಗೆ 8 ಗಂಟೆ ಸುಮಾರಿಗೆ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಬೆಂಕಿ ಕಾಣಿಸಿಕೊಂಡಿದೆ. ಗೋದಾಮಿನಲ್ಲಿ ಪಿವಿಸಿ ಪ್ಲಾಸ್ಟಿಕ್ ವಸ್ತುಗಳು ಇದ್ದಿದ್ದರಿಂದ ಕ್ಷಣಾರ್ಧದಲ್ಲಿ ಬೆಂಕಿ ವ್ಯಾಪಿಸಿ ಧಗ-ಧಗನೇ ಹೊತ್ತಿ ಉರಿದಿದೆ. ಅದೃಷ್ಟವಶಾತ್ ಗೋಡೌನ್‌ನಲ್ಲಿ ಯಾರೂ ಇರಲಿಲ್ಲ, ಯಾವುದೇ ಪ್ರಾಣ ಹಾನಿಯೂ ಆಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ವೃಷಭಾವತಿ ಕಾಲುವೆಯ ದಡದಲ್ಲಿರುವ ಸೆಕೆಂಡ್ ಹ್ಯಾಂಡ್ ಪಿವಿಸಿ ಪ್ಲಾಸ್ಟಿಕ್ ವಸ್ತುಗಳನ್ನು ಶೇಖರಿಸಿ ಮಾರಾಟ ಮಾಡುವ ಗೋಡೌನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣ ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಅವರು ಸ್ಥಳಕ್ಕೆ ಬಂದು ಮೂರು ವಾಹನಗಳಲ್ಲಿ ಮೂರ್ನಾಲ್ಕು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ. ಹೆಚ್ಚಾಗಿ ಪ್ಲಾಸ್ಟಿಕ್ ವಸ್ತುಗಳು ಇದ್ದ ಕಾರಣ ಬೆಂಕಿಯಿಂದ ದೊಡ್ಡಮಟ್ಟದ ಹೊಗೆ ಆವರಿಸಿ ಕೊಂಡಿತ್ತು. ಪಕ್ಕದಲ್ಲಿಯೇ ಇದ್ದ ಕಬ್ಬಿಣದ ರಾಡುಗಳು, ಡ್ರಮ್‌ಗಳನ್ನು ಶೇಖರಿಸಿದ್ದ ಗೋಡೌನ್‌ಗೂ ಕೂಡ ಬೆಂಕಿ ವ್ಯಾಪಿಸಿದೆ. ಹೀಗಾಗಿ, ಅಲ್ಲಿಯೂ ಕೆಲವು ವಸ್ತುಗಳು ಸುಟ್ಟು ಹೋಗಿವೆ ಎಂದು ಪೊಲೀಸರು ಹೇಳಿದ್ದಾರೆ. ಎರಡು ವರ್ಷಗಳಿಂದ ಗೋದಾಮು ಇಟ್ಟುಕೊಂಡು ಕುಂದನ್ ಎಂಬುವರು ವ್ಯಾಪಾರ ಮಾಡುತ್ತಿದ್ದರು. ಬುಧವಾರ ಅವರ ಪುತ್ರ ಅಶೋಕ್ ಎಂಬಾತ ತಮಿಳುನಾಡಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರಿಂದಾಗಿ ಬೆಳಗ್ಗೆ ಅಂತಿಮ ದರ್ಶನಕ್ಕೆ ಹೋಗಿದ್ದರು. ಅತ್ತ ಊರಿಗೆ ಹೋಗುತ್ತಿದ್ದಂತೆ ಗೋದಾಮಿನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರ ಸ್ವಚ್ಛತೆಗೆ ದೂರು ಕೇಂದ್ರ ಸ್ಥಾಪನೆ

• **ಬೆಂಗಳೂರು:** ನಗರದ ಸ್ವಚ್ಛತೆಯ ದೃಷ್ಟಿಯಿಂದ ದೂರು ಕೇಂದ್ರ ಸ್ಥಾಪಿಸಿದ್ದು, ಅದಕ್ಕಾಗಿ ಪ್ರತ್ಯೇಕ ವ್ಯಾಟ್ಸಾಪ್ ಸಂಖ್ಯೆ ನೀಡಲಾಗಿದೆ. ಆ ಸಂಖ್ಯೆಗೆ ಛಾಯಾಚಿತ್ರದೊಂದಿಗೆ ಸಂದೇಶ ಕಳುಹಿಸುವ ಮೂಲಕ ದೂರು ದಾಖಲಿಸಬಹುದು ಎಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತರಾದ ಡಾ. ರಾಜೇಂದ್ರ ಕೆ.ವಿ. ಹೇಳಿದರು. ಈ ಬಗ್ಗೆ ಮಾತನಾಡಿದ ಅವರು, ಈ ವಾಟ್ಸ್ಆ್ಯಪ್ 9448197197 ಸಂಖ್ಯೆಗೆ, ಛಾಯಾಚಿತ್ರದೊಂದಿಗೆ ಸಂದೇಶ ಕಳುಹಿಸುವ ಮೂಲಕ ದೂರು ದಾಖಲಿಸಬಹುದು. ಆ ಬಳಿಕ ಸಂಬಂಧಪಟ್ಟ ಅಧಿಕಾರಿಗಳು ನಿಗದಿತ ಅವಧಿಯಲ್ಲಿ ತ್ಯಾಜ್ಯ/ಕಸ ವಿಲೇವಾರಿ ಮಾಡಿ ಸಮಸ್ಯೆ ಬಗೆಹರಿಸಿರುವ ಕುರಿತು ಮಾಹಿತಿ ನೀಡಲಿದ್ದಾರೆ. ಅಲ್ಲದೆ, 1533 ಸಹಾಯವಾಣಿಗೆ ಕರೆ ಮಾಡುವ ಮೂಲಕ ದೂರು ದಾಖಲಿಸಬಹುದು. ನಮ್ಮ ಬೆಂಗಳೂರು (ಸಹಾಯ 2.0) ಆ್ಯಪ್ ಮೊಬೈಲ್ ತಂತ್ರಾಂಶದ ಮುಖಾಂತರ ದೂರು ದಾಖಲಿಸಬಹುದು. 080-23561692, 080-23463366, 9480685703 ಸಂಖ್ಯೆಗಳನ್ನು ಸಂಪರ್ಕಿಸಿ ಮಾಹಿತಿ ನೀಡಬಹುದಾಗಿದೆ ಎಂದು ಹೇಳಿದ್ದಾರೆ.

ಬೆದರಿಕೆ ಆಟ ನಮ್ಮ ಮುಂದೆ ನಡೆಯುವುದಿಲ್ಲ,ಭೂಮಿ ಬಿಟ್ಟು ಕೊಡುವ ಪ್ರಶ್ನೆಯೇ ಇಲ್ಲ: ಎಚ್‌ಡಿಕೆ

ಟೌನ್‌ಶಿಪ್ ಯೋಜನೆ ಕೈಬಿಡಿ

• **ಬೆಂಗಳೂರು:** ರೈತರಿಗೆ ಬೇಡವಾಗಿರುವ ಬಿಡದಿ ಟೌನ್ ಶಿಪ್ ಯೋಜನೆಯನ್ನು ಕೂಡಲೇ ಕೈಬಿಡಬೇಕು ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಪಕ್ಷದ ರಾಜ್ಯ ಕಚೇರಿಯಲ್ಲಿ ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಯಾವ ರೈತರು ಕೂಡ ಭೂಮಿ ಬಿಟ್ಟುಕೊಡಲು ತಯಾರಿಲ್ಲ, ಅದು ಹೇಗೆ ಭೂಮಿ ವಶಪಡಿಸಿಕೊಳ್ಳುತ್ತೀರೋ ಬಂದು ವಶಪಡಿಸಿಕೊಳ್ಳಿ ನೋಡೋಣ ಎಂದು ನೇರ ಸವಾಲು ಹಾಕಿದರು.

ಯಾವುದೇ ಕಾರಣಕ್ಕೂ ಭೂಮಿ ಕೊಡುವುದಿಲ್ಲ ಎನ್ನುತ್ತಿರುವ ರೈತರನ್ನು ಬೆದರಿಸಿ ಹೆದರಿಸುವ, ಬೆದರಿಸುವ ಕೆಲಸ ಆಗುತ್ತಿದೆ. ಇಂತಹವರ ಬೆದರಿಕೆಯ ಆಟ ನಮ್ಮ ಮುಂದೆ ನಡೆಯುವುದಿಲ್ಲ, ಭೂಮಿ ಬಿಟ್ಟು ಕೊಡುವ ಪ್ರಶ್ನೆಯೇ ಇಲ್ಲ, ಎಂದು ಪ್ರಬಲವಾಗಿ ಹೇಳಿದರು.

ರೈತರು ಜಮೀನು ನೀಡಲ್ಲ ಎಂದು ಬೀದಿಯಲ್ಲಿ ಕೂತಿದ್ದಾರೆ. ಆದರೆ, ರಾಜ್ಯ ಸರ್ಕಾರದಲ್ಲಿರುವ ರಿಯಲ್ ಎಸ್ಟೇಟ್ ದಂಧೆಕೋರರು ಭೂಮಿಯನ್ನು ಕಿತ್ತುಕೊಂಡು ವ್ಯವಹಾರ ಮಾಡಿಯೇ ಸಿದ್ಧ ಎಂದು ಹೊರಟಿದ್ದಾರೆ. ಇದು ಯಾರಪ್ಪನ ಭೂಮಿ ಅವರು ಧಮ್ಮಿ ಹಾಕಿ ಕಿತ್ತುಕೊಳ್ಳುವುದಕ್ಕೆ ಎಂದು ಕಿಡಿಕಾರಿದರು.

ಯಾರ ಯಾರ ಕಾಲದಲ್ಲಿ ಯಾರ ಯಾರ ಕಾಲು ಕಟ್ಟೀರಿ ಎನ್ನುವುದು ನನಗೆ ಗೊತ್ತಿದೆ ಗೊತ್ತಿದೆ ಎಂದು ಹೇಳುತ್ತಲೇ ಕೆಲವರ ಹೆಸರು ಹೇಳದೆ ಆಕ್ರೋಶ ವ್ಯಕ್ತಪಡಿಸಿದ ಕೇಂದ್ರ ಸಚಿವರು, ಇದೇ ವೇಳೆ ರಾಮನಗರದ ಜಿಲ್ಲಾಧಿಕಾರಿಗೆ ಕಟುವಾದ ಶಬ್ದಗಳಿಂದ ಎಚ್ಚರಿಕೆ ನೀಡಿದರು.

ಈ ಯೋಜನೆಯನ್ನು ಇಲ್ಲಿಗೆ ನಿಲ್ಲಿಸಬೇಕು. ಇದು ನಮ್ಮ ಹಿತಾಸಕ್ತಿ, ಇಷ್ಟು ದಿನ ಹೊರಗೆ ರಿಯಲ್ ಎಸ್ಟೇಟ್ ಮಾಡ್ತಿದ್ದಿರಿ. ಈಗ ಅಧಿಕೃತವಾಗಿ ರಿಯಲ್ ಎಸ್ಟೇಟ್ ಮಾಡಲು ಹೊರಟಿದ್ದಿರಿ. ಇದು ಸಂವಿಧಾನ ಬಾಹಿರ ನಡೆ, ಇಲ್ಲಿ ನೀರಾವರಿ ಇದೆ. ತೆಂಗು, ತರಕಾರಿ ಸೇರಿದಂತೆ ಎಲ್ಲ ಕೃಷಿ ಚಟುವಟಿಕೆ ನಡೆಯುತ್ತದೆ. ಅಂತಹ ಜಮೀನಿನನ್ನ ತೆಗೆದುಕೊಂಡು ಏನು ಮಾಡಲು ಹೊರಟಿದ್ದಿರಿ ಎಂದು ಕೇಂದ್ರ ಸಚಿವರು ತೀಕ್ಷ್ಣವಾಗಿ ಪ್ರಶ್ನಿಸಿದರು.



ಕ್ಯಾಬಿನೆಟ್ ನಿರ್ಧಾರಕ್ಕೆ ಕಿಡಿ

ಬೇಕಾಬಿಟ್ಟಿ ನಿರ್ಧಾರಗಳನ್ನು ಕೈಗೊಳ್ಳುವ ಇದನ್ನು ಕ್ಯಾಬಿನೆಟ್ ಎನ್ನುತ್ತೀರಾ? ಕ್ಯಾಬಿನೆಟ್ ಎನ್ನೋದು ಹೆಸರಿಗೆ ಮಾತ್ರ. ಕ್ಯಾಬಿನೆಟ್‌ನಲ್ಲಿ ಹೇಳೋರು ಕೇಳೋರು ಯಾರೂ ಇಲ್ಲ, ಕ್ಯಾಬಿನೆಟ್ ಅಂದ್ರೆ ಎಲ್ಲವನ್ನೂ ಹರಾಜು ಹಾಕುವ ಮನೆ ಎನ್ನಬಹುದಾ? ಎಂದು ಅವರು ಲೇವಡಿ ಮಾಡಿದರು.

ಸತ್ಯಶೋಧನಾ ಸಮಿತಿ ವರದಿ ಎಲ್ಲಿ ಹೋಯಿತು: ಬೆಂಗಳೂರಿನ ಮೇಲೆ ಒತ್ತಡ ಕಡಿಮೆ ಮಾಡಲು 5 ಭಾಗಗಳಲ್ಲಿ ವಿಶೇಷ ಟೌನ್ ಶಿಪ್ ನಿರ್ಮಿಸಲು ನಿರ್ಧರಿಸಿದಾಗ ಆಗ ಪ್ರತಿಪಕ್ಷ ಸ್ಥಾನದಲ್ಲಿದ್ದ ಕಾಂಗ್ರೆಸ್ ಈಗ ಸಚಿವರಾಗಿರುವ ಕೆ.ಪಾಟೀಲ್ ನೇತೃತ್ವದಲ್ಲಿ ಸತ್ಯಶೋಧನಾ ಸಮಿತಿ ರಚಿಸಲಾಗಿತ್ತು. ಆ ಸಮಿತಿ ಬಿಡದಿ, ಸೋಲೂರು, ಹೊಸಕೋಟೆ ಮುಂತಾದ ಕಡೆ ಭೇಟಿ ನೀಡಿ ಸತ್ಯ ಶೋಧನೆ ನಡೆಸಿತಲ್ಲ, ಆ ವರದಿ ಏನಾಯಿತು, ಅದನ್ನು ಹಾಗೆಯೇ ಇಟ್ಟುಕೊಂಡಿದ್ದೀರೋ ಅಥವಾ ಯಾವುದಾದರೂ ಕಸದ ಬುಟ್ಟಿಗೆ ಎಸೆದಿದ್ದೀರೋ ಒಂದು ವೇಳೆ ಇಟ್ಟುಕೊಂಡಿದ್ದರೆ ದಯವಿಟ್ಟು ಬಹಿರಂಗಪಡಿಸಿ ಎಂದು ಆಗ್ರಹಿಸಿದರು.

ನವೀಕರಣ: ಲೋಕೋಪಯೋಗಿ ಇಲಾಖೆಗೆ ವಹಿಸಬಾರದು

ಸುಪ್ರೀಂಕೋರ್ಟ್ ತೀರ್ಪು ಸಂತಸ ತಂದಿದೆ

• **ಮೈಸೂರು:** ನಗರದ ಪಾರಂಪರಿಕ ಕಟ್ಟಡಗಳಾಗಿರುವ ಲ್ಯಾನ್ಸ್‌ಡೌನ್ ಕಟ್ಟಡ ಮತ್ತು ದೇವರಾಜ ಮಾರುಕಟ್ಟೆ ಕಟ್ಟಡಗಳ ಪುನರ್ ಸ್ಥಾಪನೆ ಮತ್ತು ನವೀಕರಣಕ್ಕೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಸಂತಸ ತಂದಿದೆ. ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವೆ ಎಂದು ಮೈಸೂರು ರಾಜವಂಶಸ್ಥೆ ಡಾ. ಪ್ರಮೋದಾದೇವಿ ಒಡೆಯರ್ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮೈಸೂರು ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ ರೆಡ್ಡಿ ಅವರು, ತಮ್ಮ ಹಿಂದಿನ ಅವಧಿಯಲ್ಲಿ ಮೈಸೂರು ಮಹಾನಗರಪಾಲಿಕೆ ಆಯುಕ್ತರಾಗಿ ಸೇವೆ ಸಲ್ಲಿಸಿದ್ದ ಸಂದರ್ಭದಲ್ಲಿ, ಈ ವಿಷಯವನ್ನು ವಿವರವಾಗಿ ಚರ್ಚಿಸಲಾಗಿತ್ತು. ದೇವರಾಜ ಮಾರುಕಟ್ಟೆಯಲ್ಲಿ ಶಿಥಿಲವಾಗಿರುವ ಒಂದು ಭಾಗವನ್ನು ಅದರ ನಿರ್ಮಾಣ ಕಾರ್ಯಕ್ಕೆ ಮೂಲತಃ ಬಳಸಲಾಗಿದ್ದ ಸಾಂಪ್ರದಾಯಿಕ ವಸ್ತುಗಳು ಮತ್ತು ವಿಧಾನಗಳನ್ನು ಬಳಸಿಕೊಂಡು ಪುನರ್‌ಸ್ಥಾಪಿಸಬಹುದು ಎಂಬುದನ್ನು ಸಾಬೀತುಪಡಿಸಲು ನಾನು ಎಚ್‌ಎಚ್‌ಎಸ್‌ಎನ್‌ಡಬ್ಲ್ಯು ಫೌಂಡೇಶನ್ (ಹಿಸ್ ಹೈನೆಸ್ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಷ್ಠಾನ) ಮೂಲಕ ಸ್ವಯಂಸೇವಕಳಾಗಿ ಶ್ರಮಿಸಲು ಸಿದ್ಧವಿರುವುದಾಗಿ ತಿಳಿಸಿದ್ದೆ. ಆದರೆ ಈ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥ ಬಾಕಿ ಇದ್ದ ಹಿನ್ನೆಲೆಯಲ್ಲಿ ಈ ಪ್ರಸ್ತಾವನೆಯನ್ನು ಸ್ಥಗಿತಗೊಳಿಸಲಾಗಿತ್ತು ಎಂದು ಹೇಳಿದ್ದಾರೆ.

ಕರ್ನಾಟಕ ಸರ್ಕಾರ ಈ ಎರಡು ಪಾರಂಪರಿಕ ಕಟ್ಟಡಗಳ ಪುನಃಸ್ಥಾಪನೆ ಮತ್ತು ನವೀಕರಣ ಕಾರ್ಯಗಳನ್ನು ಲೋಕೋಪಯೋಗಿ ಇಲಾಖೆಗೆ ವಹಿಸಬಾರದು. ಬದಲಾಗಿ, ಪರಂಪರೆ ಸಂರಕ್ಷಣೆಯಲ್ಲಿ ಸಾಬೀತಾಗಿರುವ ಪರಿಣತಿ ಹೊಂದಿರುವ ವಿಶೇಷ ಸಂಸ್ಥೆಗೆ ಈ ಕಾರ್ಯದ ಜವಾಬ್ದಾರಿಯನ್ನು ನೀಡಬೇಕು.

ಆ ಸಂಸ್ಥೆಯು ರಚನೆಗಳನ್ನು ಪುನರ್‌ಸ್ಥಾಪಿಸಲು ಮತ್ತು ನವೀಕರಿಸುವುದು ಮಾತ್ರವಲ್ಲದೆ, ಹೊಣೆಗಾರಿಕೆ ಮತ್ತು ದೀರ್ಘಕಾಲೀನ ಸಂರಕ್ಷಣೆಯ ಖಚಿತತೆಗಾಗಿ ಕಾರ್ಯ ಪೂರ್ಣಗೊಂಡ ನಂತರ, ಕನಿಷ್ಠ ಐದು ವರ್ಷಗಳವರೆಗೆ ಅವುಗಳನ್ನು ನಿರ್ವಹಿಸಬೇಕಿದೆ. ಲ್ಯಾನ್ಸ್‌ಡೌನ್ ಕಟ್ಟಡವು ತನ್ನ ಪ್ರಮುಖ ಸ್ಥಳದಿಂದಾಗಿ ಅಪಾರ ವಾಣಿಜ್ಯ ಸಾಮರ್ಥ್ಯವನ್ನು ಹೊಂದಿದೆ. ಆದರೆ ದೇವರಾಜ ಮಾರುಕಟ್ಟೆಯು ಇಂದು ನಾವು ಆಧುನಿಕ ಮಾಲ್ ಪರಿಕಲ್ಪನೆ ಎಂದು ಗುರುತಿಸುವ ಆರಂಭಿಕ ಮಾದರಿಗಳಲ್ಲಿ ಒಂದಾಗಿದೆ.

ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ಮಹತ್ವವಾದ ಈ ಎರಡೂ ಕಟ್ಟಡಗಳನ್ನು ಭವಿಷ್ಯದ ಪೀಳಿಗೆಗೆ ಸಂರಕ್ಷಿಸುವ ಹಿತಾಸಕ್ತಿಯಿಂದ ಮೊಕದ್ದಮೆ ಹೂಡಲಾಗಿತ್ತು ಎಂಬುದನ್ನು ಕೇಳಿ ನನಗೆ ಸಂತೋಷವಾಗಿದೆ ಎಂದಿದ್ದಾರೆ.

ನಗರ ಸ್ವಚ್ಛತೆಗೆ ಎಲ್ಲರ ಸಹಕಾರ ಅಗತ್ಯ: ಡಾ.ರಾಜೇಂದ್ರ

• **ಬೆಂಗಳೂರು:** ಮಲ್ಲೇಶ್ವರ ಪ್ರದೇಶವನ್ನು ಸ್ವಚ್ಛವಾಗಿರಿಸುವ ನಿಟ್ಟಿನಲ್ಲಿ ಎಲ್ಲರ ಸಹಕಾರ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಎಲ್ಲ ಆರೋಗ್ಯ ಪರಿವೀಕ್ಷಕರು, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಮಾರ್ಷಲ್‌ಗಳು, ಪೌರ ಕಾರ್ಮಿಕ ಮೇಲ್ವಿಚಾರಕರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ.ಸೂಚಿಸಿದರು.

ಗುರುವಾರ ಮಲ್ಲೇಶ್ವರ ವಿಭಾಗದ ಆರೋಗ್ಯ, ಘನತ್ಯಾಜ್ಯ ನಿರ್ವಹಣೆ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆ ನಡೆಸಿದ ವೇಳೆ ಮಾತನಾಡಿದ ಅವರು, ಪಾದಚಾರಿ ಮಾರ್ಗ ಒತ್ತುವರಿ, ಕಸ ನೀಡದಿರುವುದು, ವಿಂಗಡಣೆ ಮಾಡದಿರುವುದು, ಒಣಗಿದ ಎಲೆ ವ್ಯವಸ್ಥಿತ ವಿಲೇವಾರಿ ಸೇರಿದಂತೆ ನಗರದ ಸ್ವಚ್ಛತೆಗೆ ಅಡ್ಡಿಯುಂಟು ಮಾಡುವ ಯಾವುದೇ ಸಂಗತಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಅನಧಿಕೃತ ಅಂಗಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಉತ್ತಮವಾಗಿ ಕೆಲಸ ಮಾಡುವ ಪೌರ ಕಾರ್ಮಿಕರನ್ನು ಗುರುತಿಸಿ, ಅನಧಿಕೃತವಾಗಿ ಗೈರಾಗುವ, ಸಮರ್ಪಕವಾಗಿ ಕೆಲಸ ನಿರ್ವಹಿಸದ ಪೌರಕಾರ್ಮಿಕರ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು. ನಗರದಲ್ಲಿ ವ್ಯವಸ್ಥಿತವಾಗಿ ಕೆಲಸಗಳು ನಡೆಯದಿದ್ದಲ್ಲಿ ಸಂಬಂಧಿಸಿದ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಸಿದರು. ಆರೋಗ್ಯ ವೈದ್ಯಾಧಿಕಾರಿ ಡಾ.ಮನೋಹರ್, ಎಜಿಎಂ ರೇಖಾ ಇದ್ದರು.

ಅರ್ಜಿ ವಜಾ | ಹೈಕೋರ್ಟ್‌ನಿಂದ ತಲಾ 25,000 ರೂ. ದಂಡ

ಅರ್ಜಿದಾರರಿಂದ ಕಾನೂನು ಪ್ರಕ್ರಿಯೆ ದುರ್ಬಳಕೆ

• **ಬೆಂಗಳೂರು:** ಪತ್ನಿ ಕರೆದೊಯ್ದಿರುವ ಮಗುವನ್ನು ಹಾಜರುಪಡಿಸಲು ಕೋರಿ ಪತಿ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿ ಹಾಗೂ ಪುತ್ರಿಯನ್ನು ಅನಾಮಿಕರು ಒತ್ತೆಯಿಟ್ಟುಕೊಂಡಿದ್ದಾರೆ ಎಂದು ತಂದೆ ಸಲ್ಲಿಸಿದ್ದ ಪ್ರತ್ಯೇಕ ಹೇಬಿಯಸ್ ಕಾರ್ಪಸ್ ಅರ್ಜಿಗಳನ್ನು ಗುರುವಾರ ವಜಾಗೊಳಿಸಿರುವ ಹೈಕೋರ್ಟ್, ತಲಾ 25,000 ರೂ. ದಂಡ ವಿಧಿಸಿದೆ.



ಅರ್ಜಿದಾರರು ಕಾನೂನು ಪ್ರಕ್ರಿಯೆಯನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ನ್ಯಾಯಮೂರ್ತಿಗಳಾದ ಎಚ್.ಪಿ. ಸಂದೇಶ್ ಮತ್ತು ಪಿ. ಶ್ರೀಸುಧಾ ಅವರ ವಿಭಾಗೀಯ ಪೀಠ ಕಿಡಿಕಾರಿದೆ. ಪತಿ ಎತ್ತಿರುವ ವಿಚಾರವು ಸಂಪೂರ್ಣವಾಗಿ ವೈವಾಹಿಕ ವಿವಾದಕ್ಕೆ ಸಂಬಂಧಿಸಿದ್ದು, ಮಗುವನ್ನು ಹಾಜರುಪಡಿಸಲು ಆದೇಶಿಸಬೇಕು ಎಂದು ಹೇಬಿಯಸ್ ಕಾರ್ಪಸ್ ಅರ್ಜಿ ಮೂಲಕ ಕೋರಲಾಗದು ಎಂದು ಪೀಠ ಹೇಳಿದೆ.

ಪ್ರಕರಣದ ವಿಚಾರ ಗಮನಿಸಿ, ಸರ್ಕಾರದ ವಕೀಲರ ವಾದವನ್ನು ಆಲಿಸಿದಾಗ ಇದು ಕಾನೂನು ಪ್ರಕ್ರಿಯೆ ದುರ್ಬಳಕೆಯಲ್ಲದೇ ಬೇರೇನೂ ಅಲ್ಲ, ಸೂಕ್ತ ಪರಿಹಾರ ಕೋರುವುದಕ್ಕೆ ಬದಲಾಗಿ ಪತಿಯು ಮಗುವನ್ನು ಹಾಜರುಪಡಿಸಲು ಕೋರಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದಾರೆ ಎಂದು ನ್ಯಾಯಾಲಯ ಆದೇಶದಲ್ಲಿ ದಾಖಲಿಸಿದ್ದು, ಅರ್ಜಿಯನ್ನು ವಜಾಗೊಳಿಸಿ 25 ಸಾವಿರ ರೂ.ದಂಡ ವಿಧಿಸಿತು.

ಎರಡನೇ ಪ್ರಕರಣದಲ್ಲಿ ಪುತ್ರಿಯು ಪ್ರೀತಿಸಿದ ಯುವಕನ ಜತೆ ಓಡಿ ಹೋಗಿದ್ದರೂ 25 ವರ್ಷದ ಮಗಳನ್ನು ಅಕ್ರಮವಾಗಿ ಅನಾಮಿಕರು ಒತ್ತೆ ಇಟ್ಟುಕೊಂಡಿದ್ದಾರೆ. ಹೀಗಾಗಿ, ಆಕೆಯನ್ನು ಹಾಜರುಪಡಿಸಲು ಪೊಲೀಸರಿಗೆ ನಿರ್ದೇಶಿಸಬೇಕು ಎಂದು ತಂದೆ ಕೋರಿದ್ದರು.

ರಾಜ್ಯ ಸರ್ಕಾರದ ಪರ ವಕೀಲೆಯು ಯುವತಿಯು ತನ್ನ ರಕ್ಷಣೆಗೆ ಪೊಲೀಸರಿಗೆ ಮನವಿ ಮಾಡಿದ್ದಾಳೆ. ಏ.15ರಂದು ಸಮನ್ವಯ ಪೀಠವು ಯುವತಿಗೆ ರಕ್ಷಣೆ ನೀಡುವಂತೆ ಆದೇಶಿಸಿದೆ. ಏ.8ರಂದು ಪ್ರಕರಣ ದಾಖಲಿಸಲಾಗಿದೆ ಎಂದರು. ಪುತ್ರಿ ಏ.6ರಂದು ಮನೆ ತೊರೆದಿದ್ದಾರೆ. ಅನಂತರ ಎರಡು ದಿನಗಳ ಬಳಿಕ ಪೊಲೀಸರ ರಕ್ಷಣೆ ಕೋರಿದ್ದಾರೆ. ಒಂದು ತಿಂಗಳ ನಂತರ ತಂದೆ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದಾರೆ ಎಂದು ಆದೇಶದಲ್ಲಿ ಉಲ್ಲೇಖಿಸಿದ ಪೀಠವು ಅರ್ಜಿ ವಜಾಗೊಳಿಸಿ, ತಂದೆಗೆ 25 ಸಾವಿರ ರೂ. ದಂಡ ವಿಧಿಸಿತು.

ಇದು ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗಿದೆ ಎಂದಿದ್ದು, ಒಂದು ವಾರದಲ್ಲಿ ದಂಡದ ಮೊತ್ತವನ್ನು ರಿಜಿಸ್ಟ್ರಿಗೆ ಪಾವತಿಸಬೇಕು ಎಂದು ನಿರ್ದೇಶಿಸಿತು. ಇಲ್ಲವಾದಲ್ಲಿ ಸೂಕ್ತ ಕಾನೂನು ಪ್ರಕ್ರಿಯೆ ಮೂಲಕ ದಂಡ ವಸೂಲಿ ಮಾಡಲು ರಿಜಿಸ್ಟ್ರಿಗೆ ಹೈಕೋರ್ಟ್ ನಿರ್ದೇಶಿಸಿದೆ.

ನೋಟಿಸ್

ಕೃಷ್ಣಮೂರ್ತಿ (ಮೃತರು) ಅವರು ... ನಂ. 24, ... ಬೆಂಗಳೂರು- 560001 ... [illegible] ... 724489776 ರಿಂದ 724490275 ... [illegible]

ದಿನಾಂಕ: 15/05/2026 ಸುಮಿತಾ ಗುಪ್ತ
ಸ್ಥಳ: ದೆಹಲಿ ಫೋಲಿಯೊ ಸಂ: ಎಂಎಸ್1900048

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗೌರಿಬಿದನೂರು.
ಕ್ರಿಮಿನಲ್ ಮಿಸ್ 58/2026.

[illegible]

ದಿನಾಂಕ: 07-5-2026

IN THE COURT OF THE HON'BLE II SENIOR CIVIL JUDGE, BENGALURU RURAL DISTRICT AT BENGALURU

P & S.C, No.13/2026

BETWEEN: 1) Sri. Vishnu C. Reddy. Son of late. G. Chethan, Aged about 20 years, **12) Master. Gokal C. Reddy.** Son of late G. Chethan, Aged about 13 years, Since he is a minor Rep. by his brother As natural guardian Sri. Vishnu C. Reddy, Both are R/at No.304, 2nd Stage, Sorahunase Road, Madhura Nagara, Varthur, Bengaluru-560 087.....**PETITIONERS**

AND: NIL.....RESPONDENTS

PUBLIC NOTICE

WHEREAS, the above named petitioners has filed a petition under Section 372 of Indian Succession Act, praying for the reliefs to a) To declare that the Petitioners No.1 and 2 are the solely surviving legal heirs of deceased G. Chethan S/o Sri. Gopalakrishnappa and Smt. Veena W/o late G. Chethan, as the Petitioner No.1 and 2 are they are only legal heirs, b) Grant, issue Succession Certificate pertaining to the deceased Petitioner's father and mother viz. Late G. Chethan S/o Sri Gopalakrishna and Smt. Veena W/o Late G chethan in favour of the petitioners No. 1 and 2 for release the gold from Karnataka Bank, Varthur Branch, Bengaluru, and for such other reliefs filed against NIL Respondent.

Any person having their objection's for issue of Succession Certificate in respect of the Schedule in favour of the petitioners and any person having interest may cause the same by appearing before the court in person or through their Advocate on **02-07-2026** at 11.00 AM, failing which the matter will be heard and disposed off in accordance with law.

SCHEDULE

All that piece and parcel of the gold loan amount of Rs.6,20,000/- at Karnataka Bank, Varthur Branch, Bengaluru on 3.12.2024 by pledging the aforesaid valuable gold ornaments in the said bank vide its Loan Account No. 0913702400058001.

Given under my hand and the seal of the Hon'ble Court on 27-04-2026

By order of the court, Chief Ministerial Officer, Senior civil Judge Court, Bangalore Rural District, Bangalore.

L. RAJESH, Advocate
No.101, Darga Street, Varthur, Bengaluru.

IN THE COURT OF THE HON' DEPUTY DIRECTOR OF LAND RECORDS AT KOLAR

DDLR. APL.No.63/2026

APPELLANT : A.S. Prabhavathi

V/S

RESPONDENTS : The Assistant Director of Land Records Mulbagal, and others.

SUMMONS/NOTICE TO RESPONDENT No.2 to 11 THROUGH PAPER PUBLICATIONS AS PER UNDER ORDER 5 RULES 20 OF CPC:- RESPONDENT No.2 to 11.

2. **Doddamunivenkatappa,** Aged about 50 years, **3. N. Sathyanarayanashetty** S/o V. Narayanashetty Aged about 55 years, **4. Narayanamma,** Aged about 60 years, **5. Chandregowda** S/o Munishami, Aged about 52 years, **6. Shankarappa** S/o Chikkamunivenkatappa, Aged about 45 years, **7. Lakshmamma** W/o Chikkamunivenkatappa, Aged about 70 years, **8. P. Hamsavenamma** W/o P.N. Kodandaramashetty, Aged about 37 years, **9. Ravi S.** s/O Shankarappa Aged about 45 years, **10. Gangadharachari,** Aged about 65 years, R/o Nangali Village, Byrakur Hobli, Mulbagal Taluk, Kolar District. **11. Gopalappa** S/o Muniyappa, Aged about 55 years, Respondent No.2 to 9 and 11 are R/o Veerabhadra Nagara, Mulbagal Town, Kolar Dist.

Whereas, the appellant is the absolute owner and originally is in possession of land old bearing Sy.No.99/1, new Sy.No.99/1,99/4, 99/6 its measuring 0.05 guntas, the appellant had purchased the same under a registered sale deed dated 07-02-2011 vide document No.3491/2010-11 from the date of purchase the appellant is in possession and enjoyment of the appeal property situated at Mulbagal Rural, Kassaba Hobli, Mulbagal. and you are hereby advised to appear notice before Hon'ble court person by a pleader on the day 10-06-2026 take notice that in default of you are appearance on the day and time above the mentioned you shall be placed ex parte and the case will be heard and determined in your absence.

Given under my seal and signature on this day 13-05-2026 of 2026 at Kolar.

By order of the court
Deputy Director of Land Records.

Advocate for appellant :
J. Natraj
M. Srinivasa
Advocates, Gulpet Kolar.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಗೌರವ್ ಗುಪ್ತ ಶ್ಲಾಘನೆ

ಕೆಪಿಸಿಎಲ್‌ನಲ್ಲಿ ಮಹಿಳಾ ಅಧಿಕಾರಿ, ಸಿಬ್ಬಂದಿ ಹೆಚ್ಚು

• **ಬೆಂಗಳೂರು:** ರಾಜ್ಯಕ್ಕೆ ಬೇಕಾದ ವಿದ್ಯುತ್ ಉತ್ಪಾದನೆ ಮಾಡುವ ಕೆಪಿಸಿಎಲ್‌ನಲ್ಲಿ, ಸಾಕಷ್ಟು ಸಂಖ್ಯೆಯಲ್ಲಿ ಮಹಿಳಾ ಅಧಿಕಾರಿಗಳು, ಸಿಬ್ಬಂದಿ ಇದ್ದಾರೆ. ಪುರುಷರಿ ಗಿಂತ ಕಮ್ಮಿಇಲ್ಲ ಎಂಬ ರೀತಿಯಲ್ಲಿ ಕೆಲಸ ಮಾಡಿ ಗರಿಷ್ಠ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಗೆ ಶ್ರಮಿಸಿದ್ದಾರೆ ಎಂದು ಇಂಧನ ಇಲಾಖೆ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಶ್ಲಾಘಿಸಿದ್ದಾರೆ.



ಕೆಪಿಸಿಎಲ್ ವತಿಯಿಂದ ಭಾರತೀಯ ವಿದ್ಯಾಭವನದ ಖಿಂಚಾ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ-2026 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸುಮಾರು 40 ವರ್ಷಗಳ ಹಿಂದೆ ನಾನು ಐಐಟಿಯಲ್ಲಿ ಓದುತ್ತಿದ್ದಾಗ 300ಕ್ಕೂ ಹೆಚ್ಚು ವಿದ್ಯಾರ್ಥಿಗಳ ಪೈಕಿ ಕೇವಲ 8 ಮಂದಿ ಹೆಣ್ಣು ಮಕ್ಕಳಿದ್ದರು. ಆದರೆ, ಈಗ ಕಾಲ ಬದಲಾಗಿದೆ. ಸಾಕಷ್ಟು ಹೆಣ್ಣು ಮಕ್ಕಳು ಇಂಜಿನಿಯರಿಂಗ್ ಓದಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದಾರೆ. ಕೆಪಿಸಿಎಲ್‌ನಲ್ಲೂ ಸಾಕಷ್ಟು ಮಹಿಳಾ ಇಂಜಿನಿಯರ್‌ಗಳು ನಾಯಕತ್ವ ವಹಿಸಿ ಕೆಲಸ ಮಾಡುತ್ತಿದ್ದಾರೆ. ಕೆಪಿಸಿಎಲ್ ಎಂದರೆ ಕೇವಲ ಒಂದು ವಿದ್ಯುತ್ ಉತ್ಪಾದನಾ ಸಂಸ್ಥೆಯಲ್ಲ, ಅದೊಂದು ಕುಟುಂಬದ ರೀತಿ. ಪರಸ್ಪರ ಸಹಕಾರದೊಂದಿಗೆ ಸಮಾನ ವಾಗಿ ಕೆಲಸ ಮಾಡುತ್ತಿದ್ದಾರೆ ಎಂದರು.

ರಾಜಾಜಿನಗರದ ಎಸ್‌ಜೆಆರ್ ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲೆ ಡಾ.ಪ್ರೇಮಾ ಸಿದ್ದರಾಜು ಮಾತನಾಡಿ, ಸಮಾಜದಲ್ಲಿ ಸ್ತ್ರೀ ಮತ್ತು ಪುರುಷರು ಸುಶಿಕ್ಷಿತರಾಗಿ ಸಮಾನತೆ ಎಂಬುದು ಅಚ್ಚುಕಟ್ಟಾಗಿ ಜಾರಿಯಾಗಿ ಆರ್ಥಿಕವಾಗಿಯೂ ಸಮಾನತೆ ಬಂದಾಗ ಯಾವುದೇ ರಾಷ್ಟ್ರ ಮುಂದುವರಿದ ರಾಷ್ಟ್ರವಾಗಿ ಹೊರಹೊಮ್ಮುತ್ತದೆ. ಭಾರತದಲ್ಲಿ ಹೆಣ್ಣು ಮಕ್ಕಳಿಗೆ ಪುರುಷರಷ್ಟೇ ಸಮಾನ ಅವಕಾಶ ಸಿಗದೇ ಇದ್ದಿದ್ದರೆ ದೇಶ ಇಂದಿಗೂ ಹಿಂದುಳಿದ ರಾಷ್ಟ್ರವಾಗಿಯೇ ಉಳಿಯುತ್ತಿತ್ತು. ಹೆಣ್ಣು ಮಕ್ಕಳು ಯಾವುದೇ ಕ್ಷೇತ್ರದಲ್ಲಿ ಶೇ. 100ರಷ್ಟು ಸಾಮರ್ಥ್ಯದೊಂದಿಗೆ ಕೆಲಸ ಮಾಡುತ್ತಾರೆ. ಹೀಗಾಗಿ ಭಾರತ ಮುಂದುವರಿಯುತ್ತಿರುವ ರಾಷ್ಟ್ರವಾಗಿದೆ ಎಂದರು.

ಸಾರಿಗೆ ಇಲಾಖೆ ಹೆಚ್ಚುವರಿ ಸಾರಿಗೆ ಆಯುಕ್ತೆ ಎಂ.ಪಿ.ಓಂಕಾರೇಶ್ವರಿ ಮಾತನಾಡಿ, ಮಹಿಳಾ ದಿನದ ವಿಶೇಷತೆ ಮತ್ತು ಮಹಿಳಾ ಸಾಧಕಿಯರ ಬಗ್ಗೆ ಮಾತನಾಡಿದರಲ್ಲದೆ, ಸಮಾಜದಲ್ಲಿ ಎಲ್ಲರನ್ನೂ ಗೌರವಿಸುವ, ಅದರಲ್ಲೂ ಮಹಿಳೆಯರನ್ನು ಗೌರವಿಸುವ ಸಂಸ್ಕೃತಿಯನ್ನು ಮಕ್ಕಳಿಗೆ ಕಲಿಸಿಕೊಡಬೇಕು ಎಂದು ಹೇಳಿದರು. ಈ ವೇಳೆ ಕೆಪಿಸಿಎಲ್ ಹಣಕಾಸು ನಿರ್ದೇಶಕ ಆರ್.ನಾಗರಾಜ, ತಾಂತ್ರಿಕ ನಿರ್ದೇಶಕ ಎಂ.ಆರ್.ಗಂಗಾಧರ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕಿ ರೇಖಾ ಟಿ., ಕೆಪಿಸಿಎಲ್ ಮುಖ್ಯ ಜಾಗೃತ ಅಧಿಕಾರಿ ಸಿರಿಗೌರಿ ಡಿ.ಜಿ. ಮತ್ತಿತರರು ಪಾಲ್ಗೊಂಡಿದ್ದರು.

ಗೌರಿಬಿದನೂರು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕೋಲಾರ.
ಮೂಲ ದಾವೆ ಸಂಖ್ಯೆ: 76/2023

ವಾದಿ : ಶ್ರೀಮತಿ ಶಕುಂತಲ.

ವಿರುದ್ಧ

ಪ್ರತಿವಾದಿಗಳು : ಶ್ರೀಮತಿ ಗಂಗಮ್ಮ ಮತ್ತು ಇತರರು ... [illegible] ... 45 ವರ್ಷ ... [illegible] ... -560091.

ಆದೇಶ 5 ನಿಯಮ 20 ಸಿ.ಪಿ.ಸಿ. ಅಡಿಯಲ್ಲಿ 2ನೇ ಪ್ರತಿವಾದಿಯವರ ಹಾಜರಾತಿಗಾಗಿ ಪತ್ರಿಕಾ ಪ್ರಕಟಣೆಗಾಗಿ ನೋಟೀಸು

[illegible] ... 76/2023 ... ದಿನಾಂಕ: 2-6-2026 ... 11:00 ಗಂಟೆಗೆ ... [illegible]

ಈ ನೋಟೀಸನ್ನು ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕ : 14-5-2026 ರಂದು ನೀಡಲಾಗಿದೆ.

ಷೆಡ್ಯೂಲ್

1) ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ... [illegible]

2) ಕೋಲಾರ ಜಿಲ್ಲೆ, ... ಸರ್ವೆ ನಂ. 23/3 ... [illegible]

ನ್ಯಾಯಾಲಯದ ಆದೇಶದ ಮೇರೆಗೆ, ಶಿರಸ್ತೇದಾರರು, ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕೋಲಾರ.
[illegible], ಕೋಲಾರ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ
ನಂ.146, ಸಹಕಾರ ಸೌಧ, 2ನೇ ಮಹಡಿ, 3ನೇ ಮುಖ್ಯರಸ್ತೆ, ಮಾರ್ಗೋಸಾ ರಸ್ತೆ, 8ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು -560003. ಇವರ ನ್ಯಾಯಾಲಯದಲ್ಲಿ

ಪತ್ರಿಕಾ ಪ್ರಕಟಣೆ

ಈ ನ್ಯಾಯಾಲಯದಲ್ಲಿ ಸಹಕಾರ ಸಂಘಗಳ ಕಾಯ್ದೆ ಕಲಂ 71 ರಡಿ ದಾಖಲಾಗಿರುವ ದಾವಾ ಪ್ರಕರಣದಲ್ಲಿ, ವಿಚಾರಣೆಗೆ ಹಾಜರಾಗಲು ಕಳುಹಿಸಿದ್ದ ನೋಟೀಸು ಸ್ವೀಕೃತಿಯಾಗದೆ ವಾಪಸ್ಸು ಬಂದಿರುತ್ತದೆ. ಈ ವ್ಯಾಜ್ಯದ ಮುಂದಿನ ವಿಚಾರಣೆಯನ್ನು ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ ರವರ ನ್ಯಾಯಾಲಯದಲ್ಲಿ ದಿನಾಂಕ 21.05.2026 ರಂದು ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಲಾಗಿದೆ. ಸದರಿ ದಿನಾಂಕದಂದು ಪ್ರತಿವಾದಿಯಾದ ನೀವು ತಪ್ಪದೇ ವಿಚಾರಣೆಗೆ ಹಾಜರಾಗಿ ನಿಮ್ಮ ಆಕ್ಷೇಪಣೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಏಕಪಕ್ಷೀಯವಾಗಿ ತೀರ್ಪು ನೀಡಲಾಗುವುದು.

ವಾದಿಯ ಹೆಸರು ಮತ್ತು ವಿಳಾಸ			
ಉಪ ವ್ಯವಸ್ಥಾಪಕರು, ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ, ನಂ.9, ಸುಬ್ಬರಾಮ ಚೆಟ್ಟಿ ರಸ್ತೆ, ಬಸವನಗುಡಿ, ಬೆಂಗಳೂರು - 560004.			
ಕ್ರ. ಸಂ.	ಪ್ರತಿವಾದಿಗಳ ಹೆಸರು ಮತ್ತು ವಿಳಾಸ		ವ್ಯಾಜ್ಯ ಪ್ರಕರಣದ ಸಂಖ್ಯೆ :
1	1) ಶ್ರೀ ಹನುಮಂತ ರಾಜು ಬಿನ್ ಕೆಂಚಪ್ಪ, ನಂ.430, ಕಮ್ಮಗೊಂಡನಹಳ್ಳಿ, ಅಬ್ಬಿಗೆರೆ, ಬೆಂಗಳೂರು -560 090. 2) ಶ್ರೀ ಲೋಕೇಶ್, ನಂ.58, ಭಕ್ತನಹಳ್ಳಿ, ಹಾಜರಹಳ್ಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು.	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ದಾವಾ/153/ 2025-26
2	ಹಿರಣ್ಮಯಿ ಗ್ರಾನೈಟ್ಸ್ ಅಂಡ್ ಮಿನೆರಲ್ಸ್ ಪ್ರೈವೇಟ್ ಲಿಮಿಟೆಡ್ ಮಾಲೀಕರು: ಶ್ರೀ ಸತ್ಯನಾರಾಯಣ ಎನ್, ಬಿನ್ ಶ್ರೀ ಎನ್‌ನಾರಾಯಣಪ್ಪ, ವಯಸ್ಕರು, ವಿಳಾಸ: ನಂ.19, 1ನೇ ಮೈನ್, 1ನೇ ಕ್ರಾಸ್, ಕೃಷ್ಣಪ್ಪ ಲೇಔಟ್, ಶ್ರೀನಗರ, ಬೆಂಗಳೂರು -560 050. ಫ್ಲಾಟ್ ನಂ.203, ಬಿ-2, ವಸುಧ ಅಪಾರ್ಟ್‌ಮೆಂಟ್ಸ್, ನಂ.7, 9ನೇ ಮೈನ್, ಶ್ರೀನಿವಾಸ ನಗರ, ಬೆಂಗಳೂರು - 560 050.	ಪ್ರತಿವಾದಿ-1	ಯುಬಿಸಿ-3/ ದಾವಾ/163/ 2025-26

ಈ ನೋಟೀಸನ್ನು ಈ ದಿನಾಂಕ: 12.03.2026 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಿದೆ.

ಸಹಕಾರ ಸಂಘಗಳ ಉಪ ನಿಬಂಧಕರು,
ಮೂರನೇ ವಲಯ, ಬೆಂಗಳೂರು ನಗರ ಜಿಲ್ಲೆ.

ಮೂಲಸೌಕರ್ಯಗಳನ್ನೇ ಗುರಿಯಾಗಿಸುವುದು ನಿಲ್ಲಿಸಿ: ಜೈಶಂಕರ್

ಯುದ್ಧ ನಿಲ್ಲಿಸಲು ಭಾರತ ಕೊಡುಗೆ



• **ಹೊಸದಿಲ್ಲಿ:** ಪಶ್ಚಿಮ ಏಷ್ಯಾ ಬಿಕ್ಕಟ್ಟು ಮತ್ತು ಈ ಬಿಕ್ಕಟ್ಟು ಇಂಧನ ಪೂರೈಕೆಗಳು ಹಾಗೂ ಹೋರ್ಮುಜ್ ಜಲಸಂಧಿಯಲ್ಲಿ ಸಾಗರ ಸ್ಥಿರತೆ ಮೇಲೆ ಬೀರಿರುವ ಪರಿಣಾಮಗಳ ಕುರಿತು ತೀವ್ರತರ ನಾದ ಕಳವಳ ವ್ಯಕ್ತಪಡಿಸಿರುವ ಭಾರತ, ಭೌಗೋಳಿಕ-ರಾಜಕೀಯ ಅಸ್ಥಿರತೆ ನಿವಾರಣೆ ಮತ್ತು ಏಕಪಕ್ಷೀಯ ಬಲವಂತದ ನಿರ್ಬಂಧಗಳನ್ನು ಕೈಬಿಡಲು ಕಾರ್ಯಾರ್ಥ ಮಾರ್ಗೋಪಾಯಗಳನ್ನು ಕಂಡುಕೊಳ್ಳುವಂತೆ ಬ್ರಿಕ್ಸ್ ರಾಷ್ಟ್ರಗಳನ್ನು ಒತ್ತಾಯಿಸಿದೆ.

ಅಂತಾರಾಷ್ಟ್ರೀಯ ಬಾಂಧವ್ಯಗಳನ್ನು ಬಲಿಷ್ಠಗೊಳಿಸಲು ಪೂರಕವಾಗಿ ಪರಸ್ಪರರ ಸಾರ್ವಭೌಮತೆ ಮತ್ತು ಭೌಗೋಳಿಕ ಸಮಗ್ರತೆಗಳನ್ನು ಗೌರವಿಸಬೇಕು. ಸಂಘರ್ಷ ಮುಕ್ತಾಯಕ್ಕೆ ಮಾತುಕತೆ ಮತ್ತು ರಾಜತಾಂತ್ರಿಕತೆಯೊಂದೇ ಸಪ್ಪ ಮಾರ್ಗವಾಗಿದೆ. ಯುದ್ಧ ನಿಲ್ಲಿಸೋ ಪ್ರಯತ್ನಗಳಿಗೆ ಮತ್ತು ಸ್ಥಿರತೆ ಕಾಪಾಡುವ ಉದ್ದೇಶದ ಉಪಕ್ರಮಗಳಿಗೆ ತುಂಬು ರಚನಾತ್ಮಕ ಕೊಡುಗೆ ನೀಡಲು ಭಾರತ ಸಿದ್ಧವಿದೆ ಎಂದು ಎರಡು ದಿನಗಳ ಬ್ರಿಕ್ಸ್ ಸಮಾವೇಶದ ಉದ್ಘಾಟನಾ ಸಂದರ್ಭ ಭಾರತದ ವಿದೇಶ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ನಿರ್ದಿಷ್ಟ ರಾಷ್ಟ್ರಗಳನ್ನು ಹೆಸರಿಸದೆ ಹೇಳಿದ್ದಾರೆ.

ಶಾಂತಿ ಎಂದರೆ ಇರುವ ಶಾಂತಿಯನ್ನೂ ಚೂರುಚೂರು ಮಾಡೋದಲ್ಲ, ಅಂತಾರಾಷ್ಟ್ರೀಯ ಕಾನೂನನ್ನು ಎತ್ತಿಹಿಡಿಯುವುದು, ನಾಗರಿಕರ ರಕ್ಷಣೆ ಜತೆ ಸಾರ್ವಜನಿಕ ಮೂಲಸೌಕರ್ಯಗಳನ್ನು ಟಾರ್ಗೆಟ್ ಮಾಡೋದನ್ನು ನಿಲ್ಲಿಸುವುದು ಮುಖ್ಯ ಎಂದು ಸಚಿವರು ಸಲಹೆ ಮಾಡಿದ್ದಾರೆ.

ಸುರಕ್ಷಿತ, ಅಡೆತಡೆಮುಕ್ತ ನೌಕಾ ಸಂಚಾರಕ್ಕೆ ಆಗ್ರಹ: ಹೋರ್ಮುಜ್ ಜಲಸಂಧಿ ಮತ್ತು ಕೆಂಪು ಸಮುದ್ರ ಮುಖೇನ ಹಡಗುಗಳು ಸುರಕ್ಷಿತ ಮತ್ತು ಅಡೆತಡೆಮುಕ್ತವಾಗಿ ಸಂಚರಿಸುವಂತಾಗಬೇಕೆಂದು ಬಲವಾಗಿ ಪ್ರತಿಪಾದಿಸಿರುವ ಸಚಿವ ಜೈಶಂಕರ್, ಜಾಗತಿಕ ವಿತ್ತೀಯ ಹಿತದೃಷ್ಟಿಯಿಂದ ಇದು ತೀರಾ ಮುಖ್ಯ ಎಂದಿದ್ದಾರೆ. ಗಾಜಾದಲ್ಲಿನ ಸಂಘರ್ಷವು ಗಂಭೀರ ಮಾನವೀಯ ಬಿಕ್ಕಟ್ಟುಗಳನ್ನು ಸೃಜಿಸಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಸುಸ್ಥಿರ ಕದನ ವಿರಾಮ, ಮಾನವೀಯ ನೆರವು ಮತ್ತು ದೀರ್ಘಕಾಲೀನ ಹಾಗೂ ಶಾಂತಿಯುತ ಪರಿಹಾರಕ್ಕೆ ಪೂರಕವಾಗಬಲ್ಲ ವಿಶ್ವಾಸಾರ್ಹ ಮಾರ್ಗೋಪಾಯಗಳು ಅತ್ಯವಶ್ಯವೆಂದು ಹೇಳಿದ್ದಾರೆ. ಪ್ಯಾಲೆಸ್ತೀನ್ ಸಮಸ್ಯೆಗೆ ಸಂಬಂಧಿಸಿ ದ್ವಿರಾಷ್ಟ್ರ ಪರಿಹಾರವನ್ನು ಭಾರತ ಬೆಂಬಲಿಸುತ್ತದೆ ಎಂದು ಗಮನ ಸೆಳೆದಿದ್ದಾರೆ.

ಹಿರಿಯ ನಾಯಕರು ಭಾಗಿ

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ, ರಷ್ಯಾದ ವಿದೇಶಾಂಗ ಸಚಿವ ಸರ್ಗೆ ಲಾವ್ರೊ, ಬ್ರೆಜಿಲ್‌ನ ಮೌರೊ ವಿಯೆರಾ, ಇಂಡೋನೇಷ್ಯಾ ಸಚಿವ ಸುಗಿಯೊನೊ, ದ.ಆಫ್ರಿಕಾ ಅಂತಾರಾಷ್ಟ್ರೀಯ ವ್ಯವಹಾರ ಸಚಿವ ರೊನಾಲ್ಡ್ ಲಮೋಲ ಮತ್ತಿತರ ಹಿರಿಯ ನಾಯಕರು ಸಮಾವೇಶದಲ್ಲಿ ಪಾಲ್ಗೊಂಡಿದ್ದಾರೆ. ಪ.ಏಷ್ಯಾ ಬಿಕ್ಕಟ್ಟು ಸೃಜಿಸಿರುವ ಆರ್ಥಿಕ ದುಷ್ಪರಿಣಾಮಗಳು, ಮುಖ್ಯವಾಗಿ ಇಂಧನ ಪೂರೈಕೆ ಬಿಕ್ಕಟ್ಟು, ವ್ಯಾಪಾರ ಮತ್ತು ಸುಂಕಗಳಿಗೆ ಸಂಬಂಧಿಸಿ ಅಮೆರಿಕದ ನೀತಿ ಇತ್ಯಾದಿ ವಿಚಾರಗಳು ಚರ್ಚೆಗೀಡಾಗಲಿರುವ ಹಿನ್ನೆಲೆಯಲ್ಲಿ, ಭಾರತ ಆತಿಥೇಯದ ಬ್ರಿಕ್ಸ್ ಸಮಾವೇಶ ತುಂಬು ಮಹತ್ವ ಪಡೆದಿದೆ.

ಇರಾನ್ ಸಚಿವರ ಜತೆ ಮೋದಿ ಚರ್ಚೆ

• **ಹೊಸದಿಲ್ಲಿ:** ಸಂಘರ್ಷ ನಿರತ ಇರಾನ್, ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನ ಸನ್ನಿವೇಶಗಳ ಮಧ್ಯೆ, ಭಾರತದ ಆತಿಥ್ಯದಲ್ಲಿ, ದಿಲ್ಲಿಯ ಭಾರತ ಮಂಡಪಮ್‌ನಲ್ಲಿ ನಡೆಯುತ್ತಿರುವ ಬ್ರಿಕ್ಸ್ ವಿದೇಶಾಂಗ ಸಚಿವರುಗಳ ಶೃಂಗಸಭೆ ಸಂದರ್ಭ, ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಮತ್ತು ರಷ್ಯಾದ ವಿದೇಶಾಂಗ ಸಚಿವ ಸರ್ಗೆ ಲಾವ್ರೊವ್ ಜತೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ಸಾಂಪ್ರದಾಯಿಕವಾಗಿ ಮಾತುಕತೆ ನಡೆಸಿದರು.

ಉನ್ನತ ಮಟ್ಟದ ರಾಜತಾಂತ್ರಿಕ ಕಾರ್ಯಕ್ರಮವೆಂದು ಬಣ್ಣಿಸಲ್ಪಟ್ಟ ಬ್ರಿಕ್ಸ್ ಸಮಾವೇಶದಲ್ಲಿ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು, ಪಾಲುದಾರ ರಾಷ್ಟ್ರಗಳು ಪಾಲ್ಗೊಂಡಿದ್ದು, ಅಧಿಕೃತ ಬ್ರಿಕ್ಸ್ ಫ್ಯಾಮಿಲಿ ಫೋಟೋ ಕಾರ್ಯಕ್ರಮದಲ್ಲಿ, ಪ್ರಧಾನಿ ಮೋದಿ, ಭಾರತಕ್ಕೆ ಭೇಟಿ ನೀಡಿರುವ ವಿದೇಶಿ ಸಚಿವರುಗಳು, ಪ್ರತಿನಿಧಿಗಳೊಂದಿಗೆ ಸೇರಿಕೊಂಡರು.

ಮೊತ್ತ ಮೊದಲು ಭಾರತಕ್ಕೆ ಚೀನಾ ರಾಯಭಾರಿ ಆಗಿರುವ ಕ್ಸು ಫೈಹಾಂಗ್ ಅವರನ್ನು ಎಸ್.ಜೈಶಂಕರ್ ಸ್ವಾಗತಿಸಿದ್ದರು. ಅಮೆರಿಕ ಅಧ್ಯಕ್ಷ ಟ್ರಂಪ್ ಚೀನಾ ಭೇಟಿ ಹಿನ್ನೆಲೆಯಲ್ಲಿ ಚೀನಾದ ವಿದೇಶಾಂಗ ಸಚಿವ ವಾಂಗ್ ಇ ಬ್ರಿಕ್ಸ್ ಸಮಾವೇಶಕ್ಕೆ ಬಂದಿರಲಿಲ್ಲ, ಯುಎಇ ಸಚಿವ ಖಲೀಫಾ ಶಹೀನ್ ಅಲಂ ಮರಾರ್, ಇಂಡೋನೇಷ್ಯಾದ ಸುಗಿಯೋನೋ, ದ.ಆಫ್ರಿಕಾದ ರೊನಾಲ್ಡ್ ಲಮೋಲ, ಇಥಿಯೋಪಿಯಾದ ಗೆಡಿಯೋನ್ ತೈಮೊಥೆವೋಸ್ ಹೆಸ್ಸೆಬಾನ್ ಭಾಗವಹಿಸಿದ್ದರು.



ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ವ್ಯಾಪಾರ, ತೈವಾನ್, ಇರಾನ್ ಯುದ್ಧ, ಇಂಧನ ಭದ್ರತೆ ಮತ್ತು ತಂತ್ರಜ್ಞಾನದ ಕುರಿತು ಗುರುವಾರ ಸುದೀರ್ಘ ಮಾತುಕತೆ ನಡೆಸಿದ್ದಾರೆ. ಉಭಯ ರಾಷ್ಟ್ರಗಳ ನಾಯಕರು ಸ್ಥಿರತೆ ಪ್ರದರ್ಶಿಸಿದರೂ, ತೈವಾನ್ ವಿಚಾರದಲ್ಲಿನ ತೀವ್ರ ಭಿನ್ನಾಭಿಪ್ರಾಯಗಳು ಉಭಯ ದೇಶಗಳ ನಡುವಿನ ಸಂಬಂಧದ ಸೂಕ್ಷ್ಮತೆಯನ್ನು ಮತ್ತೊಮ್ಮೆ ಜಗಜ್ಜಾಹೀರು ಮಾಡಿದವು.

ಕ್ಸಿ-ಟ್ರಂಪ್ ಬೀಜಿಂಗ್ ಶೃಂಗ ತೈವಾನ್ ವಿಚಾರ ರಣರಂಗ

» ಉಭಯ ನಾಯಕರ ನಡುವಿನ ಸಹಮತ ಮತ್ತು ಭಿನ್ನಾಭಿಪ್ರಾಯಗಳು



ಚೀನಾಗೆ ಭೇಟಿ ನೀಡಿದ ಅಮೆರಿಕದ ಮೊದಲ ಅಧ್ಯಕ್ಷ ಡೊನಾಲ್ಡ್ ಟ್ರಂಪ್

» ಕ್ಸಿ-ಟ್ರಂಪ್ ಐತಿಹಾಸಿಕ ಟೆಂಪಲ್ ಆಫ್ ಹೆವನ್‌ಗೆ ಭೇಟಿ, ಔತಣಕೂಟದಲ್ಲಿ ಭಾಗಿ

ಚೀನಾಗೆ ಬಂದ ಅಮೆರಿಕದ ಮೊದಲ ಅಧ್ಯಕ್ಷ

ಕಳೆದ ಹತ್ತು ವರ್ಷಗಳಲ್ಲಿ ಅಮೆರಿಕದ ಹಾಲಿ ಅಧ್ಯಕ್ಷರೊಬ್ಬರು ಚೀನಾಕ್ಕೆ ನೀಡುತ್ತಿರುವ ಮೊದಲ ಭೇಟಿ ಇದಾಗಿದ್ದು, ಗುರುವಾರ ಬೀಜಿಂಗ್‌ನ ಗ್ರೇಟ್ ಹಾಲ್ ಆಫ್ ದಿ ಪೀಪಲ್‌ನಲ್ಲಿ ಟ್ರಂಪ್ ಮತ್ತು ಜಿನ್‌ಪಿಂಗ್ ಎರಡು ಗಂಟೆಗಳಿಗೂ ಹೆಚ್ಚು ಕಾಲ ನೇರ ಮಾತುಕತೆ ನಡೆಸಿದರು. ಸುಂಕ ಸಮರ, ಕಾರ್ಯತಂತ್ರದ ಪೈಪೋಟಿ ಮತ್ತು ಜಾಗತಿಕ ವ್ಯವಸ್ಥೆಯ ಬಗ್ಗೆ ಇರುವ ವಿಭಿನ್ನ ದೃಷ್ಟಿಕೋನಗಳಿಂದ ಹದಗೆಟ್ಟಿರುವ ದ್ವಿಪಕ್ಷೀಯ ಸಂಬಂಧವನ್ನು ಸ್ಥಿರಗೊಳಿಸಲು ಉಭಯ ರಾಷ್ಟ್ರಗಳು ಈ ಮೂಲಕ ಪ್ರಯತ್ನಿಸಿದವು.

ವ್ಯಾಪಾರ, ಆರ್ಥಿಕ ಸಂಬಂಧಗಳು

ಶೃಂಗಸಭೆಯ ಕಾರ್ಯಸೂಚಿಯಲ್ಲಿ ವ್ಯಾಪಾರಕ್ಕೆ ಹೆಚ್ಚಿನ ಒತ್ತು ನೀಡಲಾಗಿತ್ತು. ಅಕ್ಟೋಬರ್‌ನಲ್ಲಿ ಮಾಡಿಕೊಂಡಿದ್ದ ತಾತ್ಕಾಲಿಕ ವ್ಯಾಪಾರ ಒಪ್ಪಂದ ಪ್ರಗತಿಯಲ್ಲಿದೆ ಎಂದು ಕ್ಸಿ, ಟ್ರಂಪ್‌ಗೆ ತಿಳಿಸಿದರು. ಈ ಹಿಂದೆ ಚೀನಾದ ಸರಕುಗಳ ಮೇಲೆ ಅಮೆರಿಕದ ಸುಂಕಗಳು ಶೇ.145ರಷ್ಟು ಏರಿಕೆಯಾಗಿದ್ದು, ಈ ಸಕಾರಾತ್ಮಕ ಮಾತುಕತೆಗಳು ಬಿಕ್ಕಟ್ಟನ್ನು ತಗ್ಗಿಸಿವೆ.

ಟ್ರಂಪ್ ಲಾಬಿ

ತಾಂತ್ರಿಕವಲ್ಲದ ಸರಕುಗಳ ವಿನಿಮಯವನ್ನು ನಿರ್ವಹಿಸಲು ಮತ್ತು ಹೂಡಿಕೆಯ ಮೇಲೆ ಸರ್ಕಾರದ ಮಟ್ಟದ ವೇದಿಕೆಯನ್ನು ಸ್ಥಾಪಿಸಲು ಯುಎಸ್-ಚೀನಾ ವ್ಯಾಪಾರ ಮಂಡಳಿ ಮತ್ತು ಯುಎಸ್-ಚೀನಾ ಹೂಡಿಕೆ ಮಂಡಳಿಗಳ ರಚನೆಯ ಬಗ್ಗೆ ಉಭಯ ಸರ್ಕಾರಗಳು ಚರ್ಚಿಸಿದವು. ಏರೋಸ್ಪೇಸ್, ಕೃಷಿ ಮತ್ತು ಇಂಧನ ಕ್ಷೇತ್ರಗಳಲ್ಲಿನ ಒಪ್ಪಂದಗಳಿಗೆ ಮೊದಲ ಆದ್ಯತೆ ನೀಡಲಾಯಿತು. ಕಳೆದ ವರ್ಷದ ವ್ಯಾಪಾರ ಸಮರದಿಂದ ಉಂಟಾಗಿದ್ದ ಆರ್ಥಿಕ ಹಿನ್ನಡೆಯನ್ನು ಸರಿದೂಗಿಸಲು ಅಮೆರಿಕದ ಕೃಷಿ ಉತ್ಪನ್ನಗಳು ಮತ್ತು ಪ್ರಯಾಣಿಕ ವಿಮಾನಗಳನ್ನು ಚೀನಾ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವಂತೆ ಟ್ರಂಪ್ ಒತ್ತಾಯಿಸಿದರು.



ಸುದ್ದಿ ಸಮಗ್ರ

ತೈವಾನ್: ತೀವ್ರ ಭಿನ್ನಾಭಿಪ್ರಾಯ

ತೈವಾನ್ ವಿಚಾರ ಮಾತುಕತೆಯಲ್ಲಿ ಅತ್ಯಂತ ವಿವಾದಾತ್ಮಕ ವಿಷಯವಾಗಿ ಹೊರಹೊಮ್ಮಿತು. ತೈವಾನ್ ವಿಷಯವನ್ನು ಸರಿಯಾಗಿ ನಿಭಾಯಿಸದಿದ್ದರೆ ಅದು ಉಭಯ ದೇಶಗಳ ನಡುವೆ ಸಂಘರ್ಷ ಮತ್ತು ಘರ್ಷಣೆಗೆ ಕಾರಣವಾಗಬಹುದು ಮತ್ತು ಇಡೀ ಸಂಬಂಧವನ್ನೇ ಅಪಾಯಕ್ಕೆ ತಳ್ಳಬಹುದು ಎಂದು ಕ್ಸಿ ಟ್ರಂಪ್‌ಗೆ ನೇರ ಎಚ್ಚರಿಕೆ ನೀಡಿದರು.

ಇರಾನ್ ಯುದ್ಧ ಮತ್ತು ಹಾರ್ಮುಜ್ ಜಲಸಂಧಿ

ಜಾಗತಿಕ ಇಂಧನ ಕಾರಿಡಾರ್ ಆದ ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ಸಂಘರ್ಷದಿಂದ ಉಂಟಾಗಿರುವ ಹಡಗು ಸಂಚಾರದ ಅಡಚಣೆಯ ಬಗ್ಗೆ ಶೃಂಗಸಭೆಯಲ್ಲಿ ಚರ್ಚಿಸಲಾಯಿತು. ಇಂಧನ ಪೂರೈಕೆಯ ಸುಗಮ ಸಂಚಾರಕ್ಕಾಗಿ ಜಲಸಂಧಿಯು ಮುಕ್ತವಾಗಿರಬೇಕು ಎಂದು ಇಬ್ಬರೂ ನಾಯಕರು ಒಪ್ಪಿದ್ದಾರೆ. ಕೊಲ್ಲಿ ರಾಷ್ಟ್ರಗಳ ಮೇಲಿನ ಇಂಧನ ಅವಲಂಬನೆಯನ್ನು ತಗ್ಗಿಸಲು ಅಮೆರಿಕದ



ತೈಲವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಲು ಕ್ಸಿ ಆಸಕ್ತಿ ವ್ಯಕ್ತಪಡಿಸಿದರು ಎಂದು ವಾಷಿಂಗ್ಟನ್ ತಿಳಿಸಿದೆ. ಇರಾನ್ ಬಿಕ್ಕಟ್ಟನ್ನು ಬಗೆಹರಿಸಲು ಚೀನಾ ಹೆಚ್ಚು ಸಕ್ರಿಯ ಪಾತ್ರ ವಹಿಸಬೇಕು ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಈ ಮೊದಲೇ ಒತ್ತಾಯಿಸಿದ್ದರು. ಚೀನಾ ಈ ಸಂಘರ್ಷದಲ್ಲಿ ರಾಜತಾಂತ್ರಿಕ ಮಧ್ಯಸ್ಥಿಕೆ ವಹಿಸಲು ಆಸಕ್ತಿ ತೋರಿದೆ.

ಯುಎಸ್ ಮಿಲಿಟರಿ ನೆರವು; ಚೀನಾ ಕೆಂಡ

ತೈವಾನ್ ಅನ್ನು ಚೀನಾ ತನ್ನ ಭೂಭಾಗ ಎಂದು ಪ್ರತಿಪಾದಿಸುತ್ತಿದೆ ಮತ್ತು ತೈಪೆಗೆ ಅಮೆರಿಕ ನೀಡುತ್ತಿರುವ ಮಿಲಿಟರಿ ಬೆಂಬಲವನ್ನು ನಿರಂತರ ವಿರೋಧಿಸುತ್ತಿದೆ. ಡಿಸೆಂಬರ್‌ನಲ್ಲಿ ಟ್ರಂಪ್ ಅವರು ತೈವಾನ್‌ಗೆ 11 ಬಿಲಿಯನ್ ಡಾಲರ್ ಶಸ್ತ್ರಾಸ್ತ್ರ ಪ್ಯಾಕೇಜ್ ಅನ್ನು ಅನುಮೋದಿಸಿದ ನಂತರ ಉದ್ವಿಗ್ನತೆ ಹೆಚ್ಚಾಗಿದೆ. ವಾಷಿಂಗ್ಟನ್ ಮತ್ತು ತೈಪೆ ನಡುವಿನ ರಕ್ಷಣಾ ಸಂಬಂಧಗಳು ಗಟ್ಟಿಯಾಗುತ್ತಿರುವುದು ಚೀನಾದ ಕಳವಳಕ್ಕೆ ಕಾರಣವಾಗಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ತೈವಾನ್ ಕುರಿತು ಚರ್ಚಿಸಲಾಗಿದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಲು ಟ್ರಂಪ್ ನಿರಾಕರಿಸಿದರು.

ಇರಾನ್ ವಿಚಾರದಲ್ಲಿ ಸಹಮತ

ಉಕ್ರೇನ್ ಯುದ್ಧ ಮತ್ತು ಕೊರಿಯನ್ ಪರ್ಯಾಯ ದ್ವೀಪದ ಬೆಳವಣಿಗೆಗಳ ಬಗ್ಗೆಯೂ ಉಭಯ ನಾಯಕರು ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಇರಾನ್ ಎಂದಿಗೂ ಪರಮಾಣು ಅಸ್ತ್ರವನ್ನು ಹೊಂದಬಾರದು ಎಂಬ ವಿಷಯದಲ್ಲಿ ಇಬ್ಬರೂ ನಾಯಕರು ಸಹಮತ ವ್ಯಕ್ತಪಡಿಸಿರುವುದು ವಿಶೇಷ.

ಹಳೆ ಸಮಸ್ಯೆಗಳಿಗೆ ಸಿಗದ ಪರಿಹಾರ

ಆರೋಗ್ಯ, ಕೃಷಿ, ಪ್ರವಾಸೋದ್ಯಮ ಮತ್ತು ಕಾನೂನು ಜಾರಿಯಲ್ಲಿ ಸಹಕಾರವನ್ನು ವಿಸ್ತರಿಸಲು ಕ್ಸಿ ಕರೆ ನೀಡಿದರು. ಕ್ಸಿ-ಟ್ರಂಪ್ ಬೀಜಿಂಗ್‌ನ ಐತಿಹಾಸಿಕ ಟೆಂಪಲ್ ಆಫ್ ಹೆವನ್‌ಗೆ ಭೇಟಿ ನೀಡಿ ಔತಣಕೂಟದಲ್ಲಿ ಭಾಗವಹಿಸಿದರೂ, ತೈವಾನ್ ಮತ್ತು ತಂತ್ರಜ್ಞಾನ ನಿಯಂತ್ರಣದಂತಹ ಮೂಲಭೂತ ಭಿನ್ನಾಭಿಪ್ರಾಯಗಳು ಇನ್ನೂ ಬಗೆಹರಿಯದೆ ಉಳಿದಿವೆ.

ಪರಸ್ಪರ ಲಾಭದಾಯಕ ಸಂಬಂಧ ಎಂದ ಕ್ಸಿ!

ದ್ವಿಪಕ್ಷೀಯ ಆರ್ಥಿಕ ಸಂಬಂಧಗಳು ಪರಸ್ಪರ ಲಾಭದಾಯಕ ಎಂದು ಬಣ್ಣಿಸಿದ ಕ್ಸಿ, ಚೀನಾದ ಮಾರುಕಟ್ಟೆಯನ್ನು ಇನ್ನಷ್ಟು ಮುಕ್ತಗೊಳಿಸುವುದಾಗಿ ಭರವಸೆ ಇತ್ತರು. ಇದೇ ವೇಳೆ, ಚೀನಾದಿಂದ ಅಮೆರಿಕಕ್ಕೆ ಅಕ್ರಮ ರವಾನೆಯಾಗುತ್ತಿರುವ ಫೆಂಟಾನಿಲ್ ಪೂರ್ವಗಾಮಿ ರಾಸಾಯನಿಕಗಳ ಹರಿವನ್ನು ತಡೆಗಟ್ಟಲು ಎರಡೂ ದೇಶಗಳು ಒಮ್ಮತ ವ್ಯಕ್ತಪಡಿಸಿದವು.



ತಂತ್ರಜ್ಞಾನ ಸಹಕಾರ

ಅರೆವಾಹಕಗಳ (ಸೆಮಿಕಂಡಕ್ಟರ್) ರಫ್ತು ನಿಯಂತ್ರಣ ಮತ್ತು ಎಐ ಚಿಪ್‌ಗಳ ಲಭ್ಯತೆ, ಅಮೆರಿಕ-ಚೀನಾ ನಡುವಿನ ಪೈಪೋಟಿಯ ಪ್ರಮುಖ ವಿಷಯವಾಗಿ ಹೊರಹೊಮ್ಮಿದೆ. ಎನ್ವಿಡಿಯಾದ ಎಚ್200 ಕೃತಕ ಬುದ್ಧಿಮತ್ತೆ ಚಿಪ್‌ಗಳನ್ನು ಖರೀದಿಸಲು ಚೀನಾದ ಸುಮಾರು 10 ಕಂಪನಿಗಳಿಗೆ ವಾಷಿಂಗ್ಟನ್ ಅನುಮೋದನೆ ನೀಡಿದೆ ಎಂದು ರಾಯಿಟರ್ಸ್ ವರದಿ ಮಾಡಿದೆ. ಎನ್ವಿಡಿಯಾ ಸಿಇಒ ಜೆನ್ಸನ್ ಹುವಾಂಗ್ ಟ್ರಂಪ್ ನಿಯೋಗದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು.

ಕಿರುಸುದ್ದಿ

ಇಂದಿನಿಂದ ಪ್ರಧಾನಿ ಪಂಚ ರಾಷ್ಟ್ರಗಳ ಪ್ರವಾಸ ಆರಂಭ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಮೇ 15ರಿಂದ 20ರವರೆಗೆ ಪಂಚ ರಾಷ್ಟ್ರಗಳಿಗೆ ಪ್ರವಾಸೈಯಲಿದ್ದು, ಮೊತ್ತ ಮೊದಲು ಮೇ 15ರಂದು ಯುಎಇಗೆ ಭೇಟಿ ಕೊಡಲಿದ್ದಾರೆ. ಉಭಯ ರಾಷ್ಟ್ರಗಳ ನಡುವಣ ವ್ಯೂಹಾತ್ಮಕ ಪಾಲುದಾರಿಕೆ ಬಲಪಡಿಸುವುದು ಪ್ರಧಾನಿಯ ಯುಎಇ ಭೇಟಿ ಹಿಂದಿನ ಆಶಯವಾಗಿದೆ. ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಝುಯೇದ್ ಅಲ್ ನಹ್ಯಾನ್‌ರನ್ನು ಭೇಟಿಯಾಗಿ ವ್ಯಾಪಾರ, ಹೂಡಿಕೆ, ಇಂಧನ ರಂಗದಲ್ಲಿ ಸಹಕಾರ, ತಂತ್ರಜ್ಞಾನ ಮತ್ತು ಸಂಸ್ಕೃತಿ ಹಾಗೂ ಜನ-ಜನ ಸಂಪರ್ಕ ಇತ್ಯಾದಿ ವಲಯಗಳಲ್ಲಿ ದ್ವಿಪಕ್ಷೀಯ ಬಾಂಧವ್ಯ ಕೊಂಡಿಗಳನ್ನು ಗಾಢಗೊಳಿಸುವ ಅವಕಾಶಗಳ ಕುರಿತು ಮತ್ತು ವಲಯದ ಸಮಸ್ಯೆಗಳ ಬಗ್ಗೆ ಉಭಯ ನಾಯಕರು ಚರ್ಚಿಸಲಿದ್ದಾರೆ ಎಂದು ವಿದೇಶಾಂಗ ಖಾತೆ ಕಾರ್ಯದರ್ಶಿ ಸಿಬಿ ಜಾರ್ಜ್ ವಿಶೇಷ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕೆಣಕಿದರೆ ನಿರ್ಣಾಯಕ ತಿರುಗೇಟು: ರಾಜನಾಥ್

• **ಜೈಪುರ:** ಭಯೋತ್ಪಾದನೆಯ ವಿಚಾರದಲ್ಲಿ ಪಾಕಿಸ್ತಾನಕ್ಕೆ ಗುರುವಾರ ಎಚ್ಚರಿಕೆ ನೀಡಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಭಾರತವನ್ನು ಕೆಣಕಿದರೆ ನಿರ್ಣಾಯಕ ತಿರುಗೇಟು ನೀಡಲಾಗುವುದು ಎಂದು ಗುಡುಗಿದ್ದಾರೆ. ನಾಗೌರ್ ಜಿಲ್ಲೆಯ ಮೆರ್ತಾ ಪಟ್ಟಣದಲ್ಲಿ ರಜಪೂತ ಆಡಳಿತಗಾರ ರಾವ್ ದುದಾ ಪ್ರತಿಮೆ ಅನಾವರಣಗೊಳಿಸಿ ಮಾತನಾಡಿದ ಸಿಂಗ್, ಪಹಲ್ಗಾಮ್ ದಾಳಿಯ ನಂತರ ನಡೆಸಲಾದ ಆಪರೇಷನ್ ಸಿಂಧೂರ ಪಾಕಿಸ್ತಾನಕ್ಕೆ ಬಲವಾದ ಸಂದೇಶ ರವಾನಿಸಿದೆ. ಭಾರತ ಯಾರನ್ನೂ ಕೆಣಕುವುದಿಲ್ಲ, ಆದರೆ ಕೆಣಕಿದರೆ ಸುಮ್ಮನೆ ಕೂರುವುದಿಲ್ಲ. 2016ರ ಸರ್ಜಿಕಲ್ ಸ್ಟ್ರೈಕ್ ಮತ್ತು 2019ರ ಬಾಲಾಕೋಟ್ ವಾಯು ದಾಳಿಗಳು, ಭಾರತದ ಬದಲಾದ ನಿಲುವಿಗೆ ಸಾಕ್ಷಿ ಎಂದು ಅವರು ತಿಳಿಸಿದರು.

ಪಳನಿಸ್ವಾಮಿ ಸೇರಿ 22 ಶಾಸಕರ ಅನರ್ಹತೆಗೆ ಆಗ್ರಹ

• **ಚೆನ್ನೈ:** ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಹಾಗೂ ಅವರ ಬೆಂಬಲಿಗ ಶಾಸಕರು ಪಕ್ಷದ ವಿಪ್ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿರುವ ಸಿ.ವಿ. ಷಣ್ಮುಗಂ ಮತ್ತು ಎಸ್.ಪಿ. ವೇಲುಮಣಿ ನೇತೃತ್ವದ ಬಣ, ಅವರ ಅನರ್ಹತೆಗೆ ಗುರುವಾರ ಒತ್ತಾಯಿಸಿದೆ. ಬಣದ ವಿಪ್ ಸಿ. ವಿಜಯಭಾಸ್ಕರ್, ಸ್ಪೀಕರ್ ಜೆ.ಸಿ.ಡಿ. ಪ್ರಭಾಕರ್‌ರನ್ನು ಭೇಟಿ ಮಾಡಿ ದೂರು ಸಲ್ಲಿಸಿದ್ದಾರೆ. ಬುಧವಾರ ನಡೆದ ಸಿ. ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಸರ್ಕಾರದ ವಿಶ್ವಾಸಮತ ಯಾಚನೆಯ ವೇಳೆ ಸರ್ಕಾರದ ಪರವಾಗಿ ಮತ ಚಲಾಯಿಸುವಂತೆ ನೀಡಿದ್ದ ಸೂಚನೆಯನ್ನು ಪಳನಿಸ್ವಾಮಿ ಸೇರಿದಂತೆ 22 ಶಾಸಕರು ಉಲ್ಲಂಘಿಸಿದ್ದಾರೆ, ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಮಮತಾ ವಕೀಲಿ ಲೈಸೆನ್ಸ್ ಕೇಳಿದ ಬಾರ್ ಕೌನ್ಸಿಲ್

• **ಕೋಲ್ಕತ್ತಾ:** ಇತ್ತೀಚಿನ ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೋತ್ತರ ಹಿಂಸಾಚಾರದ ಕುರಿತು ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಕಲ್ಕತ್ತಾ ಹೈಕೋರ್ಟ್‌ನಲ್ಲಿ



ಖುದ್ದಾಗಿ ವಾದ ಮಂಡಿಸಿದರು. ಅವರ ಪರವಾನಗಿ ಮತ್ತು ವಕೀಲಿ ವೃತ್ತಿಜೀವನದ ಬಗ್ಗೆ ಭಾರತೀಯ ಬಾರ್ ಕೌನ್ಸಿಲ್(ಬಿಸಿಐ) ಮಾಹಿತಿ ಸಲ್ಲಿಸುವಂತೆ ತನ್ನ ಪಶ್ಚಿಮ ಬಂಗಾಳ ಘಟಕಕ್ಕೆ ಸೂಚಿಸಿದೆ. ಅಲ್ಲದೆ, ಮಮತಾ ಮುಖ್ಯಮಂತ್ರಿಯಾಗಿದ್ದಾಗ ಅವರ ವಕೀಲಿ ಪರವಾನಗಿ ರದ್ದಿನಲ್ಲಿ ಇಡಲಾಗಿತ್ತೇ ಎಂದು ಪ್ರಶ್ನಿಸಿದೆ.

ವಕೀಲರ ಕೋಟು ಧರಿಸಿ ನ್ಯಾಯಾಲಯಕ್ಕೆ ಆಗಮಿಸಿದ ಮಮತಾ, ತೀವ್ರ ಘೋಷಣೆಗಳ ನಡುವೆಯೇ ವಾದ ಮಂಡಿಸಿದರು. ರಾಜ್ಯದಲ್ಲಿ ಬಿಜೆಪಿ ಕಾರ್ಯಕರ್ತರಿಂದ ಹಿಂಸಾಚಾರ ನಡೆಯುತ್ತಿದೆ ಎಂದು ಆರೋಪಿಸಿದ ಅವರು, 10 ಮಂದಿ ಕೊಲೆಯಾದವರ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದರು. ಪೊಲೀಸರ ಸಮ್ಮುಖದಲ್ಲೇ ಮನೆ ಮತ್ತು ಕಚೇರಿಗಳನ್ನು ಲೂಟಿ ಮಾಡಲಾಗುತ್ತಿದೆ ಎಂದು ದೂರಿದ್ದಾರೆ. ಜನರ ರಕ್ಷಣೆಗೆ ತುರ್ತು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದು, ಬಂಗಾಳ ಬುಲ್ಡೋಜರ್ ರಾಜ್ಯವಲ್ಲ ಎಂದು ಪ್ರತಿಪಾದಿಸಿದರು.

ಸೋಲು ಜೀರ್ಣಿಸಲಾಗುತ್ತಿಲ್ಲ: ಮಮತಾರ ಕಾನೂನು ಹೋರಾಟವನ್ನು ಟಿಎಂಸಿ ಶ್ಲಾಘಿಸಿದ್ದರೆ, ಮಮತಾರಿಗೆ ಸೋಲನ್ನು ಜೀರ್ಣಿಸಿಕೊಳ್ಳಲಾಗುತ್ತಿಲ್ಲ ಎಂದು ಬಿಜೆಪಿ ಟೀಕಿಸಿದೆ. ಎನ್‌ವಿ ಸುಭಾಷ್ ಸೇರಿ ಬಿಜೆಪಿ ಮುಖಂಡರು ಮಮತಾ ನಡೆಯನ್ನು ರಾಜಕೀಯ ಪ್ರೇರಿತ ಎಂದು ಬಣ್ಣಿಸಿದ್ದಾರೆ.

ತೈವಾನ್ ವಿಚಾರದಲ್ಲಿ ಬಹಳ ಎಚ್ಚರಿಕೆ ಇರಲಿ

• **ಬೀಜಿಂಗ್:** ತೈವಾನ್ ವಿಷಯವನ್ನು ಸರಿಯಾಗಿ ನಿಭಾಯಿಸದಿದ್ದರೆ ಅಮೆರಿಕ ಮತ್ತು ಚೀನಾ ನಡುವೆ ಘರ್ಷಣೆಗಳಷ್ಟೇ ಅಲ್ಲ, ಸಂಘರ್ಷಗಳೂ ಉಂಟಾಗಬಹುದು ಎಂದು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಎಚ್ಚರಿಕೆ ನೀಡಿದ್ದಾರೆ.

ತೈವಾನ್ ಬಗ್ಗೆ ತಲೆ ಹಾಕದಂತೆ ಟ್ರಂಪ್‌ಗೆ ಕ್ಸಿ ಎಚ್ಚರಿಕೆ

ಬೀಜಿಂಗ್‌ನಲ್ಲಿ ಗುರುವಾರ ನಡೆದ ಉಭಯ ನಾಯಕರ ವ್ಯಾಪಕ ಮಾತುಕತೆಯಲ್ಲಿ ಇರಾನ್ ಯುದ್ಧ, ಇಂಧನ ಭದ್ರತೆ, ವ್ಯಾಪಾರ, ಸುಂಕ, ತಂತ್ರಜ್ಞಾನ ಮತ್ತು ತೈವಾನ್ ಸೇರಿದಂತೆ ಹಲವು ಪ್ರಮುಖ ವಿಷಯಗಳು ಚರ್ಚೆಗೆ ಬಂದವು. ಸುಮಾರು ಎರಡು ಗಂಟೆಗಳ ಕಾಲ ನಡೆದ ಮೊದಲ ಸುತ್ತಿನ ಮಾತುಕತೆ ಬಳಿಕ ಟ್ರಂಪ್ ಅವರು ಕ್ಸಿ ಜಿನ್‌ಪಿಂಗ್ ಮತ್ತು ಅವರ ಪತ್ನಿಯನ್ನು ಸೆಪ್ಟೆಂಬರ್ 24ರಂದು ವೈಟ್‌ಹೌಸ್‌ಗೆ ಆಹ್ವಾನಿಸಿದರು. ಆದರೆ, ಚೀನಾ-ಅಮೆರಿಕ ಸಂಬಂಧಗಳಲ್ಲಿ ತೈವಾನ್ ಪ್ರಶ್ನೆಯೇ ಅತ್ಯಂತ ಪ್ರಮುಖ ವಿಷಯ ಎಂದು ಕ್ಸಿ ಒತ್ತಿ ಹೇಳಿದರು.

ಈ ವಿಷಯವನ್ನು ಸರಿಯಾಗಿ ನಿಭಾಯಿಸಿದರೆ ದ್ವಿಪಕ್ಷೀಯ ಸಂಬಂಧಗಳಲ್ಲಿ ಒಟ್ಟಾರೆ ಸ್ಥಿರತೆ ಇರುತ್ತದೆ. ಇಲ್ಲದಿದ್ದರೆ ಎರಡೂ ದೇಶಗಳು ಘರ್ಷಣೆ ಹಾಗೂ ಸಂಘರ್ಷಗಳತ್ತ ಸಾಗಬಹುದು, ಇದರಿಂದ ಸಂಬಂಧಗಳು ಗಂಭೀರ ಅಪಾಯಕ್ಕೆ ಸಿಲುಕಬಹುದು ಎಂದು ಅವರು ಎಚ್ಚರಿಸಿದರು. ತೈವಾನ್ ವಿಚಾರದಲ್ಲಿ ಅಮೆರಿಕ ಅತ್ಯಂತ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು ಎಂದೂ ಜಿನ್‌ಪಿಂಗ್ ಸೂಚಿಸಿದರು.

ಭಾರತದ ಸರಕು ನೌಕೆಗೆ ದಾಳಿ: ಎಂಇಎ ಖಂಡನೆ

• **ಹೊಸದಿಲ್ಲಿ:** ಒಮಾನ್ ಸಮುದ್ರ ಪ್ರದೇಶದಲ್ಲಿ ಸಂಚರಿಸುತ್ತಿದ್ದ ಭಾರತದ ಧ್ವಜ ಹೊಂದಿದ್ದ ಎಂಎಸ್‌ವಿ ಹಾಜಿ ಅಲಿ ಎಂಬ ಸರಕು ನೌಕೆಯ ಮೇಲೆ ಕ್ಷಿಪಣಿ ದಾಳಿ ನಡೆಸಿ ಅದನ್ನು ಮುಳುಗಿಸಿರುವುದನ್ನು ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಗುರುವಾರ ತೀವ್ರವಾಗಿ ಖಂಡಿಸಿದೆ.

ಸೋಮಾಲಿಯಾದ ಬೆರ್ಬೆರಾ ಬಂದರಿನಿಂದ ಶಾರ್ಜಾಕ್ಕೆ ಜಾನುವಾರುಗಳನ್ನು ಹೊತ್ತೊಯ್ಯುತ್ತಿದ್ದ ಈ ಹಡಗಿನ ಮೇಲೆ ಮೇ 13ರಂದು ಸ್ಥಳೀಯ ಕಾಲಮಾನ ಬೆಳಗಿನ ಜಾವ 3:30ರ ಸುಮಾರಿಗೆ ಡ್ರೋನ್ ಅಥವಾ ಕ್ಷಿಪಣಿ ದಾಳಿ ನಡೆದಿದೆ. ಒಮಾನ್‌ನ ಲಿಮಾ ಬಳಿ ನಡೆದ ಈ ದಾಳಿಯಿಂದಾಗಿ ಹಡಗಿನಲ್ಲಿ ಸ್ಫೋಟ ಮತ್ತು ಅಗ್ನಿ ಅವಘಡ ಸಂಭವಿಸಿ, ಅದು ಸಮುದ್ರದಲ್ಲಿ ಮುಳುಗಿದೆ. ಒಮಾನ್ ಕರಾವಳಿ ರಕ್ಷಣಾ ಪಡೆ ತಕ್ಷಣ ಕಾರ್ಯಪ್ರವೃತ್ತರಾಗಿ ಹಡಗಿನಲ್ಲಿದ್ದ ಎಲ್ಲಾ 14 ಭಾರತೀಯ ನಾವಿಕರನ್ನು ಲೈಫ್‌ಬೋಟ್‌ಗಳ ಮೂಲಕ ರಕ್ಷಿಸಿದೆ. ಇದಕ್ಕಾಗಿ ಒಮಾನ್ ಅಧಿಕಾರಿಗಳಿಗೆ ಭಾರತ ಸರ್ಕಾರ ಕೃತಜ್ಞತೆ ಸಲ್ಲಿಸಿದೆ.

ರಾಜತಾಂತ್ರಿಕ ಪ್ರತಿಕ್ರಿಯೆ: ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್, ನಾವಿಕರನ್ನು ಗುರಿಯಾಗಿಸಿಕೊಂಡಿರುವುದು ಅಸ್ವೀಕಾರಾರ್ಹ ಎಂದಿದ್ದಾರೆ. ದಿಲ್ಲಿಯಲ್ಲಿ ಬ್ರಿಕ್ಸ್ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆ ನಡೆಯುತ್ತಿರುವಾಗಲೇ ಈ ಘಟನೆ ಸಂಭವಿಸಿದೆ. ಅಡೆತಡೆಯಿಲ್ಲದ ಸಮುದ್ರ ವ್ಯಾಪಾರಕ್ಕೆ ಒತ್ತು ನೀಡಿರುವ ವಿದೇಶಾಂಗ ಸಚಿವ ಎಸ್.ಜೈಶಂಕರ್ ಪಶ್ಚಿಮ ಏಷ್ಯಾದ ಸಮುದ್ರ ಮಾರ್ಗಗಳಲ್ಲಿನ ಕಾನೂನುಬಾಹಿರ ಕೃತ್ಯಗಳು ಜಾಗತಿಕ ವ್ಯಾಪಾರದ ಅಡಿಪಾಯಕ್ಕೆ ಬೆದರಿಕೆಯೊಡ್ಡುತ್ತಿವೆ ಎಂದು ಎಚ್ಚರಿಸಿದ್ದಾರೆ.

ಭಾರತ-ಪಾಕ್: ಹೊಸಬಾಳೆ ನಿಲುವಿಗೆ ನರಾವಣೆ ಸಹಮತ

• **ಹೊಸದಿಲ್ಲಿ:** ಭಾರತ, ಪಾಕಿಸ್ತಾನದ ಜನಸಾಮಾನ್ಯರ ನಡುವಣ ಬಲಿಷ್ಠ ಬಾಂಧವ್ಯವು, ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಬಾಂಧವ್ಯ ಸುಧಾರಿಸಲು ನೆರವಾಗಲಿದೆ ಎಂದು ಭಾರತೀಯ ಸೇನಾ ಮಾಜಿ ಮುಖ್ಯಸ್ಥ (ನಿವೃತ್ತ) ಮನೋಜ್ ಮುಕುಂದ್ ನರಾವಣೆ ಅಭಿಪ್ರಾಯಪಟ್ಟಿದ್ದಾರೆ ಮತ್ತು ಈ ನಿಟ್ಟಿನಲ್ಲಿ ಆರೆಸ್ಸೆಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ನಿಲುವನ್ನು ಸಮರ್ಥಿಸಿದ್ದಾರೆ.

ಮಿತ್ರರಾಗಲು ಸಾಧ್ಯ: ಗಡಿಯ ಎರಡೂ ಬದಿಯ ಸಾಮಾನ್ಯ ಜನರಿಗೆ ರಾಜಕೀಯ ಅನಗತ್ಯ. ಸಾಮಾನ್ಯ ಜನರಿಗೇನಿದ್ದರೂ ರೋಟಿ, ಕಪಡಾ ಮತ್ತು ಮಕಾನ್ (ಆಹಾರ, ಬಟ್ಟೆ, ಸೂರು)ಮಾತ್ರ ಅಗತ್ಯ. ಎರಡೂ ರಾಷ್ಟ್ರಗಳ ಜನಸಾಮಾನ್ಯರ ಮಧ್ಯೆ ಸ್ನೇಹ ಬೆಳೆದಲ್ಲಿ, ಎರಡೂ ರಾಷ್ಟ್ರಗಳು ಮಿತ್ರರಾಗಲು ಸಾಧ್ಯವಿದೆ. ಹಾಗಾಗಿ ಇದೇ ಸರಿಯಾದ ವಿಚಾರ. ಜನ-ಜನ ಸಂಪರ್ಕ ತೀರಾ ಮುಖ್ಯ ಎಂದು ನರಾವಣೆ ಹೇಳಿದ್ದಾರೆ. ಆ ರಾಷ್ಟ್ರದ ಪಾಲಿಗೆ ಬಾಗಿಲು ಮುಚ್ಚಕೂಡದು, ಬದಲಾಗಿ ಮಾತುಕತೆಗೆ ಸದಾ ಸಿದ್ಧರಿರಬೇಕೆಂದು ಹೊಸಬಾಳೆ ಅಭಿಪ್ರಾಯಿಸಿದ್ದರು.

ಹತ್ತು ದಿನಗಳ ಕಾಂಗ್ರೆಸ್ ರಾಜಕೀಯ ಪ್ರಹಸನಕ್ಕೆ ಕೊನೆಗೂ ತೆರೆ

ವಿ.ಡಿ. ಸತೀಶನ್ ಕೇರಳದ ನೂತನ ಸಿಎಂ

• **ತಿರುವನಂತಪುರಂ:** ಕೇರಳದ ನೂತನ ಮುಖ್ಯಮಂತ್ರಿ ಆಯ್ಕೆಗಾಗಿ ಕಳೆದ 10 ದಿನಗಳಿಂದ ನಡೆಯುತ್ತಿದ್ದ ರಾಜ ಕೀಯ ಪ್ರಹಸನಕ್ಕೆ ಕೊನೆಗೂ ತೆರೆ ಬಿದ್ದಿದ್ದು, ಕಾಂಗ್ರೆಸ್ ಹೈಕಮಾಂಡ್ ವಿ.ಡಿ. ಸತೀಶನ್ ಅವರನ್ನು ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಎಂದು ಘೋಷಿಸಿದೆ.

ಮಾಜಿ ವಿರೋಧ ಪಕ್ಷದ ನಾಯಕ ಸತೀಶನ್ (61)ಅವರನ್ನು ಕಾಂಗ್ರೆಸ್ ಹೈಕಮಾಂಡ್ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆಯ್ಕೆ ಮಾಡಿದೆ. ತನ್ನ ಆಯ್ಕೆಯ ಕೆ.ಸಿ.ವೇಣುಗೋಪಾಲ್‌ರನ್ನು ಮುಖ್ಯಮಂತ್ರಿಯಾಗಿಸುವ ಕಾಂಗ್ರೆಸ್ ಹೈಕಮಾಂಡಿನ ಲೆಕ್ಕಾಚಾರ ತಪ್ಪಿದೆ. ಕಾಂಗ್ರೆಸ್ ಕಾರ್ಯಕರ್ತರು, ಮುಸ್ಲಿಂ ಲೀಗ್ ಮತ್ತು ಇತರ ಗುಂಪುಗಳು ಕೆ.ಸಿ.ವೇಣುಗೋಪಾಲ್‌ರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಹೇರುವ ಯತ್ನದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದವು. 2026ರ ವಿಧಾನಸಭಾ ಚುನಾವಣೆಯಲ್ಲಿ 140 ಸ್ಥಾನಗಳ ಪೈಕಿ ಯುಡಿಎಫ್ 102 ಸ್ಥಾನ(ಕಾಂಗ್ರೆಸ್ 63, ಮುಸ್ಲಿಂ ಲೀಗ್ 22, ಇತರ 14)ಗಳೊಂದಿಗೆ ಭರ್ಜರಿ



ಜಯ ಸಾಧಿಸಿ ಅಧಿಕಾರಕ್ಕೆ ಬಂದಿದೆ. **ದೈವೇಚ್ಛೆ ಎಂದ ಸತೀಶನ್:** ಮುಖ್ಯಮಂತ್ರಿ ಸ್ಥಾನಕ್ಕೆ ತಾವು ಆಯ್ಕೆಯಾಗಿರುವುದನ್ನು ವೈಯಕ್ತಿಕ ಸಾಧನೆ ಎಂದು ಭಾವಿಸುವುದಿಲ್ಲ, ಇದು ದೈವೇಚ್ಛೆ ಎಂದುಕೊಳ್ಳುತ್ತೇನೆ. ಎಲ್ಲರನ್ನೂ ಜತೆಗೂಡಿಸಿ ಮುಂದುವರಿಯುವುದಾಗಿ ತಿಳಿಸಿದ ಸತೀಶನ್, ಆಡಳಿತದಲ್ಲಿ ಸಾಮೂಹಿಕ ಪ್ರಯತ್ನಕ್ಕೆ ಕರೆ ನೀಡಿದ್ದಾರೆ. ರಾಹುಲ್ ಗಾಂಧಿ ಮತ್ತು ಯುಡಿಎಫ್ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿದರು.

ರಾಜ್ಯಪಾಲರಿಗೆ ಹಕ್ಕು ಮಂಡಿಸಿದ ಸತೀಶನ್: ಶಾಸಕಾಂಗ ಪಕ್ಷದ ಸಭೆಯ ನಂತರ ಸತೀಶನ್, ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್‌ರನ್ನು ಭೇಟಿ ಮಾಡಿ ಸರ್ಕಾರ ರಚಿಸಲು ಹಕ್ಕು ಮಂಡಿಸಲಿದ್ದಾರೆ.

ಕೇರಳದಲ್ಲಿ ಮಾತ್ರ ವಿಳಂಬ

ಇತ್ತೀಚೆಗೆ ಚುನಾವಣೆ ನಡೆದ ಪಂಚರಾಜ್ಯಗಳ ಪೈಕಿ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳ ಆಯ್ಕೆಯಾಗಿ ಅವರು ಅಧಿಕಾರ ಸ್ವೀಕರಿಸಿದ್ದರೂ, ಕೇರಳದಲ್ಲಿ ಸಿಎಂ ಆಯ್ಕೆ ಪ್ರಕ್ರಿಯೆಯಲ್ಲಿ ವಿಳಂಬ ಉಂಟಾಗಿದ್ದುದು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮಿತ್ರಕೂಟದ ಪಕ್ಷಗಳಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿತ್ತು.

ಯಾರು ವಿ.ಡಿ. ಸತೀಶನ್? ಕೊಚ್ಚಿ ಬಳಿಯ ಕೇವರ ನೆಟ್ಟೂರು ಮೂಲದ ವಿ.ಡಿ.ಸತೀಶನ್ 1964ರ ಮೇ 31ರಂದು ದಾಮೋದರ ಮೆನನ್-ವಿಲಾಸಿನಿ ಅಮ್ಮ ದಂಪತಿ ಸುಪುತ್ರರಾಗಿ ಜನಿಸಿದರು. ಕಾನೂನು ಪದವಿ ಪಡೆದಿರುವ ಸತೀಶನ್ ಅವರು ಪೆರಾವೂರು ಕ್ಷೇತ್ರದಿಂದ ಈ ಬಾರಿ ಆಯ್ಕೆಯಾಗಿದ್ದಾರೆ.

72 ಮಂದಿಗೆ ಗಾಯ, 170 ಜಾನುವಾರುಗಳ ಸಾವು

ಉ.ಪ್ರದೇಶ: ಬಿರುಗಾಳಿ ಮಳೆಗೆ 111 ಜನರು ಬಲಿ

• **ಲಖನೌ:** ಉತ್ತರ ಪ್ರದೇಶದ ಹಲವಾರು ಜಿಲ್ಲೆಗಳಲ್ಲಿ ಬುಧವಾರ ಸಂಜೆ ಸಂಭವಿಸಿದ ಭೀಕರ ಬಿರುಗಾಳಿ, ಗುಡುಗು ಸಹಿತ ಮಳೆ ಮತ್ತು ಸಿಡಿಲಿನ ಅಬ್ಬರಕ್ಕೆ ಕನಿಷ್ಠ 111 ಜನರು ಬಲಿಯಾಗಿದ್ದು, 72 ಮಂದಿ ಗಾಯಗೊಂಡಿದ್ದಾರೆ. ಬುಧವಾರ ಕಂಡುಬಂದ ಹವಾಮಾನ ವೈಪರೀತ್ಯದಿಂದ ರಾಜ್ಯಾದ್ಯಂತ 227 ಮನೆಗಳು ಜಖಂಗೊಂಡಿದ್ದು, 170 ಜಾನುವಾರುಗಳು ಮೃತಪಟ್ಟಿವೆ ಎಂದು ಪರಿಹಾರ ಆಯುಕ್ತರ ಕಚೇರಿ ಗುರುವಾರ ತಿಳಿಸಿದೆ.

ಭಾರೀ ವೇಗದಲ್ಲಿ ಬೀಸಿದ ಗಾಳಿಯಿಂದಾಗಿ ಮರಗಳು ಮತ್ತು ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, ವಾಹನಗಳು ಜಖಂಗೊಂಡಿವೆ. ಹಲವೆಡೆ ರಸ್ತೆ ಸಂಚಾರ ಸ್ಥಗಿತಗೊಂಡಿದೆ. ಜಿಲ್ಲಾವಾರು ಮಾಹಿತಿ ಪ್ರಕಾರ, ಭದೋಹಿಯಲ್ಲಿ 16, ಪ್ರಯಾಗ್‌ರಾಜ್‌ನಲ್ಲಿ 17 ಮತ್ತು ಫತೇಪುರ್‌ನಲ್ಲಿ 9 ಮಂದಿ ಮೃತಪಟ್ಟಿದ್ದಾರೆ. ಪ್ರತಾಪ್‌ಗಢ, ಕಾನ್ಪುರ ದೇಹತ್ ಮತ್ತು ದೇವರಿಯಾ ಜಿಲ್ಲೆಗಳಲ್ಲೂ, ಸಾವು-ನೋವುಗಳು ವರದಿಯಾಗಿವೆ.

ಪರಿಹಾರ ಕಾರ್ಯಾಚರಣೆ

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಮೃತರ ಕುಟುಂಬಗಳಿಗೆ 24 ಗಂಟೆಗಳ ಒಳಗಾಗಿ ಹಣಕಾಸಿನ ನೆರವು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ. ಬಾರಾಬಂಕಿ, ಬಹ್ರೈಚ್ ಮತ್ತು ಉನ್ನಾವೊ ಸೇರಿದಂತೆ ಬಾಧಿತ 19 ಜಿಲ್ಲೆಗಳಿಗೆ ಹಣಕಾಸು ನೆರವು ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆ.

BRFORE THE NOMINEE OF DEPUTY REGISTRAR OF CHITS, III ZONE, MARGOSA ROAD, MALLESWARAM, AT BANGALORE.

Dispute No. DRB-III/ CHITS/136/2025-26.

BETWEEN: MARGADARSI CHITS (KARNATAKA) PVT. LTD., Registered Office at Plot No. 212, Opp. Gate No. 9 of Palace Ground, Bellary Main Road, Sadashiva Nagar, BANGALORE-560 080.

Branch: BANASHANKARI

Represented by its Foreman & Branch Manager, **Mr. K. BALACHANDRAN.** .... **DISPUTANT**

AND:

Mr. M. V. RAVIKUMAR & ORS.

3. Mr. R. BALAKRISHNA, S/o Mr. M. P. Ramaswamy, Major, Assistant Director, Land Records, Dpt. Of Survey, 2nd Floor, DC Office Complex, MANGALURU-575 004.

4. Ms. G. R. PREETHI, D/o Mr. Range Gowda, Major, Techer Trainer, Azim Premji Foundation, # 134, Doddakanneli, Next to WIPRO Office, Sarjapura Road, BENGALURU - 560 035.

5. Mr. J. RANGEGOWDA, S/o Mr. Jayaramanna, Major, First Division Asst., Survey Settlement And Land Records, K. R. Circle, BENGALURU - 560 001. ....**OPPONENTS.**

SUIT NOTICE BY PAPER PUBLICATION TO OPPONENT Nos. 3, 4 & 5.

WHEREAS, the Disputant has filed the above dispute U/s 64 (1) of The Chit Funds Act, 1982 before The Deputy Registrar of Chits, III Zone, Bangalore for recovery of a sum of **Rs.1,40,863/-** along with interest at 24% p.a. and the Court Costs from the Opponents and the above dispute has been referred to me for adjudication and disposal.

Notice sent to Opponent **Nos. 3, 4 & 5** by S.P.A.D. have been returned unserved. Therefore, the Opponent **Nos. 3, 4 & 5** named above are therefore hereby directed to appear before me at the Branch Office of the Disputant Company at Banashankari, at Site # 287, IInd Floor, Banashankari LayOut, 3rd Stage, 4th Phase, 7th Block, Bangalore-560 085 **on 03-06-2026 at 3-00PM** with all relevant documents failing which the above dispute will be decided as per law, in their absence.

Given Under my hand & seal on 13-05-2026.

S. Devaraj
Nominee of Deputy Registrar of Chits, III Zone, Bangalore.

ADVOCATE FOR DISPUTANT:
K. R. DINAKAR, ADVOCATE
66, 4th Cross, Ashok Nagar, Near N. R. Colony, BANGALORE-560 050.
Mob: 94485 39699.

CHANGE OF NAME

I, **HARSHITA TOPHAKHANE,** D/o Gireesh Tophakhane, age 27 years, R/at No. 156, 2nd Cross, Krishna Garden Incity layout, Doddakammanahalli Road, Near South Park Apartment, Chikkakammanahalli, Gottigere Post, Bengaluru-560 083 do hereby declare that I have changed my name from **HARSHITHA G. TOPHAKHANE** to **HARSHITA TOPHAKHANE,** henceforth I shall be known and called as **HARSHITA TOPHAKHANE** for all purposes, vide affidavit dated 14th May 2026, sworn before Advocate and Notary **P.N. NAGESHA** at Bangalore.

IN THE COURT OF THE HON'BLE DEPUTY COMMISSIONER, BENGALURU URBAN DISTRICT, AT BENGLAURU

R.P No. 719/2025

BETWEEN: Munikrishnappa Dead by LR'S

1. Smt. Ammaiamma, W/o Late Munikrishnappa, aged about 70 Years, **2. Ramakrishnappa,** S/o Late Muniramaiaha, aged about 65 years, **3. Sri. Munesh,** S/o Late Muniramaiah, aged about 60 years, **4. Sri. Veekatesh,** S/o Late Muniramaiah, aged about 53 years, **5. Sri Munikrishna .C.M,** S/o Late Chikkamuniswamappa, aged about 49 years, **6. Sri.Ambarish,** S/o Srinivas, aged about 33 Years, **7.Sri Harish,** S/o Srinivas, aged about 35 Years, **8.Sri Sathish,** S/o Srinivas, aged about 36 Years, All r/at Chikkanagamangala Village, Sarjapura Hobli, Taluk, Bengaluru Urban District-560099. ...

PETITIONERS

AND: 1. The Assistant Commissioner, Bengaluru South Sub Division Bengaluru-560001. **2. The Thasildar, Anekal Taluk,** Anekal-562106. **3. Smt.Jayalakshmi,** W/o.Late. Sri. G. Srinivasa Murthy, aged about 43 Years, Residing at: No.53, 1st Main Road, Parvathipuram, V.V.Puram, Bengaluru-560004. (By GPA holder Sri Paramesh.T) S/o. Thammayyappa, aged about 43 Years, Residing at: No.223, 6th Cross, Bhuvaneshwari Colony, Yamaluru, Marathalli Post, Bengaluru North Taluk, Bengaluru District-560037. **4. Smt Kalavathi,** W/o Late Nagaraju, aged about major, **5. Sri Anil Kumar,** S/o Late Nagaraju, aged about major, Respondents 4 & 5 R/at Chikkanagamangala Village, Sarjapura Hobli, Anekal Taluk, Bengaluru Urban District.

SUMMONS UNDER ORDER V RULE 20 OF C.P.C

WHEREAS, the appellant herein has filed the above appeal against the Respondents for challenging the Phode order of 4th and 5th respondent. The Court has posted the above case on **08-06-2026** at **03:00 P.M.** for appearance of you personally or through counsel duly instructed to answer the claim on that day. Hence, you are hereby summoned to appear before the court on the said date, failing which the Hon'ble Court will decide the matter in your absence by placing you ex-parte.

SCHEDULE

Land bearing Sy No 184/1,184/2, 184/3 and 184/4, in total measuring an extent of 4 Acres 13 Guntas of land situated at Chikkanagamangala Village, Sarjapura Hobli, Anekal Taluk, Bangalore-560099.

Given under my hand and seal of this Court on this 13/04/2026 at Bangalore

By order of the Court, Deputy Commissioner, Bengaluru Urban District, at Benglauru

Advocate for Appellants
SRINIVAS GOWDA R V
JURIES LAW FIRM
Office at No: 678, Ground Floor, 9th Main, 7th Sector, HSR Layout, Opp MRF Show Room, Bengaluru-560102.
Ph No: 9945559568

BEFORE THE SPECIAL DEPUTY COMMISSIONER, BENGALURU DISTRICT AT BENGALURU

R.P.NO. 548/2025

BETWEEN:- 1. Sri. Venkatesha P S/o Late Papaiah, Aged about 62 year R/at No. 335, Bagaluru, Bagaluru Post, Jala Hobli, Yeahanka Taluk, Bengaluru -562149.
...**PETITIONER**

AND:- 1. The Assist Commissioner Bangaluru South Sub Division, Bangaluru -560009.
2.Thasildar Anekal Taluk, Anekal -562106
...**RESPONDENTS**

SUMMONS TO RESPONDENT NO. 3 to No.6

3. Smt. Varalakshmi, D/o. Late Annamma & Papaiah, Aged about 44 years, R/at Bagaluru Colony, Bagaluru Post, Jala Hobli, Yeahanka Taluk, Bengaluru -562149.
4. Smt. Venkatratna D/o. Late Annamma & Papaiah, Aged about 46 years R/at Bagaluru Colony, Bagaluru Post, Jala Hobli, Yeahanka Taluk, Bengaluru -562149.
5. Smt. Prema D/o. Late Annamma & Papaiah, Aged about 48 years, R/at Bagaluru Colony, Bagaluru Post, Jala Hobli, Yeahanka Taluk, Bengaluru -562149.
6. Sri Ravichandra S/o Late Muniyappa,Grandson of Late Annamma, Aged about 41 years R/at Bagaluru Colony, Bagaluru Post, Jala Hobli, Yeahanka Taluk, Bengaluru -562149.

WHEREAS, the appellant has filed the above case against for the relief of Respondents No.3 to No.6 and set aside the impugned orders passed by Respondent No.1 to herin set aside the impugned orders of dated 27.02.2025 passed in R.A.(YLK) 20/2025 and survey sketch drawn by Respondent No.2 in respect of property bearing Old Sy.No176/64, new Sy.No.501, totally measuring 0.20 guntas, situated at Bagaluru Village, Jala Hobli, Yelahanka Taluk, Bengaluru Urban District.

You are hereby summoned to appear before this court on **1/6/2026 at 11.A.M.** in person or through an advocate/pleader to answer the questions to the same. Failing which the case will be heard and determined as ex-parte.

Given under my hand the seal of the court this day 27/4/2026.

By Order of the Court
Sd/- Deputy Commissioner,
Bengaluru Urban District, Bengaluru

ADVOCATE NAME AND ADDRESS
AVINASH C,
ADVOCATES AT BENGALURU
O/at. No.47, 19th Main, 2nd Block, Rajajinagar, Bengaluru District -560010.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀ ಏಕ್.ಪಿ. ...ಸಿಂಗ್, ... ಫ್ಲಾಟ್ ನಂ.8, ಶ್ರೀ ... ನಂ.205, ... ಬೆಂಗಳೂರು-560 201, ... ಇವರು (1) ದಿನಾಂಕ 13.02.2008ರ ಮೂಲ ಕ್ರಯ ಪತ್ರ, ದಸ್ತಾವೇಜು ಸಂ. ABL-1-05114/2007-08, ಸಿಡಿ ಸಂ. ABLD16 ರಲ್ಲಿ ನೋಂದಾಯಿಸಲಾಗಿದ್ದು, ಕರ್ನಾಟಕ ವಸತಿ ಮಂಡಳಿಯಿಂದ ಬಿಡುಗಡೆಯಾಗಿದ್ದು, ಸಬ್-ರಿಜಿಸ್ಟ್ರಾರ್ ಕಚೇರಿ, ... ಅಲಾಟ್‌ಮೆಂಟ್ ಲೆಟರ್, (2) ದಿನಾಂಕ 08.07.2007ರ ... ಪತ್ರ, (3) ... ಪ್ರಮಾಣಪತ್ರ ಮತ್ತು (4) ದಿನಾಂಕ 04.08.2012ರಂದು ಬೆಂಗಳೂರು ನಗರ ... ಅಲಾಟ್‌ಮೆಂಟ್ ... ಕರ್ನಾಟಕ ವಸತಿ ಮಂಡಳಿಯ ... ಬೆಂಗಳೂರಿನ ... ಕರ್ನಾಟಕ ವಸತಿ ಮಂಡಳಿಯು ಅಭಿವೃದ್ಧಿಪಡಿಸಿದ ನಂ.503 HB-6, 3BHK 6 ... ಸಂಬಂಧಿಸಿದ ದಾಖಲೆಗಳು ಕಳೆದುಹೋಗಿವೆ. ಇದರ ಬಗ್ಗೆ ದಿನಾಂಕ 04.09.2025ರಂದು ... ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಯಾರಿಗಾದರೂ ಮೇಲ್ಕಂಡ ದಾಖಲೆಗಳು ಸಿಕ್ಕಲ್ಲಿ ಅಥವಾ ತಮ್ಮ ಬಳಿಯಲ್ಲಿದ್ದರೆ ಕೂಡಲೇ ನನ್ನ ಕೆಳಗಿನ ವಿಳಾಸಕ್ಕೆ ಕಳುಹಿಸಿ.

ಬಿ. ಸುಬ್ರಾಯ ಬಾಡಿಗೆ, ವಕೀಲರು
ನಂ.23, 11ನೇ ಮೈನ್, 33ನೇ ಅಡ್ಡರಸ್ತೆ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ **ಶ್ರೀ ಚನ್ನವೀರಯ್ಯ ಆರ್,** ಮನೆ ನಂ.69, ರಾಜಾಪುರ, ಹೆಬ್ಬಾಗಿಲು ಅಂಚೆ, ಜಿಗಣಿ, ಆನೇಕಲ್ ತಾಲ್ಲೂಕು, ಬೆಂಗಳೂರು-560105 ಇವರು ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಹೆಬ್ಬಾಗಿಲು ಗ್ರಾಮದಲ್ಲಿರುವ ರಾಜಾಪುರ ಗ್ರಾಮ ಪಂಚಾಯತ್ ಖಾನೇಷುಮಾರಿ ಸಂ. 9 ಮತ್ತು 11ರ ಪ್ರಕಾರ, ಆನೇಕಲ್‌ನ ಉಪ-ನೋಂದಣಾಧಿಕಾರಿ ಕಚೇರಿಯಲ್ಲಿ, ಬುಕ್ I ರ ದಾಖಲೆ ಸಂ. 814/1987-88 ಹೊಂದಿರುವ ಮೂಲ ದಾನಪತ್ರ ಪತ್ರವನ್ನು ಕಳೆದುಕೊಂಡಿರುತ್ತಾರೆ. ಇದರ ಬಗ್ಗೆ ಅವರು ದಿನಾಂಕ 09.05.2026ರಂದು ನ್ಯಾಯವ್ಯಾಪ್ತಿಯ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಯಾರಿಗಾದರೂ ಮೇಲ್ಕಂಡ ದಾಖಲೆಗಳು ಸಿಕ್ಕಲ್ಲಿ ಅಥವಾ ತಮ್ಮ ಬಳಿಯಲ್ಲಿದ್ದರೆ ಕೂಡಲೇ ನನ್ನ ಕೆಳಗಿನ ವಿಳಾಸಕ್ಕೆ ಕಳುಹಿಸಿ.

ಬಿ. ಸುಬ್ರಾಯ ಬಾಡಿಗೆ, ವಕೀಲರು
ನಂ.23, 11ನೇ ಮೈನ್, 33ನೇ ಅಡ್ಡರಸ್ತೆ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು.

PUBLIC NOTICE

Public are informed that my client Mr. Kushalappa M P S/o Ponnappa M M residing at #44 ground floor Nidhi Nilaya Saptashree Enclave, Shamrajapuram, Bangalore North, Vidyaranyapura Post, Bengaluru-560097.

My client is the absolute owner in position of all the peace and parcel of the property bearing site No. 155 of old khata No. 182, 308 new khata No. 416 layout formed converted old survey No.12 / 8B, its new re-survey No 12/8C an extent of 3 acre 10 guntas and converted survey number 17/1 and extent of two acre 19 and converted survey number 15 /4 extent of 1 acre 27 guntas situated at Lakshmipura Village Yeshwantpur Bangalore North Taluk, Measuring East to West 40-0 feet and North to South 30-0 feet total measuring 1200 square feet are bonded on. East by : Site No.157, Waste by : Road, North by : Site No. 154, South by : Site No.156.

My client has lost the three original sale deed,

1). Sale Deed dated 06.09.2012, registered on 06-09-2012, registered as document No. PYN-1-04963-2012-13, CD No. PNYD518 in the office of the Sub-Registrar, Rajajinagara (Peenya, 2).
2). Sale Deed dated 20/12/2012, registered on 20/22/2012, registered as document No. PNY-1-08281-2012-13, CD No. PNYD540 in the office of the Sub-Registrar, Rajajinagara (Peenya).
3). Sale Deed dated 08/12/2014, registered on 08/12/2014, registered as document No. PNY-1-08366-2014-15, CD No. PNYD592 in the office of the Sub-Registrar, Rajajinagara (Peenya).

I had lodged the complaint in Bangalore City New Town Police Station, Bangalore, on 14/05/2026, LR No. 2201715/2026, LR No.2201764/2026 and LR No.2201781/2026.

If any person found or anyone having any claim or interest over the said property, he/she is requested to forward their claims along with the relevant documents to us within 07 days of this public notice. If we do not receive any claim from any person within 07 days, it will be strictly presumed that this property is absolutely free from any claim or encumbrance and no one has any claim over this property and if any One found the above deed kindly contact below mentioned

RAJESH .N, (ADVOCATE)
#56, 6th Cross, Pulakeshinagara,
Attur Main Road Yelahanka,
Bangalore - 560064. PH. 9844927949

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ಉಪ ನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ
ನಂ.146, ಸಹಕಾರ ಸೌಧ, 2ನೇ ಮಹಡಿ, ಮಾರ್ಗೋಸಾ ರಸ್ತೆ, 8ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು -560003. ಇವರ ನ್ಯಾಯಾಲಯದಲ್ಲಿ

ಪತ್ರಿಕಾ ಪ್ರಕಟಣೆ

ಈ ನ್ಯಾಯಾಲಯದಲ್ಲಿ ಸಹಕಾರ ಸಂಘಗಳ ಕಾಯ್ದೆ ಕಲಂ 71ರಡಿ ದಾಖಲಾಗಿರುವ ದಾವಾ ಪ್ರಕರಣದಲ್ಲಿ, ವಿಚಾರಣೆಗೆ ಹಾಜರಾಗಲು ಕಳುಹಿಸಿದ ನೋಟೀಸು ಸ್ವೀಕೃತಿಯಾಗದೆ ವಾಪಸ್ಸು ಬಂದಿರುತ್ತದೆ. ಈ ವ್ಯಾಜ್ಯದ ಮುಂದಿನ ವಿಚಾರಣೆಯನ್ನು ಸಹಕಾರ ಸಂಘಗಳ ಉಪ ನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ರವರ ನ್ಯಾಯಾಲಯದಲ್ಲಿ **ದಿನಾಂಕ : 20.05.2026** ರಂದು ಮಧ್ಯಾಹ್ನ 3.00 ಗಂಟೆಗೆ ನಿಗದಿಪಡಿಸಲಾಗಿದೆ. ಸದರಿ ದಿನಾಂಕದಂದು ಪ್ರತಿವಾದಿಯಾದ ನೀವು ತಪ್ಪದೇ ವಿಚಾರಣೆಗೆ ಹಾಜರಾಗಿ ನಿಮ್ಮ ಆಕ್ಷೇಪಣೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಏಕಪಕ್ಷೀಯವಾಗಿ ತೀರ್ಪು ನೀಡಲಾಗುವುದು.

ಕ್ರ. ಸಂ.	ಪ್ರತಿವಾದಿಗಳ ಹೆಸರು ಮತ್ತು ವಿಳಾಸ		ವ್ಯಾಜ್ಯ ಪ್ರಕರಣದ ಸಂಖ್ಯೆ :
	ವಾದಿಯ ಹೆಸರು ಮತ್ತು ವಿಳಾಸ: ಉಪ ವ್ಯವಸ್ಥಾಪಕರು, ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ, ನಂ.9, ಸುಬ್ಬರಾಮ ಚೆಟ್ಟಿ ರಸ್ತೆ, ಬಸವನಗುಡಿ, ಬೆಂಗಳೂರು - 560004.		
1	2) ಶ್ರೀ ರಾಜು ಎಂ ಬಿನ್ ಶ್ರೀ ಮುಗುರೇ ಗೌಡ ವಯಸ್ಕರು, ವಿಳಾಸ: ನಂ.7/27, 9ನೇ ಕ್ರಾಸ್, 1ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಆಜಾದ್‌ನಗರ, ಬೆಂಗಳೂರು - 560 018.	ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/311/ 2025-26
2	5) ಶ್ರೀ ಸತ್ಯನಾರಾಯಣ, ವಯಸ್ಕರು, ವಿಳಾಸ, ನಂ.19, 1ನೆ ಅಡ್ಡ ರಸ್ತೆ, 1ನೆ ಮುಖ್ಯ ರಸ್ತೆ, ಕೃಷ್ಣಪ್ಪ ಬಡಾವಣೆ, ಶ್ರೀನಿವಾಸನಗರ, ಬೆಂಗಳೂರು - 560 050. 6) ಶ್ರೀಮತಿ ಎಂ.ಎಸ್., ಮಹಾಲಕ್ಷ್ಮಿ ಕೋಂ. ಶ್ರೀ ಸತ್ಯನಾರಾಯಣ, ವಯಸ್ಕರು, ವಿಳಾಸ, ನಂ.19, 1ನೆ ಅಡ್ಡ ರಸ್ತೆ. 1ನೆ ಮುಖ್ಯ ರಸ್ತೆ, ಕೃಷ್ಣಪ್ಪ ಬಡಾವಣೆ, ಶ್ರೀನಿವಾಸನಗರ, ಬೆಂಗಳೂರು - 560 050, ಅವರ ಜಿಪಿಎ ಹೋಲ್ಡರ್ ಶ್ರೀ ಸತ್ಯನಾರಾಯಣ.	ಪ್ರತಿವಾದಿ-5 ಪ್ರತಿವಾದಿ-6	ಯುಬಿಸಿ-3/ ಡಿಬಿಎಸ್/312/ 2025-26
3	1) ಶ್ರೀ ಸತ್ಯನಾರಾಯಣ ಎಂ.ಆರ್., ಬಿನ್ ಶ್ರೀ ಎಂ. ರಾಘವೇಂದ್ರ ರಾವ್, ವಯಸ್ಕರು, ವಿಳಾಸ: ನಂ.431/ಎ, 19ನೇ ಕ್ರಾಸ್, 2ನೇ ಫೇಸ್ ಗಿರಿನಗರ, ಬೆಂಗಳೂರು - 560 085. 2) ಶ್ರೀ ರಾಧಾಕೃಷ್ಣ ಕೆ.ಎಸ್., ಬಿನ್ ಶ್ರೀ ಕೃಷ್ಣಪ್ಪ ಶ್ರೀನಿವಾಸಮೂರ್ತಿ, ವಯಸ್ಕರು, ವಿಳಾಸ: ನಂ. 150/29, 393 9ನೇ ಬ್ಲಾಕ್, ಜಯನಗರ, ಬೆಂಗಳೂರು - 560 069.	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/313/ 2025-26
4.	1) ಶ್ರೀಮತಿ ಕೃಷ್ಣವೇಣಿ ಕೋಂ. ಶ್ರೀ ಸುಬ್ಬ ರಾವ್ ಎಸ್. ವಯಸ್ಕರು, ವಿಳಾಸ: ನಂ.22, 2ನೇ ಮೈನ್, ಸಂತೃಪ್ತಿ ನಗರ, ಜೆ.ಪಿ. ನಗರ 7ನೇ ಹಂತ, ಬೆಂಗಳೂರು - 560078. 2) ಶ್ರೀ ಸುಬ್ಬ ರಾವ್ ಎಸ್, ಬಿನ್ ಲೇಟ್ ಕೆ ಮೂರ್ತಿ ರಾವ್, ವಯಸ್ಕರು, ವಿಳಾಸ: ನಂ.22, 2ನೇ ಮೈನ್, ಸಂತೃಪ್ತಿ ನಗರ, ಜೆ.ಪಿ. ನಗರ 7ನೇ ಹಂತ, ಬೆಂಗಳೂರು - 560078.	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/314/ 2025-26
5	3) ಶ್ರೀಮತಿ ದೇವಿಕಾ ರಾಣಿ ಕೋಂ. ಎ. ಶ್ರೀನಿವಾಸಲು, ವಯಸ್ಕರು, ವಿಳಾಸ: ನಂ27/2, 47ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು - 560 041. 4) ಶ್ರೀ ಗೋವಿಂದ್ ಪ್ರಸಾದ್ ಬಿನ್ ಸತ್ಯನಾರಾಯಣ, ವಯಸ್ಕರು, ವಿಳಾಸ: ನಂ.157, ಸೌಧಾಮಿನಿ ಲೇಔಟ್, ಕೋಣನಕುಂಟೆ ಕ್ರಾಸ್, ಬೆಂಗಳೂರು - 560 062.	ಪ್ರತಿವಾದಿ-3 ಪ್ರತಿವಾದಿ-4	ಯುಬಿಸಿ-3/ ಡಿಬಿಎಸ್/315/ 2025-26
6	1) ಶ್ರೀ ಅನೂಪ್ ಶರ್ಮ ಬಿನ್ ಶ್ರೀ ಬೀರ್‌ಬಲ್ ಶರ್ಮ, ವಯಸ್ಕರು, ವಿಳಾಸ: ನಂ.369, 4ನೇ ಮೈನ್12ನೇ ಕ್ರಾಸ್, ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಹಾಲಕ್ಷ್ಮಿಪುರಂ, ಬೆಂಗಳೂರು - 560 086.	ಪ್ರತಿವಾದಿ-1	ಯುಬಿಸಿ-3/ ಡಿಬಿಎಸ್/316/ 2025-26
7	1) ಶ್ರೀಮತಿ ಶುಭ ಎಸ್ ಕೋಂ. ಶ್ರೀ ಶಾಮ್ ಸುಂದರ್ ಜಿ, ವಯಸ್ಕರು, ವಿಳಾಸ: ನಂ.573, 1ನೇ ಮಹಡಿ, 13ನೇ ಮೈನ್, 23ನೇ ಕ್ರಾಸ್, ಬನಶಂಕರಿ 2ನೇ ಹಂತ, ಬೆಂಗಳೂರು - 560 070. 2) ಶ್ರೀ ಶಿವ ಪ್ರಸಾದ್, ಬಿನ್ ಶ್ರೀ ಸುಬ್ಬರಾಯಪ್ಪ ವಯಸ್ಕರು, ವಿಳಾಸ: ನಂ.459, 7ನೇ ಮೈನ್, 2ನೇ ಬ್ಲಾಕ್, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು - 560 085.	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/317/ 2025-26
8	1) ಶ್ರೀಮತಿ ಅನಿತ ಪಿ ಕೋಂ. ಶ್ರೀ ರಮೇಶ್ ಹೆಚ್ ಸಿ, ವಯಸ್ಕರು, ವಿಳಾಸ: ನಂ.270, 4ನೇ ಕ್ರಾಸ್, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿ ನಗರ, ಬೆಂಗಳೂರು - 560 098. 2) ಶ್ರೀ ಹೆಚ್ ಸಿ ರಮೇಶ್, ಬಿನ್ ಶ್ರೀ ಚನ್ನಯ್ಯ ವಯಸ್ಕರು, ವಿಳಾಸ: ನಂ.270, 4ನೇ ಕ್ರಾಸ್, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿ ನಗರ, ಬೆಂಗಳೂರು - 560 098.	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/318/ 2025-26
9	4) ಶ್ರೀ ಕೆ. ಮೋಹನ್ ಬಾಬು ಬಿನ್ ಶ್ರೀ ಎಲ್. ಕೃಷ್ಣ ನಾಯ್ಡು, ವಯಸ್ಕರು, ವಿಳಾಸ: ನಂ.1501, 25ನೆ ಮೈನ್27ನೆ ಕ್ರಾಸ್, ಬನಶಂಕರಿ 2ನೇ ಹಂತ, ಬಿಡಿಎ ಕಾಂಪ್ಲೆಕ್ಸ್ ಹತ್ತಿರ, ಬೆಂಗಳೂರು-560070.	ಪ್ರತಿವಾದಿ-4	ಯುಬಿಸಿ-3/ ಡಿಬಿಎಸ್/320/ 2025-26
10	1) ಶ್ರೀ ರಾಜೇಶ್ ಕೆ.ಕೆ., ಬಿನ್ ಲೇಟ್ ಕೆ ಕೃಷ್ಣಪ್ಪ ನ್ಯಾಯ್ಡು, ವಯಸ್ಕರು, ವಿಳಾಸ: ನಂ.12, 16ನೇ ಮೈನ್, 2ನೇ ಕ್ರಾಸ್ ಶ್ರೀ ಬಾಲಾಜಿ ಲೇಔಟ್, ಪದ್ಮನಾಭನಗರ, ಬೆಂಗಳೂರು- 560 070. 2) ಶ್ರೀಮತಿ ಕೆ. ಲೀಲಾವತಿ ಕೋಂ. ಲೇಟ್ ಕೆ ಕೃಷ್ಣಪ್ಪ ನ್ಯಾಯ್ಡು, ವಯಸ್ಕರು, ವಿಳಾಸ: ನಂ.12, 16ನೇ ಮೈನ್, 2ನೇ ಕ್ರಾಸ್, ಶ್ರೀ ಬಾಲಾಜಿ ಲೇಔಟ್, ಪದ್ಮನಾಭನಗರ, ಬೆಂಗಳೂರು - 560 070..	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/321/ 2025-26
11	1) ಗೋವಿಂದ ಪ್ರಸಾದ್ ಬಿನ್ ಶ್ರೀ ಸತ್ಯನಾರಾಯಣ ಎಂ.ಜಿ., ವಯಸ್ಕರು, ವಿಳಾಸ: ನಂ.1570, 9ನೇ ಕ್ರಾಸ್, ಸೌಧಾಮಿನಿ ಲೇಔಟ್, ಕೋಣನಕುಂಟೆ ಬೆಂಗಳೂರು - 560 062.	ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/322/ 2025-26
12	1) ಗೋವಿಂದ ಪ್ರಸಾದ್ ಬಿನ್ ಶ್ರೀ ಸತ್ಯನಾರಾಯಣ ಎಂ.ಜಿ., ವಯಸ್ಕರು, ವಿಳಾಸ: ನಂ.1570, 9ನೇ ಕ್ರಾಸ್, ಸೌಧಾಮಿನಿ ಲೇಔಟ್, ಕೋಣನಕುಂಟೆ ಬೆಂಗಳೂರು - 560 062.	ಪ್ರತಿವಾದಿ-1	ಯುಬಿಸಿ-3/ ಡಿಬಿಎಸ್/323/ 2025-26
13	1) ಶ್ರೀ ಹೆಚ್ ಸಿ ರಮೇಶ್, ಬಿನ್ ಶ್ರೀ ಚನ್ನಯ್ಯ, ವಯಸ್ಕರು, ವಿಳಾಸ: ನಂ.270, 4ನೇ ಕ್ರಾಸ್, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿ ನಗರ, ಬೆಂಗಳೂರು -560 098. 2) ಶ್ರೀಮತಿ ಅನಿತ ಪಿ ಕೋಂ. ಶ್ರೀ ರಮೇಶ್ ಹೆಚ್ ಸಿ, ವಯಸ್ಕರು, ವಿಳಾಸ: ನಂ.270, 4ನೇ ಕ್ರಾಸ್, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿ ನಗರ, ಬೆಂಗಳೂರು- 560 098.	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/324/ 2025-26
14	1) ಶ್ರೀ ಶ್ರೀ ಶ್ರೀಕಾಂತ್ ಪಿ ಎನ್ ಬಿನ್ ಶ್ರೀ ನರಸಿಂಹಮೂರ್ತಿ ಪಿ ಎನ್, ವಯಸ್ಕರು, ವಿಳಾಸ: 3368, 5ನೇ ಕ್ರಾಸ್, ಗಾಯತ್ರಿನಗರ, ಬೆಂಗಳೂರು - 560 021. 2) ಶ್ರೀಮತಿ ರೇಖ ಬಿ ಕೋಂ. ಶ್ರೀ ಶ್ರೀಕಾಂತ್ ಪಿ ಎನ್, ವಯಸ್ಕರು, ವಿಳಾಸ: ನಂ.3368, 5ನೇ ಕ್ರಾಸ್, ಗಾಯತ್ರಿನಗರ, ಬೆಂಗಳೂರು - 560 021. 3) ಶ್ರೀಮತಿ ಧನಶ್ರೀ ಪಿ ಕೋಂ, ಶ್ರೀ ರಂಗರಾಜ್ ಪಿ ಎನ್, ವಯಸ್ಕರು, ವಿಳಾಸ: ನಂ.3368, 5ನೇ ಕ್ರಾಸ್ "ಸಿ" ಬ್ಲಾಕ್, ಗಾಯತ್ರಿನಗರ, ಬೆಂಗಳೂರು - 560021.	ಪ್ರತಿವಾದಿ 1 ಪ್ರತಿವಾದಿ 2 ಪ್ರತಿವಾದಿ 3	ಯುಬಿಸಿ-3/ ಡಿಬಿಎಸ್/325/ 2025-26
15	3) ಶ್ರೀ ಅತಿನ್ ದೋಶಿ, ವಯಸ್ಕರು, ವಿಳಾಸ: ನಂ.ಸಿ.ಎಸ್. 4, ಜಿ.ಎಸ್. ರೆಸಿಡೆನ್ಸಿ, ಕನಕಪುರ ಮುಖ್ಯ ರಸ್ತೆ, ಬೆಂಗಳೂರು - 560 078.	ಪ್ರತಿವಾದಿ 1	ಯುಬಿಸಿ-3/ ಡಿಬಿಎಸ್/326/ 2025-26
16	1) ಶ್ರೀ ಜಕುಲ್ಲಾ ಖಾನ್ ಬಿನ್ ಶ್ರೀ ಅಬ್ದುಲ್ ಅಜೀಜ್ ಖಾನ್, ವಯಸ್ಕರು, ವಿಳಾಸ: ನಂ.9, ಉಮರ ಭೋಗ್ ಲೇಔಟ್, ಬನಶಂಕರಿ, ಬೆಂಗಳೂರು -560 070. 2) ಶ್ರೀ ಅಬ್ದುಲ್ ಅಜೀಜ್ ಖಾನ್, ಬಿನ್ ಶ್ರೀ ಅಬ್ದುಲ್ ಅಮೀದ್ ಖಾನ್, ವಯಸ್ಕರು, ವಿಳಾಸ: ನಂ.9, ಉಮರ ಭೋಗ್ ಲೇಔಟ್, ಬನಶಂಕರಿ, ಬೆಂಗಳೂರು - 560 070. 3) ಶ್ರೀ ಚಂದ್ರಶೇಖರಯ್ಯ ಬಿನ್ ಶ್ರೀ ಬೆಟ್ಟಯ್ಯ, ವಯಸ್ಕರು, ವಿಳಾಸ: ನಂ.228/ಇ, ಮಾನ್ಯಶ್ರೀ 10ನೇ ಕ್ರಾಸ್, 9ನೇ ಮೈನ್, ಕೆಎಸ್‌ಆರ್‌ಟಿಸಿ ಲೇಔಟ್, ಜೆ.ಪಿ. ನಗರ 2ನೇ ಹಂತ, ಬೆಂಗಳೂರು - 560 078.	ಪ್ರತಿವಾದಿ 1 ಪ್ರತಿವಾದಿ 2 ಪ್ರತಿವಾದಿ 3	ಯುಬಿಸಿ-3/ ಡಿಬಿಎಸ್/328/ 2025-26
17	1) ಸಸ್ಯಶ್ರೀ ಬಿಲ್ಡರ್ಸ್ ಪ್ರೈವೇಟ್ ಲಿಮಿಟೆಡ್ ಪರವಾಗಿ: ಶ್ರೀ ವೆಂಕಟರಾವ್ ಬಿ, ವಯಸ್ಕರು, ವಿಳಾಸ: ನಂ.12, 3ನೇ ಮಹಡಿ, ಆರ್ ಆರ್ ಹೈಟ್ಸ್, 1ನೇ ಮೈನ್, ಹಾವರ್ಡ್ ಸ್ಕ್ವಾಡ್ ಪಕ್ಕ, ಎಸ್ ಎಸ್ ಪಾಳ್ಯ, ಬೆಂಗಳೂರು - 560 076. 2) ಶ್ರೀ ವೆಂಕಟ್ ಬಾಸಿ, ವಯಸ್ಕರು, ವಿಳಾಸ: ನಂ.11, ಆದರ್ಶ ಪಾಮ್ ರಿಟ್ರೀಟ್, ಔಟರ್ ರಿಂಗ್ ರಸ್ತೆ, ದೇವರಬೀಸನಹಳ್ಳಿ, ಬೆಳ್ಳಂದೂರು, ಬೆಂಗಳೂರು - 560 103.	ಪ್ರತಿವಾದಿ 1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/329/ 2025-26
18	1) ಶ್ರೀ ವೆಂಕಟರಾವ್ ಬಿ, ಬಿನ್ ಶ್ರೀ ಶ್ರೀರಾಮುಲು ಬಿ, ನಂ. ವಯಸ್ಕರು, ವಿಳಾಸ: ನಂ.12, 3ನೇ ಮಹಡಿ, ಆರ್ ಆರ್ ಹೈಟ್ಸ್, 1ನೇ ಮೈನ್, ಹಾವರ್ಡ್ ಸ್ಕ್ವಾಡ್ ಪಕ್ಕ, ಎಸ್ ಎಸ್ ಪಾಳ್ಯ ಬೆಂಗಳೂರು- 560 076. 2) ಶ್ರೀ ವೆಂಕಟ್ ಬಾಸಿ, ಬಿನ್ ಶ್ರೀ ನಾರಾಯಣ ರಾವ್ ಸಿ, ವಿಲ್ಲಾ ವಯಸ್ಕರು, ವಿಳಾಸ: ನಂ.11, ಆದರ್ಶ ಪಾಮ್ ರಿಟ್ರೀಟ್, ಔಟರ್ ರಿಂಗ್ ರಸ್ತೆ, ದೇವರಬೀಸನಹಳ್ಳಿ, ಬೆಳ್ಳಂದೂರು, ಬೆಂಗಳೂರು-560 103.	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/330/ 2025-26

ಈ ನೋಟೀಸನ್ನು ಈ ದಿನಾಂಕ: 16.04.2026 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಿದೆ.

ಸಹಕಾರ ಸಂಘಗಳ ಉಪ ನಿಬಂಧಕರು,
ಮೂರನೇ ವಲಯ, ಬೆಂಗಳೂರು ನಗರ ಜಿಲ್ಲೆ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ಉಪ ನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ
ನಂ.146, ಸಹಕಾರ ಸೌಧ, 2ನೇ ಮಹಡಿ, ಮಾರ್ಗೋಸಾ ರಸ್ತೆ, 8ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು -560003. ಇವರ ನ್ಯಾಯಾಲಯದಲ್ಲಿ

ಪತ್ರಿಕಾ ಪ್ರಕಟಣೆ

ಈ ನ್ಯಾಯಾಲಯದಲ್ಲಿ ಸಹಕಾರ ಸಂಘಗಳ ಕಾಯ್ದೆ ಕಲಂ 71ರಡಿ ದಾಖಲಾಗಿರುವ ದಾವಾ ಪ್ರಕರಣದಲ್ಲಿ, ವಿಚಾರಣೆಗೆ ಹಾಜರಾಗಲು ಕಳುಹಿಸಿದ ನೋಟೀಸು ಸ್ವೀಕೃತಿಯಾಗದೆ ವಾಪಸ್ಸು ಬಂದಿರುತ್ತದೆ. ಈ ವ್ಯಾಜ್ಯದ ಮುಂದಿನ ವಿಚಾರಣೆಯನ್ನು ಸಹಕಾರ ಸಂಘಗಳ ಉಪ ನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ರವರ ನ್ಯಾಯಾಲಯದಲ್ಲಿ **ದಿನಾಂಕ : 27.05.2026** ರಂದು ಮಧ್ಯಾಹ್ನ 3.00 ಗಂಟೆಗೆ ನಿಗದಿಪಡಿಸಲಾಗಿದೆ. ಸದರಿ ದಿನಾಂಕದಂದು ಪ್ರತಿವಾದಿಯಾದ ನೀವು ತಪ್ಪದೇ ವಿಚಾರಣೆಗೆ ಹಾಜರಾಗಿ ನಿಮ್ಮ ಆಕ್ಷೇಪಣೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಏಕಪಕ್ಷೀಯವಾಗಿ ತೀರ್ಪು ನೀಡಲಾಗುವುದು.

ಕ್ರ. ಸಂ.	ಪ್ರತಿವಾದಿಗಳ ಹೆಸರು ಮತ್ತು ವಿಳಾಸ		ವ್ಯಾಜ್ಯ ಪ್ರಕರಣದ ಸಂಖ್ಯೆ :
	ವಾದಿಯ ಹೆಸರು ಮತ್ತು ವಿಳಾಸ: ಉಪ ವ್ಯವಸ್ಥಾಪಕರು, ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ, ನಂ.9, ಸುಬ್ಬರಾಮ ಚೆಟ್ಟಿ ರಸ್ತೆ, ಬಸವನಗುಡಿ, ಬೆಂಗಳೂರು - 560004.		
1	1) ಮೆ. ಶಾರದ ಎಂಟರ್‌ಪ್ರೈಸಸ್, ಕಛೇರಿ ವಿಳಾಸ: ನಂ.11, ನೆಲ ಮಹಡಿ, ಜ್ಯೋತಿ ನಿವಾಸ, 2ನೇ ಮೈನ್, ಮೀನಾಕ್ಷಿನಗರ, ಕಾಮಾಕ್ಷಿಪಾಳ್ಯ, ಬಸವೇಶ್ವರನಗರ, ಬೆಂಗಳೂರು - 560 079, ಪರವಾಗಿ, 2) ಶ್ರೀ ಶ್ರೀನಾಥ ಹೆಚ್‌ಆರ್, ಬಿನ್‌ಶ್ರೀ ರಾಮಚಂದ್ರ ಮೂರ್ತಿ, ವಯಸ್ಕರು, ವಿಳಾಸ: ನಂ.77, ಜಾಲಹಳ್ಳಿ ರಸ್ತೆ, ಬೆಂಗಳೂರು ಉತ್ತರ. 3) ಶ್ರೀ ಕೃಷ್ಣಮೂರ್ತಿ ಎಸ್, ವಯಸ್ಕರು, ವಿಳಾಸ: ನಂ.43/1, 2ನೇ ಫೇಸ್, 1ನೇ ಹಂತ, 3ನೇ ಮೈನ್, 4ನೇ ಕ್ರಾಸ್, ವೆಸ್ಟ್‌ಆಫ್‌ಕಾರ್ಡ್‌ರಸ್ತೆ, ಮಂಜುನಾಥ ನಗರ, ಬೆಂಗಳೂರು - 560 010.	ಪ್ರತಿವಾದಿ-1 ಪ್ರತಿವಾದಿ-2 ಪ್ರತಿವಾದಿ-3	ಯುಬಿಸಿ-3/ ಡಿಬಿಎಸ್/619/ 2025-26
2	1) ಶ್ರೀ ವಿನಾಯಕ ಹೆಗ್ಡೆ ಬಿನ್‌ಶ್ರೀ ನಾಗರಾಜ ಹೆಗ್ಡೆ, ವಯಸ್ಕರು, ವಿಳಾಸ: ನಂ.34, 6ನೇ ಕ್ರಾಸ್, ಶ್ರೀರಾಮಪುರಂ, ಬೆಂಗಳೂರು -560 021. ಖಾಯಂ ವಿಳಾಸ: ನಂ.88/4, 1ನೇ ಮಹಡಿ, 8ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು - 560 003. ಶ್ರೀ ಪಿ ಬಾಬು, ವಯಸ್ಕರು, ವಿಳಾಸ: ನಂ.60, 4ನೇ ಕ್ರಾಸ್, ಸುಬ್ಬಯ್ಯನಪಾಳ್ಯ, ಬೆಂಗಳೂರು - 560 033.	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/620/ 2025-26
3	1) ಮೆ. ಮೆಟ್ರೋ ಸಿಸ್ಟಮ್ಸ್, ಕಛೇರಿ ವಿಳಾಸ: ನಂ.34, 6ನೇ ಕ್ರಾಸ್, ಚೋಳನಾಯಕನಹಳ್ಳಿ, ಬೆಂಗಳೂರು - 560 023, ಪರವಾಗಿ, ಶ್ರೀ ಮಂಜುನಾಥ ಟಿ, ಎಸ್ ಬಿನ್‌ಶ್ರೀ ಶಂಕರಪ್ಪ ಟಿ ಬಿ, ವಯಸ್ಕರು, ವಿಳಾಸ: ನಂ.34, 6ನೇ ಕ್ರಾಸ್, ಚೋಳನಾಯಕನಹಳ್ಳಿ, ಬೆಂಗಳೂರು - 560 023. 2) ಶ್ರೀ ಸಮಂತ್‌ಪಿ, ಬಿನ್ ಪಲ್ಲವ ಚಂದ್ರಶೇಖರ, ವಯಸ್ಕರು, ವಿಳಾಸ: ನಂ.1264, ಶಾಂತಿ ನಿವಾಸ, ಕೆಹೆಚ್‌ಬಿ ಕಾಲೋನಿ, ಮಾಗಡಿ ಮೈನ್‌ರಸ್ತೆ, ಎಂಆರ್‌ಹೆಚ್‌ಬಿ ಕಾಲೋನಿ, ಗೋವಿಂದರಾಜ ನಗರ, ಬೆಂಗಳೂರು -.560 040. 3) ಶ್ರೀ ಎಂ ಸಿ ನರೇಂದ್ರ ಕುಮಾರ್, ನಂ.8/5, ಕೆಂಪಿಡಿಬಿ ರಸ್ತೆ, ಚೊಕ್ಕಸಂದ್ರ ಹಳೆ ವಿಲೇಜ್, ಟಿ ದಾಸರಹಳ್ಳಿ, ಬೆಂಗಳೂರು - 560 057.	ಪ್ರತಿವಾದಿ-1 ಪ್ರತಿವಾದಿ-2 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/621/ 2025-26
4.	ಶ್ರೀಮತಿ ಸುಧಾ ವಿ ಪೂಜಾರಿ ಕೋಂ. ಶ್ರೀ ವಿಶ್ವನಾಥ ಎಂ ಪೂಜಾರಿ, ವಯಸ್ಕರು, ವಿಳಾಸ: ನಂ.162/1ಎ, ಶ್ರೀ ಸದಾಶಿವ ನಿಲಯ, 6ನೇ ಕ್ರಾಸ್‌ನೇ ಮೈನ್, 3ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು -560 028. ಶ್ರೀ ವಿಶ್ವನಾಥ ಎಂ ಪೂಜಾ,ರಿ ಬಿನ್‌ಶ್ರೀ ಮಲ್ಲಪ್ಪ ಪೂಜಾರಿ, ವಯಸ್ಕರು, ವಿಳಾಸ: ನಂ.162/1ಎ, ಶ್ರೀ ಸದಾಶಿವ ನಿಲಯ, 6ನೇ ಕ್ರಾಸ್‌ನೇ ಮೈನ್, 3ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು -560028.	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/622/ 2025-26
5	ಮೆ. ಹಸಿಗ್ರೀನ್ಫೈನಾನ್ಷಿಯಲ್‌ಸರ್ವೀಸಸ್‌ಲಿಮಿಟೆಡ್, ಕಛೇರಿ ವಿಳಾಸ: ನಂ.813, 8ನೇ ಮಹಡಿ, ಬ್ರಿಗೇಡ್ ಸೆಂಟರ್,ಎಂ ಜಿ ರಸ್ತೆ, ಬೆಂಗಳೂರು - 560 001, ಪರವಾಗಿ, ಶ್ರೀ ಮಧುಪ್ರಸಾದ್‌ಶೆಟ್ಟಿ ಬಿನ್‌ಶ್ರೀ ರಾಮಚಂದ್ರ ಮೂರ್ತಿ, ವಯಸ್ಕರು, ವಿಳಾಸ: ಫ್ಲಾಟ್ ನಂ. 306, ಶೋಭಾ ಸ್ಕ್ವೈರ್,ಅಮೃತಹಳ್ಳಿ, ಬ್ಯಾಟರಾಯನಪುರ, ಬೆಂಗಳೂರು - 560 092. ಶ್ರೀ ನರಸಿಂಹ ಮೂರ್ತಿ ಎಸ್, ಬಿನ್‌ಶ್ರೀ ನಂಜಪ್ಪ, ವಯಸ್ಕರು, ವಿಳಾಸ: ನಂ.5, 1ನೇ ಸಿ ಕ್ರಾಸ್, ಹೊಯ್ಸಳ ನಗರ, ಮಾಗಡಿ ಮೈನ್‌ರಸ್ತೆ, ಸುಂಕದಕಟ್ಟೆ, ಎಸ್ ಜಿ ಕಾವಲ್, ಬೆಂಗಳೂರು - 560 091.	ಪ್ರತಿವಾದಿ-1 ಪ್ರತಿವಾದಿ-2 ಪ್ರತಿವಾದಿ-3	ಯುಬಿಸಿ-3/ ಡಿಬಿಎಸ್/623/ 2025-26
6	1) ಶ್ರೀ ರಂಗಸ್ವಾಮಿ ಎಸ್‌ಎಸ್,ಬಿನ್‌ಶ್ರೀನಂಜೇಗೌಡ, ವಯಸ್ಕರು, ವಿಳಾಸ, ನಂ.209, 6ನೇ ಕ್ರಾಸ್, ಎಲ್‌ಜಿ ನಗರ, ಲಗ್ಗೆರೆ, ಬೆಂಗಳೂರು - 560 096. 2) ಶ್ರೀ ಲೋಕೇಶ್‌ಎನ್, ಬಿನ್‌ಶ್ರೀ ಆರ್‌ನೀಲಪ್ಪ, ವಯಸ್ಕರು, ವಿಳಾಸ, ನಂ.35/142, 2ನೇ ಕ್ರಾಸ್, ಗಣಪತಿ ನಗರ ಲಗ್ಗೆರೆ, ಬೆಂಗಳೂರು - 560 058. 4) ಶ್ರೀ ಹೊನ್ನಯ್ಯ, ವಯಸ್ಕರು, ವಿಳಾಸ, ನಂ.153 ಜಿ ಎಂ ಕಾಟೇಜ್‌ಹತ್ತಿರ, ಡಿ ಆರ್ ಹಳ್ಳಿ, ಬೆಂಗಳೂರು - 560 058.	ಪ್ರತಿವಾದಿ-1 ಪ್ರತಿವಾದಿ-2 ಪ್ರತಿವಾದಿ-4	ಯುಬಿಸಿ-3/ ಡಿಬಿಎಸ್/624/ 2025-26
7	1) ಶ್ರೀ ರಾಜೀವ ಡಿ ಎಸ್, ಕೋಂ. ಶ್ರೀ ನಾಗರಾಜ ರಾವ್ ಡಿ, ವಯಸ್ಕರು, ಮನೆ ವಿಳಾಸ, ನಂ.781, 19ನೇ ಮೈನ್, 20ನೇ ಕ್ರಾಸ್, ಬನಶಂಕರಿ 2ನೇ ಹಂತ, (ದೇವಗಿರಿ ಬಾಲಾಜಿ ದೇವಸ್ಥಾನದ ಎದುರು), ಬೆಂಗಳೂರು -560 070. 2) ಶ್ರೀ ರಾಜಸಿಂಹ ಎ ಎಸ್, ಬಿನ್‌ಶ್ರೀ ಪ್ರಹ್ಲಾದ ರಾವ್‌ಎ ಎಸ್, ವಯಸ್ಕರು, ವಿಳಾಸ, ನಂ.612, ಸಿಂಹಾದ್ರಿ, 2ನೇ ಕ್ರಾಸ್, 7ನೇ ಬ್ಲಾಕ್, ಬನಶಂಕರಿ 3ನೇ ಹಂತ, ಬೆಂಗಳೂರು - 560 085	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/625/ 2025-26
8	1) ಶ್ರೀ ಫಯಾಜ್‌ಸೈಯದ್, ಬಿನ್ ಸೈಯದ್‌ಮುಸ್ತಫ, ವಯಸ್ಕರು, ವಿಳಾಸ, ನಂ.3/16, 8ನೇ ಮೈನ್, ಬಿಟಿಎಂ ಲೇಔಟ್, 1ನೇ ಹಂತ, ಬೆಂಗಳೂರು - 560 029. ಶ್ರೀ ಫಯಾಜ್ ಸೈಯದ್, ಬಿನ್ ಸೈಯದ್ ಮುಸ್ತಫ,, ಐಬಿಎಂ ಇಂಡಿಯ ಪ್ರೈವೇಟ್ ಲಿಮಿಟೆಡ್, ವಿಳಾಸ,ಎಸ್‌ಎ - 2 ಬ್ಲಾಕ್‌ನಂ.12, ಸುಬ್ರಮಣ್ಯ ಆರ್ಕೇಡ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 076. 2) ಶ್ರೀಮತಿ ರಹಮತ್ತುನ್ನೀಸ ಕೋಂ. ಶ್ರೀ ಫಯಾಜ್‌ಸೈಯದ್, ವಯಸ್ಕರು, ವಿಳಾಸ, ನಂ.3/16, 8ನೇ ಮೈನ್, ಬಿಟಿಎಂ ಲೇಔಟ್, 1ನೇ ಹಂತ, ಬೆಂಗಳೂರು - 560 029. 3) ಐಬಿಎಂ ಇಂಡಿಯ ಪ್ರೈವೇಟ್‌ಲಿಮಿಟೆಡ್, ಎಸ್‌ಎ - 2 ಬ್ಲಾಕ್‌ನಂ.12, ಸುಬ್ರಮಣ್ಯ ಆರ್ಕೇಡ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 076.	ಪ್ರತಿವಾದಿ-1 ಪ್ರತಿವಾದಿ-2 ಪ್ರತಿವಾದಿ-3	ಯುಬಿಸಿ-3/ ಡಿಬಿಎಸ್/626/ 2025-26
9	1) ಶ್ರೀ ವಸಂತ ಕುಮಾರ್, ಬಿನ್‌ಶ್ರೀ ಮಹದೇವಯ್ಯ, ವಯಸ್ಕರು, ವಿಳಾಸ, ನಂ.221, ವೈಟ್‌ಫೀಲ್ಡ್ ಮೈನ್‌ರಸ್ತೆ, ಡಿ ಸಿಲ್ವ ಲೇಔಟ್, ಬೆಂಗಳೂರು - 560 066. 2) ಶ್ರೀ ಸಮೀರ್‌ಕುಮಾರ್, ವಯಸ್ಕರು, ವಿಳಾಸ: ನಂ.72/ಅ, 3ನೇ ಕ್ರಾಸ್, 2ನೇ ಮೈನ್, ಮುನೇಶ್ವರ ಬ್ಲಾಕ್, ಬೆಂಗಳೂರು - 560 050. 3) ಶ್ರೀ ಪೈಲಪ್ಪ, ಬಿನ್ ಶ್ರೀ ಗಂಗಯ್ಯ, ವಯಸ್ಕರು, ವಿಳಾಸ: ನಂ.1160, ಲಕ್ಷ್ಮಿಪುರ, ವಿನೋಬ ನಗರ, ಬೆಂಗಳೂರು - 560 045.	ಪ್ರತಿವಾದಿ-1 ಪ್ರತಿವಾದಿ-2 ಪ್ರತಿವಾದಿ-3	ಯುಬಿಸಿ-3/ ಡಿಬಿಎಸ್/628/ 2025-26
10	1) ಮೆ. ರಿಥಂ ಎಂಟರ್‌ಪ್ರೈಸಸ್,, ಕಛೇರಿ ವಿಳಾಸ, ನಂ.4197, 1ನೇ ಮಹಡಿ, 1ನೇ ಮೈನ್, ಸುಬ್ರಮಣ್ಯನಗರ, ಬೆಂಗಳೂರು - 560 021, ಪರವಾಗಿ, ಶ್ರೀ ಶ್ರೀಹರ್ಷ ಜಿ ವೈ ಬಿನ್‌ಶ್ರೀ ಯೋಗಾನರಸಿಂಹ ಜಿ ಎಸ್, ವಿ ವಯಸ್ಕರು, ವಿಳಾಸ, ನಂ.112/1, 6ನೇ ಮೈನ್, 6ನೇ ಕ್ರಾಸ್, ಮಲ್ಲೇಶ್ವರಂ,, ಬೆಂಗಳೂರು - 560 003. 2) ಶ್ರೀ ದಿನೇಶ್ ಕುಮಾರ್‌ಹೆಚ್‌ಎಸ್, ಬಿನ್‌ಶ್ರೀ ಶಿವಮೂರ್ತಿ ವಯಸ್ಕರು, ವಿಳಾಸ, ನಂ.20/ಬಿ, 4ನೇ ಮಹಡಿ, ಎಐಜಿ, 6ನೇ ಮೈನ್, 2ನೇ ಹಂತ, ಕೆಹೆಚ್‌ಬಿ ಕಾಲೋನಿ, ಬಸವೇಶ್ವರ ನಗರ, ಬೆಂಗಳೂರು - 560 079.	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/629/ 2025-26
11	1) ಶ್ರೀ ಗಂಗಾಧರ್, ಬಿನ್‌ಶ್ರೀ ನಂಜಪ್ಪ, ವಯಸ್ಕರು, ಮನೆ ವಿಳಾಸ, ನಂ.45/5, 6ನೇ ಮೈನ್‌ರಸ್ತೆ, ಹಳೆ ಬೈಯಪ್ಪನಹಳ್ಳಿ, ಎಂ ಎಸ್‌ನಗರ ಪೋಸ್ಟ್, ಬೆಂಗಳೂರು -560 033. 2) ಶ್ರೀ ಮುನಿಯಪ್ಪ ಬಿನ್‌ಶ್ರೀ ಕೊತ್ತಪ್ಪ, ವಯಸ್ಕರು, ವಿಳಾಸ, ನಂ.840, ಅತ್ತಿಬೆಲೆ 2ನೇ ಡಿವಿಜನ್, ಅತ್ತಿಬೆಲೆ ವೃತ್ತ, ಆನೇಕಲ್, ಬೆಂಗಳೂರು - 562 107.	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/631/ 2025-26
12	1) ಶ್ರೀಮತಿ ಕುಮುದ ಎ ರಾವ್, ಕೋಂ. ಶ್ರೀ ಎ ಬಿ ಅಜಿತ ರಾವ್, ವಯಸ್ಕರು, ವಿಳಾಸ, ನಂ.32/70, 3ನೇ ಮಾಡೆಲ್‌ಹೌಸ್ ಬೀದಿ, ಬಸವನಗುಡಿ, ಬೆಂಗಳೂರು -560 004. 2) ಶ್ರೀ ಎ ಬಿ ಅಜಿತ ರಾವ್, ವಯಸ್ಕರು, ವಿಳಾಸ, ನಂ.32/70, 3ನೇ ಮಾಡೆಲ್‌ಹೌಸ್ ಬೀದಿ, ಬಸವನಗುಡಿ, ಬೆಂಗಳೂರು -560 004.	ಪ್ರತಿವಾದಿ-1 ಪ್ರತಿವಾದಿ-2	ಯುಬಿಸಿ-3/ ಡಿಬಿಎಸ್/632/ 2025-26
13	1) ಶ್ರೀ ಕೆ ಹರೀಶ್, ಬಿನ್‌ಶ್ರೀ ಎಲ್‌ಕೃಷ್ಣಾ ನಾಯ್ಡು, ವಯಸ್ಕರು, ವಿಳಾಸ, ನಂ.1501, 25ನೇ ಮೈನ್ ರಸ್ತೆ, 27ನೇ ಕ್ರಾಸ್, ಬನಶಂಕರಿ 2ನೇ ಹಂತ, ಬೆಂಗಳೂರು - 560 070. 2) ಶ್ರೀ ಎಲ್‌ಕೃಷ್ಣಾ ನಾಯ್ಡು, ಬಿನ್‌ಲೇಟ್ ಲಕ್ಷ್ಮಯ್ಯ ನಾಯ್ಡು, ವಯಸ್ಕರು, ವಿಳಾಸ, ನಂ.1501, 25ನೇ ಮೈನ್‌ರಸ್ತೆ, 27ನೇ ಕ್ರಾಸ್‌ಬನಶಂಕರಿ 2ನೇ ಹಂತ, ಬೆಂಗಳೂರು - 560 070.. 3) ಶ್ರೀ ಮೋಹನ್‌ಬಾಬು ಕೆ, ಬಿನ್‌ಶ್ರೀ ಎಲ್‌ಕೃಷ್ಣಾ ನಾಯ್ಡು, ವಯಸ್ಕರು, ವಿಳಾಸ, ನಂ.1501, 25ನೇ ಮೈನ್‌ರಸ್ತೆ, 27ನೇ ಕ್ರಾಸ್, ಬನಶಂಕರಿ 2ನೇ ಹಂತ, ಬೆಂಗಳೂರು - 560 070.	ಪ್ರತಿವಾದಿ-1 ಪ್ರತಿವಾದಿ-2 ಪ್ರತಿವಾದಿ-3	ಯುಬಿಸಿ-3/ ಡಿಬಿಎಸ್/637/ 2025-26
14	1) ಮೆ. ಕಂಪ್ಯೂಟೆಕ್‌ಸಲ್ಯೂಷನ್ಸ್, ಮಾಲೀಕರು, ಶ್ರೀ ಅಪ್ರಮೇಯ ಆರ್, ವಿಳಾಸ, ನಂ.ಏ-24, 18ನೇ ಮೈನ್‌ರಸ್ತೆ, 2ನೇ ಹಂತ, ಭಾರತ್‌ನಗರ, ಬೆಂಗಳೂರು - 560 091. 4) ಶ್ರೀ ಸೈಯದ್‌ಜಮೀರ್‌ಅಲಿ ಬಿನ್‌ಮೊಹಮದ್, ವಯಸ್ಕರು, ವಿಳಾಸ, ನಂ.20, 1ನೇ ಕ್ರಾಸ್, ಮಿಲ್ಲರ್ಸ್‌ರಸ್ತೆ, ಬೆನ್‌ಸನ್ ಟೌನ್, ಬೆಂಗಳೂರು - 560 046, ಹಾಗೂ 5) ಶ್ರೀಮತಿ ಶಹನಾಜ್‌ಅಲಿ ಕೋಂ. ಶ್ರೀ ಸೈಯದ್‌ಜಮೀರ್‌ಅಲಿ, ವಯಸ್ಕರು, ವಿಳಾಸ, ನಂ.20, 1ನೇ ಕ್ರಾಸ್, ಮಿಲ್ಲರ್ಸ್‌ರಸ್ತೆ, ಬೆನ್‌ಸನ್ ಟೌನ್, ಬೆಂಗಳೂರು - 560 046, ರವರ ಪವರ್‌ಆಫ್‌ಅಟಾರ್ನಿ ಶ್ರೀ ಅಪ್ರಮೇಯ ಆರ್ ಬಿನ್‌ಶ್ರೀ ರಾಜಗೋಪಾಲ	ಪ್ರತಿವಾದಿ-1 ಪ್ರತಿವಾದಿ-4 ಪ್ರತಿವಾದಿ-5	ಯುಬಿಸಿ-3/ ಡಿಬಿಎಸ್/638/ 2025-26
15	1) ಶ್ರೀಮತಿ ಸೌಭಾಗ್ಯ ಹೆಚ್‌ಎಸ್ ಕೋಂ. ಶ್ರೀ ಆರಾಧ್ಯ ಟಿ ಹೆಚ್, ವಯಸ್ಕರು, ವಿಳಾಸ, ನಂ.233, 3ನೇ ಕ್ರಾಸ್, ಬಿಇಎಲ್2ನೇ ಹಂತ, ಬೆಂಗಳೂರು - 560 091. ವಿಳಾಸ, ನಂ.37/2ಎ, ಬ್ಯಾಡರಹಳ್ಳಿ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ 2) ಶ್ರೀ ಬಾಬು ಪಿ, ಬಿನ್‌ಶ್ರೀ ಪಳನಿ, ವಯಸ್ಕರು, ವಿಳಾಸ, ನಂ.183, ಹ್ಯಾಪಿ ಹೋಮ್ ರಾಮಗೋಪಾಲ ಲೇಔಟ್, ಸುಬ್ಬೇನಹಳ್ಳಿ, ಬಾಣಸವಾಡಿ ಮೈನ್‌ರಸ್ತೆ, ಬೆಂಗಳೂರು - 560 043. 3) ಶ್ರೀ ಆರಾಧ್ಯ ಟಿ ಹೆಚ್, ಬಿನ್ ಶ್ರೀ ಬಿ ಎಲ್‌ತಿಪ್ಪೇಸ್ವಾಮಿ, ವಯಸ್ಕರು, ವಿಳಾಸ, ನಂ.233, 3ನೇ ಕ್ರಾಸ್, ಬಿಇಎಲ್2ನೇ ಹಂತ, ಬೆಂಗಳೂರು - 560 091. 4) ಶ್ರೀಮತಿ ಭಾಗ್ಯಲಕ್ಷ್ಮಿ ಕೋಂ. ಶ್ರೀ ಆರಾಧ್ಯ ಟಿ ಹೆಚ್, ವಯಸ್ಕರು, ವಿಳಾಸ, ನಂ.25, 9ನೇ ಕ್ರಾಸ್, 1ನೇ ಮೈನ್, ಪ್ರಶಾಂತನಗರ, ಬೆಂಗಳೂರು - 560 079.	ಪ್ರತಿವಾದಿ 1	ಯುಬಿಸಿ-3/ ಡಿಬಿಎಸ್/639/ 2025-26
16	4) ಶ್ರೀ ಬಿ.ಎಂ. ಶಿವಮೂರ್ತಿ ಬಿನ್ ಶ್ರೀ ಬಿ.ಸಿ. ಮುದ್ದುಮಾದಪ್ಪ, ಕಾರ್ಯದರ್ಶಿ, ನಂ.196, 23ನೇ ಕ್ರಾಸ್ 6ನೇ ಬ್ಲಾಕ್, ಜಯನಗರ, ಬೆಂಗಳೂರು - 560 070, 5) ಶ್ರೀ ಸತ್ಯನಾರಾಯಣ, , ವಯಸ್ಕರು, ವಿಳಾಸ, ನಂ.19, 1ನೆ ಅಡ್ಡ ರಸ್ತೆ. 1ನೆ ಮುಖ್ಯ ರಸ್ತೆ, ಕೃಷ್ಣಪ್ಪ ಬಡಾವಣೆ, ಶ್ರೀನಿವಾಸನಗರ, ಬೆಂಗಳೂರು - 560 050.	ಪ್ರತಿವಾದಿ-4 ಪ್ರತಿವಾದಿ-5	ಯುಬಿಸಿ-3/ ಡಿಬಿಎಸ್/312/ 2025-26

ಈ ನೋಟೀಸನ್ನು ಈ ದಿನಾಂಕ: 30.04.2026 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಿದೆ.

ಸಹಕಾರ ಸಂಘಗಳ ಉಪ ನಿಬಂಧಕರು,
ಮೂರನೇ ವಲಯ, ಬೆಂಗಳೂರು ನಗರ ಜಿಲ್ಲೆ.

ಲೋಕೋಪಯೋಗಿ ಇಲಾಖೆ, ತುಮಕೂರು.

ಕ್ರಸಂ:ಕಾಇಂ:ಲೋಇವಿ:ತುಮ:ಕಂ-3: ಟೆಂಡರ್ 12:2026-27. ದಿನಾಂಕ:12-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 12/2026-27 ದಿನಾಂಕ 12-05-2026

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: **12/2026-27** ದಿನಾಂಕ **12-05-2026** ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ **5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ-ಬಂಡವಾಳ ವೆಚ್ಚ ಲೆಕ್ಕ ಶೀರ್ಷಿಕೆ** ಅಡಿಯಲ್ಲಿ 01 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತ **ರೂ. 117.34 ಲಕ್ಷಗಳು** ಇ.ಎಂ.ಡಿ ಮೊತ್ತ **ರೂ. 2,00,000/-** ಅರ್ಹ ಗುತ್ತಿಗೆದಾರರು 3ನೇ ದರ್ಜೆ ಮೇಲ್ಪಟ್ಟು, **ಕಾಲಾವಧಿ: 09 ತಿಂಗಳು,** ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ **ದಿನಾಂಕ ಮತ್ತು ವೇಳೆ: 18-05-2026 ರ 17-00 ಗಂಟೆಗೆ,** KPPP-Portal ಮೂಲಕ ಟೆಂಡರ್ ಅನ್ನು **ದಿನಾಂಕ 12-05-2026 ರಿಂದ 19-05-2026 ರ 16-00 ಗಂಟೆವರೆಗೆ** ಪಡೆಯಬಹುದಾಗಿದೆ. ಟೆಂಡರ್ ಅನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ವೇಳೆ: 19-05-2026 ರ 16-00 ಗಂಟೆವರೆಗೆ,** ತಾಂತ್ರಿಕ ಬಿಡ್‌ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 20-05-2026ರ 16-30 ಗಂಟೆಗೆ,** ಆರ್ಥಿಕ ಬಿಡ್ ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 21-05-2026ರ 17-00 ಗಂಟೆಗೆ,** ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:**https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ಬಿಡ್ ವಹಿವಾಟನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ ವಿಭಾಗ
ತುಮಕೂರು.

DIPR/TUM/RO-31/26-27/Oysters

ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ ಕೋಲಾರ – 563101

e-mail: eepwdkolar07@gmail.com website: www.kpwd.gov.in e-portal: http://kppp.karnataka.gov.in
ದೂರವಾಣಿ ಸಂಖ್ಯೆ: 08152-222022

ಇ-ಟೆಂಡರ್ ಪ್ರಕಟಣೆ- ಕೆಡಬ್ಲ್ಯು -2,3&4 ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ-04/2026-27 ದಿನಾಂಕ: 13.05.2026

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ಮಾಲೂರು ಹಾಗೂ ಶ್ರೀನಿವಾಸಪುರ ತಾಲ್ಲೂಕು ವ್ಯಾಪ್ತಿಯಲ್ಲಿ **ಲೆಕ್ಕಶೀರ್ಷಿಕೆ: 8443-ಠೇವಣಿ ವಂತಿಗೆ ಮತ್ತು 5054-ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ** ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ: ಕನಿಷ್ಠ- ರೂ.50.00 ಲಕ್ಷಗಳು ಹಾಗೂ ಗರಿಷ್ಠ- ರೂ.150.00 ಲಕ್ಷಗಳು **ಇ.ಎಂ.ಡಿ ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ.** ಕಾಲಾವಧಿ : 06 ತಿಂಗಳು ನಿರ್ವಹಿಸಲು **ಕೆಡಬ್ಲ್ಯು-2,3&4 ರ ಕಾಮಗಾರಿಗೆ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ** ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು **ಕೆಡಬ್ಲ್ಯು-2,3&4** ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz., http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ **ದಿನಾಂಕ: 27.05.2026 ರಂದು ಸಂಜೆ 16.00 ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.** ಸ್ವೀಕೃತವಾದ ಟೆಂಡರ್‌ಗಳನ್ನು **ದಿನಾಂಕ: 29.05.2026 ರಂದು ಬೆಳಿಗ್ಗೆ 11.30 ಗಂಟೆಯ ನಂತರ ಕೆಪಿಪಿಪಿ ಪೋರ್ಟಲ್‌ನಲ್ಲಿ ತೆರೆಯಲಾಗುವುದು.** ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆಪಿಪಿಪಿ ಪೋರ್ಟಲ್‌ನಲ್ಲಿ **(Viz., http://kppp.karnataka.gov.in)** ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ. **ವಿಶೇಷ ಸೂಚನೆ:** ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:70/ಕಿಎಸ್‌ಎಂಸಿಎ/2026-27

ನೆಲ-ಜಲ-ಪರಿಸರ ಸಂರಕ್ಷಣೆ ಚಿಂತನ-ಮಂಥನ ಸಮಾರಂಭ

ನೈಜತೆ ಕಳೆದುಕೊಂಡ ಬೆಂಗಳೂರು, ವಿಷಾದ

ಬೆಂಗಳೂರು: ಗಾಳಿ ಕಲುಷಿತಗೊಳ್ಳುತ್ತಿದೆ. ಅಂತರ್ಜಲ ಮಟ್ಟ ತೀರ ಕುಸಿತ ಕಾಣುತ್ತಿದೆ. ಭೂಮಿಯೆಲ್ಲಾ ಕಾಂಕ್ರೀಟೀಕರಣಗೊಳ್ಳುತ್ತಿದ್ದು ಬೆಂಗಳೂರು ತನ್ನ ನೈಜತೆಯನ್ನು ಕಳೆದುಕೊಳ್ಳುತ್ತಿರುವ ಪರಿಣಾಮ ವಾಸ ಮಾಡಲು ಆಗದಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಹಿರಿಯ ಪರಿಸರ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ ತಿಳಿಸಿದರು.



ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕರ್ನಾಟಕ ನೆಲ ಜಲ ಪರಿಸರ ಸಂರಕ್ಷಣಾ ಸಮಿತಿ ಸಹಯೋಗದೊಂದಿಗೆ ಗುರುವಾರ ಗಾಂಧಿ ಭವನದಲ್ಲಿ ಆಯೋಜಿಸಲಾಗಿದ್ದ ನೆಲ-ಜಲ-ಪರಿಸರ ಸಂರಕ್ಷಣೆ ಚಿಂತನ-ಮಂಥನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೆಂಪೇಗೌಡರ ಕಾಲದಲ್ಲಿ 1,452ಕ್ಕೂ ಹೆಚ್ಚು ಕೆರೆಗಳಿದ್ದವು, ಆದರೆ, ಪ್ರಸ್ತುತ 216ಕ್ಕೆ ಇಳಿದಿದೆ. ಹಲವು ವರ್ಷಗಳ ಹಿಂದೆ ಬೆಂಗಳೂರು ಶೇ.8ರಷ್ಟು ಮಾತ್ರವೇ ಕಾಂಕ್ರೀಟ್‌ನಿಂದ ಕೂಡಿತ್ತು. ಉಳಿದ ಭಾಗ ಹಸಿರು ಪ್ರದೇಶದಿಂದ ಕೂಡಿತ್ತು. ಆದರೆ, ಇಂದು ಶೇ.4 ರಷ್ಟು ಹಸಿರು ಹೊದಿಕೆ ಮಾತ್ರವೇ ನಗರ ವ್ಯಾಪ್ತಿಯಲ್ಲಿ ಉಳಿದಿದೆ ಎಂಬ ಸಂಗತಿಯನ್ನು ವಿವರಿಸಿದರು.

ಬೆಂಗಳೂರು ಕೆರೆಗಳ ಒಕ್ಕೂಟದ ಅಧ್ಯಕ್ಷ ರಾಮ್ ಪ್ರಸಾದ್ ಮಾತನಾಡಿ, ಕೆಸಿ ವ್ಯಾಲಿ ಯೋಜನೆ ಮೂಲಕ ಬೆಂಗಳೂರು ಕೊಳಚೆ ನೀರನ್ನು ಕೋಲಾರ, ಚಿಕ್ಕಬಳ್ಳಾಪುರದ ಕೆರೆಗಳಿಗೆ ಹರಿಸಲಾಗುತ್ತಿದೆ. ಈ ಜಿಲ್ಲೆಗಳಲ್ಲಿ ಬೆಳೆದಂತಹ ಬೆಳೆಗಳ ಮೇಲೆ ಈ ನೀರು ಹೆಚ್ಚಿನ ಪರಿಣಾಮ ಬೀರುತ್ತಿದೆ. ಶೀಘ್ರವೇ 3ನೇ ಹಂತದ ಶುದ್ಧೀಕರಣ ಮಾಡಿದಲ್ಲಿ ಮಾತ್ರ ಈ ಜಿಲ್ಲೆಗಳ ಜನತೆಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಕುರುಬೂರು ಶಾಂತಕುಮಾರ್ ಮಾತನಾಡಿ, ಜೂ.5 ಕ್ಕೆ ರಾಜ್ಯಾದ್ಯಂತ ರೈತರು ಗಿಡ ನೆಡಬೇಕು. ಒಟ್ಟಾರೆ ಪರಿಸರದ ಬಗ್ಗೆ ಜನಸಾಮಾನ್ಯರು ಸೇರಿದಂತೆ ಶಾಲಾ ಕಾಲೇಜು ಮಕ್ಕಳಲ್ಲಿ ಹೆಚ್ಚಿನ ಅರಿವನ್ನು ಮೂಡಿಸಲು ಸರ್ಕಾರ ಮುಂದಾಗಬೇಕು ಎಂದರು. ನಟ ಮುಖ್ಯಮಂತ್ರಿ ಚಂದ್ರು, ಮಾಜಿ ಶಾಸಕ ಮಹಿಮಾ ಪಟೇಲ್, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಯೋಜನಾ ಅಧಿಕಾರಿ ಸಂಧ್ಯಾ ವಿ.ಶೆಟ್ಟಿ ಸೇರಿದಂತೆ ಇತರರಿದ್ದರು.

ನಾರಾಯಣ ಗುರು ನಿಗಮದ ಕಚೇರಿ ಉದ್ಘಾಟನೆ

ಬೆಂಗಳೂರು: ಮೈಸೂರು ಬ್ಯಾಂಕ್ ವೃತ್ತದ ಕರ್ನಾಟಕ ಗೃಹ ಮಂಡಳಿಯ ಕಟ್ಟಡದಲ್ಲಿ ಅಸ್ತಿತ್ವಕ್ಕೆ ಬಂದಿರುವ ನಾರಾಯಣ ಗುರು ನಿಗಮದ ನೂತನ ಕಚೇರಿಯನ್ನು ವಿಧಾನಸಭಾಧ್ಯಕ್ಷ ಯು.ಟಿ ಖಾದರ್ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಬ್ರಹ್ಮಶ್ರೀ ನಾರಾಯಣ ಗುರುಗಳ ತತ್ವ ಮತ್ತು ಆದರ್ಶಗಳು ಇಡೀ ಸಮಾಜವನ್ನು ಒಟ್ಟುಗೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಯಾವ ಜಾತಿ, ಧರ್ಮ, ಪಂಥ ದೊಡ್ಡದಲ್ಲ, ಚಿಕ್ಕದೂ ಅಲ್ಲ ಎನ್ನುವ ಉದ್ಘೋಷವನ್ನು ಅವರು ನೀಡಿದ್ದು ಅದು ಇಂದಿಗೂ ಪ್ರಸ್ತುತವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ಸಚಿವ ಮಧು ಬಂಗಾರಪ್ಪ, ಮಾಜಿ ಸಚಿವ ರಾಮನಾಥ್ ರೈ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ತುಳಸೀ ಮದ್ದಿನೇನಿ, ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಜೀವ್ ಕೂಲೇರ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಂ.ಎ. ಗಫೂರ್ ಸೇರಿದಂತೆ ಸಮಾಜದ ವಿವಿಧ ಹಿರಿಯ ಮುಖಂಡರು ಹಾಜರಿದ್ದರು.

> ರಾಜ್ಯ ಸರ್ಕಾರ ನಿಗಮಕ್ಕೆ 10 ಕೋಟಿ ರೂ. ವಾರ್ಷಿಕ ಅನುದಾನ ನೀಡಿದೆ. ಇದರಲ್ಲಿ ಪ್ರಮುಖವಾಗಿ ಅರಿವು ಶಿಕ್ಷಣ ಕಾರ್ಯಕ್ರಮಕ್ಕೆ 4 ಕೋಟಿ ರೂ. ಮತ್ತು ಗಂಗಾ ಕಲ್ಯಾಣ ಯೋಜನೆಗೆ 2.5 ಕೋಟಿ ರೂ ಗಳಷ್ಟು ತೆಗೆದಿರಿಸಲಾಗಿದೆ.
>
> ■ **ಮಂಜುನಾಥ್ ಪೂಜಾರಿ,** ಅಧ್ಯಕ್ಷ

ಭೇಟಿ



ಜಪಾನ್ ದೇಶದ ಬೆಂಗಳೂರಿನ ನೂತನ ಕಾನ್ಸುಲ್ ಜನರಲ್ ನವತಾ ಹಿರೋಶಿ ಅವರು ಗುರುವಾರ ಸಚಿವ ಎಂ.ಬಿ.ಪಾಟೀಲ್ ಅವರನ್ನು ಖನಿಜ ಭವನದಲ್ಲಿ ಭೇಟಿ ಮಾಡಿ, ರಾಜ್ಯದ ಆರ್ಥಿಕತೆಗೆ, ಉದ್ಯೋಗ ಸೃಷ್ಟಿಗೆ ಸಹಕಾರ ನೀಡುವ ಕುರಿತು ಚರ್ಚೆ ನಡೆಸಿದರು. ಈ ವೇಳೆ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಇದ್ದರು.

ಕಿರುಸುದ್ದಿ

ಮೋದಿ ಭೇಟಿ ವೇಳೆ ಜಿಲೆಟಿನ್ ಕಡ್ಡಿಗಳು ಪತ್ತೆ: ತನಿಖೆ ಚುರುಕು

ಬೆಂಗಳೂರು: ರಾಜ್ಯಕ್ಕೆ ಪ್ರಧಾನಿ ಮೋದಿ ಭೇಟಿ ವೇಳೆ ಜಿಲೆಟಿನ್ ಕಡ್ಡಿಗಳು ಕಗ್ಗಲಿಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಚುರುಕುಗೊಂಡಿದ್ದು, ಈವರೆಗೆ ಸುಮಾರು 150ಕ್ಕೂ ಹೆಚ್ಚು ಜನರನ್ನು ಪೊಲೀಸರು ವಿಚಾರಣೆಗೊಳಪಡಿಸಿದ್ದಾರೆ. ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಆಧರಿಸಿ ಈ ಬೃಹತ್ ಮಟ್ಟದ ತನಿಖೆ ನಡೆಯುತ್ತಿದೆ. ಬಾಂಬ್ ಇಡಲಾಗಿದೆ ಎಂದು ಪೊಲೀಸ್ ಕಂಟ್ರೋಲ್ ರೂಂಗೆ ಕರೆ ಮಾಡಿ ಬೆದರಿಕೆ ಹಾಕಿದ್ದ ಕೋರಮಂಗಲ ನಿವಾಸಿ ಲೋಹಿತ್ ಎಂಬಾತನನ್ನು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ. ಉನ್ನತ ಪೊಲೀಸ್ ಅಧಿಕಾರಿಗಳು ಹಾಗೂ ಎನ್‌ಐಎ ತಂಡ ಈತನನ್ನು ತೀವ್ರ ವಿಚಾರಣೆಗೆ ಒಳಪಡಿಸಿದೆಯಾದರೂ, ಜಿಲೆಟಿನ್ ಕಡ್ಡಿಗಳ ಮೂಲದ ಬಗ್ಗೆ ಈತನಿಂದ ಯಾವುದೇ ಖಚಿತ ಮಾಹಿತಿ ಲಭ್ಯವಾಗಿಲ್ಲ. ಆರೋಪಿ ಲೋಹಿತ್ ಈ ಹಿಂದೆ ಒಂದು ದಿನ ತಮಿಳುನಾಡಿಗೆ ಪ್ರವಾಸ ಹೋಗಿದ್ದನ್ನು ಹೊರತುಪಡಿಸಿ, ಆತನ ಟ್ರಾವೆಲ್ ಹಿಸ್ಟರಿಯಲ್ಲಿ ಹೆಚ್ಚಿನ ಯಾವುದೇ ಅನುಮಾನಾಸ್ಪದ ವಿಚಾರಗಳು ಕಂಡುಬಂದಿಲ್ಲ ಎಂದು ತಿಳಿದುಬಂದಿದೆ.

ಪ್ರವೇಶ ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆ ಇರುವ ಕಾರಣದಿಂದ ಮೇ 24ರಂದು ನಡೆಯಬೇಕಿದ್ದ ಎಂಬಿಎ, ಎಂಸಿಎ ಕೋರ್ಸ್‌ಗಳ ಪ್ರವೇಶ (ಪಿಜಿಸಿಇಟಿ) ಪರೀಕ್ಷೆಯನ್ನು ಜೂ.14ಕ್ಕೆ ಮುಂದೂಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಈ ಹಿಂದೆ ಪ್ರಕಟಿಸಿದಂತೆ ಮೇ 23 ರಂದು ಎಂ.ಟೆಕ್/ಎಂಬಿಎ ಹಾಗೂ ಡಿಸಿಇಟಿ ಪ್ರವೇಶ ಪರೀಕ್ಷೆಗಳು ನಡೆಯಲಿವೆ ಮಾಹಿತಿ ನೀಡಿದ್ದಾರೆ.

ಮನೆ ಕಳವು: ನಾಲ್ವರ ಬಂಧನ, ನಗನಗದು ವಶ

ಬೆಂಗಳೂರು: ಕುಟುಂಬದವರು ಮನೆಯೊಳಗೆ ಇದ್ದಾಗಲೇ ಕಿಟಕಿ ಸರಳನ್ನು ಕತ್ತರಿಸಿ ಒಳನುಗ್ಗಿ ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದ ಮಧ್ಯಪ್ರದೇಶದ ನಾಲ್ವರನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ 11 ಲಕ್ಷ ರೂ.ಮೌಲ್ಯದ 45 ಗ್ರಾಂ ಚಿನ್ನ ಹಾಗೂ ವಜ್ರದ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ಮಧ್ಯಪ್ರದೇಶದವರಾದ ತಿಲಕ್ ಸಿಂಗ್ (32), ರಾಹುಲ್ ಸಿಂಗ್ (20), ರಾಮ್ ಸರೂಪ್ (40) ಮತ್ತು ಗಿರಿರಾಜ್ ಪಾರ್ಥಿಬನ್ (22) ಬಂಧಿತ ಆರೋಪಿಗಳಾಗಿದ್ದಾರೆ. ಕಳೆದ ಏ.23ರಂದು ಮಧ್ಯರಾತ್ರಿ ಇಂದಿರಾನಗರದ 8ನೇ ಮುಖ್ಯರಸ್ತೆ ನಿವಾಸಿ ಸಿಪ್ರಾ ತ್ರಿವೇದಿ ಅವರ ಮನೆಯಲ್ಲಿ ಈ ಕಳ್ಳತನ ನಡೆದಿತ್ತು. ಮನೆಯೊಳಗೆ ಮಾಲೀಕರು ಇದ್ದಾರೆ ಎಂಬುದು ಗೊತ್ತಿದ್ದರೂ, ಕಳ್ಳರು ಕಿಟಕಿ ರಾಡ್ ಕತ್ತರಿಸಿ ಒಳನುಗ್ಗಿದ್ದರು. ಕಪಾಟಿನಲ್ಲಿದ್ದ ಚಿನ್ನ ಮತ್ತು ವಜ್ರದ ಆಭರಣಗಳನ್ನು ಬ್ಯಾಗಿಗೆ ತುಂಬಿಕೊಂಡು ಪರಾರಿಯಾಗಿದ್ದರು. ಬೆಳಗಿನ ಜಾವ ಸಿಪ್ರಾ ತ್ರಿವೇದಿ ಅವರು ಎಚ್ಚರಗೊಂಡಾಗ ಮನೆಯಲ್ಲಿ ಕಳ್ಳತನ ನಡೆದಿರುವುದು ಬೆಳಕಿಗೆ ಬಂದಿದೆ.ತಕ್ಷಣ ಅವರು ಪೊಲೀಸರಿಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಆರಂಭಿಸಿದ್ದರು. ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿದ ಪೊಲೀಸರಿಗೆ ಖಚಿತ ಮಾಹಿತಿ ಲಭ್ಯವಾಗಿದೆ. ಈ ಮಾಹಿತಿಯ ಮೇರೆಗೆ ಇಂದಿರಾನಗರದ ಬಿಎಂಎಲ್ ಕಾವಲ್ ಮುಖ್ಯರಸ್ತೆಯ ಬಳಿ ಅನುಮಾನಾಸ್ಪದವಾಗಿ ನಿಂತಿದ್ದ ನಾಲ್ವರನ್ನು ಬ್ಯಾಗ್ ಸಮೇತ ವಶಕ್ಕೆ ಪಡೆದು ವಿಚಾರಿಸಿದಾಗ, ಅವರು ಮನೆಗಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ.

ಮುಂಗಾರು ಸನ್ನದ್ಧತೆ ಬಲಪಡಿಸಲು ಪ್ರಹರಿ ವಾಹನಗಳ ಪರೇಡ್ ಆಯೋಜಿಸಲು ಜಿಬಿಎ ಮುಖ್ಯ ಆಯುಕ್ತ ಸೂಚನೆ

ಮಳೆ ಸಂಬಂಧಿತ ತುರ್ತು ಪರಿಸ್ಥಿತಿಗೆ ಸಿದ್ಧತೆ

ಬೆಂಗಳೂರು: ಮುಂಗಾರು ಸನ್ನದ್ಧತೆಯನ್ನು ಬಲಪಡಿಸಲು ಐದು ಪಾಲಿಕೆ ಆಯುಕ್ತರು ತಮ್ಮ ವ್ಯಾಪ್ತಿಯಲ್ಲಿ ತಕ್ಷಣ ಪ್ರಹರಿ ವಾಹನಗಳ ಪರೇಡ್ ಆಯೋಜಿಸಬೇಕೆಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಆಯುಕ್ತರಿಗೆ ಸೂಚಿಸಿದರು.



ಗುರುವಾರ ಜಿಬಿಎ ಮುಖ್ಯ ಕಚೇರಿ ಸಭಾಂಗಣದಲ್ಲಿ ನಡೆದ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಪ್ರಹರಿ ವಾಹನಗಳಲ್ಲಿರುವ ಎಲ್ಲಾ ಅಗತ್ಯ ಉಪಕರಣಗಳನ್ನು ಸಮಗ್ರವಾಗಿ ಪರಿಶೀಲಿಸಿ, ಮಳೆ ಸಂಬಂಧಿತ ತುರ್ತು ಪರಿಸ್ಥಿತಿಗಳಿಗೆ ಕಾರ್ಯಸನ್ನದ್ಧತೆ ಖಚಿತ ಪಡಿಸಿಕೊಳ್ಳಬೇಕು. ಜೊತೆಗೆ, ಎಲ್ಲಾ ಮರ ಕಟಾವು ಯಂತ್ರೋಪಕರಣ, ವಾಹನ, ಸಂಬಂಧಿತ ತುರ್ತು ಸೇವಾ ಸಾಧನಗಳನ್ನು ಕೂಡ ವಿವರವಾಗಿ ಪರಿಶೀಲಿಸಿ, 1 ವಾರ ದೊಳಗಾಗಿ ಸಮಗ್ರ ಸಿದ್ಧತಾ ವರದಿ ಸಲ್ಲಿಸುವಂತೆ ಸೂಚಿಸಿದರು.

ರೈಲ್ವೆ ತಗ್ಗು ಪ್ರದೇಶಗಳ ಜಂಟಿ ಪರಿಶೀಲನೆ: ಪ್ರವಾಹ ಮತ್ತು ನೀರು ನಿಲ್ಲುವ ಸಮಸ್ಯೆಗಳನ್ನು ಎದುರಿಸುತ್ತಿರುವ ರೈಲ್ವೆ ತಗ್ಗು ಪ್ರದೇಶಗಳಿಗೆ ವಿಶೇಷ ಆದ್ಯತೆ ನೀಡಲಾಗಿದ್ದು, ಸಂಬಂಧಿತ ನಗರ ಪಾಲಿಕೆ ಅಧಿಕಾರಿಗಳು ಹಾಗೂ ರೈಲ್ವೆ ಅಧಿಕಾರಿಗಳು ಪ್ರತಿ ಪ್ರದೇಶವನ್ನು ಜಂಟಿಯಾಗಿ ಪರಿಶೀಲಿಸಿ, ಸಮಸ್ಯೆಗಳನ್ನು ಸಮನ್ವಯದಿಂದ ಪರಿಹರಿಸಿ, ಬಾಕಿ ಉಳಿದ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಬೇಕು. ಇದರೊಂದಿಗೆ ನಗರದಲ್ಲಿನ ಶಿಥಿಲಾವಸ್ಥೆಯ ಕಟ್ಟಡ ಹಾಗೂ ಅಪಾಯಕಾರಿ ಕಾಂಪೌಂಡ್ ಗಳನ್ನು ಆದ್ಯತೆಯ ಮೇರೆಗೆ ತೆರವುಗೊಳಿಸಲು ನಿರ್ದೇಶಿಸಿದರು.

ಮುಂಗಾರು ಪೂರ್ವ ಸಿದ್ಧತಾ ಕ್ರಮ ಚುರುಕುಗೊಳಿಸಿ: ಜಯನಗರ ವಿಭಾಗ, ರಾಂಕಾ ಕಾಲೋನಿ, ಎಚ್‌ಎಸ್‌ಆರ್ ಲೇಔಟ್, ಐಎಎಸ್ ಕಾಲೋನಿ, ಸತ್ಯಸಾಯಿ ಲೇಔಟ್ ಮತ್ತು ಅನುಗ್ರಹ ಲೇಔಟ್‌ಗಳಲ್ಲಿ ತಕ್ಷಣದ ಕಾಮಗಾರಿ ಕೈಗೊಳ್ಳಬೇಕು. ಇದರೊಂದಿಗೆ, ಜೆ.ಪಿ.ನಗರದ ಸಿಂಧೂರ ಕನ್ವೆನ್ಷನ್ ಹಾಲ್ ಹತ್ತಿರ, ಸಿಲ್ಕ್ ಬೋರ್ಡ್ ಜಂಕ್ಷನ್, ಅರವಿಂದ್ ಲೇಔಟ್, ಲಕ್ಷ್ಮಿ ಲೇಔಟ್, ಸಾರಕ್ಕಿ ಸಿಗ್ನಲ್ ಮತ್ತು ಚುಂಚಘಟ್ಟ ಕೆರೆ ಸುತ್ತಮುತ್ತಲಿನ ತಗ್ಗು ಪ್ರದೇಶಗಳಲ್ಲಿ ಮತ್ತೆ ನೀರು ನಿಲ್ಲದಂತೆ ಮುನ್ನೆಚ್ಚರಿಕೆ ಕ್ರಮಕೈಗೊಳ್ಳಬೇಕು ಎಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಹೆಚ್ಚುವರಿ ಆಯುಕ್ತ ಡಾ.ನವೀನ್ ಕುಮಾರ್ ರಾಜು ನಿರ್ದೇಶನ ನೀಡಿದರು.

ಹೂಳು ತೆಗೆಯುವ ಕಾರ್ಯಾಚರಣೆಗೆ ಸಿದ್ಧತೆ: ರಾಜಕಾಲುವೆ ಮತ್ತು ಒಳಚರಂಡಿ ಜಾಲದ ಸಾಮರ್ಥ್ಯವನ್ನು ಹೆಚ್ಚಿಸಲು, ಎಚ್‌ಎಸ್‌ಆರ್ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿಯಮಿತವಾಗಿ ಹೂಳು ತೆಗೆಯುವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ದಕ್ಷಿಣ ವಲಯದ ವ್ಯಾಪ್ತಿಯಲ್ಲಿರುವ ಎಲ್ಲಾ ದುರ್ಬಲ ರಾಜಕಾಲುವೆ ಪ್ರದೇಶಗಳ ಸಂಪೂರ್ಣ ಪಟ್ಟಿಯನ್ನು ಸಿದ್ಧಪಡಿಸ ಲಾಗುತ್ತಿದೆ. ಭಾರಿ ಮಳೆಯ ಸಂದರ್ಭದಲ್ಲಿ ತಕ್ಷಣದ ಪರಿಹಾರ ಒದಗಿಸಲು, ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚುವರಿ ಪಂಪ್ ಮತ್ತು ಹೂಳು ತೆಗೆಯುವ ಯಂತ್ರಗಳನ್ನು ನಿಯೋಜಿಸಲಾಗುತ್ತಿದ್ದು, ತುರ್ತು ಸ್ಪಂದನೆಗಾಗಿ 8 ರಿಂದ 10 ಹೈ-ಕೆಪಾಸಿಟಿ ಸೂಪರ್ ಸಕರ್ ವಾಹನಗಳ ಪಡೆಯನ್ನು ಸಜ್ಜುಗೊಳಿಸಲಾಗಿದೆ ಎಂದು ತಿಳಿಸಿದರು.

ಮರಗಳ ಮೇಲ್ವಿಚಾರಣೆಯು ಮಾಲೀಕರದ್ದೇ ಜವಾಬ್ದಾರಿ



ಜಿಬಿಎ ವ್ಯಾಪ್ತಿಯಲ್ಲಿನ ಸರ್ಕಾರಿ/ ಸರ್ಕಾರಿಯೇತರ ಸಂಘ ಸಂಸ್ಥೆ/ಕಾರ್ಖಾನೆ/ ಕೈಗಾರಿಕೆ/ಖಾಸಗಿ ಕಂಪನಿಗಳ ಆವರಣಗಳಲ್ಲಿ, ಒಣಗಿರುವ/ ಅಪಾಯಸ್ಥಿತಿಯಲ್ಲಿರುವ ಮರ, ರೆಂಬೆ ಕೊಂಬೆಗಳ ಮೇಲ್ವಿಚಾರಣೆಯು ಆಯಾ ಸಂಸ್ಥೆಗಳ ಮಾಲೀಕರು/ಆಡಳಿತಗಾರರುಗಳೇ ನೇರ ಜವಾಬ್ದಾರರಾಗಿರುತ್ತದೆ. ಆದ್ದರಿಂದ, ಯಾವುದೇ ಪ್ರಾಣ ಹಾನಿ, ಆಸ್ತಿ-ಪಾಸ್ತಿಗಳ ಹಾನಿಯಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಐದು ಪಾಲಿಕೆ ಅರಣ್ಯ ಘಟಕಕ್ಕೆ ಸಂಬಂಧಿಸಿದ ಅಧಿಕಾರಿಗಳ ಕಚೇರಿಯ ವಿಳಾಸಕ್ಕೆ ಅರ್ಜಿ ಸಲ್ಲಿಸಿ, ಅನುಮತಿ ಪಡೆದು, ಕಡ್ಡಾಯವಾಗಿ ತೆರವುಗೊಳಿಸುವುದು ಆಯಾ ಸ್ವತ್ತಿನ ಮುಖ್ಯಸ್ಥರ ಕರ್ತವ್ಯವಾಗಿರುತ್ತದೆ ಎಂದು ಹೇಳಿದರು.

> ಭಾರಿ ಮಳೆಯ ಸಮಯದಲ್ಲಿ 24/7 ಕಾರ್ಯನಿರ್ವಹಿಸಲಿದ್ದು, ತಡೆರಹಿತ ಅಗತ್ಯ ನಾಗರಿಕ ಸೇವೆಗಳನ್ನು ಖಚಿತಪಡಿಸಲಿದೆ. ಸಾರ್ವಜನಿಕ ಸುರಕ್ಷತೆಯಲ್ಲಿ ಯಾವುದೇ ರೀತಿಯ ಲೋಪದೋಷಗಳು ಉಂಟಾದರೆ ಸಂಬಂಧಪಟ್ಟ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
>
> ■ **ಡಾ.ನವೀನ್‌ಕುಮಾರ್ ರಾಜು,** ಬೆಂಗಳೂರು ದಕ್ಷಿಣ ನಗರ ಪಾಲಿಕೆ ಹೆಚ್ಚುವರಿ ಆಯುಕ್ತ

ಚೊಕ್ಕಸಂದ್ರದಲ್ಲಿ ಬೋರ್‌ವೆಲ್ ನೀರು ಬಳಕೆಗೆ ಚಾಲನೆ: ಶಾಸಕ

ಪೀಣ್ಯ: ಬೇಸಿಗೆ ಇರುವುದರಿಂದ ಕಾವೇರಿ ನೀರು ವಾರದಲ್ಲಿ ಎರಡು ಬಾರಿ ಮಾತ್ರ ಬರುತ್ತಿದೆ. ಆದರಿಂದ ನಮಗೆ ಬೋರ್‌ವೆಲ್ ನೀರು ಕೊಡಿ ಎಂದು ಅನೇಕರು ಮನವಿ ಮಾಡಿದ್ದರು. ಹಾಗಾಗಿ ಬೋರ್‌ವೆಲ್ ಕೊರೆಸುವ ಮೂಲಕ ಸ್ಥಳೀಯರಿಗೆ ಅನುಕೂಲ ಮಾಡಿಕೊಡಲಾಗಿದೆ ಎಂದು ಶಾಸಕ ಎಸ್.ಮುನಿರಾಜು ಹೇಳಿದರು.



ಚೊಕ್ಕಸಂದ್ರ ವಾರ್ಡಿನ ಅನೇಕ ಕಡೆ ಬೋರ್‌ವೆಲ್ ನೀರು ಬಳಕೆ ಮಾಡಲು ಚಾಲನೆ ನೀಡಿ ಮಾತನಾಡಿದ ಅವರು, ಬೇಸಿಗೆಯಲ್ಲಿ ನೀರು ಅತ್ಯಗತ್ಯವಾಗಿದೆ. ಅದಕ್ಕಾಗಿಯೇ ಬೋರ್‌ವೆಲ್ ಕೊರೆಸಿ ಸ್ಥಳೀಯರಿಗೆ ಅನುಕೂಲ ಮಾಡಿ ಕೊಡಲಾಗಿದೆ. ಕುಡಿಯಲು ಹಾಗೂ ಅಡುಗೆಗೆ ಮಾತ್ರ ಕಾವೇರಿ ನೀರು ಬಳಕೆ ಮಾಡಿ, ಇತರೆ ಕೆಲಸಗಳಿಗೆ ಬೋರ್‌ವೆಲ್ ನೀರು ಬಳಕೆ ಮಾಡಿ ಎಂದು ತಿಳಿಸಿದರು. ಬಿಜೆಪಿ ಮುಖಂಡರಾದ ಸಿ.ಎಂ.ನಾಗರಾಜು, ಸುರೇಶ್‌ಗೌಡ, ವಿಜಯ ಕುಮಾರ್, ವೆಂಕಟೇಶ್ (ವೆಂಕಿ), ಇಂಜಿನಿಯರ್ ಗಳಾದ ವೆಂಕಟೇಶ್, ಪ್ರವೀಣ್ ಹಾಜರಿದ್ದರು.

ಅಪರಿಚಿತ ವಾಹನ ಡಿಕ್ಕಿ: ಚಾಲಕ ಸಾವು

ಬೆಂಗಳೂರು: ರಸ್ತೆ ಬದಿ ಕಂಟೈನರ್ ವಾಹನ ನಿಲ್ಲಿಸಿ ಚಾಲಕ ಕೆಳಗಿಳಿಯುತ್ತಿದ್ದ ವೇಳೆ ವೇಗವಾಗಿ ಬಂದ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಚಾಲಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ದೇವನಹಳ್ಳಿ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಮೃತಪಟ್ಟ ಕಂಟೈನರ್ ಚಾಲಕನನ್ನು ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲೂಕಿನ ಶ್ರೀಧರ್ (34)ಎಂದು ಗುರುತಿಸಲಾಗಿದೆ. ಬುಧವಾರ ರಾತ್ರಿ ಸುಮಾರು 11 ಗಂಟೆಯ ಸಮಯದಲ್ಲಿ ಮೃತರು ಅವರು ತಮ್ಮ ಕಂಟೈನರ್ ವಾಹನವನ್ನು ಹೊಸಕೋಟೆಯಿಂದ ದೇವನಹಳ್ಳಿ ಕಡೆಗೆ ಸಾಗುವ ರಾಷ್ಟ್ರೀಯ ಹೆದ್ದಾರಿ 648ರ ನಿಲೇರಿ ಫ್ಲೈ ಓವರ್‌ನಲ್ಲಿ ಡಿವೈಡರ್‌ಗೆ ಹೊಂದಿಕೊಂಡಂತೆ ನಿಲ್ಲಿಸಿ ಕೆಳಗಿಳಿಯುತ್ತಿದ್ದರು. ಈ ವೇಳೆ ಅತೀ ವೇಗವಾಗಿ ಬಂದ ಯಾವುದೇ ಒಂದು ವಾಹನ ಅವರಿಗೆ ಡಿಕ್ಕಿ ಹೊಡೆದು ಅವರ ಮೇಲೆಯೇ ಹರಿದು ಹೋಗಿದೆ. ಅಪಘಾತವೆಸಗಿದ ಚಾಲಕ ವಾಹನ ನಿಲ್ಲಿಸದೆ ಪರಾರಿಯಾಗಿದ್ದಾನೆ.

ಮಾರ್ಗ ಮಧ್ಯೆ ಹೋಗುತ್ತಿದ್ದ ಸಾರ್ವಜನಿಕರು ಇದನ್ನು ಗಮನಿಸಿ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆ ದೇವನಹಳ್ಳಿ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದು, ಮೃತದೇಹವನ್ನು ಖಾಸಗಿ ಆಸ್ಪತ್ರೆಗೆ ರವಾನಿಸಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಅಪಘಾತಕ್ಕೆ ಕಾರಣವಾದ ವಾಹನ ಹಾಗೂ ಅದರ ಚಾಲಕನಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

ಜಲಮಂಡಳಿಯ ವಿನೂತನ ವ್ಯವಸ್ಥೆಯಿಂದ ಸಾರ್ವಜನಿಕರಿಗೆ ನಿರಾಳ

ರೊಬೋಟಿಕ್ ತಂತ್ರಜ್ಞಾನ ಯಶಸ್ವಿ ಬಳಕೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ಅಳವಡಿಸಿಕೊಂಡಿರುವ ರೋಬೋಟಿಕ್ ತಂತ್ರಜ್ಞಾನದ ಯಶಸ್ವಿ ಬಳಕೆಯನ್ನು ಮುಂದುವರೆಸಿದೆ. ಕಳೆದ ಆರು ತಿಂಗಳಲ್ಲಿ 32,661 ಮೀಟರ್‌ಗಳ ತಪಾಸಣೆ ನಡೆಸಿದ್ದು, 399 ಸ್ಥಳಗಳಲ್ಲಿ ರಸ್ತೆ ಅಗೆತವನ್ನು ತಪ್ಪಿಸಿದೆ. ಈ ಮೂಲಕ ಸಾರ್ವಜನಿಕರಿಗೆ ಆಗುತ್ತಿದ್ದ ತೊಂದರೆಯನ್ನು ತಪ್ಪಿಸಿದೆ.

ನಗರದ ಸಂಚಾರ ದಟ್ಟಣೆಗೆ ಕಿರಿಕಿರಿಯಾಗದಂತೆ ಹಾಗೂ ವಾಹನ ಸವಾರರಿಗೆ ಯಾವುದೇ ತೊಂದರೆ ಯಾಗದಂತೆ ಎಚ್ಚರವಹಿಸಿರುವ ಬೆಂಗಳೂರು ಜಲ ಮಂಡಳಿಯು, ನವೆಂಬರ್‌ನಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಚಾಲನೆ ನೀಡಿದ್ದ ಅತ್ಯಾಧುನಿಕ ರೋಬೋಟಿಕ್ ತಂತ್ರಜ್ಞಾನವನ್ನು ಪೈಪ್‌ಲೈನ್ ಹಾಗೂ ಒಳಚರಂಡಿ ದೋಷಗಳನ್ನು ಪತ್ತೆಹಚ್ಚಲು ಯಶಸ್ವಿಯಾಗಿ ಬಳಸಿಕೊಂಡಿದೆ.



ಈ ವಿನೂತನ ತಂತ್ರಜ್ಞಾನದ ನೆರವಿನಿಂದ ಕಳೆದ ಆರು ತಿಂಗಳಲ್ಲಿ ನಗರದ ಬರೋಬ್ಬರಿ 399 ಕಡೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ರಸ್ತೆ ಅಗೆಯುವುದನ್ನು ತಪ್ಪಿಸಲಾಗಿದ್ದು, ಇದರಿಂದ ನಿತ್ಯ ನಗರದ ಪ್ರಯಾಣಿಕರು ಮತ್ತು ವಾಹನ ಸವಾರರು ಅನುಭವಿಸುತ್ತಿದ್ದ ಟ್ರಾಫಿಕ್ ಬವಣೆಗೆ ಬಹು ದೊಡ್ಡ ಮಟ್ಟದಲ್ಲಿ ಮುಕ್ತಿ ಸಿಕ್ಕಿದೆ.

ಈ ಬಗ್ಗೆ ಮಾತನಾಡಿದ ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್, ಬೆಂಗಳೂರಿನಂತಹ ಮಹಾನಗರದಲ್ಲಿ ರಸ್ತೆ ಅಗೆಯುವುದು ವಾಹನ ಸವಾರರಿಗೆ ಮತ್ತು ಸಾರ್ವಜನಿಕರಿಗೆ ಎಷ್ಟು ಕಿರಿಕಿರಿ ಉಂಟುಮಾಡುತ್ತದೆ ಎಂಬುದು ನಮಗೆ ಅರಿವಿದೆ. ಈ ಯಂತ್ರಗಳು ರಸ್ತೆ ಅಗೆಯದೆಯೇ ಪೈಪ್‌ಲೈನ್ ಒಳಗೆ ಚಲಿಸಿ, ನಿಖರವಾಗಿ ದೋಷವನ್ನು ಪತ್ತೆಹಚ್ಚಿವೆ ಎಂದು ತಿಳಿಸಿದ್ದಾರೆ.

ಕಾರ್ಯಾಚರಣೆ ಪ್ರಮುಖ ಅಂಕಿ-ಅಂಶ

ಜಲಮಂಡಳಿಯ ರೋಬೋಟ್ ಪೈಪ್‌ಲೈನ್‌ಒಳಗೆ ಬರೋಬ್ಬರಿ 32,661 ಮೀಟರ್ (ಸುಮಾರು 32.66 ಕಿ.ಮೀ) ಉದ್ದದ ಮಾರ್ಗವನ್ನು ಕ್ರಮಿಸಿ ಅತ್ಯಂತ ವೈಜ್ಞಾನಿಕವಾಗಿ ತಪಾಸಣೆ ನಡೆಸಿವೆ. ಈ ವೇಳೆ ಒಟ್ಟಾರೆ 394 ದೋಷಗಳನ್ನು ಅತ್ಯಂತ ನಿಖರವಾಗಿ ಗುರುತಿಸಿ, ರಸ್ತೆಗಳಿಗೆ ಹೆಚ್ಚು ಹಾನಿಯಾಗದಂತೆ ಪರಿಹಾರ ಕಲ್ಪಿಸಲಾಗಿದೆ. ಈ ಆರು ತಿಂಗಳ ಅವಧಿಯಲ್ಲಿ ಬಂದಿದ್ದ ಒಟ್ಟು 404 ದೂರುಗಳ ಪೈಕಿ 399 ದೂರುಗಳನ್ನು ಈಗಾಗಲೇ ಯಶಸ್ವಿಯಾಗಿ ಇತ್ಯರ್ಥಪಡಿಸಲಾಗಿದೆ. ಬಾಕಿ ಉಳಿದಿರುವ ಕೇವಲ 5 ದೂರುಗಳನ್ನು ಸಹ ಆದ್ಯತೆಯ ಮೇರೆಗೆ ಶೀಘ್ರವೇ ಬಗೆಹರಿಸಲಾಗುವುದು ಎಂದು ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ಅನುಮೋದನೆ

ಬೆಂಗಳೂರು: ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಹೆಚ್ಚುತ್ತಿರುವ ಪ್ರಯಾಣಿಕರ ಬೇಡಿಕೆ ಪೂರೈಸಲು ಬೆಂಗಳೂರಿನ ಸರ್. ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಮುಂಬೈನ ಲೋಕಮಾನ್ಯ ತಿಲಕ್ ಟರ್ಮಿನಸ್ ನಡುವೆ ಹೊಸ ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ರೈಲ್ವೆ ಸಚಿವಾಲಯವು ಅನುಮೋದನೆ ನೀಡಿದೆ.

ರೈಲುಸಂಖ್ಯೆ 06557 ಎಂಬ ಉದ್ಘಾಟನಾ ವಿಶೇಷ ರೈಲು ಮೇ 17ರಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಎಸ್‌ಎಂವಿಟಿ ನಿಲ್ದಾಣದಿಂದ ಹೊರಡಲಿದೆ. ಮರುದಿನ ಬೆಳಗ್ಗೆ 10:30ಕ್ಕೆ ಲೋಕಮಾನ್ಯ ತಿಲಕ್ ಟರ್ಮಿನಸ್ ತಲುಪಲಿದೆ. ರೈಲು ಸಂಖ್ಯೆ 16553 ಎಸ್‌ಎಂವಿಟಿ ಬೆಂಗಳೂರು - ಲೋಕಮಾನ್ಯ ತಿಲಕ್ ಟರ್ಮಿನಸ್ ಎಕ್ಸ್‌ಪ್ರೆಸ್ ಪ್ರತಿ ಶನಿವಾರ ಮತ್ತು ಮಂಗಳವಾರ ಎಸ್‌ಎಂವಿಟಿ ಬೆಂಗಳೂರಿನಿಂದ ರಾತ್ರಿ 8.35 ಗಂಟೆಗೆ ಹೊರಟು, ಮರುದಿನ (ಕ್ರಮವಾಗಿ ಭಾನುವಾರ ಮತ್ತು ಬುಧವಾರ) ರಾತ್ರಿ 8:40 ಗಂಟೆಗೆ ಲೋಕಮಾನ್ಯ ತಿಲಕ್ ಟರ್ಮಿನಸ್ ತಲುಪಲಿದೆ.

ಮರು ಪ್ರಯಾಣ, ರೈಲು ಸಂಖ್ಯೆ 16554 ಲೋಕಮಾನ್ಯ ತಿಲಕ್ ಟರ್ಮಿನಸ್ - ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್ ಪ್ರತಿ ಭಾನುವಾರ ಮತ್ತು ಬುಧವಾರ ಲೋಕಮಾನ್ಯ ತಿಲಕ್ ಟರ್ಮಿನಲ್ ನಿಂದ ರಾತ್ರಿ 12:15 ಗಂಟೆಗೆ ಹೊರಟು, ಮರುದಿನ (ಸೋಮವಾರ ಮತ್ತು ಗುರುವಾರ ಕ್ರಮವಾಗಿ) ರಾತ್ರಿ 11:30 ಗಂಟೆಗೆ ಎಸ್‌ಎಂವಿಟಿ ಬೆಂಗಳೂರಿಗೆ ಆಗಮಿಸಲಿದೆ.

ಬೆಂಗಳೂರು ವಿವಿ ಪ.ಜಾತಿ, ಪ.ಪಂಗಡಗಳ ಶಿಕ್ಷಕರ ಸಂಘದಿಂದ ಆಕ್ರೋಶ

ದುರುದ್ದೇಶದಿಂದ ಕೂಡಿದ ಆಯ್ಕೆ ಪ್ರಕ್ರಿಯೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳ ಆಯ್ಕೆ ಸಮಿತಿ ನಿಯಮ ಗಾಳಿಗೆ ತೂರಿ ತಜ್ಞನ ಆಯ್ಕೆ ಹೆಸರನ್ನು ಸೇರ್ಪಡೆಗೊಳಿಸಿರುವುದನ್ನು ಖಂಡಿಸಿ ಬೆಂಗಳೂರು ವಿವಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶಿಕ್ಷಕರ ಸಂಘವು ಆಕ್ರೋಶ ವ್ಯಕ್ತಪಡಿಸಿದೆ.



ವಿಶ್ವವಿದ್ಯಾಲಯದ ಮುಂದಿನ ಕುಲಪತಿಗಳ ಆಯ್ಕೆ ಸಮಿತಿಗೆ ಸಿಂಡಿಕೇಟ್‌ನಿಂದ ತಜ್ಞ ಸದಸ್ಯರನ್ನು ಆಯ್ಕೆ ಮಾಡುವ ಸಲುವಾಗಿ ಇತ್ತೀಚಿಗೆ ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದ 5.9 ಮತದಾನ ಪ್ರಕ್ರಿಯೆಯಲ್ಲಿ ಕುಲಪತಿಗಳ ಆಯ್ಕೆಯ ತಜ್ಞ ಸಮಿತಿಗೆ ವಿಶ್ರಾಂತ ಕುಲಪತಿಗಳು, ಕಲಬುರಗಿ ವಿಶ್ವವಿದ್ಯಾಲಯದ ಪ್ರೊ. ದಯಾನಂದ ಅಗಸರ್ ಅವರ ಹೆಸರನ್ನು ಸೂಚಿಸಲು ಕೈಗೊಂಡ ನಿರ್ಧಾರವು ಕಾನೂನು ರೀತಿಯಾಗಿ ತಪ್ಪಾಗಿದ್ದು, ದುರುದ್ದೇಶದಿಂದ ಕೂಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ವಿಶ್ವವಿದ್ಯಾಲಯದ 5.9 ಮತದಾನ ಪ್ರಕ್ರಿಯೆ ಅನ್ವಯ ಕುಲಪತಿ ಆಯ್ಕೆ ಸಮಿತಿಗೆ ಪ್ರೊ. ಪದ್ಮಾ ಶೇಖರ್ ಅವರನ್ನು ಶೀಘ್ರವೇ ಸಂಬಂಧಪಟ್ಟವರು ಆಯ್ಕೆ ಮಾಡಬೇಕು ಎಂದು ಸಂಘವು ಒತ್ತಾಯಿಸಿದೆ.

ಈಗಾಗಲೇ ಶಿಕ್ಷಕರ ಸಂಘದಿಂದ ಬೆಂಗಳೂರು ವಿಶ್ವವಿದ್ಯಾಲಯವು ಮೇ 4 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗೆ ಆಕ್ಷೇಪ ಮತ್ತು ನಡಾವಳಿ ಬದಲಾಯಿಸಲು ಕೋರಿಕೆಯನ್ನು ಎಲ್ಲಾ ಸಿಂಡಿಕೇಟ್ ಸದಸ್ಯರಿಗೆ ಖುದ್ದು ಮನವಿ ಮಾಡಿ, ತಾವು ತುರ್ತಾಗಿ ಕ್ರಮ ಕೈಗೊಳ್ಳಬೇಕೆಂದು ಇದರ ಪ್ರತಿಗಳನ್ನು ಈಗಾಗಲೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶಿಕ್ಷಕರ ಸಂಘದ ಈ ಮೂಲಕ ಮನವಿಗಳನ್ನು ಸಲ್ಲಿಸಲು ಮೂಲಕ ಆಕ್ರೋಶ ವ್ಯಕ್ತಪಡಿಸಿದೆ.

ಫೋನ್ ಮುಖೇನ ಬಂದ ಅಭಿಪ್ರಾಯ ಅಮಾನ್ಯ

ಕುಲಪತಿ ಆಯ್ಕೆ ಸಮಿತಿಗೆ 5.9 ಮತದಾನದಲ್ಲಿ ಸದಸ್ಯರು ಕಡ್ಡಾಯವಾಗಿ ಉಲ್ಲೇಖವಾಗಿರುವುದರಿಂದ ಸಭೆಗೆ ಹಾಜರಿರದ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಫೋನ್ ಮುಖೇನ ಬಂದ ಅಭಿಪ್ರಾಯವು ಅಮಾನ್ಯವಾಗುತ್ತದೆ. ಆದ್ದರಿಂದ ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರ ಅಭಿಪ್ರಾಯವನ್ನು ಅಮಾನ್ಯವೆಂದು ಪರಿಗಣಿಸಿದಾಗ, ಪ್ರೊ. ಪದ್ಮಾಶೇಖರ್ ಅವರ ಹೆಸರನ್ನು 7 ಸಿಂಡಿಕೇಟ್ ಸದಸ್ಯರು ಸೂಚಿಸಿದ್ದರೂ, ವಿವಿಯ ಕುಲಪತಿಗಳು, ಕಲಬುರಗಿ ವಿವಿ ವಿಶ್ರಾಂತ ಕುಲಪತಿ ಪ್ರೊ. ದಯಾನಂದ ಅಗಸರ್ ಅವರ ಹೆಸರನ್ನು 6 ಸಿಂಡಿಕೇಟ್ ಸದಸ್ಯರು ಸೂಚಿಸಿದಂತೆ ಉಲ್ಲೇಖಿಸಿದ್ದು ಗಂಭೀರ ಪ್ರಮಾದಕ್ಕೆ ಕಾರಣವಾಗಿದೆ.

ವಿಶೇಷ ಎಕ್ಸ್‌ಪ್ರೆಸ್ ರೈಲು ಸೇವೆ ಆರಂಭ

ಬೆಂಗಳೂರು: ಬೇಸಿಗೆಯಲ್ಲಿ ಪ್ರಯಾಣಿಕರ ದಟ್ಟಣೆಯನ್ನು ನಿವಾರಿಸಲು, ನೈರುತ್ಯ ರೈಲ್ವೆಯು ಹುಬ್ಬಳ್ಳಿ ಬೈಪಾಸ್ ಮೂಲಕ ಯಶವಂತಪುರ ಮತ್ತು ವಿಜಯಪುರ ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲನ್ನು ಓಡಿಸಲಿದೆ. ರೈಲು ಸಂಖ್ಯೆ 06577 ಯಶವಂತಪುರ -ವಿಜಯಪುರ ವಿಶೇಷ ಎಕ್ಸ್‌ಪ್ರೆಸ್ ರೈಲು ಮೇ 16 ರಿಂದ ಜೂ.27ರವರೆಗೆ ಪ್ರತಿ ಶನಿವಾರ 6.15 ಗಂಟೆಗೆ ಯಶವಂತಪುರದಿಂದ ಹೊರಟು, ಮರುದಿನ 5.15 ಗಂಟೆಗೆ ವಿಜಯಪುರ ತಲುಪಲಿದೆ. ಹಿಂದಿರುಗುವ ಮಾರ್ಗದಲ್ಲಿ ರೈಲು ಸಂಖ್ಯೆ 06578 ವಿಜಯಪುರ-ಯಶವಂತಪುರ ವಿಶೇಷ ಎಕ್ಸ್‌ಪ್ರೆಸ್ ಮೇ 17 ರಿಂದ ಜೂ.28ರವರೆಗೆ ಪ್ರತಿ ಭಾನುವಾರ ಮೇ 17 ಗಂಟೆಗೆ ವಿಜಯಪುರದಿಂದ ಹೊರಟು, ಮರುದಿನ 4ಗಂಟೆಗೆ ಯಶವಂತಪುರ ತಲುಪಲಿದೆ.



ಸಾರ್ವಜನಿಕ ಸಾರಿಗೆ, ಕಾರ್ ಪೂಲಿಂಗ್ ವ್ಯವಸ್ಥೆ ಬಳಸಿ

ಬೆಂಗಳೂರು: ನಗರದ ಹೊರ ವರ್ತುಲ ರಸ್ತೆಯಲ್ಲಿ ಉಂಟಾಗುತ್ತಿರುವ ಸಂಚಾರ ದಟ್ಟಣೆಯನ್ನು ಸುಗಮ ಗೊಳಿಸಲು ಐಟಿ ಉದ್ಯೋಗಿಗಳು ಸಾರ್ವಜನಿಕ ಸಾರಿಗೆ ಹಾಗೂ ಕಾರ್ ಪೂಲಿಂಗ್ ವ್ಯವಸ್ಥೆಯನ್ನು ಬಳಸುವಂತೆ ಬೆಂಗಳೂರು ನಗರ ಸಂಚಾರ ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ ಅವರು ಮನವಿ ಮಾಡಿದ್ದಾರೆ.

> **ಸಂಚಾರ ದಟ್ಟಣೆ ನಿವಾರಣೆಗೆ ಟ್ರಾಫಿಕ್ ಪೊಲೀಸರ ಮನವಿ**

ಇಕೋಸ್ಪೇಸ್ ಇಂಟೆಲ್ ಕಂಪನಿಯ ಸಭಾಂಗಣದಲ್ಲಿ ಈ ಸಂಬಂಧ ಮಹತ್ವದ ಸಭೆಯೊಂದನ್ನು ಆಯೋಜಿಸಲಾಗಿತ್ತು. ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ವಿವಿಧ ಇಲಾಖೆಗಳ ಉನ್ನತಾಧಿಕಾರಿಗಳು ಹಾಗೂ ಸುಮಾರು 180 ಐಟಿ ಕಂಪನಿಗಳ ಮುಖ್ಯಸ್ಥರು ಭಾಗವಹಿಸಿದ್ದರು. ಹೊರವರ್ತುಲ ರಸ್ತೆ ಯಲ್ಲಿರುವ ಬಹುತೇಕ ಐಟಿ ಕಂಪನಿಗಳ ದೈನಂದಿನ ಕೆಲಸದ ಆರಂಭ ಮತ್ತು ಮುಕ್ತಾಯದ ಅವಧಿಯು ಒಂದೇ ವೇಳೆ ಯಾಗಿರುವುದು ಸಂಚಾರ ದಟ್ಟಣೆಗೆ ಪ್ರಮುಖ ಕಾರಣವಾಗಿದೆ ಎಂದು ಸಭೆಯಲ್ಲಿ ಜಂಟಿ ಪೊಲೀಸ್ ಆಯುಕ್ತರು ಸುದೀರ್ಘವಾಗಿ ಚರ್ಚಿಸಿದರು. ಹೊರ ರಾಜ್ಯಗಳಲ್ಲಿ ಯಶಸ್ವಿಯಾಗಿರುವಂತೆ ಕಚೇರಿಗೆ ಬರುವ ಉದ್ಯೋಗಿಗಳು ಕಾರ್ ಪೂಲಿಂಗ್ ಹಾಗೂ ಬಿಎಂಟಿಸಿನಂತಹ ಸಾರ್ವಜನಿಕ ಸಾರಿಗೆ ಯನ್ನು ಬಳಸಲು ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ಈ ಮೂಲಕ ಸಂಚಾರ ದಟ್ಟಣೆ ನಿವಾರಣೆಗೆ ಟ್ರಾಫಿಕ್ ಪೊಲೀಸ ರೊಂದಿಗೆ ಸಹಕರಿಸಬೇಕೆಂದು ಅವರು ಕೋರಿದರು. ಸಭೆಯಲ್ಲಿ ಜಿಬಿಎ ಮುಖ್ಯ ಆಯುಕ್ತ ರಾದ ಮಹೇಶ್ವರ್ ರಾವ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಕುಮಾರ್ ಮತ್ತು ಅವರ ಸಾರಿಗೆ ಆಯುಕ್ತ ಮಲ್ಲಿಕಾ ಜರ್ಗನ್ ಹಾಗೂ ವಿವಿಧ ಐಟಿ ಕಂಪನಿಗಳ ಉದ್ಯೋಗಿಗಳಿಂದ ಬಂದ ಅಹವಾಲು ಹಾಗೂ ಸಲಹೆಗಳನ್ನು ಸ್ವೀಕರಿಸಿದರು. ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತ ಮತ್ತು ಅಗತ್ಯ ಕ್ರಮಗಳನ್ನು ಕೈಗೊ ಳ್ಳುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ.

ಇಂದು ನಗರದಲ್ಲಿ...

- ಪೊಲೀಸ್ ಮಾಸಿಕ ಕವಾಯತು, ಸ್ಥಳ: ಥಣಿಸಂದ್ರ, ಬೆಳಗ್ಗೆ 8.00
- ಕಾರಂಜಿ ಆಂಜನೇಯಸ್ವಾಮಿ ದೇವಾಲಯದ ಕುಂಭಾಭಿಷೇಕ, ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ. ಬೆಳಗ್ಗೆ 9.00
- ಮಾವು ಮೇಳ, ಸ್ಥಳ: ಕಬ್ಬನ್ ಪಾರ್ಕ್, ಬೆಳಗ್ಗೆ 10.00
- ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್ ವತಿಯಿಂದ ಉಮಾ ಮಹೇಶ್ವರ ಸಂವಾದ, ಸ್ಥಳ: ಸಾಂಸ್ಕೃತಿಕ ರಂಗಮಂದಿರ, 9ನೇ ಬಡಾವಣೆ, ಜಯನಗರ. ಸಂಜೆ 6.30

ಆರೆಂಜ್ ಕ್ಯಾಪ್ | ಪರ್ಪಲ್ ಕ್ಯಾಪ್



ಕ್ಲಾಸೆನ್ (ಹೈದರಾಬಾದ್) 508 ರನ್

ಭುವನೇಶ್ವರ್ (ಬೆಂಗಳೂರು) 22 ವಿಕೆಟ್



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ	12	8	4	0	16	+1.065
ಗುಜರಾತ್	12	8	4	0	16	+0.551
ಹೈದರಾಬಾದ್	12	7	5	0	14	+0.331
ಪಂಜಾಬ್	11	6	4	1	13	+0.428
ಚೆನ್ನೈ	11	6	5	0	12	+0.185
ರಾಜಸ್ಥಾನ	11	6	5	0	12	+0.082
ದಿಲ್ಲಿ	12	5	7	0	10	-0.993
ಕೆಕೆಆರ್	11	4	6	1	9	-0.198
ಮುಂಬೈ	10	3	7	0	6	-0.649
ಲಖನೌ	11	3	8	0	6	-0.907

ಕಿರುಸುದ್ದಿ

ಜೂ. ಹಾಕಿ ತಂಡಕ್ಕೆ ಫ್ರೆಡೆರಿಕ್ ಕೋಚ್

ಹೊಸದಿಲ್ಲಿ: ರಾಷ್ಟ್ರೀಯ ಜೂನಿಯರ್ ಪುರುಷರ ಹಾಕಿ ತಂಡದ ಮುಖ್ಯ ಕೋಚ್ ಆಗಿ ಫ್ರೆಂಚ್ ಆಟಗಾರ ಫ್ರೆಡೆರಿಕ್ ಸೋಯೆಜ್ ಅವರನ್ನು ನೇಮಕ ಮಾಡಿದೆ. ಎರಡು ಬಾರಿ ಒಲಿಂಪಿಕ್ ಪದಕ ವಿಜೇತ ಪಿ.ಆರ್. ಶ್ರೀಜೇಶ್ ಅವರಿಗೆ ದೊಡ್ಡ ಶಾಕ್ ನೀಡಿದೆ. ಮಾಜಿ ಸ್ಟಾರ್ ಗೋಲ್‌ಕೀಪರ್ ಆಗಿದ್ದ ಶ್ರೀಜೇಶ್ ಅವರನ್ನು ಕಳೆದ ವರ್ಷ ಚೆನ್ನೈ ಮತ್ತು ಮಧುರೈನಲ್ಲಿ ನಡೆದ ಎಫ್‌ಐಎಚ್ ಜೂನಿಯರ್ ವಿಶ್ವಕಪ್‌ನಲ್ಲಿ ಭಾರತ ಕಂಚಿನ ಪದಕ ಗೆಲ್ಲಲು ಕಾರಣರಾದ ನಂತರ, ಅವರ ಒಪ್ಪಂದದ ಅವಧಿ ಮುಗಿದ 17 ತಿಂಗಳ ನಂತರ ಅವರನ್ನು ಕೆಳಗಿಳಿಸಲಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಅಧಿಕಾರಾವಧಿಯಲ್ಲಿ ಹಲವಾರು ಪಂದ್ಯಾವಳಿಗಳಲ್ಲಿ ಐದು ಪದಕಗಳನ್ನು ಗೆದ್ದಿದ್ದರೂ ತಮ್ಮ ಅಧಿಕಾರಾವಧಿ ಕೊನೆಗೊಂಡಿದೆ ಎಂದು ಶ್ರೀಜೇಶ್ ತಮ್ಮ ಹತಾಶೆ ಹೊರಹಾಕಿದ್ದಾರೆ. ಆದರೆ 2036 ರ ಒಲಿಂಪಿಕ್ ಕ್ರೀಡಾಕೂಟವನ್ನು ಆಯೋಜಿಸುವ ಭಾರತದ ಮಹತ್ವಾಕಾಂಕ್ಷೆಗಳಿಗೆ ಅನುಗುಣವಾಗಿ ಸುಸ್ಥಿರ ಉನ್ನತ-ಕಾರ್ಯಕ್ಷಮತೆಯ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ದೀರ್ಘಾವಧಿಯ ದೃಷ್ಟಿಕೋನವನ್ನು ಪರಿಗಣಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹಾಕಿ ಇಂಡಿಯಾ ವಾದಿಸಿದೆ. ಯುರೋಪಿಯನ್ ಹಾಕಿಯಲ್ಲಿ ಅತ್ಯಂತ ಸಾಧನೆಗೈದ ತರಬೇತುದಾರರಲ್ಲಿ ಒಬ್ಬರಾದ ಸೋಯೆಜ್, ಫ್ರಾನ್ಸ್‌ಗೆ 15 ವರ್ಷ ಅಂತರರಾಷ್ಟ್ರೀಯ ಆಟಗಾರನಾಗಿ ಮತ್ತು 15 ವರ್ಷಗಳಿಗೂ ಹೆಚ್ಚು ಕಾಲ ಉನ್ನತ ಮಟ್ಟದಲ್ಲಿ ಮುಖ್ಯ ಕೋಚ್ ಆಗಿ ಮೂರು ದಶಕಗಳಿಗೂ ಹೆಚ್ಚು ಕಾಲದ ಗಣ್ಯ ತರಬೇತಿ ಅನುಭವವನ್ನು ಹೊಂದಿದ್ದಾರೆ.

ಪ್ರಜ್ಞಾನಂದಗೆ ಅಲಿರೆಝಾ ಎದುರಾಳಿ



ಹೊಸದಿಲ್ಲಿ: ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಬುಖಾರೆಸ್ಟ್ ಸೂಪರ್ ಚೆಸ್ ಕ್ಲಾಸಿಕ್ ಟೂರ್ನಿಯ ಮೊದಲ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಫ್ರಾನ್ಸ್‌ನ ಅಲಿರೆಝಾ ಫಿರೋಜ್ಜಾ ವಿರುದ್ಧ ಆಡಲಿದ್ದಾರೆ. ವಿಶ್ವ ಚಾಂಪಿಯನ್ ಡಿ. ಗುಕೇಶ್ ಈ ವರ್ಷದ ಕ್ಲಾಸಿಕಲ್ ಮಾದರಿಯಿಂದ ಹಿಂದೆ ಸರಿದ ಹಿನ್ನೆಲೆಯಲ್ಲಿ, ಟೂರ್ನಿಯಲ್ಲಿ ಭಾರತದಿಂದ ಏಕೈಕ ಆಟಗಾರನಾಗಿ ಪ್ರಜ್ಞಾನಂದ ಸ್ಪರ್ಧಿಸುತ್ತಿದ್ದಾರೆ. 10 ಆಟಗಾರರ ರೌಂಡ್-ರಾಬಿನ್ ಮಾದರಿಯ ಈ ಟೂರ್ನಿಯಲ್ಲಿ ಅವರಿಗೆ ಒಂಬತ್ತು ಸುತ್ತುಗಳಲ್ಲಿ ಐದು ಬಾರಿ ಬಿಳಿ ಗೂಟಗಳೊಂದಿಗೆ ಆಡಲು ಅವಕಾಶ ದೊರೆತಿದೆ. ಟೂರ್ನಿಯ ಒಟ್ಟು ಬಹುಮಾನ ಮೊತ್ತ 3.5 ಲಕ್ಷ ಅಮೆರಿಕನ್ ಡಾಲರ್ ಆಗಿದ್ದು, ಹೆಚ್ಚುವರಿಯಾಗಿ 1.25 ಲಕ್ಷ ಡಾಲರ್ ಬೋನಸ್ ಕೂಡ ಇದೆ. ಚಾಂಪಿಯನ್‌ಗೆ 1 ಲಕ್ಷ ಡಾಲರ್ ಬಹುಮಾನ ಸಿಗಲಿದೆ. ಏಪ್ರಿಲ್‌ನಲ್ಲಿ ನಡೆದ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಸಾಧಾರಣ ಪ್ರದರ್ಶನ ನೀಡಿದ್ದ ಪ್ರಜ್ಞಾನಂದ ಇದೀಗ ವಿಶ್ವ ರ್ಯಾಂಕಿಂಗ್‌ನ ನೇರ ಪಟ್ಟಿಯಲ್ಲಿ 16ನೇ ಸ್ಥಾನಕ್ಕೆ ಕುಸಿದಿದ್ದಾರೆ. ಈ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿ ಮರಳಿ ಲಯ ಕಂಡುಕೊಳ್ಳುವ ನಿರೀಕ್ಷೆಯಿದೆ. ಅಮೆರಿಕದ ಫ್ಯಾಬಿಯಾನೋ ಕಾರುವಾನಾ ಅಗ್ರ ಶ್ರೇಯಾಂಕಿತರಾಗಿ ಟೂರ್ನಿಗೆ ಪ್ರವೇಶಿಸಿದ್ದು, ಮೊದಲ ಸುತ್ತಿನಲ್ಲಿ ನೆದರ್‌ಲ್ಯಾಂಡ್ಸ್‌ನ ಜೋರ್ಡನ್ ವಾನ್ ಫೊರೆಸ್ಟ್ ಅವರನ್ನು ಎದುರಿಸಲಿದ್ದಾರೆ. ಇತ್ತೀಚೆಗೆ ನಡೆದ ಟಿ ಜೆ ಸಿಗೇಮನ್ ಟೂರ್ನಿಯಲ್ಲಿ ವಿಶ್ವ ನಂ. 1 ಮ್ಯಾಗ್ನಸ್ ಕಾರ್ಲ್ಸನ್ ಅವರನ್ನು ಸೋಲಿಸಿದ್ದ ವಾನ್ ಫೊರೆಸ್ಟ್ ಉತ್ತಮ ಫಾರ್ಮ್‌ನಲ್ಲಿದ್ದಾರೆ.ಗುಕೇಶ್ ಹಿಂದೆ ಸರಿದ ಬಳಿಕ ಅವರ ಸ್ಥಾನವನ್ನು ಉಜ್ಬೇಕಿಸ್ತಾನದ ಜಾವೋಖಿರ್ ಸಿಂದಾರೋವ್‌ಗೆ ನೀಡಲಾಗಿತ್ತು. ಬಳಿಕ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಅದ್ಭುತ ಪ್ರದರ್ಶನ ನೀಡಿದ ಸಿಂದಾರೋವ್, ಈ ವರ್ಷದ ಕೊನೆಯಲ್ಲಿ ಗುಕೇಶ್ ವಿರುದ್ಧ ವಿಶ್ವ ಚಾಂಪಿಯನ್‌ಶಿಪ್ ಸ್ಪರ್ಧೆಗೆ ಅರ್ಹತೆ ಗಿಟ್ಟಿಸಿಕೊಂಡರು.

ದಾಖಲೆಗಳ ಸುರಿಮಳೆಗೈದ ವಿರಾಟ್ | ಕೆಕೆಆರ್‌ಗೆ ಸೋಲು | ಆರ್‌ಸಿಬಿ ಪ್ಲೇಆಫ್ ಹಾದಿ ಸುಗಮ

ರಾಯ್ಪುರದಲ್ಲಿ ವಿರಾಟ್ ಕೊಹ್ಲಿ ನಂ.1 ಆಟ

ರಾಯ್ಪುರ: ನಂಬರ್ 1 ಸ್ಥಾನದ ಗುರಿಯಿಟ್ಟುಕೊಂಡಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಲಖನೌ ಸೂಪರ್ ಜೇಂಟ್ಸ್ ತಂಡದ ವಿರುದ್ಧ ಸೋತಿತು. ಮುಂಬೈ ವಿರುದ್ಧವೂ ಬ್ಯಾಟಿಂಗ್ ಕುಸಿತ ಕಂಡ ನಂತರ ಕೊನೆಯ ಓವರ್ ಥ್ರಿಲ್ಲಿಂಗ್‌ನಲ್ಲಿ ಗೆದ್ದಿತ್ತು. ಇದೇ ಸಮಯದಲ್ಲಿ ಕೊಹ್ಲಿ ಎರಡು ಶೂನ್ಯ ಸುತ್ತಿದ್ದರು. ಅತ್ತ ಗೆಲ್ಲಬೇಕಿದ್ದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ 193 ರನ್ ಗುರಿ ಕೊಟ್ಟಿತು. ದೊಡ್ಡ ಗುರಿ ಬೆನ್ನತ್ತಿದ ಆರ್‌ಸಿಬಿಗೆ ಆಸರೆ ಯಾರಾಗುತ್ತಾರೆ ಎಂಬ ಪ್ರಶ್ನೆ ಮೂಡುತ್ತಿದ್ದಂತೆ, ಅಬ್ಬರಿಸಿದರು ವಿರಾಟ್ ಕೊಹ್ಲಿ. ಮೊದಲನೇ ಬಾಲ್‌ನಿಂದ ಪಂದ್ಯದ ಕೊನೆಯ ಬಾಲ್‌ವರೆಗೂ ಬ್ಯಾಟಿಂಗ್ ಮಾಡಿದ ವಿರಾಟ್ ಕೊಹ್ಲಿ ಅಜೇಯ ಶತಕ ಬಾರಿಸಿದರು. ಅವರ ಆಟಕ್ಕೆ ನಲುಗಿದ ಕೆಕೆಆರ್ ಪಂದ್ಯ ಮೇಲಿನ ಆಸೆಯನ್ನೇ ಬಿಟ್ಟಿತು. ಆರ್‌ಸಿಬಿ 19.1 ಓವರ್‌ಗಳಲ್ಲಿ 194 ರನ್ ಗಳಿಸಿತು.



ಅದರಲ್ಲಿ ವಿರಾಟ್ ಒಬ್ಬರೇ 105★ ರನ್ ಗಳಿಸಿದರು. ಪಡಿಕ್ಕಲ್ 39, ಪಾಟಿದಾರ್ 11 ರನ್ ಗಳಿಸಿದರು. ಕೆಕೆಆರ್ ಪರ ಕಾರ್ತಿಕ್ ತ್ಯಾಗಿ 3 ವಿಕೆಟ್ ಪಡೆದರು. ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್‌ಗೆ ಅಂಗ್ರಿಶ್ ರಘುವಂಶಿ(71) ಮತ್ತು ರಿಂಕು ಸಿಂಗ್ (49★) ರನ್ ಗಳಿಸಿ ಆಸರೆಯಾಗಿದ್ದರು. ನೂರು ರನ್ ಗಳಿಸಿದ ಕೊಹ್ಲಿ ಪಂದ್ಯದ ಹೀರೋ. ಎರಡು ಡಕ್ ನಂತರ ಅಬ್ಬರಿಸಿದ ಕಿಂಗ್ ಅನಿಸಿದರು. ಪಡಿಕ್ಕಲ್ ಕೊಹ್ಲಿಗೆ ತಕ್ಕ ಸಾಥ್ ಕೊಟ್ಟಿದ್ದೇ ದೊಡ್ಡ ಪಂದ್ಯದ ತಿರುವು. ಅಂಗ್ರಿಶ್, ರಿಂಕು ಮತ್ತು ತ್ಯಾಗಿ ಹೋರಾಟ ನಡೆಸಿದವರಾದರೆ, ಭುವನೇಶ್ವರ್ ಮತ್ತೊಮ್ಮೆ ಆಪತ್ಬಾಂಧವ ಅನಿಸಿದರು.

ಸಂಕ್ಷಿಪ್ತ ಸ್ಕೋರ್

ಕೆಕೆಆರ್ 20 ಓವರ್‌ಗಳಲ್ಲಿ 192/4: ರಘುವಂಶಿ 71, ರಿಂಕು 49★; ಭುವನೇಶ್ವರ್ 34/1
ಆರ್‌ಸಿಬಿ 19.1 ಬಾಲ್‌ಗಳಲ್ಲಿ 194/4: ಕೊಹ್ಲಿ 105★, ಪಡಿಕ್ಕಲ್ 39; ತ್ಯಾಗಿ 39/3

ಆರ್‌ಸಿಬಿ ತಂಡದ ದಾಖಲೆಗಳು

- ಕೆಕೆಆರ್ ವಿರುದ್ಧ ಅತಿ ಹೆಚ್ಚು ರನ್ ಚೇಸ್: 193
- ರಾಯ್ಪುರದಲ್ಲಿ ಅತಿ ಹೆಚ್ಚು ರನ್ ಚೇಸ್

ನಂಬರ್ 1 ಸ್ಥಾನಕ್ಕೆ ಆರ್‌ಸಿಬಿ

ಈ ಗೆಲುವಿನೊಂದಿಗೆ ತನ್ನ ನಂಬರ್ 1 ಪಟ್ಟ ಉಳಿಸಿಕೊಂಡ ಬೆಂಗಳೂರು ಬಹುತೇಕ ಪ್ಲೇಆಫ್‌ಗೇರಿದೆ. ಕೆಕೆಆರ್ ತಂಡ ಇನ್ನಷ್ಟು ಸಂಕಷ್ಟದಲ್ಲಿ ಸಿಲುಕಿಕೊಂಡಿದೆ. ಬೇಕಿರುವ 16 ಅಂಕ ಗಳಿಸಿರುವ ಆರ್‌ಸಿಬಿ ಇನ್ನೂ ಎರಡು ಪಂದ್ಯಗಳನ್ನು ಆಡಬೇಕಿದ್ದು, ಅದರಲ್ಲೂ ಗೆದ್ದರೆ ಟಾಪ್ 2ರಲ್ಲೇ ಉಳಿಯಲಿದೆ.

ಇನ್ನಷ್ಟು ದಾಖಲೆಗಳು

- ಕೆಕೆಆರ್‌ನೊಂದಿಗೆ 1126★ ರನ್ ಗಳಿಸಿರುವ ಕೊಹ್ಲಿ, ಒಂದೇ ತಂಡದ ವಿರುದ್ಧ ಹೆಚ್ಚು ರನ್ ಮಾಡಿದವರ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ.
- ಅತಿ ಹೆಚ್ಚು ಪಂದ್ಯಶ್ರೇಷ್ಠ ಆಟಗಾರ ಪ್ರಶಸ್ತಿ(21) ಜಂಟಿ ಮೂರನೇ ಸ್ಥಾನ
- ಒಂದೇ ತಂಡದ ವಿರುದ್ಧ 2 ಶತಕ

ಅತಿ ಹೆಚ್ಚು ಶತಕ

ವಿರಾಟ್ ಕೊಹ್ಲಿ ಐಪಿಎಲ್‌ನಲ್ಲಿ ಅತಿ ಹೆಚ್ಚು ಶತಕ ಬಾರಿಸಿದ ಆಟಗಾರರ ಪಟ್ಟಿಯಲ್ಲಿ ತಮ್ಮ ಅಗ್ರಸ್ಥಾನವನ್ನು ಇನ್ನಷ್ಟು ಭದ್ರಗೊಳಿಸಿದ್ದಾರೆ. ತಮ್ಮ 9ನೇ ಶತಕ ಬಾರಿಸಿದ ಅವರು, ಅಗ್ರಸ್ಥಾನದಲ್ಲೇ ರಾರಾಜಿಸುತ್ತಿದ್ದಾರೆ.

ಚೇಸಿಂಗ್ ವೇಳೆ ಅತಿ ಹೆಚ್ಚು ಶತಕ

ವಿರಾಟ್ ಕೊಹ್ಲಿ ಚೇಸಿಂಗ್ ಮಾಸ್ಟರ್ ಎಂಬ ಹೆಸರಿಗೆ ತಕ್ಕಂತೆ ಆಟವಾಡಿದರು. ಟಿ20ಯಲ್ಲಿ ಚೇಸಿಂಗ್ ವೇಳೆ ಶತಕ ಬಾರಿಸುವುದು ಸಾಮಾನ್ಯವಾಗಿ ಕಷ್ಟಕರ. ಆದರೆ ಕೊಹ್ಲಿ ಈ ಸಾಧನೆ ಮೂರು ಬಾರಿ ಮಾಡಿದ್ದಾರೆ. ಇದರೊಂದಿಗೆ ಬಟ್ಲರ್ ದಾಖಲೆ ಸರಿಗಟ್ಟಿದ್ದಾರೆ.

ಮನೀಶ್ ಕ್ಯಾಚ್ ಕಮಾಲ್

ಕನ್ನಡಿಗ ಮನೀಶ್ ಪಾಂಡೆ ಕ್ಯಾಚ್ ಮೂಲಕ ಗಮನ ಸೆಳೆದರು. ತ್ಯಾಗಿ ಎಸೆದ 18ನೇ ಓವರ್‌ನಲ್ಲಿ ಸ್ಟ್ರೈಕ್‌ನಲ್ಲಿದ್ದ ಟೀಮ್ ಡೇವಿಡ್ ಪಾಯಿಂಟ್‌ನತ್ತ ಬಾರಿಸಿದರು. ಲೋ ರೇಂಜ್‌ನಲ್ಲಿ ಶರವೇಗದೊಂದಿಗೆ ಹೊರಡುತ್ತಿದ್ದ ಬಾಲ್ ಅನ್ನು ಕ್ಯಾಚ್ ಮಾಡಿದ ಮನೀಶ್ ಪಾಂಡೆ ಸಂಪೂರ್ಣ ಗಾಳಿಯಲ್ಲೇ ಇದ್ದರು. ಕ್ಯಾಚ್‌ಗೆ ಕೊಹ್ಲಿ, ಡೇವಿಡ್ ಕೂಡ ಹೋಗಳಿದರು.

ದಾಖಲೆಗಳ ಸುರಿಮಳೆಗೈದ ಕೊಹ್ಲಿ

ಕೊಹ್ಲಿ ಶತಕ ದಾಖಲೆಗಳ ಸುರಿಮಳೆಗೈದಿತು. ವಿರಾಟ್ ಗಳಿಸುವ ಪ್ರತಿಯೊಂದು ರನ್‌ಗೂ ದಾಖಲೆಗಳು ಆಗುತ್ತಲೇ ಇರುತ್ತವೆ. ರಾಯ್ಪುರದ ಪಂದ್ಯವೂ ಇದಕ್ಕೆ ಸಾಕ್ಷಿ. ಶತಕ ಬಾರಿಸಿ ಗೆಲ್ಲಿಸಿದ ಕೊಹ್ಲಿ ಹತ್ತಾರು ಮೈಲಿಗಲ್ಲು ತಲುಪಿದ್ದಾರೆ.

ಕೆಕೆಆರ್ ವಿರುದ್ಧ ಅಬ್ಬರದ ಶತಕ

108 ನಿಮಿಷಗಳ ಕಾಲ ಬ್ಯಾಟಿಂಗ್ ಮಾಡಿದ ವಿರಾಟ್ ಕೊಹ್ಲಿ 105 ರನ್ ಗಳಿಸಿದರು. ಮೊದಲನೇ ಬಾಲ್‌ನಿಂದ ಕೊನೆಯ ಬಾಲ್‌ವರೆಗೆ ಒಟ್ಟು 60 ಬಾಲ್‌ಗಳನ್ನು ಎದುರಿಸಿದ ಕೊಹ್ಲಿ 11 ಬೌಂಡರಿ, 3 ಸಿಕ್ಸರ್‌ಗಳನ್ನು ಬಾರಿಸಿದರು. ಪಡಿಕ್ಕಲ್ 39 ರನ್ ಗಳಿಸಿದರು. ಕೆಕೆಆರ್ ಪವರ್‌ಪ್ಲೇನಲ್ಲಿ 56/2, ಆರ್‌ಸಿಬಿ 66/1 ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಕೆಕೆಆರ್ 97/1, ಆರ್‌ಸಿಬಿ 91 ರನ್ ಗಳಿಸಿತು. ಡೆತ್ ಓವರ್‌ನಲ್ಲಿ ಕೆಕೆಆರ್ 39ರನ್‌ಗೆ ನಿಂತರೆ, 5 ಬಾಲ್ ಉಳಿದಿರುವಂತೆ ಆರ್‌ಸಿಬಿ 37 ರನ್ ಗಳಿಸಿತು. 105 ಗಳಿಸಿದ ವಿರಾಟ್ ಕೊಹ್ಲಿ ಇತಿಹಾಸ ನಿರ್ಮಿಸಿದ್ದಾರೆ.



105* ರನ್ | 60 ಎಸೆತ | 11 ಬೌಂಡರಿ | 3 ಸಿಕ್ಸರ್

14 ಸಾವಿರ ರನ್

ವಿರಾಟ್ ಕೊಹ್ಲಿ ಟಿ20 ಕ್ರಿಕೆಟ್‌ನಲ್ಲಿ 14 ಸಾವಿರ ರನ್ ಪೂರೈಸಿದರು. ಇದಕ್ಕೂ ಹೆಚ್ಚಾಗಿ ಅತಿ ಕಡಿಮೆ ಇನ್ನಿಂಗ್ಸ್‌ಗಳಲ್ಲಿ ಇಷ್ಟೊಂದು ರನ್ ಮಾಡಿದ ಆಟಗಾರ ಎಂಬ ದೊಡ್ಡ ದಾಖಲೆಯನ್ನೂ ಕೊಹ್ಲಿ ಮಾಡಿದ್ದಾರೆ.

ಐಪಿಎಲ್: ಹೆಚ್ಚು ಶತಕ

- ವಿರಾಟ್ ಕೊಹ್ಲಿ 9
- ಬಟ್ಲರ್ 7
- ಕ್ರಿಸ್ ಗೇಲ್ 6
- ಕೆ. ಎಲ್. ರಾಹುಲ್ 6
- ಸಂಜು ಸ್ಯಾಮ್ಸನ್ 5



ವೇಗದ 14 ಸಾವಿರ ರನ್

ಆಟಗಾರ/ತೆಗೆದುಕೊಂಡ ಇನ್ನಿಂಗ್ಸ್

- ವಿರಾಟ್ 409★
- ಗೇಲ್ 423
- ಬಟ್ಲರ್ 468
- ಅಲೆಕ್ಸ್ ಹೇಲ್ಸ್ 505
- ಕೇರನ್ ಪೋಲಾರ್ಡ್ 633



ಚೇಸಿಂಗ್ ವೇಳೆ ಅತಿ ಹೆಚ್ಚು ಶತಕ

ಆಟಗಾರ/ಶತಕ

- ವಿರಾಟ್ 3★
- ಬಟ್ಲರ್ 3★
- ಸ್ಟೋಕ್ಸ್ 2



ಭಾರತ ಎ ತಂಡಕ್ಕೆ ವೈಭವ್ ಆಯ್ಕೆ





ಮುಂಬೈ: ಭಾರತ ಕ್ರಿಕೆಟ್ ಕ್ಷೇತ್ರದಲ್ಲಿ ಐತಿಹಾಸಿಕ ದಾಖಲೆಯೊಂದಾಗಿದ್ದು, 15 ವರ್ಷದ ವೈಭವ್ ಸೂರ್ಯವಂಶಿ ಭಾರತ ಎ ತಂಡಕ್ಕೆ ಆಯ್ಕೆಯಾಗಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ವಿಶ್ವ ಕ್ರಿಕೆಟ್ ಗಮನ ಸೆಳೆದಿರುವ ವೈಭವ್ ಸೂರ್ಯವಂಶಿ ಮತ್ತೊಮ್ಮೆ ಇತಿಹಾಸದ ಪುಟಗಳಲ್ಲಿ ಸೇರಿದ್ದಾರೆ.

ಮುಂದಿನ ತಿಂಗಳು ನಡೆಯಲಿರುವ ಭಾರತ ಎ, ಶ್ರೀಲಂಕಾ ಎ ಮತ್ತು ಅಫ್ಘಾನಿಸ್ತಾನ ಎ ತಂಡಗಳ ನಡುವಿನ ತ್ರಿಕೋನ ಏಕದಿನ ಸರಣಿಗೆ ಭಾರತ ತಂಡವನ್ನು ಪ್ರಕಟಿಸಲಾಗಿದ್ದು ತಂಡದಲ್ಲಿ ವೈಭವ್ ಅವರನ್ನು ಆಯ್ಕೆ ಮಾಡಲಾಗಿದೆ. ತಂಡವನ್ನು ತಿಲಕ್ ವರ್ಮಾ ಮುನ್ನಡೆಸಲಿದ್ದು, ಅದರಲ್ಲಿ ಪ್ರಿಯಾಂಶ್ ಆರ್ಯ, ಪ್ರಭುಸಿಮ್ರನ್ ಸಿಂಗ್ ಕೂಡ ಸೇರಿದ್ದಾರೆ. ಭಾರತ ಎ ತಂಡ ಅಲ್ಲಿ ಎರಡು ದಿನದ ಟೆಸ್ಟ್ ಪಂದ್ಯಗಳನ್ನೂ ಆಡಲಿದೆ. ರಿಯಾನ್ ಪರಾಗ್ ಉಪನಾಯಕರಾಗಿದ್ದಾರೆ. ಸರಣಿಯ ನಂತರ ಭಾರತ ಎ, ಶ್ರೀಲಂಕಾ ಎ ವಿರುದ್ಧ ಎರಡು ಬಹು-ದಿನದ (ರೆಡ್-ಬಾಲ್) ಪಂದ್ಯಗಳನ್ನು ಸಹ ಆಡಲಿದೆ. ಈ ಟೆಸ್ಟ್ ಪಂದ್ಯಗಳಿಗೆ ತಂಡವನ್ನು ನಂತರ ಪ್ರಕಟಿಸಲಾಗುವುದು ಎಂದು ಬಿಸಿಸಿಐ ತಿಳಿಸಿದೆ. ತ್ರಿಕೋನ ಸರಣಿಯು ಜೂನ್ 9 ರಂದು ಪ್ರಾರಂಭವಾಗಲಿದ್ದು, ಜೂನ್ 21 ರಂದು ಅಂತಿಮ ಪಂದ್ಯ ನಡೆಯಲಿದೆ. ಎಲ್ಲಾ ತಂಡಗಳು ಪರಸ್ಪರ ಎರಡು ಬಾರಿ ಮುಖಾಮುಖಿಯಾಗಲಿದ್ದು, ಅಗ್ರ ಎರಡು ತಂಡಗಳು ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಶ್ರೀಲಂಕಾ ಎ, ಅಫ್ಘಾನ್ ಎ ವಿರುದ್ಧದ ತ್ರಿಕೋನ ಸರಣಿಗೆ ತಂಡ ಪ್ರಕಟ

ಐಪಿಎಲ್ ಸ್ಟಾರ್‌ಗಳಿಗೆ ಅವಕಾಶ: ಐಪಿಎಲ್‌ನಲ್ಲಿ ರನ್ ಮಳೆ ಹರಿಸುತ್ತಿರುವ ಪ್ರಿಯಾಂಶ್ ಆರ್ಯ, ಆಯುಷ್ ಬದೋನಿ ಮತ್ತು ಪ್ರಭುಸಿಮ್ರನ್ ಸಿಂಗ್ ಅವರಂತಹ ಯುವ ಆಟಗಾರರನ್ನು ಸಹ ಏಕದಿನ ತ್ರಿಕೋನ ಸರಣಿಗೆ ಆಯ್ಕೆ ಮಾಡಲಾಗಿದೆ. ದೇಶಿ ಕ್ರಿಕೆಟ್‌ನಲ್ಲಿ ಮಿಂಚಿರುವ ಯಶ್ ಠಾಕೂರ್, ಯುಧ್ವೀರ್ ಸಿಂಗ್, ಅನ್ಶುಲ್ ಕಂಬೋಜ್ ಮತ್ತು ಅರ್ಷದ್ ಖಾನ್ ಅವರನ್ನೂ ಆಯ್ಕೆ ಮಾಡಲಾಗಿದೆ.

ಭಾರತ ತಂಡ

ತಿಲಕ್ ವರ್ಮಾ (ನಾಯಕ), ಪ್ರಿಯಾಂಶ್ ಆರ್ಯ, ವೈಭವ್ ಸೂರ್ಯವಂಶಿ, ರಿಯಾನ್ ಪರಾಗ್ (ಉಪನಾಯಕ), ಆಯುಷ್ ಬದೋನಿ, ನಿಶಾಂತ್ ಸಿಂಧು, ಹರ್ಷ ದುಬೆ, ಸೂರ್ಯಾಂಶ್ ++++, ಪ್ರಭುಸಿಮ್ರನ್ ಸಿಂಗ್ (ವಿಕೆಟ್ ಕೀಪರ್), ಕುಮಾರ್ ಕುಶಾಗ್ರಾ (ವಿಕೆಟ್ ಕೀಪರ್), ವಿಪ್ರಜ್ ನಿಗಮ್, ಯಶ್ ಠಾಕೂರ್, ಯುಧ್ವೀರ್ ಸಿಂಗ್, ಅನ್ಶುಲ್ ಕಂಬೋಜ್,

ಸರಣಿ ವೇಳಾಪಟ್ಟಿ

- ಜೂನ್ 9: ಭಾರತ ಎ vs ಶ್ರೀಲಂಕಾ ಎ
- ಜೂನ್ 11: ಭಾರತ ಎ vs ಅಫ್ಘಾನಿಸ್ತಾನ ಎ
- ಜೂನ್ 13: ಅಫ್ಘಾನಿಸ್ತಾನ ಎ vs ಶ್ರೀಲಂಕಾ ಎ
- ಜೂನ್ 15: ಭಾರತ ಎ ವಿರುದ್ಧ ಶ್ರೀಲಂಕಾ ಎ
- ಜೂನ್ 17: ಭಾರತ ಎ vs ಅಫ್ಘಾನಿಸ್ತಾನ ಎ
- ಜೂನ್ 19: ಅಫ್ಘಾನಿಸ್ತಾನ ಎ vs ಶ್ರೀಲಂಕಾ ಎ
- ಜೂನ್ 21: ಫೈನಲ್ ಪಂದ್ಯ

ಮುಂಬೈ ಇಂಡಿಯನ್ಸ್‌ಗೆ ಕಠಿಣ ಗುರಿ

ಧರ್ಮಶಾಲಾ: ಪ್ರಭುಸಿಮ್ರನ್(57), ಓಮರ್‌ಝೈ(38) ಅವರ ಸ್ಫೋಟಕ ಬ್ಯಾಟಿಂಗ್ ನಡುವೆಯೂ ಕರಾರುವಾಕ್ ಬೌಲಿಂಗ್ ದಾಳಿ ಸಂಘಟಿಸಿದ ಶಾರ್ದೂಲ್ ಠಾಕೂರ್(39/4) ಪಂಜಾಬ್ ತಂಡಕ್ಕೆ ಕಡಿವಾಣ ಹಾಕಿದ ನಂತರ ಮುಂಬೈ ವಿರುದ್ಧದ ಪಂದ್ಯದಲ್ಲಿ ಶ್ರೇಯಸ್ ಪಡೆ ದೊಡ್ಡ ಗುರಿ ನಿರ್ಮಿಸಿದೆ.

ನಿಧಾನ ಆರಂಭ ಪಡೆದ ಪಂಜಾಬ್ ಮಧ್ಯಮ ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡಿತು. ಆದಾಗ್ಯೂ ಡೆತ್ ಓವರ್‌ನಲ್ಲಿ ಅಬ್ಬರಿಸಿ 60 ರನ್‌ಗಳಿಸಿದ ನಂತರ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 200 ರನ್ ಗಳಿಸಿದೆ. ಮುಂಬೈ ಪರ ಶಾರ್ದೂಲ್ 4, ದೀಪಕ್ 2, ಬಾಷ್ ಮತ್ತು ರಾಜ್ ತಲಾ 1 ವಿಕೆಟ್ ಪಡೆದರು.

ಶಾರ್ದೂಲ್ ಕಮಾಲ್: ಟಾಸ್ ಗೆದ್ದ ಮುಂಬೈ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಸೂರ್ಯ ಮತ್ತು ಹಾರ್ದಿಕ್ ಇಲ್ಲದ ಕಾರಣದಿಂದಾಗಿ ಜಸ್‌ಪ್ರೀತ್ ಬೂಮ್ರಾ ತಂಡದ ನಾಯಕತ್ವ ನಿಭಾಯಿಸಿದರು. ಬರುತ್ತಿದ್ದಂತೆ



ಅತ್ತ ಪ್ರಿಯಾಂಶ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಆದರೆ ಅವರ ಆಟ 17 ರನ್‌ಗೆ ನಿಂತಿತು. ಮೂರನೇ ಕ್ರಮಾಂಕದಲ್ಲಿ ಬಂದ ಕೊನೊಲಿ ಸೆಟ್ ಆಗುವತ್ತ ಸಾಗಿದರು. ಅತ್ತ ಪ್ರಭುಸಿಮ್ರನ್ ಅಬ್ಬರಿಸುತ್ತಿದ್ದಂತೆ ಪವರ್‌ಪ್ಲೇ ಮುಕ್ತಾಯವಾಯಿತು. ಪಂಜಾಬ್ 55 ರನ್‌ಗೆ 1 ವಿಕೆಟ್ ಕಳೆದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ ಶಾರ್ದೂಲ್ ಠಾಕೂರ್ ಕರಾರುವಾಕ್ ದಾಳಿಯೊಂದಿಗೆ ಮಿಂಚಿದರು. ಅರ್ಧಶತಕ ಬಾರಿಸಿದ್ದ ಪ್ರಭುಸಿಮ್ರನ್ ವಿಕೆಟ್ ಪಡೆದರು. ಕೊನೊಲಿ ಕೂಡ 21 ರನ್‌ಗೆ ವಿಕೆಟ್ ಒಪ್ಪಿಸಿದರು. ಶ್ರೇಯಸ್ ಅಯ್ಯರ್ ಬರುತ್ತಲೇ ಬೌಂಡರಿ ಬಾರಿಸಿ ಬೋಲ್ಡ್ ಆದರು. ಮುಂದಿನ ಓವರ್‌ನಲ್ಲಿ ಶಾರ್ದೂಲ್ ಸೂರ್ಯಾಂಶ್‌ಗೂ ಪೆವಿಲಿಯನ್ ಹಾದಿ ತೋರಿಸಿದರು. ಮಧ್ಯಮ ಓವರ್‌ಗಳಲ್ಲಿ ಪಂಜಾಬ್ 85 ರನ್ ಗಳಿಸುವಷ್ಟರಲ್ಲಿ 5 ವಿಕೆಟ್ ಕಳೆದುಕೊಂಡಿತು.

ಡೆತ್ ಓವರ್‌ನಲ್ಲಿ ಪಂಜಾಬ್ ಅಬ್ಬರ: ಕೊನೆಯ ಓವರ್‌ಗಳಲ್ಲಿ ಪಂಜಾಬ್ ಕಿಂಗ್ಸ್ ಅಬ್ಬರದ ಬ್ಯಾಟಿಂಗ್ ಮಾಡಿತು. ಅಜ್ಮತುಲ್ಲಾ ಓಮರ್‌ಝೈ ಬರುತ್ತಿದ್ದಂತೆ ಸ್ಫೋಟಕ ಬ್ಯಾಟಿಂಗ್ ಮಾಡಿದರು. 4 ಸಿಕ್ಸರ್ 2 ಬೌಂಡರಿ ಬಾರಿಸಿದ ಅವರು, 17 ಬಾಲ್ ಮಾತ್ರದಲ್ಲಿ 38 ರನ್ ಗಳಿಸಿದರು. ಪಂದ್ಯದ ತಿರುವೇ ಬದಲಾಯಿತು. ಸಾಮಾನ್ಯ ಸ್ಕೋರ್‌ನತ್ತ ಸಾಗುತ್ತಿದ್ದ ಪಂಜಾಬ್ ಅವರ ಬ್ಯಾಟಿಂಗ್‌ನಿಂದಾಗಿ ದೊಡ್ಡ ಸ್ಕೋರ್‌ನತ್ತ ಸಾಗಿತು. ಅವರ ವಿಕೆಟ್ ಬಿದ್ದರೂ ಕೊನೆಯ ಓವರ್‌ಗಳಲ್ಲಿ ಬಾರ್ಟ್‌ಲೆಟ್ ಮತ್ತು ವಿಷ್ಣು ವಿನೋದ್ ಸ್ಫೋಟಕ ಬ್ಯಾಟಿಂಗ್ ಮಾಡಿ ಸ್ಕೋರ್ 200ರ ಗಡಿ ದಾಟಿಸಿದರು.

ಬ್ಯಾಡ್ಮಿಂಟನ್: ಸೇನ್, ಸಿಂಧು ಕ್ವಾರ್ಟರ್‌ಗೆ

ಬ್ಯಾಂಕಾಕ್: ಥೈಲ್ಯಾಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತೀಯ ತಾರೆಯರ ಅದ್ಭುತ ಪ್ರದರ್ಶನ ಮುಂದುವರಿದಿದೆ. ಪ್ರಮುಖ ಬ್ಯಾಡ್ಮಿಂಟನ್ ಕೂಟಗಳಲ್ಲಿ ಒಂದಾದ ಸೂಪರ್ 500 ಪಂದ್ಯಾವಳಿಯಲ್ಲಿ ಪಿ.ವಿ. ಸಿಂಧು ಮತ್ತು ಲಕ್ಷ್ಯ ಸೇನ್ ತಮ್ಮ ತಮ್ಮ ಪಂದ್ಯಗಳಲ್ಲಿ ನೇರ ಗೇಮ್‌ಗಳಲ್ಲಿ ಗೆದ್ದು ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದ್ದಾರೆ.

ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಹಾಗೂ ಆರನೇ ಶ್ರೇಯಾಂಕಿತ ಪಿ. ವಿ. ಸಿಂಧು, ಡೆನ್ಮಾರ್ಕ್‌ನ ಅಮಾಲಿ ಶುಲ್ಜ್ ವಿರುದ್ಧ ಕೇವಲ 28 ನಿಮಿಷಗಳಲ್ಲಿ 21-13, 21-15 ಅಂತರದಲ್ಲಿ ಗೆಲುವು ಸಾಧಿಸಿದರು.

ಸೇನ್ ಪ್ರಾಬಲ್ಯ: ಪುರುಷರ ಸಿಂಗಲ್ಸ್ ವಿಭಾಗದಲ್ಲಿ, ಏಳನೇ ಶ್ರೇಯಾಂಕಿತ ಲಕ್ಷ್ಯ ಸೇನ್, ಚೀನಾದ ಝು ಕುವಾನ್ ಚೆನ್ ವಿರುದ್ಧ 21-12, 21-13 ಅಂತರದಲ್ಲಿ ಸುಲಭ ಜಯ ದಾಖಲಿಸಿದರು. 39 ನಿಮಿಷಗಳ ಕಾಲ ನಡೆದ ಈ ಪಂದ್ಯದಲ್ಲಿ ಲಕ್ಷ್ಯ ಸಂಪೂರ್ಣ ಮೇಲುಗೈ ಸಾಧಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಸಿಂಧುಗೆ ಜಪಾನ್‌ನ ಅಗ್ರ ಶ್ರೇಯಾಂಕಿತ ಹಾಗೂ ವಿಶ್ವ ನಂ. 3 ಅಕಾನೆ ಯಮಗುಚಿ ಸವಾಲಾಗಲಿದ್ದಾರೆ. ಲಕ್ಷ್ಯ ಸೇನ್, ಚೈನೀಸ್ ತೈಪೆಯ ಲೀ ಚಿಯಾ ಹಾವೊ ಮತ್ತು ಥೈಲ್ಯಾಂಡ್‌ನ ಕುನ್ಲಾವುತ್ ವಿಟಿಡ್ಸಾರ್ನ್ ನಡುವಿನ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಸಾತ್ವಿಕ್-ಚಿರಾಗ್ ಪಾರುಪತ್ಯ: ಪುರುಷರ ಡಬಲ್ಸ್‌ನಲ್ಲಿ, ಅಗ್ರ ಶ್ರೇಯಾಂಕಿತ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯೂ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿದೆ. ಮಲೇಷಿಯಾದ ಬ್ರಯಾನ್ ಜೆರೆಮಿ ಗುಂಟಿಂಗ್ ಮತ್ತು ಮುಹಮ್ಮದ್ ಹೈಕಲ್ ಜೋಡಿಯನ್ನು 21-12, 21-19 ಅಂತರದಲ್ಲಿ ಮಣಿಸಿದ ಭಾರತೀಯ ಜೋಡಿ ಮುಂದಿನ ಸುತ್ತಿನಲ್ಲಿ ಜಪಾನ್‌ನ ತಕುಮಿ ನೋಮುರಾ ಮತ್ತು ಯುಚಿ ಶಿಮೊಗಾಮಿ ಜೋಡಿಯನ್ನು ಎದುರಿಸಲಿದೆ.

ಇದೇ ವೇಳೆ ಯುವ ಆಟಗಾರ್ತಿ ದೇವಿಕಾ ಸಿಹಾಗ್ ಅಭಿಯಾನ ಅಂತ್ಯಗೊಂಡಿದೆ. ಥೈಲ್ಯಾಂಡ್‌ನ ಪಿಚಮೋನ್ ಒಪಾಟ್ನಿಪುತ್ ವಿರುದ್ಧ 21-23, 11-21 ಅಂತರದಲ್ಲಿ ಸೋತು ಅವರು ಟೂರ್ನಿಯಿಂದ ಹೊರಬಿದ್ದರು. ಇನ್ನೊಂದು ದಿನದ ಬಳಿಕ ಮಾಜಿ ವಿಶ್ವ ನಂ. 1 ಕಿದಂಬಿ ಶ್ರೀಕಾಂತ್, ಚೈನೀಸ್ ತೈಪೆಯ ಸು ಲಿ ಯಾಂಗ್ ವಿರುದ್ಧ ಸೆಣಸಲಿದ್ದಾರೆ.

ಸೂಪರ್ ಕಿಂಗ್ಸ್-ಲಖನೌ ಜೇಂಟ್ಸ್ ಪಂದ್ಯ ಇಂದು

ಲಖನೌ: ಲಯದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಲಖನೌ ಸೂಪರ್ ಜೇಂಟ್ಸ್ ತಂಡಗಳು ಶುಕ್ರವಾರದ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಪ್ಲೇಆಫ್ ವಿಚಾರದಲ್ಲಿ ಚೆನ್ನೈಗಿದು ಮಹತ್ವದ ಪಂದ್ಯವಾಗಿರಲಿದೆ.

ಭಾನುವಾರ ನಡೆದ ಇಬ್ಬರ ನಡುವಿನ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಗೆಲುವು ಸಾಧಿಸಿದೆ. ಹಿಂದಿನ ಪಂದ್ಯಗಳಲ್ಲಿ ಸತತ ಗೆಲುವು ಸಾಧಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಸತತ ನಾಲ್ಕನೇ ಗೆಲುವಿನ ನಿರೀಕ್ಷೆಯಲ್ಲಿದೆ. ಇತ್ತ ಲಖನೌ ಸೂಪರ್ ಜೇಂಟ್ಸ್ ಪಂದ್ಯಾವಳಿಯ ನಾಲ್ಕನೇ ಗೆಲುವಿಗಾಗಿ ಪಂದ್ಯವನ್ನಾಡಲಿದೆ. ಪ್ಲೇಆಫ್ ವಿಚಾರದಲ್ಲಿ ಚೆನ್ನೈ ಈ ಪಂದ್ಯದಲ್ಲಿ ಗೆಲ್ಲಬೇಕಿದೆ. 12 ಅಂಕಗಳೊಂದಿಗೆ 5ನೇ ಸ್ಥಾನದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ಗೆದ್ದರೆ, ಹೆಚ್ಚಿನ ಅವಕಾಶ ಪಡೆಯಲಿದೆ. ಇತ್ತ ಲಖನೌ ಗೌರವ ವಿದಾಯಕ್ಕಾಗಿ ಆಡಲಿದೆ. ಕಳೆದುಕೊಳ್ಳಲು ಲಖನೌ ಕಡೆ ಏನು ಇಲ್ಲ. ಇದೇ ಸಮಯದಲ್ಲಿ



ಚೆನ್ನೈಗೆ ಮತ್ತೊಂದು ಗಾಯದ ಸಮಸ್ಯೆ ಎದುರಾಗಿದ್ದು ಪಂದ್ಯಗಳಲ್ಲಿ ಮಿಂಚುತ್ತಿದ್ದ ಜೆಮಿ ಓವರ್‌ಟನ್ ಹೊರಬಿದ್ದಿದ್ದಾರೆ. ಪಂದ್ಯ ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ನಡೆಯಲಿದೆ.


ಪ್ಲೇಆಫ್ ಲೆಕ್ಕಾಚಾರ: ಐದನೇ ಸ್ಥಾನದಲ್ಲಿರುವ ಚೆನ್ನೈ ಗೆದ್ದರೆ 14 ಅಂಕಗಳನ್ನು ಹೊಂದಲಿದ್ದು, ನಾಲ್ಕನೇ ಸ್ಥಾನಕ್ಕೇರುವ ಅವಕಾಶ ಪಡೆಯಲಿದೆ. ಸದ್ಯ ಸನ್‌ರೈಸರ್ಸ್ ಹೈದರಾಬಾದ್ ಕೂಡ ಅಷ್ಟೇ ಅಂಕಗಳನ್ನು ಹೊಂದಿದ್ದು ಮೂರನೇ ಸ್ಥಾನದಲ್ಲಿದೆ. ಹೆಚ್ಚಿನ ರನ್‌ರೇಟ್ ಚೆನ್ನೈಗೆ ಅವಕಾಶವನ್ನು ಭದ್ರ ಮಾಡಿಕೊಡಲಿದೆ. ಉಳಿದ ಪಂದ್ಯಗಳಲ್ಲಿ ಚೆನ್ನೈ ಎಲ್ಲಾದರಲ್ಲೂ ಗೆಲ್ಲಬೇಕಿದೆ. 1 ಸೋತರು ಬೇರೆ ತಂಡಗಳ ಮೇಲೆ ಅವಲಂಬಿತವಾಗಬೇಕಿದೆ.

ಪಿಚ್: ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಆರ್‌ಸಿಬಿ ಹಾಗೂ ಲಖನೌ ನಡುವೆ ಇತ್ತೀಚಿಗೆ ನಡೆದ ಪಂದ್ಯದಲ್ಲಿ ದೊಡ್ಡ ಸ್ಕೋರ್ ಮೂಡಿಬಂದಿತ್ತು. ಚೇಸಿಂಗ್ ಆಗಿರಲಿಲ್ಲ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟವಿದ್ದು, ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ.

ಪದಬಂಧ

5984

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ

1.ಬೌದ್ಧರ ಮೂರು ಪವಿತ್ರ ಗ್ರಂಥಗಳು (4)
4.ಕೆನ್ನೆ-ಕಪೋಲ (3)
5.ಹುಣ್ಣಿಮೆಯ ಚಂದಿರನೀತ (5)
7.ಕಡಿದಾದ ಕೊರಕಲು ಕಣಿವೆ (3)
8.ಹಲ್ಲಿನಿಂದ ಕಡಿಯು (2)
9.ಮಂತ್ರೋಪದೇಶವನ್ನು ತಿರುಗಿ ಮಾಡುತ್ತಿದ್ದಾರೆ (2)
12.ಪಾಕದ ನಡುವೆ ಹೊಗಳುಭಟನಿದ್ದಾನೆ (3)
13.ಲಲಿತವಿದ್ಯೆಗಳನ್ನು ಆರಾಧಿಸುವವನು (5)
16.ಧಣಿಯು ತರಿಸಿದ ಕೊತ್ತಂಬರಿಬೀಜ (3)
17.ಭಾರತದಲ್ಲಿ ಲೋಕಸಭೆ-ರಾಜ್ಯಗಳಲ್ಲಿ ವಿಧಾನಸಭೆ (4)

ಮೇಲಿನಿಂದ ಕೆಳಕ್ಕೆ

1.ದೈತ್ಯರ ಮೂರು ಊರುಗಳನ್ನು ನಾಶಮಾಡಿದವನು (5)
2.ಗಣಪತಿಗೆ ನೈವೇದ್ಯವಾಗಿ ಪ್ರಸಿದ್ಧ ಈ ಮೋದಕ (3)
3.ಗಡಬಡಿಸಿ ತಿರುಗಿದ್ದು ಈ ಉತ್ತರದಿಕ್ಕಿನೆಡೆಗೆ (3)
5.ವಸ್ತುವಿನಿಂದ ಬೇರ್ಪಟ್ಟ ಒಂದು ಭಾಗ (2)
6.ದಯಾಮಯಿ ತಲೆಕೆಳಗಾಗಿದ್ದಾನೆ (4)
7.ಊರಿಂದೂರಿಗೆ ಸಂಚರಿಸುತ್ತಿರುವವ (4)
10.ಸೊಡರುಗಳನ್ನು ಹೊತ್ತಿಸಿ ಮಾಡುವ ಪೂಜೆ (5)
11.ಸುಲಭವಾಗಿ ಮೋಸಕ್ಕೊಳಗಾಗುವ ಪ್ರಾಣಿ (2)
14.ನೇತಾಡುವಂತಿರುವ ಕಿವಿಯ ಆಭರಣ (3)
15.ಮಣ್ಣು ಎತ್ತಲು ಬಳಸುವ ಸಾಧನ (3)

5983 ಉತ್ತರ

ಎಡದಿಂದ ಬಲಕ್ಕೆ:
1.ಮೃದುಯಾನ
3.ನರಮೇಧ 5.ಕಸರತ್ತು
8.ಮೂಲಪ್ರತಿ 10.ಪಡಗು
11.ಮೇದಿನಿ 12.ಚಂಪಕ
14.ಮಾನಿನಿ 16.ಕುಜವಾರ
17.ಪರಿಪಾಕ

ಮೇಲಿನಿಂದ ಕೆಳಕ್ಕೆ :
2.ಯಾವಾರ 4.ರಸಾಲ
6.ಸನಾದಿ 7.ಪತ್ತು
8.ಮೂಗು 9.ಪ್ರತಾಪ
11.ಮೇಲುಮುಸುಕು
13.ಚಂದ್ರಕಲಾಪ
14.ಮಾತುಗಾರ
15.ನಿಯಾಮಕ

ಸಿನಿ ದಿಗಂತ

ಈ ವಾರ ಮೈನೇಮ್ ಈಸ್ ಕೆಡಿ

ಹಳ್ಳಿ ಹುಡುಗನ ಎಂಎಲ್ಎ ಕಥೆ

ಇಂತಿ ನಿಮ್ಮ ಭೈರಾ ಚಿತ್ರತಂಡದ ಎರಡನೇ ಪ್ರಯತ್ನವಾದ ಮೈ ನೇಮ್ ಈಸ್ ಕೆಡಿ ಈ ವಾರ ತೆರೆಕಾಣುತ್ತಿದೆ. ಕೆ.ಜೆ. ಚಿಕ್ಕು ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರವನ್ನು ಎಸ್ಎಸ್‌ಕೆಬಿ ಪ್ರೊಡಕ್ಷನ್ ಅಡಿಯಲ್ಲಿ ವೆಂಕಟೇಶ್ .ಡಿ. ಅವರು ನಿರ್ಮಿಸಿದ್ದು, ಕುಮಾರ್.ಡಿ ಚಿತ್ರದ ಸಹ ನಿರ್ಮಾಪಕರಾಗಿದ್ದಾರೆ.

ಮೈ ನೇಮ್ ಈಸ್ ಕೆಡಿ ಚಿತ್ರದ ಕುರಿತಂತೆ ನಿರ್ದೇಶಕ ಕೆ.ಜೆ.ಚಿಕ್ಕು ಮಾತನಾಡುತ್ತ ಇದೊಂದು ಕಾಮಿಡಿ, ಡ್ರಾಮಾ ಸನ್ನಿವೇಶಗಳನ್ನು ಒಳಗೊಂಡ ಚಿತ್ರ. ಕನಕಪುರ, ಹೆಸರುಘಟ್ಟ, ಆನೇಕಲ್, ಬೆಂಗಳೂರು ಸುತ್ತಮುತ್ತ 30 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದ್ದು, ಚಿತ್ರದಲ್ಲಿ ಒಟ್ಟು ನಾಲ್ಕು ಹಾಡುಗಳಿವೆ, ಹಿತನ್‌ಹಾಸನ್ ಸಂಗೀತ ಸಂಯೋಜನೆ ಮಾಡಿದ್ದಾರೆ ಎಂದು ಹೇಳಿದರು.



ಆರ್ಯನ್ ವೆಂಕಟೇಶ್ ಅವರು ಈ ಚಿತ್ರದಲ್ಲಿ ನಾಯಕನಾಗಿ ಕಾಣಿಸಿಕೊಂಡಿದ್ದು, ಗಿಡುಗ ಚಿತ್ರದಲ್ಲಿ ನಟಿಸಿದ್ದ ಭವಾನಿ ಅವರು ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ, ಉಳಿದಂತೆ ಹೊನ್ನವಳ್ಳಿ ಕೃಷ್ಣ, ಗಿರೀಶ್ ಜತ್ತಿ, ವಿಶ್ವ, ಯತಿರಾಜ್, ಅರಸು ಮಹಾರಾಜ್, ಸುಪ್ರೀತ್ ಕಾಟಿ, ರೋಹಿಣಿ, ಮಾಸ್ಟರ್ ಮುಂತಾದವರು ನಟಿಸಿದ್ದಾರೆ. ಡಾ.ವಿ.ನಾಗೇಂದ್ರಪ್ರಸಾದ್, ಪುನೀತ್ ರಂಗಸ್ವಾಮಿ, ಮನು ದೇವನಹಳ್ಳಿ ಅವರ ಸಾಹಿತ್ಯ ಇರುವ ಗೀತೆಗಳಿಗೆ ಹಿತನ್ ಹಾಸನ್ ಅವರು ಸಂಗೀತ ಸಂಯೋಜಿಸಿದ್ದಾರೆ. ಸಂತೋಷ್ ಪಾಂಡಿ ಅವರ ಛಾಯಾಗ್ರಹಣ, ಕಿರಣಕುಮಾರ್. ಜೆ ಅವರ ಸಂಕಲನ ಈ ಚಿತ್ರಕ್ಕಿದ್ದು, ಅರುಣಕುಮಾರ್ ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿದ್ದಾರೆ,

ಈ ಸಂದರ್ಭದಲ್ಲಿ ಮಾತನಾಡಿದ ನಾಯಕ ಆರ್ಯನ್ ವೆಂಕಟೇಶ್ ನನ್ನ ಹಿಂದಿನ ಚಿತ್ರ ಇಂತಿ ನಿಮ್ಮ ಭೈರಾ ಗಳಿಕೆಯಲ್ಲಿ ಸೋತರೂ, ಒಟಿಟಿಯಲ್ಲಿ ಒಳ್ಳೆಯ ಪ್ರತಿಕ್ರಿಯೆ ಪಡೆಯಿತು. ಇದರ ಸ್ಫೂರ್ತಿಯಿಂದಲೇ ನಾನು ಮೈ ನೇಮ್ ಈಸ್ ಕೆಡಿ ಚಿತ್ರವನ್ನು ನಿರ್ಮಿಸಿ, ಮತ್ತೊಮ್ಮೆ ನಿಮ್ಮ ಮುಂದೆ ಬಂದಿದ್ದೇವೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡಿ ಬಂದ ಹಣದಿಂದ ನಾನೀ ಚಿತ್ರವನ್ನು ನಿರ್ಮಿಸಿದ್ದೇನೆ, ಕೆಡಿ ಎಂದರೆ ಕನಕನಹಳ್ಳಿ ದಾಸೇಗೌಡರ ಮಗ. ಗ್ರಾಮೀಣ ಭಾಗದಲ್ಲಿ ನಡೆಯುವ ಕಥೆ ಇದಾಗಿದ್ದು, ಏಳನೇ ತರಗತಿ ಓದುತ್ತಿರುವ ಹುಡುಗನೊಬ್ಬ ತನ್ನ ತಾಯಿಯನ್ನು ಉಳಿಸಿಕೊಳ್ಳುವ ಸಲುವಾಗಿ ಶಾಸಕನ ಬಳಿ ಸಹಾಯ ಕೇಳಲು ಹೋಗುತ್ತಾನೆ. ಆದರೆ ಶಾಸಕ ಆ ಹುಡುಗನನ್ನು ಅವಮಾನಿಸಿ ಕಳಿಸುತ್ತಾನೆ. ಇದರಿಂದ ಸಿಟ್ಟಿಗೆದ್ದ ಆ ಹುಡುಗ ನಾನು ಮುಂದೆ ಒಳ್ಳೆಯ ರೀತಿಯಲ್ಲಿ ಹಣಗಳಿಸಿ ಎಂಎಲ್ಎ ಆಗಬೇಕೆಂದು ಪಣ ತೊಡುತ್ತಾನೆ. ಆ ಹಾದಿಯಲ್ಲಿ ಆತ ಯಾವ ರೀತಿಯ ಸವಾಲುಗಳನ್ನು ಎದುರಿಸುತ್ತಾನೆ. ಅಂತಿಮವಾಗಿ ತನ್ನ ಹಾದಿಯಲ್ಲಿ ಆತ ಯಶಸ್ಸು ಗಳಿಸುತ್ತಾನಾ, ಇಲ್ಲಾ ಎನ್ನುವುದೇ ಮೈ ನೇಮ್ ಈಸ್ ಕೆಡಿ ಚಿತ್ರದ ಕಥಾಹಂದರ ಎಂದು ಹೇಳಿದರು.

ಪೆದ್ದಿ ಮೂಲಕ ವಿದೇಶೀ ವಿತರಣೆಗೆ ಕಾಲಿಟ್ಟ ಹೊಂಬಾಳೆ ಫಿಲಂಸ್

ಭಾರತೀಯ ಚಿತ್ರರಂಗದ ಹೆಮ್ಮೆಯ ನಿರ್ಮಾಣ ಸಂಸ್ಥೆಯಾದ ಹೊಂಬಾಳೆ ಫಿಲಂಸ್ ಇತ್ತೀಚೆಗೆ ವಿದೇಶಿ ವಿತರಣಾ ಕ್ಷೇತ್ರಕ್ಕೆ ಕಾಲಿಡುವುದಾಗಿ ಘೋಷಿಸಿತ್ತು. ಇದೀಗ ಆ ಮಹತ್ವದ ಪ್ರಯಾಣಕ್ಕೆ ಮೊದಲ ಹೆಜ್ಜೆಯ ಚಿತ್ರವಾಗಿ ಪೆದ್ದಿ ಸಿನಿಮಾ ಆಯ್ಕೆಯಾಗಿದೆ.

ರಾಜಕುಮಾರ, ಕೆಜಿಎಫ್, ಕಾಂತಾರ, ಸಲಾರ್‌ನಂಥ ಚಿತ್ರಗಳ ಮೂಲಕ ಭಾರತೀಯ ಸಿನಿಮಾವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದು ಕೀರ್ತಿಗೆ ಪಾತ್ರವಾಗಿರುವ ಹೊಂಬಾಳೆ ಫಿಲಂಸ್ ಇದೀಗ ಮತ್ತೊಂದು ದೊಡ್ಡ ಹೆಜ್ಜೆಯಾಗಿ ಅಂತರರಾಷ್ಟ್ರೀಯ ವಿತರಣೆ ಕ್ಷೇತ್ರಕ್ಕೆ ಪ್ರವೇಶಿಸಿದೆ. 2026ರ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಚಿತ್ರಗಳಲ್ಲಿ ಒಂದಾದ ಪೆದ್ದಿ ಚಿತ್ರದ ವಿದೇಶಿ ವಿತರಣೆಯ ಹಕ್ಕುಗಳನ್ನು ಹೊಂಬಾಳೆ ಫಿಲಂಸ್ ಸಂಸ್ಥೆ ತನ್ನದಾಗಿಸಿಕೊಂಡಿದೆ.

ಭಾರತೀಯ ಮಾರುಕಟ್ಟೆ ಮಾತ್ರವಲ್ಲದೆ ವಿಶ್ವದಾದ್ಯಂತ ಭಾರತೀಯ ಸಿನಿಮಾಗಳಿಗೆ ಹೊಸ ಪ್ರೇಕ್ಷಕರನ್ನು ಪರಿಚಯಿಸುವಲ್ಲಿ ಹೊಂಬಾಳೆ ಸಂಸ್ಥೆ ಪ್ರಮುಖ ಪಾತ್ರ ನಿರ್ವಹಿಸಿದೆ.

ಈಗ ಪೆದ್ದಿ ಚಿತ್ರದ ಮೂಲಕ ಹೊಂಬಾಳೆ ಫಿಲಂಸ್ ತನ್ನ ಜಾಗತಿಕ ವಿಸ್ತರಣೆಗೆ ಮತ್ತೊಂದು ಬಲಿಷ್ಠ ಅಧ್ಯಾಯವನ್ನು ಸೇರಿಸಿದೆ.

ನಿರ್ದೇಶಕ ಬುಚ್ಚಿ ಬಾಬು ಸಾನಾ ಅವರು ಆಕ್ಷನ್ ಕಟ್ ಹೇಳಿರುವ ಪೆದ್ದಿ ತನ್ನ ರಾ ಆಕ್ಷನ್ ಹಿನ್ನೆಲೆ, ಭರ್ಜರಿ ದೃಶ್ಯವೈಭವ ಮತ್ತು ರಾಮ್‌ಚರಣ್ ಅವರ ವಿಭಿನ್ನ ಅವತಾರದಿಂದ ಚಿತ್ರರಂಗದಲ್ಲಿ ಈಗಾಗಲೇ ದೊಡ್ಡ ಮಟ್ಟದ ಕುತೂಹಲವನ್ನು ಹುಟ್ಟುಹಾಕಿದೆ. ಜೊತೆಗೆ ಆಸ್ಕರ್ ಪ್ರಶಸ್ತಿ ವಿಜೇತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಅವರು ಪೆದ್ದಿ ಚಿತ್ರಕ್ಕೆ ಸಂಗೀತ ನೀಡಿರುವುದು ಈ ಚಿತ್ರದ ಮೆರುಗನ್ನು ಇನ್ನಷ್ಟು ಹೆಚ್ಚಿಸಿದೆ. ಪೆದ್ದಿ ಚಿತ್ರದ ಜೊತೆ ಹೊಂಬಾಳೆ ಫಿಲಂಸ್ ಕೈಜೋಡಿಸಿರುವುದು ಚಿತ್ರದ ಜಾಗತಿಕ ಬಿಡುಗಡೆಯಿಗೆ ದೊಡ್ಡ ಬಲ ನೀಡಲಿದೆ ಎಂಬ ಮಾತು ಸಿನಿವಲಯದಲ್ಲಿ ಕೇಳಿಬರುತ್ತಿದೆ. ಪ್ರಮುಖ ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಭರ್ಜರಿ ಬಿಡುಗಡೆಗೆ ಈಗಾಗಲೇ ಭಾರಿ ಕುತೂಹಲ ನಿರ್ಮಾಣವಾಗಿದೆ. ಪೆದ್ದಿ ಚಿತ್ರವು ಜೂನ್ 4ರಂದು ವಿಶ್ವದಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ.



ಮಗಳ ಸಿನಿಮಾ ಲೈಫ್ ಬಗ್ಗೆ ಉಪೇಂದ್ರ

ರಿಯಲ್ ಸ್ಟಾರ್ ಉಪೇಂದ್ರ ಅವರ ಪುತ್ರಿ ಐಶ್ವರ್ಯ ಉಪೇಂದ್ರ 'ದೇವಕಿ' ಚಿತ್ರದ ನಂತರ ಬೇರೆ ಯಾವುದೇ ಸಿನಿಮಾದಲ್ಲಿ ನಟಿಸಿಲ್ಲ, ಅವರಿಗೆ ಸಾಕಷ್ಟು ಆಫರ್‌ಗಳು ಬಂದರೂ, ನಟನೆಯಲ್ಲಿ ಆಸಕ್ತಿ ಇಲ್ಲದ ಕಾರಣ ಎಲ್ಲವನ್ನೂ ನಿರಾಕರಿಸುತ್ತಿದ್ದಾರೆ ಎಂದು ಉಪೇಂದ್ರ ಅವರೇ ಬಹಿರಂಗಪಡಿಸಿದ್ದಾರೆ.



ಸಾಮಾನ್ಯವಾಗಿ ಸ್ಟಾರ್ ಮಕ್ಕಳು ಸ್ಟಾರ್ ಆಗುವುದು ಇದ್ದೇ ಇದೆ. ಅವರಿಗೆ ಸಿನಿಮಾದಲ್ಲಿಯೂ ಸಹಜವಾಗಿ ಆಫರ್‌ಗಳು ಸಿಗುತ್ತವೆ. ಎಲ್ಲಾ ಪ್ರಕರಣದಲ್ಲಿ ಅಲ್ಲದಿದ್ದರೂ ಬಹುತೇಕವಾಗಿ ಸ್ಟಾರ್ ಮಕ್ಕಳು, ಯಾವುದೇ ಹಿನ್ನೆಲೆ ಇಲ್ಲದೆ ಬರುವ ಪ್ರತಿಭೆಗಳಿಗಿಂತ ಸುಲಭವಾಗಿ ಅವಕಾಶ ಪಡೆಯುತ್ತಾರೆ. ಒಮ್ಮೆ ಎಂಟ್ರಿಕೊಟ್ಟ ಮೇಲೆ ಅವರತನವನ್ನು ಅವರು ಸಾಬೀತು ಮಾಡಿಕೊಳ್ಳಬೇಕಷ್ಟೇ. ಕೊನೆಗೆ ಉಳಿಯುವುದು ಅದೊಂದೇ. ಅದೇ ರೀತಿ ರಿಯಲ್ ಸ್ಟಾರ್ ಉಪೇಂದ್ರ ಅವರ ಪುತ್ರಿ ಐಶ್ವರ್ಯ ಉಪೇಂದ್ರ ಅವರೂ ಸಿನಿಮಾ ಲೋಕಕ್ಕೆ ಕಾಲಿಟ್ಟಿದ್ದರು. 2019ರಲ್ಲಿ ರಿಲೀಸಾಗಿದ್ದ ಹೌರಾ ಬ್ರಿಡ್ಜ್ ಚಿತ್ರದಲ್ಲಿ ಐಶ್ವರ್ಯ ಉಪೇಂದ್ರ ನಟಿಸಿದ್ದರು. ಆ ಬಳಿಕ ಈ ಚಿತ್ರದ ಹೆಸರನ್ನು ದೇವಕಿ ಎಂದು ಬದಲಾಯಿಸಲಾಗಿತ್ತು.

ತಾಯಿ ಪ್ರಿಯಾಂಕ ಉಪೇಂದ್ರ ಜೊತೆ ಈ ಚಿತ್ರದಲ್ಲಿ ಐಶ್ವರ್ಯ ಕೂಡ ಪ್ರಮುಖ ಪಾತ್ರ ನಿರ್ವಹಿಸಿದ್ದರು, ದೇವಕಿ ಆಗಿ ಪ್ರಿಯಾಂಕಾ ಉಪೇಂದ್ರ ಕಾಣಿಸಿಕೊಂಡಿದ್ದರು. ಆ ಮೂಲಕ ಉಪೇಂದ್ರ ಅವರ ಪುತ್ರಿ ಐಶ್ವರ್ಯ ಉಪೇಂದ್ರ ಮೊದಲಬಾರಿಗೆ ಈ ಸಿನಿಮಾದ ಮೂಲಕ ಸ್ಯಾಂಡಲ್ ವುಡ್ ಪ್ರವೇಶ ಮಾಡಿದ್ದರು. ಆದರೆ ಅದಾದ ಬಳಿಕ ಐಶ್ವರ್ಯ ಯಾವುದೇ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿಲ್ಲ,

ಏಳು ವರ್ಷವಾದರೂ ಒಂದೇ ಒಂದು ಸಿನಿಮಾ ಕೂಡ ಮಾಡಲಿಲ್ಲ, ಇದೀಗ ಐಶ್ವರ್ಯ ಅವರಿಗೆ 21 ವರ್ಷ ವಯಸ್ಸು, ನಾಯಕಿಯಾಗಿ ಕಾಣಿಸಿಕೊಳ್ಳುವ ವಯಸ್ಸಿದು. ಆದರೂ ಯಾವುದೇ ಚಿತ್ರದಲ್ಲಿ ಏಕೆ ನಟಿಸುತ್ತಿಲ್ಲ, ಎನ್ನುವುದು ಅವರ ಸಹಸ್ರಾರು ಅಭಿಮಾನಿಗಳ ಪ್ರಶ್ನೆ.

ಈ ಬಗ್ಗೆ ನಟ ಉಪೇಂದ್ರ ಅವರೇ ಸೀಕ್ರೇಟ್ ರಿವೀಲ್ ಮಾಡಿದ್ದಾರೆ. ಒಂದು ಚಿತ್ರ ಆದಮೇಲೆ ಮಗಳಿಗೆ ಸಿಕ್ಕಾಪಟ್ಟೆ ಆಫರ್ಸ್ ಬರ್ತಿವೆ. ಆದರೆ ಅವಳಿಗೆ ಸಿನಿಮಾದಲ್ಲಿ ಸ್ವಲ್ಪವೂ ಇಷ್ಟವಿಲ್ಲ, ಅವಳ ಮನಸ್ಸಿನಲ್ಲಿ ಏನಿದೆ ಎನ್ನುವುದು ಕೂಡ ಗೊತ್ತಿಲ್ಲ, ಆಫರ್ಸ್ ಎಲ್ಲಾ ರಿಜೆಕ್ಟ್ ಮಾಡುತ್ತಿದ್ದಾಳೆ. ಸಿನಿಮಾ ನನಗೆ ಬೇಡ ಎನ್ನುತ್ತಿದ್ದಾಳೆ. ಅದಕ್ಕಾಗಿ ನಾವು ಆಕೆಯನ್ನು ಒತ್ತಾಯ ಮಾಡುತ್ತಿಲ್ಲ ಎಂದಿದ್ದಾರೆ. ಸದ್ಯ ಮಗ ಆಯುಷ್ ಒಂದು ಸಿನಿಮಾದಲ್ಲಿ ನಟನೆ ಮಾಡುತ್ತಿದ್ದಾನೆ. ಈ ಸಿನಿಮಾ ಬಳಿಕ ಅವನ ನಿರ್ಧಾರ ಏನು ಎನ್ನುವುದನ್ನು ನೋಡಬೇಕಿದೆ. ಅವನಿಗೆ ಇಷ್ಟವಾದರೆ ಮುಂದುವರೆಯುತ್ತಾನೆ, ಇಲ್ಲದಿದ್ದರೆ ಅವನ ಇಷ್ಟ, ಏನು ಮಾಡುತ್ತಾನೋ ನೋಡಬೇಕಿದೆ ಎಂದು ಉಪೇಂದ್ರ ಅವರು ಹೇಳಿದ್ದಾರೆ.

ಅಂದಹಾಗೆ ಆಯುಷ್, ಶ್ರೀಕಲ್ಪವೃಕ್ಷ ಮೂವೀ ಮೇಕರ್ಸ್ ಬ್ಯಾನರ್ ಅಡಿಯಲ್ಲಿ, ಅಭಿಷೇಕ್ ಎನ್. ಸಿರಿವಂತ್ ಅವರ ನಿರ್ಮಾಣ ಮಾಡುತ್ತಿರುವ ಇನ್ನೂ ಹೆಸರಿಡದ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಮೇಕಿಂಗ್ ಹಂತದಲ್ಲೇ ಇದೊಂದು ರೊಮ್ಯಾಂಟಿಕ್ ಲವ್ ಸ್ಟೋರಿ ಎನ್ನುವುದು ಗೊತ್ತಾಗುತ್ತಿದೆ. ಕಾಶ್ಮೀರದ ಕೊರೆಯುವ ಚಳಿಯಲ್ಲಿ, ಹಿಮಚ್ಛಾದಿತ ಲೊಕೇಶನ್‌ಗಳನ್ನು ದೃಶ್ಯಗಳನ್ನು ಸೆರೆಹಿಡಿಯಲಾಗ್ತಿದೆ. ಹಾಡುಗಳನ್ನು ಕೂಡ ಅಲ್ಲೇ ಚಿತ್ರೀಕರಣ ಮಾಡಿದ್ದಾರೆ. ಇನ್ನೂ ಚಿತ್ರದ ನಾಯಕಿ ಯಾರು? ಬೇರೆ ಯಾರೆಲ್ಲಾ ಈ ಚಿತ್ರದಲ್ಲಿ ನಟಿಸಿದ್ದಾರೆ ಎನ್ನುವ ಕುತೂಹಲ ಉಳ್ಳ ಅಭಿಮಾನಿಗಳಲ್ಲಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26